# ಅಪರಂಜಿ

ತಿಳಿನಗೆಯ ಕಾರಂಜಿ


ಅಕ್ಟೋಬರ್–2024

41ನೇ ವಿಶೇಷಾಂಕ






ಬಿಡಿ ಪ್ರತಿ: ರೂ. 30/–



Ravi Graphics
OFFSET PRINTERS
Bringing colours alive
What we specialize into :
Books
Brochures
Catelogues
Boxes
Mono Cartons
53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com




Bag is everything
bag factory
bagfactory.co.in
Our Promise
100% recyclable paper bags & pouches
Pan-India delivery
Premium customisation for high-street brands
Reach us for your paper bag requirements
+91 89719 95599 | sales@bagfactory.co.in | bagfactory.co.in
fbb
BHIMA

41ನೇ ವಿಶೇಷಾಂಕ





Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2024
**RNI NO. KAR-KAN/2005/15457**

www.mallige.com

PATIENT SAFETY & QUALITY OF CARE
NABH
ACCREDITED

Certificate No.: MC-2068



Established in 1978 we are a multi-speciality, tertiary care hospital.

**CARING AND HEALING**

| 126 | 60+ | 25+ |
| --- | --- | --- |
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor: M. SHIVAKUMAR
No. of Pages: 128+4 APARANJI KANNADA MONTHLY.



# ಅಪರಂಜಿ

ತಿಳಿನಗೆಯ ಕಾರಂಜಿ

**ವಿಶೇಷ ಸಂಚಿಕೆ**


**ಸಂಪುಟ 41**

**ಸಂಚಿಕೆ – 01**

**ಅಕ್ಟೋಬರ್ – 2024**



**ಸಂಪಾದಕ ಮಂಡಳಿ**

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್. ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಶ್ರೀ ಎನ್. ರಾಮನಾಥ್

**ಆಡಳಿತ ಮಂಡಳಿ**

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ಎಚ್.ಎನ್. ಆನಂದ

ಶ್ರೀ ಕೆ. ರವೀಂದ್ರ ರಾವ್

ಶ್ರೀ ವಿ. ಆರ್. ಭರತ್


ಚಂದಾ ವಿವರ :

ಬಿಡಿ ಪ್ರತಿ : ರೂ. 10/-

ವಾರ್ಷಿಕ ಚಂದಾ : ರೂ. 100/-

ಹತ್ತು ವರ್ಷದ ಚಂದಾ: ರೂ. 1000/-

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ...


| | | |
|---|---|---|
| ಕಿಡಿ | ಪ್ರಕಾಶ್ | 3 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 4 |
| ಶರಲೇಖನ ಪುನರಾಗಮನ | ವತ್ಸನ | 5 |
| ಕರಿಯ ಐ ಲವ್ ಯೂ | ನಳಿನಿ ಸೂರ್ಯಪ್ರಕಾಶ್ | 11 |
| ಕ್ಲಿಕ್ಕಾಯಣ | ನಳಿನಿ ಟಿ. ಭೀಮಪ್ಪ, ಧಾರವಾಡ | 14 |
| ಆದ್ರೆ ಸತ್ತೋಳ್ ಎದ್ದರೋಲ್ಲ;.. | ಜೋಗಿ | 17 |
| ಚೋರಿಚೋರಿ..ಚುಪ್ಕೆ ಚುಪ್ಕೆ.. | ಸುಮಾ ರಮೇಶ್, ಹಾಸನ | 20 |
| ಸೋಮಾರಿ ಕಲ್ಲು | ಕೇಫ | 23 |
| ಕುರಿಹಟ್ಟಿ ಬಸವನಗೌಡ್ನನು...... | ಕೊಳ್ಳೇಗಾಲದ್ನಾ ರಾಮಾನುಜ | 27 |
| ಬೆದರು | ಶೀನ (ಶ್ರೀನಿವಾಸ ವೈದ್ಯ) | 33 |
| ಅಡ್ರೆಸ್ ಬದಲಿಸಿರುವ... | ಪ್ರೀತಿ ಎಮ್ ಸಂಗಮ್ | 41 |
| ಮುಂಗಾರು ಮಳೆ–ಆತಂಕ... | ವಿಲಾಸ ನಾ ಹುದ್ದಾರ | 44 |
| ತುಂತುರು | ದಂಸಳ | 46 |
| ಮೋಡಿ ಮಾಡಿದ ಮೋದಿ.... | ಸೀತಾ ಶ್ರೀಧರ್ | 47 |


**ವ್ಯಂಗ್ಯ ಚಿತ್ರಗಳು : ಹೊರಪುಟ : ರಾಂಕಿ,**
**ಒಳಪುಟಗಳು : ರಾಂಕಿ ಬೆಳ್ಳೂರ್, ರಘುಪತಿ ಶೃಂಗೇರಿ**


*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003,*
email: koravanjiaparanji@gmail.com ಮೊಬೈಲ್: 9845264304



ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com




**For Online payment of Subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com


*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿಕುಮಾರ್) ಸಹಕಾರನಗರ*

| | | |
|---|---|---|
| ಸೆಕ್ಯೂರಿಟಿ ಕ್ಯಾಮೆರಾದ ಕೋ(ಕೀ)ಟಲೆಗಳು... | ಜಯಶ್ರೀ ದೇಶಪಾಂಡೆ | 51 |
| ಹೀಗೊಂದು ವಿದಾಯ | ಜ್ಯೋತಿ ರಾಜೇಶ್ | 56 |
| ಒಂದು ಓರೆ ನೋಟ | ಎಚ್.ಗೋಪಾಲಕೃಷ್ಣ | 58 |
| ಹಟಾರಿ | 'ಗೌತಮ'ಎಸ್. ರಾಮಮೂರ್ತಿ | 62 |
| ಆಯುಧ ಪೂಜೆ | ಸಿ.ಆರ್.ಸತ್ಯ | 64 |
| ವಾತಾಪಿ ಜೀರ್ಣೋಭವ | ಅಣ್ಣಾಸ್ವಾಮಿ ಮೊದಲಿಯಾರ್ | 68 |
| ಅಜ್ಜಿಯ ಅವಾಂತರ | ಪ್ರಭಾಮಣಿ ನಾಗರಾಜು, ಹಾಸನ | 76 |
| ಪ್ರಹಸನ : ಆನಂದ – ಪರಮಾನಂದ | ಜಿ. ವಿ. ಅರುಣ | 80 |
| ಬಿಟ್ಟಿ ಸಲಹೆ ಕೊಟ್ಟೀರಿ ಜೋಕೆ ! | ಲತಾ ಹೆಗಡೆ, ಹುಬ್ಬಳ್ಳಿ | 85 |
| ನಿಧಿ ಶೋಧ | ಲೋಲಾಕ್ಷಿ ಹುಲ್ಕುಳಿ | 89 |
| ಗೋರಿ ಗೀತೆಗಳು | ಅಣಕು ರಾಮನಾಥ್ | 91 |
| ಇನ್ನು ಒಂದೇ ವಾರ | ಬೇಲೂರು ರಾಮಮೂರ್ತಿ | 95 |
| ಆನೆ ಬಂತೊಂದಾನೆ ! | ಚಿತ್ರಾ ರಾಮಚಂದ್ರನ್ | 101 |
| ದಶಮಿಯಿಂದ ಪ್ರತಿಪತ್ತಕಡೆಗೆ | ರಾಂಕಿ ಬೆಳ್ಳೂರು | 105 |
| ಅದ್ದೂರಿ ಅಂಬಾರಿ....ಅಂಬಾರಿ.... | ಸುಮನಾ | 106 |
| ವೈ ದಿಸ್ ಡೆಲಿವರಿ ಡೆಲಿವರಿ ಡಿ | ಸುಮಾವೀಣಾ, ಹಾಸನ | 110 |
| ಡಯಟ್‌ವಂತರಿಗಿದು ಕಾಲವಲ್ಲ..... | ತುರುವೇಕೆರೆ ಪ್ರಸಾದ್ | 114 |
| ಎಮ್ಮೆ ನಿನಗಾರು ಸಾಟಿ | ಕೆ. ಎಸ್. ಸೋಮೇಶ್ವರ | 118 |
| ಹಾಸ್ಯಕ್ಕೊಂದು ಹೊಸ ಭಾಷ್ಯ.... | ಅಣಕು ರಾಮನಾಥ್ | 120 |
| ತಯಾರಿ ನಿದ್ರೆಗೋ ಮದುವೆಗೋ! | ಕವಿತಾ ಹೆಗಡೆ ಅಭಯಂ, ಹುಬ್ಬಳ್ಳಿ | 122 |
| ಹೀಗೂ ಇದ್ದರು ನಮ್ಮ ಹೆಮ್ಮೆಯ.... | ಅಂತರ್ಜಾಲದಿಂದ | 124 |
| ವ್ಯಂಗ್ಯ ತರಂಗ | ರಘುಪತಿ ಶೃಂಗೇರಿ | 127 & 128 |






# ಅಪರಂಜಿ ಕಿಡಿ

● ಪ್ರಕಾಶ್

ಬಲಪಂಥೀಯ ಕೋಮುವಾದಿ ಶಕ್ತಿಗಳಿಗೆ
ಸಿಂಹಸ್ವಪ್ನರಾಗಿದ್ದ ಸೀತಾರಾಂ ಯೆಚೂರಿ
ಅವರ ಆತ್ಮಕ್ಕೆ ಚಿರಶಾಂತಿ ದೊರೆಯಲಿ !!

* * *

ರಾಜಕಾರಣದಲ್ಲಿ ಪ್ರೀತಿ, ವಿನಯ ಇಲ್ಲ

ರಾಹುಲ್ ಗಾಂಧಿ

ಈಗಲಾದರೂ ಅವರಿಗೆ ಇದು ಹೊಳೆದಿದ್ದು ಆಶ್ಚರ್ಯ !!

* * *

ಕಾಂಗ್ರೆಸ್ ಪಕ್ಷದವರಿಂದಲೇ ಸಿ ಎಂ ಅವರಿಗೆ ಮೋಸ

ಪತ್ರಿಕೆ

ಬೇಲಿಯೇ ಎದ್ದು ********** !

* * *

ಕನ್ನಡದ ಬಗ್ಗೆ ದುರಭಿಮಾನವೂ "ಮತಾಂಧತೆ"

ಹೇಳಿಕೆ

ಸಜ್ಜನರೆಲ್ಲ ಒಪ್ಪಬೇಕಾದ ಮಾತು !

* * *

"ರಾಜೀನಾಮೆಗೆ ನಾನು ಸಿದ್ಧ"

ಶ್ರೀಮತಿ ಮಮತಾ

ಇದೇನು ಆಶ್ವಾಸನೆಯೋ, ಬೆದರಿಕೆಯೋ !?

* * *

ಕಾರ್ಯಾಂಗ ಮತ್ತು ನ್ಯಾಯಾಂಗಗಳ ನಡುವೆ ಇರುವ
ಗೆರೆ ವಿಘ್ನಶ್ವರನಿಗೆ ಕಾಣುವುದಿಲ್ಲವೇ ಅಂತ ಅಪರಂಜಿ
ನಕ್ಕಳಂತೆ !!

* * *

ಹಾಲಿನ ದರ ಏರಿಕೆ

ಮಾನ್ಯ ಸಿ.ಎಂ

ಸರಿ, ಇನ್ನು ಹಾಲಾಹಲ ಆರಂಭವಾಗುತ್ತೆ ! !

* * *



✍ ಶಿವಕುಮಾರ್

# "ನಮ್ಮ ನಿಮ್ಮಲ್ಲಿ"

ಅಪರಂಜಿ ನಲವತ್ತೊಂದು ವಸಂತಗಳನ್ನು ಮುಗಿಸಿ ನಲವತ್ತೆರಡಕ್ಕೆ ಕಾಲಿಡುತ್ತಿರುವ ಈ ಶುಭ ಘಳಿಗೆಯಲ್ಲಿ ಒಂದು ವಿಶೇಷಾಂಕವನ್ನು ಹೊರತಂದು ಅಪರಂಜಿ ಸಂಭ್ರಮಿಸುತ್ತಿದ್ದಾಳೆ. ಈ ಸಂಚಿಕೆಗೆ ತಮ್ಮ ಲೇಖನಗಳನ್ನು ನೀಡಿರುವ ನಮ್ಮ ಬರಹಗಾರ ಬಳಗದ ಎಲ್ಲ ಲೇಖಕ ಲೇಖಕಿಯರಿಗೂ, ವ್ಯಂಗ್ಯ ಚಿತ್ರಕಾರರಿಗೂ ಅಪರಂಜಿ ತನ್ನ ವಂದನೆಗಳನ್ನು ಅರ್ಪಿಸುತ್ತಾಳೆ. ಹಳೆ ಬೇರು ಹೊಸ ಚಿಗುರು ಎಂಬಂತೆ ಈ ಸಂಚಿಕೆಯಲ್ಲಿ ಕೊರವಂಜಿಯಿಂದ ಆಯ್ದ ಎರಡು ಲೇಖನಗಳಿವೆ. ಮೊದಲನೆಯದು ಕೇಫ ಅವರು ಬರೆದಿರುವ "ಸೋಮಾರಿ ಕಲ್ಲು" ಲೇಖನ. ಎರಡನೆಯದು ಎನ್. ರಾಮಾನುಜ ಬರೆದಿರುವ "ಕುರಿಹಟ್ಟಿ ಬಸವನಗೌಡ್ಯನು ನಡೆದುಬಂದ ದಾರಿ" ಎಂಬ ಲೇಖನ. ಇವೆರಡೂ ಅಂದಿನ ಕಾಲಘಟ್ಟವನ್ನು ಯಶಸ್ವಿಯಾಗಿ ಪ್ರತಿನಿಧಿಸುತ್ತವೆ. ಅಂತೆಯೇ ಅಪರಂಜಿಯ ಹಳೆಯ ತಲೆಮಾರಿನ ಬರಹಗಾರರ ಮೂರು ಲೇಖನಗಳನ್ನು ಈ ಸಂಚಿಕೆಗಾಗಿ ಆರಿಸಿದ್ದೇವೆ. ಅಣ್ಣಾಸ್ವಾಮಿ ಮೊದಲಿಯಾರ್, ಶ್ರೀನಿವಾಸ ವೈದ್ಯ ಹಾಗೂ ಸಿ.ಆರ್. ಸತ್ಯ ಇವರುಗಳ ಲೇಖನಗಳು ಈ ಸಂಚಿಕೆಯ್ನು ಅಲಂಕರಿಸಿವೆ. ಬಹುತೇಕ ಬರಹಗಳಿಗೆ ವ್ಯಂಗ್ಯ ಚಿತ್ರದ ಮೆರಗನ್ನು ನೀಡಿರುವ ರಾಂಕಿ ಬೆಳ್ಳೂರರಿಗೆ ನಮ್ಮ ಕೃತಜ್ಞತೆಗಳು.

ಅಪರಂಜಿಯ ಹುಟ್ಟುಹಬ್ಬವನ್ನು ಸಂಭ್ರಮಿಸಲು ಅಕ್ಟೋಬರ್ 20ರಂದು ಒಂದು ಕಾರ್ಯಕ್ರಮವನ್ನು ನರಸಿಂಹರಾಜಾ ಕಾಲನಿಯ ಅಶ್ವಥ್ ಕಲಾಭವನದಲ್ಲಿ ಹಮ್ಮಿಕೊಂಡಿದ್ದೇವೆ. ಸುಪ್ರಸಿದ್ಧ ಹಾಸ್ಯ ಸಾಹಿತಿ ಹಾಗೂ ನಟನ ಚತುರ ಶ್ರೀ ವೈ.ವಿ. ಗುಂಡೂರಾವ್ ಅವರು ಕೈಲಾಸಮ್ ಅವರ ಹೋಂರೂಲು ನಾಟಕವನ್ನು ಆ ಸಂಜೆ ಪ್ರಸ್ತುತ ಪಡಿಸಲಿದ್ದಾರೆ. ಕಾರ್ಯಕ್ರಮದ ವಿವರಗಳನ್ನು ಈ ಸಂಚಿಕೆಯಲ್ಲಿ ನೀಡಿದ್ದೇವೆ.

ಎಲ್ಲರೂ ಬಹುಸಂಖ್ಯೆಯಲ್ಲಿ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಿರೆಂದು ಆತ್ಮೀಯ ಆಹ್ವಾನ.

ಮುಂಬರುವ ವಿಜಯದಶಮಿ ಹಾಗೂ ದೀಪಾವಳಿ ಹಬ್ಬಗಳು ಸಕಲರಿಗೂ ಶುಭವನ್ನು ತರಲೆಂದು ಅಪರಂಜಿ ಭಗವಂತನಲ್ಲಿ ಪ್ರಾರ್ಥಿಸುತ್ತಾಳೆ.








ಶರಲೇಖನ ಪುನರಾಗಮನ

# ಮುಳಬಾಗಿಲು ಮಂಜಿಷ್ಠ ಪ್ರಸಂಗ

ವತ್ಸನ

**ಬೆ**ಳಗ್ಗೆ ಆರೂವರೆಗೇ ಎದ್ದು ಕಮಲಳ ಮುಖ ನೋಡಬೇಕಾಯ್ತಲ್ಲ, ಆ ದಿನದ ಬಗ್ಗೆ ನಾನು ಹೇಳ್ತಿರೋದು. ಅದೇರೀ, ಡಿಬೇಟೂ. ಟ್ರಂಪೂ ಹ್ಯಾರಿಸ್ಸೂ ಮುಖಾಮುಖಿ ಆಯ್ತಲ್ಲ ಅದೇ. ಶರಲೇಖನಿಗೆ ಇಂಥಾದರಲ್ಲೆಲ್ಲಾ ಒಂದು ಚೂರೂ ಆಸಕ್ತಿ ಇಲ್ಲ. ಹಾಗಾಗಿ ನಾನೊಬ್ಬನೇ ಟಿವಿಗೆ ಮುಖ ಅಂಟಿಸಿಕೊಂಡು ನೋಡಿದ್ದಾಯ್ತು. ಅದೇನು ವಿಚಿತ್ರಾರೀ ಆ ದೇಶ! ನೋಡ್ತಾ ಇದ್ದ ನಮಗೇ ನಾಚಿಕೆ ಆಗೋತರಹ ಪೆದ್ದು ಪೆದ್ದಾಗಿ ಆಡ್ತಾಯಿದ್ದ ಆ ಟ್ರಂಪ್‌ಗೆ ಅರ್ಧ ದೇಶದಷ್ಟು ಜನ ಮತ ಹಾಕ್ತಾರಂತಲ್ಲಾ. ಅದನ್ನು ನೋಡಿದ ಮೇಲೆ ಕೈಲಾಸಮ್ ಹೇಳ್ತಿದ್ದ ಹಾಗೆ ನಮ್ಮೂರೇ ವಾಶಿ ಅಂತ ಅನ್ನಿಸ್ತು.

ಡಿಬೇಟ್ ಮುಗಿದ ಮೇಲೆ ಪ್ರಾತಃರ್ವಿಧಿಗಳನ್ನ ಮುಗಿಸಿ ತಿಂಡಿಗೆ ಬರೋಹೊತ್ತಿಗೆ ಶರಲೇಖನೂ ಬಂದು ಕುಳಿತಿದ್ದ. ಸರೋಜಮ್ಮ ಒಂದು ಡಬರಿ ತುಂಬಾ ಬಾಂಡ್ಲೆಯಲ್ಲಿ ತಟ್ಟಿದ ಅಕ್ಕಿ ರೊಟ್ಟಿಗಳನ್ನು ತುಂಬಿಸಿ ಇಟ್ಟಿದ್ದರು. ಒಂದು ವಾಟಿಯಲ್ಲಿ ತೊಗರಿ ಬೇಳೆ ಚಟ್ನಿ, ಹಾಗೂ ಒಂದು ಬಟ್ಟಲು ತುಪ್ಪ ನಮ್ಮ ಬರವನ್ನು ಇದಿರುನೋಡುತ್ತಿದ್ದವು. ಹಬೆಯಾಡುತ್ತಿದ್ದ ಬಿಸಿ ಕಾಫಿ ಇನ್ನೂ ಬಂದಿರಲಿಲ್ಲ. ಮೊದಲ ರೊಟ್ಟಿ ಮುಗಿಯುವವರೆಗೂ ಕಾಫಿ ತರಬಾರದೆಂಬ ಶರಲೇಖನ ಶಿಸ್ತನ್ನು ಸರೋಜಮ್ಮ ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ರೊಟ್ಟಿ ತಿನ್ನುತ್ತಾ ಶರಲೇಖ, "ಇನ್ಸ್‌ಪೆಕ್ಟರ್ ಭುವನ್ ನನಪಿದೆಯೇ ?" ಅಂತ ಕೇಳಿದ.

"ನೆನಪಿಲ್ದೇ ಏನು? ನಂಜನಗೂಡಿನಲ್ಲಿನ ದೊಡ್ಡ ಜಾತ್ರೆ ಉಸ್ತುವಾರಿ ವಹಿಸ್ದೋನು ತಾನೆ?" ಅಂತ ಹೇಳಿದೆ.

"ಹೌದು, ಅವನೇ. ನಿನ್ನ ರಾತ್ರಿ ಅವನು ಫೋನ್ ಮಾಡಿದ್ದ. ಅವರಪ್ಪನ ಆಪ್ತ ಗೆಳೆಯರೊಬ್ಬರ ಮನೇಲಿ ಏನೋ ಕಳ್ಳತನ ಆಗಿದೆಯಂತೆ. ಬಂದು ಸಹಾಯ ಮಾಡುಕ್ಕಾಗುತ್ಯೇ ಅಂತ ಕೇಳಿದ. "

"ಎಲ್ಲಿದಾರಂತೆ ಆ ಗೆಳೆಯರು?"

"ಮುಳುಬಾಗಿಲಿನಲ್ಲಿ."

"ಓಹೋ ನಮ್ಮ ಡಿವಿಜಿ ಊರು. ಹಿಂದೊಮ್ಮೆ ಅಲ್ಲೇ ಹತ್ತಿರ ಇರೋ ಕುರುಡುಮಲೆ ವಿನಾಯಕ ದೇವಸ್ಥಾನಕ್ಕೆ ಹೋಗಿದ್ದ ಜ್ಞಾಪಕ. ಯಾವಾಗ ಹೊರಡಬೇಕು?"

"ಹತ್ತು ಘಂಟೆಗೆ ನಮ್ಮನ್ನ ಭುವನ್ ಪಿಕ್‌ಅಪ್ ಮಾಡ್ತಾನಂತೆ. ಒಂದೆರಡು ದಿನಗಳು ಅಲ್ಲಿರಬೇಕಾಗಬಹುದು. ಅದಕ್ಕೆ ಸಿದ್ಧನಾಗಿರೋದು ಒಳ್ಳೇದು"



ಭುವನ್ ತಾನು ಹೇಳಿದಂತೆ ಹತ್ತು ಘಂಟೆಗೆ ಸರಿಯಾಗಿ ತನ್ನ ಇನ್ನೋವಾದಲ್ಲಿ ಬಂದ. ಕಾರು ಏರ್ಪೋರ್ಟ್ ದಾರಿ ಹಿಡಿದಿದ್ದನ್ನು ನೋಡಿ, ನಾನು " ಮುಳುಬಾಗಿಲಿಗೆ

ಹೊಸಕೋಟೆ ದಾರಿಯನ್ನ ಹಿಡಿಯಬೇಕಲ್ಲವೇ ?" ಅಂತ ಕೇಳಿದೆ. ಭುವನ್ ನಗುತ್ತಾ, "ಏರ್‌ಪೋರ್ಟ್ ದಾಟಿ ದೇವನಹಳ್ಳಿ ಸೇರಿ ಅಲ್ಲಿಂದ ಸೂಲಿಬೆಲೆ ದಾರಿಹಿಡಿದರೆ ಹೊಸಕೋಟೆಯನ್ನ ಬೈಪಾಸ್ ಮಾಡಿ ನೇರವಾಗಿ ಕೋಲಾರದ ದಾರಿ ಹಿಡೀಬಹುದು. ಸುಮಾರು ಎರಡೂವರೆ ಘಂಟೆಯ ಪಯಣ. ಮೊದಲಿಗೆ ನಾನು ನಿಮ್ಮಿಬ್ಬರಿಗೂ ತುಂಬಾ ಆಭಾರಿ. ನಾವೀಗ ಹೋಗ್ತಿರೋದು ಮಂಜಣ್ಣನೋರ ಮನೆಗೆ. ಅವರು ನಮ್ಮ ತಂದೆಗೆ ತುಂಬಾ ಬೇಕಾದೋರು. ವಾಸ್ತವವವಾಗಿ ನಮ್ಮ ತಂದೆ ಚಿಕ್ಕಂದಿನಲ್ಲಿ ಮಂಜಣ್ಣನೋರ ಮನೆಯಲ್ಲೇ ಇದ್ದು ಸ್ಕೂಲು ಕಾಲೇಜು ಮುಗಿಸಿದರಂತೆ. ಮಂಜಣ್ಣನವರು ತುಂಬಾ ದೈವಭಕ್ತರು. ಅಲ್ಲಿನ ಸೂರ್ಯನಾರಾಯಣ ದೇವಸ್ಥಾನದಲ್ಲಿ ಅವರು ಧರ್ಮದರ್ಶಿಗಳೂ ಆಗಿದ್ದಾರೆ. ಅವರ ಮನೆಯಲ್ಲಿ ತಲೆತಲಾಂತರದಿಂದ ಬಂದ ಸ್ಥಳಪುರಾಣಗಳ ದಾಖಲೆಗಳಿವೆ. ಆ ದಾಖಲೆಗಳಲ್ಲಿ ಅತ್ಯಂತ ಪ್ರಾಚೀನ ಕಡತವೆಂದರೆ ಹನುಮ ಪುರಾಣ. ವಿಜಯನಗರದ ಅರಸರು ಮುಳುಬಾಗಿಲಿನ ಆಂಜನೇಯ ಸ್ವಾಮಿಯ ಕುರಿತು ತೆಲುಗಿನಲ್ಲಿ ಬರೆಸಿದ್ದು ಆ ಗ್ರಂಥ. ತಿಂಗಳಿಗೊಮ್ಮೆ ಆ ಗ್ರಂಥದ ಹಲವು ಭಾಗಗಳ ಪಠಣವನ್ನು ಮಂಜಣ್ಣನವರೇ ಬಹು ಶ್ರದ್ಧೆಯಿಂದ ಮಾಡುವುದು ಅವರ ಮನೆಯ ಪರಿಪಾಠ.

ಕಳೆದ ಒಂದು ವಾರದಿಂದ ಆ ಗ್ರಂಥ ಕಾಣೆಯಾಗಿದೆ. ಅವರ ಮಗ ವೆಂಕಟೇಶ ಮನೆಯೆಲ್ಲಾ ಹುಡುಕಿ, ಕೊನೆಗೆ ನನಗೆ ಫೋನ್ ಮಾಡಿದ. ಮಂಜಣ್ಣನವರ ಭಕ್ತಿ ಶ್ರದ್ಧೆಗಳ ಪರಿಚಯವಿರುವ ನನಗೆ ಈ ಪ್ರಸಂಗದಿಂದ ಅವರಿಗಾಗಿರುವ ಆಘಾತವನ್ನು ಬಹು ಸ್ಪಷ್ಟವಾಗಿ ಕಲ್ಪಿಸಿಕೊಳ್ಳಬಲ್ಲೆ. ಹಾಗಾಗಿ ನಿಮ್ಮ ಮೊರೆ ಹೊಗಬೇಕಾಯಿತು" ಎಂದು ವಿವರಿಸಿದ.

ಕೋಲಾರ ದಾಟಿ ಮುಳುಬಾಗಿಲನ್ನು ಸೇರುವ ಹೊತ್ತಿಗೆ ಒಂದು ಘಂಟೆಯಾಗಿತ್ತು. ಮಂಜಣ್ಣನವರ ಮನೆ, ಸುಮಾರು ನೂರಿಪ್ಪತ್ತು ವರ್ಷಗಳ ಹಿಂದೆ ಕಟ್ಟಿಸಿದ್ದಂತೆ. ಆಗಿನ ಕಾಲದ ಮನೆಗಳಂತೆ, ಮನೆ ಮುಂದೆ ಒಂದು ವಿಶಾಲವಾದ ಜಗಲಿ, ಗಿಡ್ಡ ಮುಂಬಾಗಿಲು, ಕಂಭಗಳಿಂದ ಶೋಭಿತವಾದ ಒಳಾಂಗಣ, ಬಿಸಿಲು ಮಚ್ಚು, ತೇಗದ ಮರದ ಉಯ್ಯಾಲೆ ಇವಲ್ಲಾ ನಮ್ಮನ್ನು ದಿಢೀರನೆ ಹಿಂದಿನ ಶತಮಾನಕ್ಕೆ ಕರೆದೊಯ್ದವು. ಮನೆಯೊಳಗೆ ಕಾಲಿಡುತ್ತಲೇ ಒಬ್ಬ ಬಹು ಚೂಟಿಯೆನ್ನಬಹುದಾದ ತರುಣಿ ನಮ್ಮನ್ನು ಸ್ವಾಗತಿಸಿದಳು. ಭುವನ್ ಅವಳನ್ನು ನಮಗೆ ಪರಿಚಯಿಸುತ್ತಾ "ಇದು ಶ್ರೀಲಕ್ಷ್ಮಿ, ಮಂಜಣ್ಣನವರ ಮೊಮ್ಮಗಳು. ಮೆಡಿಕಲ್ ವಿದ್ಯಾರ್ಥಿನಿ. ವೆಂಕಟೇಶ್ ಅವರ ಮಗಳು," ಎನ್ನುತ್ತಿರುವಾಗಲೇ ಒಬ್ಬ ಮಧ್ಯ ವಯಸ್ಸಿನ ವ್ಯಕ್ತಿ ಒಳಗಿನಿಂದ ಬಂದು, "ನಾನು ವೆಂಕಟೇಶ್. ನೀವೆಲ್ಲಾ ನನ್ನ ಕರೆಯನ್ನ ಮನ್ನಿಸಿ ಇಲ್ಲಿಗೆ ಬಂದುದಕ್ಕೆ ನಿಮ್ಮನ್ನು ಎಷ್ಟು ವಂದಿಸಿದರೂ ಸಾಲದು. ನಮ್ಮ ತಂದೆ ಊಟ ಮುಗಿಸಿ ಈಗ ವಿಶ್ರಮಿಸುತ್ತಿದ್ದಾರೆ. ಬನ್ನಿ ನೀವೂ ಕೈಕಾಲು ತೊಳೆದು ಭೋಜನ ಸ್ವೀಕರಿಸುವಿರಂತೆ. ಮಹಡಿಯ ಮೇಲೆ ನಿಮ್ಮ ಕೊಠಡಿಗಳು ಸಿದ್ಧವಾಗಿವೆ. ಎಲ್ಲ ವಿವರಗಳನ್ನು ಅನಂತರ ತಿಳಿಸುವೆ" ಎಂದು ಹೇಳಿ ನಮ್ಮನ್ನು ಮಹಡಿಯ ಮೇಲಕ್ಕೆ ಕರೆದೊಯ್ದರು.



ಕೆಳಗಿನ ವಿಶಾಲವಾದ ಊಟದ ಮನೆಯಲ್ಲಿ ಭೋಜನದ ಸಿದ್ಧತೆ ಮಾಡಿತ್ತು. ನಾವು ಊಟಕ್ಕೆ ಬರುವ ಹೊತ್ತಿಗೆ ಮಂಜಣ್ಣನವರು ತಮ್ಮ ನಿದ್ದೆ ಮುಗಿಸಿ ಡೈನಿಂಗೆ ಟೇಬಲ್ಲಿನ ಹತ್ತಿರವೇ ಕುಳಿತಿದ್ದರು. ಅವರ ಬಲಗಣ್ಣಿಗೆ ಒಂದು ಕಪ್ಪು ಪಟ್ಟಿ ಕಟ್ಟಿದ್ದನ್ನು ನಾನು ಗಮನಿಸಿದೆ. ಭುವನ್ ನಮ್ಮನ್ನು ಅವರಿಗೆ ಪರಿಚಯಿಸಿದ. ಅವರು ತಕ್ಷಣ

ಎದ್ದು ನಿಂತು, "ಭುವನ್, ಇವರನ್ನು ಕರೆತಂದು ಎಷ್ಟು ಉಪಕಾರ ಮಾಡಿದೆಯಪ್ಪಾ. ನನಗಂತೂ ಗ್ರಂಥ ಕಳುವಾದಾಗಿನಿಂದ ನಿದ್ದೆಯೇ ಇಲ್ಲ. ಅಷ್ಟು ಅಮೂಲ್ಯವಾದ ಗ್ರಂಥ. ಅದು ಹೋದ ಮೇಲೆ ನಾನಿದ್ದೂ ಏನು ಪ್ರಯೋಜನ. ಶರಲೇಖ ಅವರೇ ಹೇಗಾದರೂ ಮಾಡಿ ಆ ಪ್ರಾಚೀನ ವಸ್ತುವನ್ನು ಹುಡುಕಿಸಿಕೊಡಿ" ಅಂತ ಕಳಕಳಿಯಿಂದ ಕೇಳಿಕೊಂಡರು.

ಶರಲೇಖ "ಮಂಜಣ್ಣನವರೇ ಏನೂ ಆತಂಕ ಪಡಬೇಡಿ. ನೀವು ಸಾತ್ವಿಕರು. ದೈವಭಕ್ತರು. ನಿಮ್ಮಂತಹವರಿಗೆ ಎಂದಿಗೂ ಅನ್ಯಾಯವಾಗದು. ಮೊದಲಿಗೆ ಕೆಲವು ಪ್ರಥಮ ಮಾಹಿತಿಗಳನ್ನು ತಿಳಿಸಿ. ನಿಮ್ಮ ಮನೆಯಲ್ಲಿ ಯಾರೆಲ್ಲಾ ಇದ್ದಾರೆ. ಕಳುವಾದ ಸಂದರ್ಭ ಎಂತಹದು? ಯಾವ ಅಂಶವನ್ನು ಬಿಡದೆ, ಎಲ್ಲ ವಿವರಗಳನ್ನೂ ತಿಳಿಸಿ." ಎಂದು ಅವರನ್ನು ವಿನಂತಿಸಿದ.

ಮಂಜಣ್ಣ ಪ್ರಾರಂಭಿಸಿದರು.

"ನೋಡಿ, ನಮ್ಮ ಮನೆಯಲ್ಲಿ ನಾನು, ನನ್ನ ಮಗ ವೆಂಕಟೇಶ, ಅವನ ಮಗಳು ಶ್ರೀ ಲಕ್ಷ್ಮಿ. ಇಷ್ಟೇ ಜನ. ನನ್ನ ಸೊಸೆ ತೀರಿಕೊಂಡು ಹಲವು ವರ್ಷಗಳೇ ಸಂದಿವೆ. ನಮ್ಮ ಮನೆಯಲ್ಲಿ ನನ್ನ ಸಹಾಯಕ್ಕೆ ಇರುವವನು ಈ ಕುಪ್ಪುಸ್ವಾಮಿ. ಬೆಳಗ್ಗೆ ಸಾಯಂಕಾಲ ಮನೆ ಕೆಲಸ ಮಾಡುವವಳು ಇಂದಿರಮ್ಮ. ಇಷ್ಟು ನಮ್ಮ ಸಾಮ್ರಾಜ್ಯ. ಇನ್ನು ಹನುಮ ಪುರಾಣ ನಮ್ಮ ವಂಶದವರು ತಲೆತಲಾಂತರದಿಂದ ಕಾಪಾಡಿಕೊಂಡು ಬಂದ ಪುಸ್ತಕ. ವಿಜಯ ನಗರದ ಆಳ್ವಿಕೆಯಲ್ಲಿ , ಅವನಿಯಲ್ಲಿದ್ದ ಅವರ ಪ್ರತಿನಿಧಿ, ನಮ್ಮ ಹಿರಿಯರಿಗೆ ಬಳುವಳಿ ಕೊಟ್ಟ ಗ್ರಂಥವಂತೆ ಅದು. ನಾನು ಪ್ರತಿ ತಿಂಗಳ ಮೊದಲ ಮಂಗಳವಾರ ಸಂಜೆ ಅದರ ಪಠಣ ಮಾಡುವುದು ನಮ್ಮ ಸಂಪ್ರದಾಯ. ಕಳೆದ ಮಂಗಳ ವಾರ ಪಠಣ ಮುಗಿದನಂತರ ಅದನ್ನು ನಾನೇ ತೆಗೆದುಕೊಂಡು ಹೋಗಿ ಬೀರುವಿನಲ್ಲಿಟ್ಟು ಬಂದಿದ್ದೆ. ಮೂರು ದಿನಗಳ ಹಿಂದೆ ಬೀರುವಿನತ್ತ ಕಣ್ಣಾಡಿಸಿದಾಗ ಪುಸ್ತಕ ಅಲ್ಲಿರಲಿಲ್ಲ."

ಶರಲೇಖ ಮಧ್ಯೆ ಬಾಯಿಹಾಕಿ, "ಪಠಣ ಮಾಡುವಾಗ ಇಲ್ಲಿಗೆ ಯಾರೆಲ್ಲಾ ಬರುತ್ತಾರೆ ?" ಅಂತ ಕೇಳಿದ.


"ಆಂಜನೇಯ ಸ್ವಾಮಿಯ ದೇವಸ್ಥಾನದ ಎಲ್ಲ ಧರ್ಮದರ್ಶಿಗಳಿಗೂ ಆಹ್ವಾನವಿರುತ್ತದೆ. ಒಟ್ಟು ಎಂಟು ಜನ. ಬಿಡುವಿಲ್ಲದವರು ಹಲವರು ಬರುವುದಿಲ್ಲ."

"ಪಠಣದ ದಿನಬಿಟ್ಟು ಮಿಕ್ಕ ದಿನಗಳಲ್ಲಿ ಗ್ರಂಥವನ್ನು ಬೀರುವಿನಿಂದ ಹೊರಕ್ಕೆ ತೆಗೆದದ್ದು ಉಂಟೆ?" ಶರಲೇಖನ ಪ್ರಶ್ನೆ.

"ಕಳೆದ ಬುಧವಾರ, ಅಂದರೆ ಪಠಣದ ಮಾರನೆಯ ಬೆಳಗ್ಗೆ ಬೆಂಗಳೂರಿನಿಂದ ಸಂಶೋಧಕರೊಬ್ಬರು ಗ್ರಂಥವನ್ನು ನೋಡಲು ಬಂದಿದ್ದರು. ಸ್ವಲ್ಪಕಾಲ ಅದನ್ನು ಪರಿಶೀಲಿಸಿ ಹಲವು ಫೋಟೋಗಳನ್ನು ತೆಗೆದುಕೊಂಡು ಹೋದರು. ಅವರು ಹೊರಟ ಮೇಲೆ ನಾನೇ ಪುಸ್ತಕವನ್ನು ಬೀರುವಿನಲ್ಲಿಟ್ಟು ಭದ್ರಪಡಿಸಿದ್ದೆ." ಎಂದರು ಮಂಜಣ್ಣ.



ಶರಲೇಖ "ಇಷ್ಟೆಲ್ಲಾ ಮಾಹಿತಿ ದೊರಕಿದ್ದು ತುಂಬ ಉಪಯುಕ್ತವಾಯಿತು. ಇನ್ನು ನೀವು ಆರಾಮ ಮಾಡಿ. ವೆಂಕಟೇಶ ಅವರ ಜೊತೆಯಲ್ಲಿ ನಾನು ಕಾರ್ಯೋನ್ಮುಖನಾಗುವೆ." ಎಂದು ಶರಲೇಖ ಹೇಳಿದ.



ಊಟವಾದನಂತರ ಶರಲೇಖ, ವೆಂಕಟೇಶರ ಜೊತೆಯಲ್ಲಿ ಹೊರಕ್ಕೆ ಹೋದ. ಭುವನ್, ಬೆಂಗಳೂರಿನಲ್ಲಿ ತುರ್ತಿನ ಕೆಲಸವಿರುವುದಾಗಿ ಹೇಳಿ ನಮಗೆ ವಿದಾಯ ಹೇಳಿ ಹೊರಟ. ನಾನು ಸಿಯೆಸ್ಟಾ ಮುಗಿಸಲು ರೂಮಿಗೆ ತೆರಳಿದೆ.

ಸಂಜೆ ಸುಮಾರು ಐದು ಘಂಟೆಗೆ ಯಾರೋ ನನ್ನ ರೂಮಿನ ಬಾಗಿಲು ತಟ್ಟಿದರು. ನೋಡಿದರೆ, ಶ್ರೀಲಕ್ಷ್ಮಿ ಕೈಯ್ಯಲ್ಲಿ ಟೀ ಕಪ್ಪು ಹಿಡಿದು ನಿಂತಿದ್ದಳು. "ಅಂಕಲ್, ಇಗೋ ಟೀ. ನಿಮಗೆ ಬಿಡುವಿದ್ದರೆ ನಾನು ನಿಮಗೆ ನಮ್ಮ ಊರಿನ ಹಲವು ಸುಪ್ರಸಿದ್ಧ ದೇವಸ್ಥಾನಗಳನ್ನು ತೋರಿಸೋಣ ಅಂದುಕೊಂಡೆ" ಎಂದಳು.

"ಓಹ್ ವಂಡರ್‌ಫುಲ್. ಹೋಗೋಣ ಅದಕ್ಕೇನು ಐದು ನಿಮಿಷದಲ್ಲಿ ನಾನು ರೆಡಿ" ಅಂದೆ.

ಅವಳು ತನ್ನ ಮಾರುತಿ ಕಾರಿನಲ್ಲಿ ಮೊದಲು ನನ್ನನ್ನು ಮುಳುಬಾಗಿಲಿನ ಸೋಮೇಶ್ವರ ದೇವಸ್ಥಾನಕ್ಕೆ ಕರೆದೊಯ್ದಳು.

"ಅಂಕಲ್, ಊರಿಗೆ ಬಂದೋರಿಗೆಲ್ಲಾ ನಾನೇ ಇಲ್ಲಿನ ಟೂರ್ ಗೈಡ್. ಈ ದೇವಸ್ಥಾನ ಐದನೆಯ ಶತಮಾನದಲ್ಲಿ ಪಲ್ಲವರು ಕಟ್ಟಿಸಿದ್ದು. ಇದರಲ್ಲಿನ ವೈಶಿಷ್ಟ್ಯವೆಂದರೆ ಇಲ್ಲಿ ರಾವಣಾಸುರನ ಪ್ರತಿಮೆ ಇದೆ. ಒಂಭತ್ತು ತಲೆಗಳ ರಾವಣ ಮಂಡಿಯೂರಿ ಕುಳಿತಿದ್ದಾನೆ. ಹತ್ತನೆಯ ತಲೆ ಅವನ ಕೈಯ್ಯಲ್ಲಿದೆ. ಬಹು ಅದ್ಭುತವಾದ ಕೆತ್ತನೆ. ದೇವಸ್ಥಾನದಲ್ಲಿನ ಪುಷ್ಕರಣಿ ಸಹಾ ಐದನೆಯ ಶತಮಾನದ್ದೇ. ಇಲ್ಲಿನ ಇನ್ನೊಂದು ಐತಿಹ್ಯವೆಂದರೆ, 1767ರಲ್ಲಿ ಮೊದಲ ಆಂಗ್ಲೋ ಮೈಸೂರು ಯುದ್ಧ ಇಲ್ಲೇ ನಡೆದದ್ದು. ಅದರಲ್ಲಿ ಟಿಪ್ಪುವಿನ ಸೈನ್ಯ ಈಸ್ಟ್ ಇಂಡಿಯಾ ಕಂಪನಿಯ ಕರ್ನಲ್ ರೀಡ್‌ನನ್ನು ಹಿಗ್ಗಾಮುಗ್ಗಾ ಸೋಲಿಸಿ ಹಿಂದಕ್ಕೆ ಕಳಿಸಿದ್ದು." ಅಷ್ಟು ಹೊತ್ತಿಗೆ ನಾವು ದೇವಸ್ಥಾನ ತಲುಪಿದ್ದೆವು. ಶ್ರೀ ಲಕ್ಷ್ಮಿ ಸೋಮೋಶ್ವರ ದೇವಸ್ಥಾನದ ಎಲ್ಲ ಅಂಶಗಳನ್ನೂ ಬಹು



ಆಸಕ್ತಿ ಮೂಡುವಂತೆ ವಿವರಿಸಿದಳು. ಇದಾದ ನಂತರ ನಾವು ಕುರುಡುಮಲೆಯ ವಿನಾಯಕ ದೇವಸ್ಥಾನವನ್ನು ಸಹಾ ನೋಡಿದೆವು. ಮನೆಗೆ ಹಿಂತಿರುಗುವಾಗ ನಾನು ಶ್ರೀ ಲಕ್ಷ್ಮಿಯನ್ನು ಕುರಿತು, "ನಿಮ್ಮ ತಾತನ ಕಣ್ಣಿಗೆ ಕಪ್ಪು ಬ್ಯಾಂಡೇಜ್ ಕಟ್ಟಿದಾರಲ್ಲಾ, ಏನಾಗಿದೆ ಕಣ್ಣಿಗೆ ?" ಅಂತ ಕೇಳಿದೆ.

ಅವಳು "ಅಯ್ಯೋ ಅದೊಂದು ಕಥೆ. ಎರಡು ವಾರಗಳ ಹಿಂದೆ ಕ್ಯಾಟರ್ಯಾಕ್ಟ್ ಅಂತ ಲೇಸರ್ ಆಪರೇಶನ್ ಮಾಡಿಸಿಕೊಂಡರು. ಸರಿಯಾಗಿ ಹೀಲ್ ಆಗಲಿಲ್ಲ. ಅದಕ್ಕೆ ಬ್ಯಾಂಡೇಜ್ ಇನ್ನೂ ಒಂದು ವಾರ ಇರಲಿ ಅಂತ ಡಾಕ್ಟರ್ ಹೇಳಿದ್ದಾರೆ. ಕಣ್ಣಿಗೆ ಪೂರ್ತಿ ರೆಸ್ಟ್ ಕೊಡಬೇಕು ಅಂತ ಹೇಳಿದ್ದರೂ ಅವರು ಓದೋದು ಮಾತ್ರ ಬಿಡುಲ್ಲ. ನನಗಂತೂ ತುಂಬಾ ಚಿಂತೆ. ಮೆಡಿಕಲ್ ಟ್ರೀಟ್‌ಮೆಂಟ್‌ನ ಅಲಕ್ಷ್ಯ ಮಾಡಬಾರದು ಅಲ್ವಾ ಅಂಕಲ್" ಅಂತ ಕೇಳಿದಳು ಶ್ರೀಲಕ್ಷ್ಮಿ.

"ಹೌದಮ್ಮಾ. ಆದರೆ ವಯಸ್ಸಾದವರಿಗೆ ಚಿಕ್ಕವರಿಗಿರೋ ಅಷ್ಟು ಕಾಳಜಿ ಇರೋದಿಲ್ವಲ್ಲಾ" ಎಂದು ಹೇಳಿ ಸುಮ್ಮನಾಗಿಸಿದೆ.

ಮನೆ ಸೇರಿದಾಗ ಆರೂವರೆ. ಶರಲೇಖ ಮತ್ತು ವೆಂಕಟೇಶ ಮನೆಗೆ ಹಿಂತಿರುಗಿದ್ದರು. ಎಲ್ಲ ಒಟ್ಟು ಕೂತು ಟೀ ಕುಡಿಯುವಾಗ ನಾನು ನನ್ನ ಕಂಡಕ್ಟೆಡ್ ಟೂರ್ ಬಗ್ಗೆ ಹೇಳಿದೆ. ಶರಲೇಖ ತಕ್ಷಣ, "ಓ ಹಾಗೇನು. ಒಳ್ಳೇದಾಯಿತು. ಈಗ ನಾನು ನನ್ನ ಪತ್ತೇದಾರಿ ಮುಂದುವರಿಸಲು ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಹೋಗುವವನಿದ್ದೆ. ಶ್ರೀಲಕ್ಷ್ಮಿ ನನ್ನನ್ನು ಕರೆದುಕೊಂಡು ಹೋದರೆ ಕೆಲಸ ಸುಗಮವಾಗುತ್ತೆ" ಅಂತ ನಗುತ್ತಾ ಹೇಳಿದ.

ಶ್ರೀ ಲಕ್ಷ್ಮಿ "ಎನಿ ಟೈಮ್" ಅಂತ ಉತ್ತರಿಸಿದಳು. ನಗು ಇರಲಿಲ್ಲ.

ಆ ಸಂಜೆ ನಾನು ಮಂಜಣ್ಣನವರೊಡನೆ ಹರಟಲು ಅವಕಾಶ ಸಿಕ್ಕಿತು. ನಿಜಕ್ಕೂ ಆತ ಮೇಧಾವಿಗಳು. ಮುಳುಬಾಗಿಲು , ಮೂಡಲ ಬಾಗಿಲು ಎಂಬುದರ ತದ್ಭವ, ಮುಳುಬಾಗಿಲು ಆಂಜನೇಯನಿಗೆ ಅವಾಂತರ ಆಂಜನೇಯ ಎಂಬ ಪ್ರತೀತಿ ಬಂದದ್ದು ಏಕೆ ? ಇವೇ ಮೊದಲುಗೊಂಡು ಅವರು ಹೇಳಿದ ಅನೇಕ ಕೌತುಕಮಯವಾಗಿದ್ದ ಸ್ವಾರಸ್ಯವೆನ್ನಬಹುದಾದ ದಂತ ಕಥೆಗಳನ್ನು ಕೇಳುತ್ತ ಸಮಯ ಸರಿದದ್ದೇ ತಿಳಿಯಲಿಲ್ಲ.

**********

ಮಾರನೆಯ ಬೆಳಗ್ಗೆ ನಾವೆಲ್ಲಾ ಬೆಳಗಿನ ಉಪಹಾರಕ್ಕೆ ಊಟದ ಮನೆಯಲ್ಲಿ ಉದ್ದನೆಯ ಮೇಜಿನ ಸುತ್ತ ಕುಳಿತಿದ್ದೆವು. ಉಪಹಾರಕ್ಕೆ ಮುಳಬಾಗಿಲು ತುಪ್ಪದ ದೋಸೆ ಎಂದು ವೆಂಕಟೇಶ ಮೊದಲೇ ಹೇಳಿದ್ದರು. ಮೇಜಿನ ಮೇಲೆ ದೊಡ್ಡ ಬೆಳ್ಳಿಯ ಡಬರಿಯೋಂದು ಕುಳಿತಿತ್ತು. ಸುತ್ತ ಎಲ್ಲರಿಗೂ ಬೆಳ್ಳಿ ತಟ್ಟೆಗಳು. ಸ್ವಲ್ಪ ಹೊತ್ತಿನಲ್ಲೇ ಮಂಜಣ್ಣನವರು ಬಂದು ಮೇಜಿನ ಮುಂಚೂಣಿಯಲ್ಲಿ ಕುಳಿತರು. ಶರಲೇಖನನ್ನು ನೋಡಿ, "ಏನು ಸ್ವಾಮಿ, ತಮ್ಮ ಪತ್ತೇದಾರಿಯಲ್ಲಿ ಏನಾದರೂ ಶುಭ ಸುದ್ದಿ?" ಅಂತ ಪ್ರಶ್ನಿಸಿದರು.

ಶರಲೇಖ, "ಸಾವಧಾನ. ಮೊದಲು ಮುಳಬಾಗಿಲು ದೋಸೆ. ಅನಂತರ ಮಿಕ್ಕೆಲ್ಲ ಸಂಗತಿಗಳು. ತಾವೇ ಡಬರಿಯ ಮುಚ್ಚಳವನ್ನು ತೆರೆದು ಪ್ರಾರಂಭಿಸಬೇಕು"



ಅಂತ ಹೇಳಿದ. ಮಂಜಣ್ಣನವರಿಗೆ ಅವನ ಲಘು ಹಾಸ್ಯ ಹಿಡಿಸಿದಂತೆ ಕಾಣಲಿಲ್ಲ. ಆದರೂ ಅತಿಥಿ ಸತ್ಕಾರ ಆಗಲೇ ಬೇಕಲ್ಲ. ನಿಧಾರವಾಗಿ ಆತ ಡಬರಿಯ ಮುಚ್ಚಳ ತೆಗೆದರು. ಡಬರಿಯಲ್ಲಿ ಹನುಮ ಪುರಾಣ ಬೆಚ್ಚಗೆ ಕುಳಿತಿತ್ತು. ಮಂಜಣ್ಣನವರು ಎದ್ದು ಕುಣಿಯೋದೊಂದು ಬಾಕಿ. ಅಷ್ಟು ಸಂತಸದಿಂದ ಗ್ರಂಥವನ್ನು ಎರಡೂ ಕೈಗಳಲ್ಲಿ ಎತ್ತಿ ಎದೆಗಪ್ಪಿಕೊಂಡರು.

*************

ನಮ್ಮ ಬೆಂಗಳೂರು ಪ್ರಯಾಣಕ್ಕೆ ವೆಂಕಟೇಶ ಕಾರು ವ್ಯವಸ್ಥೆ ಮಾಡಿದ್ದ. ಎಲ್ಲರಿಗೂ ವಿದಾಯ ಹೇಳಿ ನಾವು ಕಾರು ಹತ್ತಿದೆವು. ನನಗೋ ಶರಲೇಖ ಈ ಸಮಸ್ಯೆಯನ್ನು ಹೇಗೆ ಪರಿಹರಿಸಿದ ಎಂಬ ಕುತೂಹಲ. ಅಂತೂ ಕಾರು ಹೈವೇ ಸೇರಿದ ನಂತರ, ಅವನೇ ಮಾತು ಪ್ರಾರಂಭಿಸಿದ.

"ಮುಳಬಾಗಿಲು ಸಂಭಾವಿತರ ಊರು. ಅದರಲ್ಲೂ ಮಂಜಣ್ಣನವರ ಸಹವರ್ತಿಗಳೆಲ್ಲರೂ ಸಾತ್ವಿಕರು, ಸಜ್ಜನರು. ಹಾಗಾಗಿ ಅವರು ಯಾರನ್ನೂ ಅನುಮಾನಿಸುವುದು ಅಸಾಧ್ಯ.ಮಂಜಣ್ಣನವರಿಗೆ ಕಣ್ಣು ಆಪರೇಶನ್ ಆಗಿದ್ದನ್ನು ನೋಡಿದೆ. ಕಣ್ಣಿನ ಪರಿಸ್ಥಿತಿಯನ್ನೂ ಲೆಕ್ಕಿಸದೇ ಅವರು ಪಠಣದಲ್ಲಿ ಉದ್ಯುಕ್ತರಾಗಿದ್ದು ನೋಡಿ ಆಶ್ಚರ್ಯ ಅನ್ನಿಸಿತು. ಶ್ರೀಲಕ್ಷ್ಮಿ ಮೆಡಿಕಲ್ ವಿದ್ಯಾರ್ಥಿನಿ. ದೈಹಿಕ ಆರೋಗ್ಯದ ಮಹತ್ವ ತಿಳಿದವಳು. ಪ್ರೀತಿಯ ತಾತ ತಮ್ಮ ಕಣ್ಣನ್ನು ಅಲಕ್ಷ್ಯಮಾಡುತ್ತಿರುವುದನ್ನು ನೋಡಿ ಹೇಗೆ ಸುಮ್ಮನಿದ್ದಾಳು ? ಹಾಗಾಗಿ ಆವಳು ಗ್ರಂಥವನ್ನ ತನ್ನ ಸ್ನೇಹಿತೆಯ ಮನೆಯಲ್ಲಿ ಬಚ್ಚಿಟ್ಟಿದ್ದಳು. ನಿನ್ನೆ ಸಂಜೆ ಇದನ್ನು ಅವಳಿಗೆ ಹೇಳಿದಾಗ, ಅವಳ ಮೊದಲ ಚಿಂತೆ ತನ್ನ ಮೇಲೆ ಬರುವ ಅಪವಾದ. ನಾನು ಅವಳಿಗೆ ಈ ಕುರಿತು ಚಿಂತೆ ಬೇಡ. ಈ ಸಂಗತಿ ಯಾರಿಗೂ ತಿಳಿಸುವುದಿಲ್ಲ ಎಂದು ಭಾಷೆ ಕೊಟ್ಟನಂತರ ಅವಳೇ ನನ್ನನ್ನು ಅವಳ ಗೆಳತಿಯ ಮನೆಗೆ ಕರೆದೊಯ್ದು ಪುಸ್ತಕವನ್ನು ಹಿಂದಕ್ಕೆ ಪಡೆದಳು. ನಾನು ಒಂದು ನಾಟಕ ಮಾಡಿ ಪುಸ್ತಕವನ್ನ ಸ್ವಸ್ಥಾನಕ್ಕೆ ಸೇರಿಸಿದೆ." ಎಂದ ಶರವೇಖ.

ಅಷ್ಟು ಹೊತ್ತಿಗೆ ನಾವು ಕೋಲಾರದ ಕಾಮತ್ ಹತ್ತಿರ ಬಂದಿದ್ದೆವು. "ಕಾಫಿ ಬ್ರೇಕ್" ಅಂದ ಶರಲೇಖ.



ಉಂಬುವುದಕ್ಕಿಲ್ಲದ ರಾಜ್ಯ ನೌಕರಿಗಿಂತ ತುಂಬಿದೂರೊಳಗೆ ಚಂದ ಎತ್ತುವುದೆ ಲೇಸು.

ಗೋಧಿಕೊಂಡರೆ ಮಾತ್ರ ಅಕ್ಕಿ ಕೊಡುವುದಕಿಂತ ಬೋಧಿಸಲಿ ಸಂನ್ಯಾಸ, ಅದುವೆ ಲೇಸು.

ಮಸಗುತಿಹ ಮತ್ಸರದ ಗಡಿಯೊಳಗಿರುವುದಕಿಂತ ಮಸಣವೂ ಪಾಳ್ಗುಡಿಯೂ, ಮಾಸ್ತರ್ಗಿರಿಯೂ ಲೇಸು

**–ನಾ. ಕಸ್ತೂರಿ**

# ಕರಿಯ ಐ ಲವ್ ಯೂ

ನಳಿನಿ ಸೂರ್ಯಪ್ರಕಾಶ್

**ಕ**ರಿಯ ಐ ಲವ್ ಯೂ, ಕರುನಾಡ ಮೇಲಾಣೆ ಅಂತ ನಾನು ಎಷ್ಟೇ ಪ್ರೀತಿಯಿಂದ ಹಾಡಿದರೂ, ಅವನು ಮಾತ್ರ 'ಬೆಳ್ಳಿ ಐ ಲವ್ ಯೂ, ಬಿಳಿ ಮೋಡದಾ ಆಣೇ' ಅಂತ ನನ್ನಾಣೆಗೂ ಹಾಡಲ್ಲ. ಯಾಕಂದರೆ ಕರಿಯ ನಮ್ಮ ಮನೆಯ ಬಳಿ ವಾಸವಾಗಿರೋ ಮಾತು ಬಾರದ ಕರಿ ನಾಯಿ. ನಾಲ್ಕೂ ಕಾಲು ಬೆರಳುಗಳು, ಡೊಂಕುಬಾಲದ ತುದಿ ಮತ್ತು ಕತ್ತಿನ ಕೆಳಗೆ ಸಾಕಷ್ಟು ಬೆಳ್ಳಗಿದ್ದರೂ ನಮಗೆ ಅವನು ಕರಿಯನೇ. ನಮ್ಮ ಬೀದಿಯ ಮಾರ್ವಾಡಿ ಹೆಂಗಸೊಬ್ಬಳು ಮಿಕ್ಕ ಅನ್ನವನ್ನು ಇವನಿಗೆ ಕೊಡೋಕ್ಕೆ ಬಂದಾಗಲೆಲ್ಲ ಇಂಗ್ಲೀಷು ಹೆಸರಿನಿಂದ ಹಿಂದಿಯಲ್ಲಿ, 'ಬ್ಲ್ಯಾಕೀ... ಆಜಾ ಬ್ಲ್ಯಾಕೀ...' ಅಂತ ರಾಗವಾಗಿ ಕೂಗೋದುಂಟು.


ಈ ಕರಿಯ ನಿರ್ದಿಷ್ಟವಾಗಿ ಬೀದಿಯ ಯಾರ ಮನೆಯನ್ನೂ ಕಾಯುವವನಲ್ಲ. ಮನೆಯಿಲ್ಲದೆ ಬೀದಿ ಸುತ್ತುವ ಬೀದಿನಾಯಿಯೂ ಅವನಲ್ಲ. ಒಟ್ಟಿನಲ್ಲಿ ನಮ್ಮ ಬೀದಿಯನ್ನೇ ತನ್ನ ಮನೆ ಮಾಡ್ಕೊಂಡು, ತನಗಿಷ್ಟವಾದ ಮನೆಯ ಮುಂದೆ ಬಿದ್ದುಕೊಳ್ಳುವ ಎಡಬಿಡಂಗಿ ನಾಯಿ. ಈ ಎಡಬಿಡಂಗಿತನದಲ್ಲೂ ಅವನು ಸಾಮಾನ್ಯವಾಗಿ ಕಾಣಸಿಗುವುದು ನಮ್ಮ ಮನೆಯ ಎದುರಿನ ದೊಡ್ಡಮನೆಯ ಗೇಟಿನ ಬಳಿ. ಆ ಮನೆಯ ಬೆಳಗಿನ ವಾಚ್‌ಮನ್ನು ಒಂದೆರಡು ಬಾರಿ ಬಿಬಿಎಂಪಿಯವರ ಬಲೆಯಿಂದ ಕರಿಯನನ್ನು ಕಾಪಾಡಿದ ಆಪ್ತರಕ್ಷಕ. ಹಾಗಂತ ದೊಡ್ಮನೆಯ ಗೇಟಿನ ಒಳಗೆ ಕರಿಯನಿಗೆಂದೂ ಪ್ರವೇಶವಿಲ್ಲ. ಅದೆಂದಿಗೂ ನಿಷೇಧವೇ. ಹಾಗೇ ಕರಿಯನೂ ಗೇಟಿನ ಒಳಗೆ ಠಿಕಾಣಿ ಹೂಡುವ ಆಸೆಯನೆಂದೂ ಪಟ್ಟವನಲ್ಲ. ಹೊರಗೇ ಒಂದು ಮೂಲೆಯಲ್ಲಿ ಬಿದ್ದುಕೊಳ್ಳುವ ಅಲ್ಪತೃಪ್ತ. ಜೊತೆಗೆ ಅನಾವಶ್ಯಕವಾಗಿ ಬೊಗಳದ, ದ್ವಿಚಕ್ರಿಗಳನ್ನು ಅಟ್ಟಿಸಿಕೊಂಡೋಡಿ ಹೆದರಿಸದ, ಇದುವರೆಗೂ ಯಾರನ್ನೂ ಕಚ್ಚದ ನಿರುಪದ್ರವಿ ಶಾಂತಿಪ್ರಿಯ. ಬೊಗಳದ ನಾಯಿ ಕಚ್ಚಬೇಕಿಲ್ಲವೆಂದು ಸಾರಿದವ. ರಾತ್ರಿ ಪಾಳಿಯ ವಾಚ್‌ಮನ್ನಿಗೂ ಕರಿಯ ಅಚ್ಚುಮೆಚ್ಚು. ಆತನ ಬೆಳಗಿನ ಕಾಫಿ ಜೊತೆಗಿನ ಬಿಸ್ಕತ್ತಿನಲ್ಲಿ ಕರಿಯನಿಗೂ ಪಾಲುಂಟು. ಹಾಗಂತ ತಾವೇನೂ ಕರಿಯನನ್ನು ಸಾಕಿಲ್ಲವೆಂಬುದೇ ಇಬ್ಬರೂ ವಾಚ್‌ಮನ್ನುಗಳ ಅಂಬೋಣ. ಹೀಗೆ ಯಾರೂ ತನ್ನದೆಂದು ಸಾಕಿರದ ಕರಿಯನ ಹೊಟ್ಟೆಗೆ ಮಾತ್ರ ಬೀದಿಯಲ್ಲಿನ ನಮ್ಮ ಮನೆಯೂ ಸೇರಿ, ಅವರಿವರ ಮನೆಯ ಬಿಸ್ಕತ್ತು, ಅನ್ನ ಮುಂತಾದವು ಆಗಾಗ ಸಂದಾಯವಾಗ್ತಿರತ್ತೆ. ಒಮ್ಮೊಮ್ಮೆ ಬೀದಿಕೊನೆಯಲ್ಲಿ ಮಹಾಜನತೆ ಸೃಷ್ಟಿಸುವ ತಿಪ್ಪೆರಾಶಿಯಲ್ಲಿನ ಕೆಲ ಪೊಟ್ಟಣಗಳನ್ನು ಮೂಸಿ, ಬಾಯಿಂದ ಹರಿದು, ಅದರಲ್ಲಿ ಸಿಕ್ಕಿದ್ದನ್ನು ತಿನ್ನುವ ಭರಾಟೆಯಲ್ಲಿ, ಕರಿಯನಿಂದಾಗಿ ಬೀದಿಯ ಕಾಲುದಾರಿಯೆಲ್ಲಾ ಕಸಮಯ! ಸಿಂಹಾಸನದಲ್ಲಿ ಕೂತ ನಾಯಿಯೇ ತಿಪ್ಪೆ ಕಂಡರೆ ಬಿಡದಿದ್ದ ಮೇಲೆ ಇನ್ನು ಕರಿಯನಂಥ ಬೀದಿಗಂಟಿದ ನಾಯಿ ಸುಮ್ಮನಿರತ್ಯೇ?



ನನಗೆ ನೆನಪಿರುವ ಹಾಗೆ ಸುಮಾರು ವರ್ಷಗಳ ಹಿಂದೆ ಇದೇ ರೀತಿ ನಮ್ಮ ಬೀದಿಯಲ್ಲಿ ಎಡಬಿಡಂಗಿ ಕೆಂಚು ನಾಯಿಯೊಂದಿತ್ತು. ಅದರ ಮರಿಯೇ ಈ ಕರಿಯ. ಅಪ್ಪ ಮತ್ಯಾವುದೋ ಕರಿಯನೇ ಇರಬೇಕೆನ್ನಿ! ಹಾಗಾಗಿ ನಮ್ಮ ಬೀದಿಯಲ್ಲೇ ಹುಟ್ಟಿ ಬೆಳೆದ ಕರಿಯನಿಗೀಗ ಹನ್ನೆರಡು ಹದಿಮೂರರ ಇಳಿವಯಸ್ಸು. ಸಹಜವಾಗಿಯೇ ಈಗ ಕಣ್ಣುಗಳು ಮಂಜಾಗಿ, ಕಿವಿಗಳು ಮಂದವಾಗಿವೆ. ಇಂತಹ ನಿರುಪದ್ರವಿ,

ಶಾಂತಿಪ್ರಿಯ, ಮುದಿವಯಸ್ಸಿನ ಕರಿಯನ ಜೀವನದಲ್ಲೂ ವಿಲನ್ ಒಬ್ಬನ ಪ್ರವೇಶವಾಗಿಹೋಯ್ತು.

ಮಾದೇವಸ್ವಾಮಿ ಎದುರುಮನೆಗೆ ರಾತ್ರಿ ಹೊತ್ತು ವಾಚ್‌ಮನ್ನಾದ್ರೆ, ಬೆಳಗಿನ ಹೊತ್ತು ಆಟೋ ಡ್ರೈವರು. ನಮ್ಮ ಎದುರುಮನೆಯ ಎದುರೇ ಆತ ತನ್ನ ಆಟೋ ನಿಲ್ಲಿಸೋದು. ಅದೊಂದು  ರಾತ್ರಿ ಎಲ್ಲಿಂದಲೋ ಬಂದ ನಾಯಿಯೊಂದು ಆಟೋ



ಹೊಕ್ಕು ಹಾಯಾಗಿ ಮಲಗಿಬಿಟ್ಟಿತ್ತು. "ಬೆಳಿಗ್ಗೆ ಐದು ಗಂಟೆಗೆ ಆಟೋ ತೊಳ್ಯಣಾಂತ ನೋಡ್ತೀನಿ, ಒಳ್ಗೆ, ಏನೋ ಇದ್ದಂಗಿತ್ತು. ಸರಿಯಾಗಿ ಕಣ್ಬುಟ್ಟು ನೋಡಿದ್ರೆ, ಈ ನಾಯಿ ನನ್ಮಗಂದು, ಸೀಟಿನ್ಮೇಲೆ ಆಯಾಗಿ ಮಲ್ಕಂಬುಟ್ಟದೆ!" ಅಂತ ಮಾದೇವಸ್ವಾಮಿಯ ಉದ್ಗಾರ. ಅದೂ ಎಂತಹ ನಾಯಿ ಅಂತೀರಿ, ನಮ್ಮ ಕರಿಯನಿಗಿಂತಲೂ ಕರಿ. ಮೈಮೇಲೆ ಒಂದು  ಬಿಳಿ ಚುಕ್ಕೆಯೂ ಕಾಣದ, ಕತ್ತಲೆಯೇ ಮೈತಳೆದಂಥ ಕಡುಗಪ್ಪು ನಾಯಿ. ಜೊತೆಗೆ ಚಿಕ್ಕ ವಯಸ್ಸು. ಮಜಬೂತಾಗಿತ್ತು.

ತನ್ನ ಓಣಿಯಲ್ಲಿ  ನಾಯಿಯೂ ಸಿಂಹವಂತೆ. ಇನ್ನು ತನ್ನ ಓಣಿ (ಬೀದಿ) ಸಾಮ್ರಾಜ್ಯದ ಒಡೆತನವನ್ನು ಮತ್ತೊಂದು ನಾಯಿಯ ಜೊತೆ ಹಂಚಿಕೊಳ್ಳುವ ಮಾತೆಲ್ಲಿ? ಮುದಿವಯಸ್ಸಿನಲ್ಲೂ ಕರಿಯ ರೊಚ್ಚಿಗೆದ್ದ. ಅಂದಿನಿಂದ ಶುರುವಾಯ್ತು ಕರಿಯ ವರ್ಸಸ್ ಕರಿಯ ಜಟಾಪಟಿ. ತನ್ನದಲ್ಲದ ಓಣಿಯಲ್ಲೂ ಹೊಸ ಕರಿಯ ಸಾಕಷ್ಟು ಗದ್ದಲವೆಬ್ಬಿಸಿದ. ಒಂದೇ ಸಮನೆ ಇಬ್ಬರ ನಡುವೆ ಬೊಗಳು ಬೈಗುಳಗಳ ವಿನಿಮಯ. ಇತ್ತ ಇಬ್ಬರೂ ವಾಚ್‌ಮನ್ನುಗಳೂ ಹೊಸ ಕರಿಯನನ್ನು ಹಚ ಹಚ ಅಂತ ಓಡಿಸಿದರೂ, ಅವನು ಮಾತ್ರ ಅಕ್ಕಪಕ್ಕದ ಬೀದಿಗಳಲ್ಲಿ ತಿರುಗಾಡಿಕೊಂಡು, ಮತ್ತೆ ದೊಡ್ಡಮನೆಯ ಗೇಟಿನ ಬಳಿ ವಕ್ಕರಿಸಿಕೊಳ್ತಿದ್ದ. ಮತ್ತೆ ಶುರು ಬೌ ಬೌ ಕದನ. ಜೊತೆಗೆ ಹೊಸ ಕರಿಯನದ್ದು ಕೆಟ್ಟ ಚಾಳಿಯೊಂದಿತ್ತು. ರಸ್ತೆಯಲ್ಲಿ  ಓಡಾಡುವ




ಕಾರು, ದ್ವಿಚಕ್ರಿಗಳ ಹಿಂದೆ ಅನಾವಶ್ಯಕವಾಗಿ ಬೊಗಳ್ತಾ ಅಟ್ಟಿಸಿಕೊಂಡೋಡುವುದು. ಹಾಗಾಗಿ ರಸ್ತೆಯಲ್ಲಿ ಆಗಾಗ ಎಂದೂ ಇಲ್ಲದ ಗದ್ದಲ, ಕಿರುಚಾಟಗಳಾಗೋಕ್ಕೆ ಶುರುವಾಯ್ತು. ವಾಚ್‌ಮನ್ನುಗಳು ಎಷ್ಟೇ ಬೈದು, ಹೆದರಿಸಿದ್ರೂ ಕೇಳದ ಹೊಸ ಕರಿಯ ತನ್ನ ಅಟ್ಟಿಸಿಕೊಂಡೋಡುವ ಬುದ್ಧಿ ಬಿಡಲೇಯಿಲ್ಲ. ಅಂತೂ ನಾಯಿ ಬಾಲ ಡೊಂಕು ಅಂತ ಸಾಬೀತು ಪಡಿಸಿದ.

ನಾನೊಮ್ಮೆ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದೆ. ಈ ಹೊಸ ಕರಿಯ ಹಳೆ ಕರಿಯನಂತೆ ಎಲ್ಲೋ ಒಂದು ಕಡೆ ಬಿದ್ದುಕೊಂಡು ಕಾಲ ದೂಡುವಂಥ ಅಲ್ಪ ತೃಪ್ತನಲ್ಲ. ಈ ಹೊಸಬನಿಗೆ ಬೇಕಾಗಿದ್ದು ತನ್ನನ್ನು ತಮ್ಮವನೆಂದು  ಪ್ರೀತಿಯಿಂದ ಸಾಕುವ ಜನರು, ತನ್ನದೆಂಬಂತ ಒಂದು  ಮನೆ. ಅದನ್ನರಸಿಯೇ ಹೇಗೋ ನಮ್ಮ ಬೀದಿಗೆ ಬಂದಿದ್ದ. ಆಗಾಗ ದೊಡ್ಡಮನೆಯ ಗೇಟಿನ ಮುಂದೆ ನಿಂತು ಒಳಗಡೆ ಪ್ರವೇಶ ಸಿಗುವುದೇನೋ ಅಂತ ತದೇಕಚಿತ್ತವಾಗಿ ನೋಡ್ತಿದ್ದ. ಒಮ್ಮೊಮ್ಮೆ ಗೇಟಿನ ಸಂದಿಗಳಲ್ಲೂ ಇಣುಕಿಣುಕಿ ನೋಡ್ತಿದ್ದದ್ದುಂಟು. ತನಗೆಂದಿಗೂ ಗೇಟಿನ ಒಳಗೆ ಪ್ರವೇಶವಿಲ್ಲವೆಂದು ನಿಧಾನವಾಗಿ ಅವನಿಗೂ ಗೊತ್ತಾಗಿರಬೇಕು.

ಆಗಾಗ ಪಕ್ಕದ ಬೀದಿಗೆ ಹೋಗಿರ್ತಿದ್ದ ಹೊಸ ಕರಿಯನಿಗೆ ಅಲ್ಲಿರುವ ಕಿರಾಣಿ ಅಂಗಡಿಯ ಶೆಟ್ಟರ ಪ್ರೀತಿ ಗಳಿಸೋದು ಕಷ್ಟವಾಗ್ಲಿಲ್ಲ. ಅಂತೂ ಆ ಸುದಿನ ಬಂದೇಬಿಡ್ತು. ಶೆಟ್ಟರ ಮನ ಕರಗಿ, ಹೊಸ ಕರಿಯನನ್ನು ತಮ್ಮದಾಗಿಸಿಕೊಂಡುಬಿಟ್ರು. ಶೆಟ್ಟರ ಮಗಳು  ಚಾರ್ಲಿ ಸಿನಿಮಾ ನೋಡಿದವಳು. ಇವನನ್ನು ಚಾರ್ಲಿ ಚಾರ್ಲಿ ಅಂತ ಕರೆದು ಗಂಟಲು ಹರ್ಕೊಂಡ್ಳು. ಆದರೆ ಅವನು ಮಾತ್ರ ತಿರುಗಿ ನೋಡ್ತಿದ್ದದ್ದು "ಕರಿಯ" ಅಂತ ಕರೆದಾಗ್ಲೇ! ಅಂತೂ ಅವ "ಕರಿಯ"ನಾಗಿ ಶೆಟ್ಟರ ಮನೆ ಸೇರಿ, ಅವರ ಸಂಸಾರದಲ್ಲೊಬ್ಬನಾದ. ಅವನು ಬಯಸಿ ಬಂದ ಮನೆ ಅವನಿಗಾಗಿ ಸಿಕ್ಕೇಬಿಡ್ತು!

ಒಂದು ದಿನ ಕೆಲಸದ ಕಾಮಾಕ್ಷಿ ಕೈಕೊಟ್ಟಳು ಅಂತ ಮನೆಯ ಮುಂದೆ ರಂಗೋಲಿ ಹಾಕ್ತಿದ್ದೆ. ಯಾಕೋ ರೊಚ್ಚಿಗೆದ್ದ ನಮ್ಮ ಬೀದಿಯ ಕರಿಯ ಬೊಗಳುವುದನ್ನು ಕೇಳಿ ಹಿಂದೆ ತಿರುಗಿ ನೋಡ್ದೆ. ಶೆಟ್ಟರ ಕರಿಯ ಅವರ "ಹೊಂಡಾ"ದಲ್ಲಿ ಮುಂದೆ ಕೂತು 'ಜುಂ' ಅಂತ ರಸ್ತೆಯಲ್ಲಿ  ಹೋಗ್ತಿದ್ದ. ಆಜನ್ಮವೈರಿಯನ್ನು ಕಂಡಂತೆ ನಮ್ಮ ಬೀದಿಯ ಕರಿಯ ಒಂದೇ ಸಮನೆ ಬೊಗಳು ಮಳೆಗರೆದ. ಶೆಟ್ಟರ ಕರಿಯ 'ನಾಯಿ ಬೊಗಳಿದರೆ ದೇವಲೋಕ ಹಾಳೇ' ಅಂತ ತಿರುಗಿಯೂ ನೋಡದೆ, ತನ್ನ ಪಾಡಿಗೆ ತಾನು ಶೆಟ್ಟರ ಹೊಂಡಾರೂಢನಾಗಿ ಗತ್ತಿನಿಂದ ಮುಂದೆ ಸಾಗಿದ.

ಬೊಗಳಿ ಬಾಯಿ ನೋಯಿಸಿಕೊಂಡ ನಮ್ಮ ಬೀದಿಯ ಕರಿಯ ತೆಪ್ಪಗೆ ದೊಡ್ಡಮನೆಯ ಗೇಟಿನ ಬಳಿ ಬಿದ್ದುಕೊಂಡ. ನನ್ನ ರಂಗೋಲಿ ಮುಗಿಯುವ ಹೊತ್ತಿಗೆ ಮಾರ್ವಾಡಿ ಹೆಂಗಸು ಬಟ್ಟಲಲ್ಲಿ ಅನ್ನ ಹಿಡಿದು, "ಬ್ಲ್ಯಾಕೀ, ಆಜಾ ಬ್ಲ್ಯಾಕೀ" ಅಂತ ರಾಗವಾಗಿ ಕೂಗ್ತಾ ಮುದಿ ಕರಿಯನತ್ತ ಬಂದಳು. ಎವೆರಿ ಡಾಗ್ ಹ್ಯಾಸ್ ಹಿಸ್ ಡೇ. ಕಾಣದ ಕೈಯೊಂದು ಈ ಇಬ್ಬರೂ ಕರಿಯರನ್ನು ಸಲಹುವ ಪರಿಯಿದು ಅನ್ನಿಸ್ತು. ಅದಕ್ಕೇ ಅಲ್ವೇ ನಮ್ಮ ದಾಸರು ಹಾಡಿರುವುದು, "ಎಲ್ಲರನು ಸಲಹುವನು, ಇದಕೆ ಸಂಶಯವಿಲ್ಲ"ವೆಂದು!



## ಕ್ಲಿಕ್ಕಾಯಣ

**ನಳಿನಿ ಟಿ. ಭೀಮಪ್ಪ, ಧಾರವಾಡ**

**ಬೇ**ಸಿಗೆ ರಜೆಯಲ್ಲಿ ಹೈಸ್ಕೂಲು ಓದುತ್ತಿರುವ ತಂಗಿಯ ಮಗಳು 'ಬಾ ದೊಡ್ಡಮ್ಮ ಒಂದು ಸೆಲ್ಫೀ ತಕ್ಕೊಳ್ಳೋಣಾ' ಎನ್ನುತ್ತಿದ್ದಂತೆ ಖುಷಿಯಾಗಿ ಓಡಿಹೋಗಿ ಮೂವತ್ತೆರಡು ಹಲ್ಲುಗಳನ್ನು ತೋರಿಸುತ್ತಾ ಅವಳ ಜೊತೆ ನಿಂತೆ. 'ಒಂದೇ ತರಹ ಪೋಸ್ ಕೊಡ್ತೀಯಲ್ಲ ದೊಡ್ಡಮ್ಮ ಎಲ್ಲ ಫೋಟೋದಲ್ಲೂ! ಕೈಯಿಂದ ಹಾರ್ಟ್ ಮಾಡಿ ನಿಂತುಕೋ' ಎಂದಳು. ಎರಡೂ ಕೈಗಳ ಬೆರಳುಗಳನ್ನು ಉಪಯೋಗಿಸಿ ಹಾರ್ಟ್ ಮಾಡುವ ಸರ್ಕಸ್ ನೋಡಿ ಬಿದ್ದೂ ಬಿದ್ದೂ ನಕ್ಕಳು. "ಅದು ಹಳೆಯ ಕಾಲದವರ ಹಾರ್ಟ್ ದೊಡ್ಡಮ್ಮಾ" ಎನ್ನುತ್ತಾ ತೋರುಬೆರಳಿನ ಮೇಲೆ ಹೆಬ್ಬೆರಳನ್ನು ಕ್ರಾಸ್ ಆಗಿ ಒಳ್ಳೆ ಚಿಟಿಕೆ ಹೊಡೆಯುವವರ ಹಾಗೆ ಇಟ್ಟು, "ಇಷ್ಟೇ ನೋಡು" ಎಂದಾಗ, "ಎಲಾ ಎಲಾ! ಅದೆಷ್ಟು ಸುಲಭವಾಗಿ ಹಾರ್ಟ್ ಮಾಡುವ ಆರ್ಟ್ ಕಂಡುಕೊಂಡಿದ್ದಾರಲ್ಲಾ" ಎನಿಸಿತ್ತು. ಫೋಟೋಕ್ಕೆ ಅದೇನೇನು ಪೋಸ್ ಕೊಡುವ ಕಾಲ ಬಂದಿದೆ ನೋಡಿ.

ಹಿಂದಿನ ಕಾಲದಲ್ಲೆಲ್ಲ ಮದುವೆಯಲ್ಲೋ, ಯಾವುದಾದರೂ ಕಾರ್ಯಕ್ರಮದಲ್ಲೋ ಅಥವಾ ಸ್ಟೂಡಿಯೋದಲ್ಲೋ ಫೋಟೋ ತೆಗೆಯುತ್ತೇವೆ ನಿಲ್ಲಿ ಎನ್ನುತ್ತಿದ್ದಂತೆ, ಮಾತು ಕತೆ, ನಗು ಹರಟೆ ಎಲ್ಲ ನಿಲ್ಲಿಸಿ, ಎರಡೇಟು ಕಪಾಳಕ್ಕೆ ಹೊಡೆಸಿಕೊಂಡವರಂತೆ ಮುಖ ಊದಿಸಿಕೊಂಡು ಗಂಭೀರವಾಗಿ ಅಟೆನ್ಷನ್ ಪೋಸ್ ಕೊಟ್ಟು, ನೆಟ್ಟನೋಟದಿಂದ ಕ್ಯಾಮೆರಾವನ್ನೇ ನೋಡುತ್ತಾ ಗೊಂಬೆಯ ಹಾಗೆ ನಿಲ್ಲುತ್ತಿದ್ದರು. ನಕ್ಕರೆ ಅಪರಾಧವೇನೋ ಎನ್ನುವಂತೆ ಇರುತ್ತಿತ್ತು ಮುಖಭಾವ. ಹೆಣ್ಣುಮಕ್ಕಳಂತೂ ಎಣ್ಣೆಹಚ್ಚಿ ಬಾಚಿದ ಕೂದಲು ಒಂದೆರಡು ನೆತ್ತಿಯ ಮೇಲೆ ಎದ್ದಿದ್ದರೂ ಅದನ್ನು ತೀಡಿ ತೀಡಿ ಸಪಾಟು ಮಾಡಿ ಮಲಗಿಸುವುದನ್ನು ಮರೆಯುತ್ತಿರಲಿಲ್ಲ. ಒಬ್ಬೊಬ್ಬರನ್ನೇ ಫೋಟೋ ಹೊಡೆಸೋಕೆ ತಂದು ನಿಲ್ಲಿಸುವ ಹೊತ್ತಿಗೆ ಕಪ್ಪೆಗಳನ್ನು ತಕ್ಕಡಿಗೆ ಹಾಕುವಂತೆ ಸಾಕುಬೇಕಾಗುತ್ತಿತ್ತು. ಬೇಕಾದರೆ ಹಳೆಯ ಅಲ್ಬಂನಲ್ಲಿರುವ ಫೋಟೋಗಳನ್ನೊಮ್ಮೆ ತಿರುವಿ ಹಾಕಿ ನೋಡಿ; ಎಲ್ಲವೂ ಒಂದಲ್ಲಾ ಒಂದು ರೀತಿ ಫೋಟೋ ಬಾಂಬಿಂಗ್ ತರಹವೇ ಇರುತ್ತವೆ. ಯಾರದ್ದೋ ಫೋಟೋ ತೆಗೆಯುತ್ತಿರುತ್ತಾರೆ, ಮತ್ಯಾರೋ ಹಣಕಿ ಹಾಕುತ್ತಿರುತ್ತಾರೆ ಅಥವಾ ಕೈ, ಕಾಲು, ತಲೆ ಏನೋ ಒಂದು ಅಚಾನಕ್ಕಾಗಿ ಅಡ್ಡ ತೂರಿರುತ್ತದೆ. ಶಾಲೆಯ ಗ್ರೂಪ್ ಫೋಟೋ ಕೂಡಾ ಅಷ್ಟೇ. ಒಂದು ರೀತಿಯಲ್ಲಿ 'ಕೈಕಟ್ ಬಾಯ್ಮುಚ್' ಎನ್ನುವ ತರಹ, ವಿದ್ಯಾರ್ಥಿಗಳು, ಶಿಕ್ಷಕರು ಎಲ್ಲರೂ ಮುಖ ಊದಿಸಿಕೊಂಡು ಥೇಟ್ ಹನುಮಂತನ ಅಪರಾವತಾರವೇ. ಹಿನ್ನೆಲೆ ಯಾವುದೇ ಇರಲಿ, ಒಂಟಿಯಾಗಿರಲಿ, ಜಂಟಿಯಾಗಿರಲಿ, ಗುಂಪಿನಲ್ಲೇ ಇರಲಿ, ಎಲ್ಲರದೂ ಅದೇ ಬಾಯಿ 'ಉಫ್' ಮಾಡಿರುವ ಭಂಗಿಗಳೇ.

ಈಗಿನ ಕಾಲದಲ್ಲಿ ಫೋಟೋ ಎನ್ನುತ್ತಿದ್ದಂತೆ ಗಂಭೀರವಾಗಿದ್ದವರು, ಜಗಳವಾಡುತ್ತಿದ್ದವರು ಎಲ್ಲ ಮರೆತು ಕ್ಕಿ ಕ್ಕಿ ಕ್ಕಿ ಕ್ಕೀ ಅಂತಾ ನಗುವನ್ನು ತುಂಬಿಕೊಂಡೋ, ಹಂದಿಯ ಮುಸುಡಿಯ ಹಾಗೆ ಪೌಟ್ ಮಾಡಿಕೊಂಡೋ, ವಾರೆಗಣ್ಣು, ಚೂಪುಗಣ್ಣು ಬಿಟ್ಟುಕೊಂಡೋ ನಿಂತುಬಿಡುತ್ತಾರೆ. ಜೊತೆಗೆ ಹಿಂದೆ ನಿಂತಿರುವವರು ಮುಂದಿನವರ ತಲೆಯ ಮೇಲೆ ಕೋಡು ಮೂಡಿಸುತ್ತಲೋ ಅಥವಾ ಮತ್ತೇನಾದರೂ ತರಲೆ ಮಾಡುತ್ತಲೇ ಪೋಸ್ ಕೊಡುವುದುಂಟು. ಅದರಲ್ಲೂ ಹೆಣ್ಣುಮಕ್ಕಳು ಕೂದಲು ಕಟ್ಟಿದ್ದರೆ ಅದನ್ನು ಬಿಚ್ಚಿ, ಕೊಡವಿ ಹರವಿಕೊಂಡು ಪೋಸ್ ಕೊಡದಿದ್ದರೆ ಕೆಲವರಿಗೆ ಸಮಾಧಾನವೇ ಆಗುವುದಿಲ್ಲ. ಇತ್ತೀಚಿನ ದಶಕಗಳಲ್ಲಿ



ಸ್ಟೂಡಿಯೋದವರು ನಗಿಸಲು 'ಚೀಸ್', 'ಆಲ್ ದ ಬೆಸ್ಟ್' ಎಂದೆಲ್ಲ ಒಂದೇ ಬಾರಿಗೆ ಹೇಳಿಸಿ ಫೋಟೋ ಕ್ಲಿಕ್ಕಿಸುವುದುಂಟು.

ಗಂಡುಮಕ್ಕಳಿಗೆ ಪೋಸ್ ಕೊಡೋಕೆ ಅಷ್ಟೊಂದು ಚಾಯ್ಸ್ ಇರುವುದಿಲ್ಲ ಬಿಡಿ. ಒಂದೊಳ್ಳೆ ಡ್ರೆಸ್ ಹಾಕಿಕೊಂಡು, ಜೇಬಿನಲ್ಲಿ ಕೈಇಟ್ಟುಕೊಂಡೋ, ಗಾಗಲ್ಸ್ ಹಾಕಿಯೋ ಪೋಸ್ ಕೊಟ್ಟರೆ ಮುಗಿಯಿತು. ಜೊತೆಗೆ ಅವರು ಹೇಗೇ ನಿಂತರೂ ಒಂದೇ ರೀತಿ ಕಾಣುತ್ತಿರುತ್ತಾರೆ. ಅವರನ್ನು ನೋಡುವುದೂ ಅಷ್ಟರಲ್ಲೇ ಇದೆ ಬಿಡಿ. ಆದರೆ ಹೆಣ್ಣುಮಕ್ಕಳದು ಹಾಗಲ್ಲ. ಪೋಸ್‌ಗಳಿಗೆ ಚಾಯ್ಸೋ ಚಾಯ್ಸು. ಕಾಲು ಮುಂದಿಡು-ವುದೋ, ಸೊಂಟದ ಮೇಲೆ, ಗದ್ದದ ಮೇಲೆ ಕೈಯಿಟ್ಟುಕೊಂಡೋ, ಕೂದಲನ್ನು ಸರಿಸುವುದೋ, ಸೀರೆ ನೆರಿಗೆಯನ್ನು ಸರಿಪಡಿಸುವುದೋ ರೀತಿ ಕ್ಲಿಕ್ಕಿಸಿಕೊಳ್ಳುವುದು ಹೆಚ್ಚು. ಫೋಟೋ ಕ್ಲಿಕ್ಕಿಸಲು ರೆಡಿಯಾಗುತ್ತಿದ್ದಂತೆ ನೆಟ್ಟಗೆ ನಿಂತವರೆಲ್ಲ ಸೊಟ್ಟಂಬಟ್ಟ ಆಗಿ, ವೆರೈಟಿಯಾಗಿ ನಿಂತು ಪೋಸ್ ಕೊಟ್ಟುಬಿಡುತ್ತಾರೆ.



ಎಲ್ಲದಕ್ಕಿಂತ ತಮಾಷೆ ಎಂದರೆ ಆಧಾರ್ ಕಾರ್ಡ್ ಭಂಗಿ. ನೀವು ಎಷ್ಟೇ ಚೆಂದ ಇರಿ, ಎಷ್ಟೇ ನೀಟಾಗಿ ರೆಡಿಯಾಗಿ ಹೋಗಿ, ಎಷ್ಟೇ ಚಂದದ ಭಂಗಿಯಲ್ಲಿ ಕುಳಿತುಕೊಳ್ಳಿ, ಅಲ್ಲಿನ ಕ್ಯಾಮೆರಾ ಮಾತ್ರ ತನಗೆ ಹೇಗೆ ಬೇಕೋ ಹಾಗೇ ಕ್ಲಿಕ್ಕಿಸುತ್ತದೆಯೋ ಏನೋ ಗೊತ್ತಿಲ್ಲ. ಇರುವ ವಯಸ್ಸಿಗಿಂತ ಹತ್ತು ವರ್ಷ ಹೆಚ್ಚಾಗಿ ಕಾಣುವಂತೆ ಫೋಟೋ ಪ್ರಿಂಟ್ ಆಗಿ ಬರದಿದ್ದರೆ ಕೇಳಿ. ಇನ್ನು ಮನೆಯಲ್ಲಿ ನಾಯಿ, ಬೆಕ್ಕು ಸಾಕುವವರು, ಅವುಗಳ ಜೊತೆಗೆ ಅದೇನೇನು ಭಂಗಿಯಲ್ಲಿ ಪ್ರಾಣಿಗಳ ಫೋಟೋನೂ ತೆಗೆದಿರುವುದನ್ನು ನೋಡಿದರೆ ಅವರ ಪ್ರಾಣಿಪ್ರೀತಿ ಅರಿವಾಗಬಹುದು.


ಮದುವೆಗೆ ಮುಂಚೆ ಪ್ರೀಶೂಟ್‌ನ ಅವಾಂತರವಂತೂ ಹೇಳುವ ಹಾಗೆಯೇ ಇಲ್ಲ, ಅಷ್ಟರ ಮಟ್ಟಿಗೆ ಪೋಸ್‌ಗಳು ಚಿತ್ರ ವಿಚಿತ್ರವಾಗಿರುತ್ತವೆ, ಕೆಲವೊಮ್ಮೆ ಹದ್ದು ಮೀರಿದ ಭಂಗಿಗಳು ನೋಡುಗರಿಗೆ ಮಜುಗರವನ್ನುಂಟು ಮಾಡುವುದುಂಟು. ಮದುವೆಯದು ಒಂದಿಷ್ಟು ಶಾಸ್ತ್ರ ಸಂಪ್ರದಾಯದಿಂದ ಕೂಡಿದ್ದರೂ, ಫೋಟೋಕ್ಕಾಗಿಯೇ ಶಾಸ್ತ್ರ ಮಾಡುತ್ತಿದ್ದಾರೇನೋ ಎನ್ನುವಂತಹ ಭಂಗಿಗಳು. 'ಬೇಬಿ ಬಂಪ್' ಕತೆಯೇ ಬೇರೆ. ಹಳೆಯ ಕಾಲದಲ್ಲಿ ಗರ್ಭಿಣಿ ತನ್ನ ಹೊಟ್ಟೆ ಕಾಣದಂತೆ ಎಚ್ಚರವಹಿಸಿ, ನಾಚುತ್ತಲೇ ಪೋಸ್ ಕೊಡುತ್ತಿದ್ದಳು. ಜೊತೆಗೆ ಆಕೆಯ ಪಕ್ಕದಲ್ಲಿ ಗಂಡ ನಿಂತಾಗ, ಅವನೂ ನಾಚಿ ನೀರಾಗುತ್ತಿದ್ದ. ಈಗಿನವರು ಹೊಟ್ಟೆ ಎದ್ದುಕಾಣುವಂತಹ ಫೋಟೋಗಳು, ಹೊಟ್ಟೆಯ ಮೇಲೆ ಚಿತ್ರ ಬರೆಸಿಕೊಳ್ಳುವ ಫೋಟೋಗಳು, ಒಂದೇ ಗೌನನ್ನು ಪ್ರತಿ ತಿಂಗಳೂ ಹಾಕಿ ಒಂಭತ್ತು ತಿಂಗಳ ತನಕವೂ ವಿವಿಧ ಭಂಗಿಯ ಫೋಟೋ ಸೆಷನ್‌ಗಳು, ಜೊತೆಗೆ ಮಗುವಿನ ಅಪ್ಪನೂ ಸಹ ಹುಟ್ಟಲಿರುವ ಮಗುವಿನ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುವ ಭಂಗಿಗಳು ಹೆಚ್ಚು ಟ್ರೆಂಡ್ ಆಗಿವೆ.



ಇತ್ತೀಚೆಗೆ 'ಪೋಸ್ಟ್ ಶೂಟ್' ಕೂಡಾ ತುಂಬ ಜನಪ್ರಿಯವಾಗುತ್ತಿದೆ. ಇವರ ಫೋಟೋ ಪೋಸ್‌ಗಳು ಸ್ವಲ್ಪ ಭಿನ್ನ. ಏಕೆಂದರೆ ಮದುವೆಯಾಗುವಾಗ 0–1 ಆಕಾರದಲ್ಲಿದ್ದ ಗಂಡಹೆಂಡತಿ, ರಜತ ಮಹೋತ್ಸವದ ಹೊತ್ತಿಗೆ 1–0 ಅವತಾರಕ್ಕೆ ಬದಲಾಗಿರುತ್ತಾರಲ್ಲಾ, ಹಾಗಾಗಿ ಕೈಕಾಲು ನೋಯದಂತಹ ಪೋಸ್‌ಗಳನ್ನೇ ಆರಿಸಿಕೊಳ್ಳಬೇಕು ನೋಡಿ. ಹಾಗೆಯೇ ಹಳೆಯ ಕಾಲದ ಹಾಡುಗಳನ್ನು ಆಯ್ಕೆ ಮಾಡಿಕೊಂಡು, ಅದೇ ತರಹ ಸನ್ನಿವೇಶಗಳನ್ನು ಸೃಷ್ಟಿಸಿಕೊಂಡು, ಅದೇ ಹಾಡಿನ ಭಂಗಿಯನ್ನೇ ಅನುಕರಿಸಿ ಮಾಡುವುದು ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ.

ಹಾಗೆಯೇ ಹುಟ್ಟಿದ ಕೂಸಿನ ಫೋಟೋ ಶೂಟ್ ಕೂಡಾ ಮಾಡುತ್ತಾರೆ, ಅದೂ ಸಹ ವಿವಿಧ ಭಂಗಿಯಲ್ಲಿ. ಮೊನ್ನೆ ವಿದೇಶದಲ್ಲಿರುವ ಗೆಳತಿ ತನ್ನ ಮೊಮ್ಮಗುವಿನ ಫೋಟೋ ಶೂಟ್ ಮಾಡಿಸಿದ್ದನ್ನು ವಾಟ್ಸಪ್‌ನಲ್ಲಿ ಹಂಚಿಕೊಂಡಿದ್ದಳು. ಗೋಣು ನಿಲ್ಲದ ಎಳೆ ಕೂಸನ್ನು ಎತ್ತಿಕೊಳ್ಳುವುದಕ್ಕೇ ಸರ್ಕಸ್ ಮಾಡಬೇಕು, ಜೊತೆಗೆ ಬಟ್ಟೆಗಿಟ್ಟೆ ಬದಲಾಯಿಸಬೇಕೆಂದರೆ ಎಷ್ಟೊಂದು ಸಮಯ ಹಿಡಿಯುತ್ತದೆ. ಅಂಥಾದ್ದರಲ್ಲಿ ಎರಡು ಮೂರು ತಾಸಿನಲ್ಲಿ ಅದಕ್ಕೆ ಎಂಟು ಹತ್ತು ಡ್ರೆಸ್‌ಗಳನ್ನು ಫೋಟೋಗ್ರಾಫರ್‌ಗಳು ಸರಸರನೆ ಬದಲಾಯಿಸಿ, ಕೈ, ಕಾಲುಗಳನ್ನು ವಿವಿಧ ಭಂಗಿಯಲ್ಲಿ ಇರಿಸಿ, ಫೋಟೋಕ್ಕೆ ತಕ್ಕ ಹಾಗೆ ಆ ಮಗುವನ್ನು ನಗಿಸಿ, ಅಳಿಸಿ ಫೋಟೋ ತೆಗೆದಿದ್ದು ಎಂದಾಗ ಬಾಯಿಯ ಮೇಲೆ ಬೆರಳಿಟ್ಟುಕೊಳ್ಳುವ ಸರದಿ. ಇತ್ತೀಚೆಗೆ ನಟಿಯೊಬ್ಬಳು 'ಡೈವರ್ಸ್ ಫೋಟೋ ಶೂಟ್' ಅಂತ, ಗಂಡನ ಫೋಟೋವನ್ನು ಹರಿದು ಹಾಕುತ್ತಾ, ಕಾಲಿನ ಕೆಳಗೆ ಹಾಕಿ ಗಸಗಸ ಉಜ್ಜುತ್ತಾ, ಮತ್ತೊಂದರಲ್ಲಿ ಬೆಂಕಿಯಲ್ಲಿ ಹಾಕಿ ಸುಟ್ಟು ಖುಷಿಯಿಂದ ಕುಪ್ಪಳಿಸುವ ಪೋಸ್‌ಗಳನ್ನು ನೋಡುವಾಗ ಎಲ್ಲಿಗೆ ಬಂತಪ್ಪಾ ಜಗತ್ತು ಎನಿಸದಿರಲಾರದು.

ಭಂಗಿಗಳ ಕತೆ ಇಷ್ಟಕ್ಕೇ ಮುಗಿಯದು. ಒಮ್ಮೆ ಗೂಗಲ್ ಸರ್ಚ್ ಮಾಡಿ ಫೋಟೋ ಪೋಸಸ್ ಅಂತ ಕೊಟ್ಟು ನೋಡಿ; ಗಾಬರಿಯಾಗಿಬಿಡ್ತೀರ. ಹುಡುಗಿಯರ ಪೋಸ್, ಹುಡುಗರ ಪೋಸ್, ಕಪಲ್ ಪೋಸ್, ಸೀರೆ, ಜೀನ್ಸ್, ಕುರ್ತಾ, ಲೆಗ್ಗಿಂಗ್ಸ್, ಟ್ರೆಡಿಷನಲ್ ಪೋಸ್ ಅಂತ ಅಲ್ಲಿ ತೋರಿಸುವ ಸಾವಿರಾರು ಭಂಗಿಗಳನ್ನು ಮಂಗಗಳಂತೆ ನೋಡುತ್ತಾ ನಿಲ್ಲುವುದಾಗುತ್ತದೆ. ಸಿನೆಮಾ ಮತ್ತು ಮಾಡೆಲಿಂಗ್ ಪೋಸ್‌ಗಳಂತೂ ಪದೇ ಪದೇ ಪಾಸ್ ಮಾಡಿ ಮಾಡಿ ನೋಡುವಷ್ಟು ಚಂದ ಇರುತ್ತವೆ. ಅವರ ಭಂಗಿಗಳನ್ನು ನೋಡುತ್ತಿದ್ದರೆ ದೇಹದ ಸ್ಕೆಲೆಟಲ್ ಸ್ಟ್ರಕ್ಚರ್‌ನಲ್ಲಿ ಏನಾದರೂ ಏರುಪೇರಾಗಿದೆಯೇನೋ ಎನ್ನುವ ಅನುಮಾನ ಕಾಡದೇ ಇರದು. ಇನ್ನು ನಮ್ಮ ರಾಜಕಾರಣಿಗಳು ಯಾವಾಗ, ಯಾರ ಜೊತೆ, ಅದ್ಯಾವ್ಯಾವ ಭಂಗಿಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೋ ಬಲ್ಲವರಿಲ್ಲ. ಆದರೂ ನೀವೇನೇ ಅನ್ನಿ ನಮ್ಮ ಹಳೆಯ ದೇವಸ್ಥಾನಗಳಲ್ಲಿ ಕೆತ್ತಿರುವ ಶಿಲಾಬಾಲಿಕೆಯರ ಭಂಗಿಗಳನ್ನು ಮೀರಿಸಲು ಮಾತ್ರ ಯಾವ ಕಮಂಗಿಗಳಿಗೂ ಸಾಧ್ಯವಿಲ್ಲ ಬಿಡಿ.



'ರೆಡೀ... ಎಲ್ರೂ ಇತ್ತ ಕ್ಯಾಮೆರಾ ಕಡೇನೇ ನೋಡೀ, ಅಲ್ಲಾಡಬೇಡೀ, ಕಣ್ಮುಚ್ಚಬೇಡೀ, ಮಾತಾಡಬೇಡೀ... ಶ್...' ಎಂದು ಖಡಕ್ ವಾರ್ನಿಂಗ್ ಕೊಟ್ಟು ಫಳಾರ್ ಅಂತ ಕ್ಯಾಮೆರಾ ಲೈಟು ಕಣ್ಣಿಗೆ ಅಪ್ಪಳಿಸಿ, ಅರ್ಧ ಜನ ಕಣ್ಮುಚ್ಚಿದ ಪೋಸ್ ಗ್ಯಾರಂಟಿ ಇರುತ್ತಿದ್ದ ಕಾಲ ಹೋಗಿ 'ರೆಡೀ... ಎಲ್ರೂ ಆಕಡೆ ಈಕಡೆ ತಿರುಗಿ ಪೋಸ್ ಕೊಡೀ... ನಿಮ್ಮ ನಿಮ್ ಪಾಡಿಗೆ ನೀವು ನಗ್ತಾ, ಮಾತಾಡ್ತಾ ಇರೀ ಕ್ಯಾಂಡಿಡ್ ತೆಗೀತಿರ್ತೀವಿ' ಎನ್ನುವ ಕಾಲಕ್ಕೆ ಬಂದು ನಿಂತಿದ್ದೇವೆ. ಇದು ಮತ್ತೆಲ್ಲಿಗೆ ಹೋಗಿ ಮುಟ್ಟುತ್ತೋ... ಇನ್ನೂ ಯಾವ್ಯಾವ ರೀತಿಯ ಪೋಸುಗಳ ಕಾಲ ಬರುತ್ತದೆಯೋ ದೇವರಿಗೇ ಗೊತ್ತು.

# ಆದ್ರೆ, ಸತ್ತೋಳ್ ಎದ್ಬರೋಲ್ಲ; ಅದ್ಕೇ ಅಳ್ತೀನಲ್ಲ !

**ಜೋಗಿ**

ದಿಸ್ ಸ್ಪಾಟ್ ಈಸ್ ಸ್ವೀಟೆಸ್ಟ್
ಐ ಹ್ಯಾವ್ ಸೀನ್ ಇನ್ ಮೈ ಲೈಫ್
ಫಾರ್ ಇಟ್ ರೈಸಸ್ ಮೈ ಫ್ಲವರ್ಸ್
ಅಂಡ್ ಕವರ್ಸ್ ಮೈ ವೈಫ್

ಇದು ಗಂಡನೊಬ್ಬ ತನ್ನ ಪ್ರೀತಿಯ ಹೆಂಡತಿಗಾಗಿ ಬರೆದ ಚರಮಗೀತೆ. ಹೆಂಡ್ತಿಯನ್ನು ಹೂಳಿದ ಜಾಗ ಆತನಿಗೆ ಅತ್ಯಂತ ಪ್ರಿಯವಂತೆ. ಯಾಕೆಂದಲ್ಲಿ 'ಅಲ್ಲಿ ಅರಳುತ್ತೆ ಹೂವು, ಅದು ಮುಚ್ಚಿದೆ ನನ್ನ ಹೆಂಡ್ತಿಯನ್ನು' ಅಂತಾನೆ ಆ ಕಿಲಾಡಿ. ಇಂಥ ಅಸಂಖ್ಯ ಕಿಲಾಡಿ ಗಂಡಂದಿರ ಚರಮಗೀತೆಗಳು ಆ ಪುಸ್ತಕದಲ್ಲಿವೆ. ಹೆಂಡತಿ ಸತ್ತಳು ಅಂತ ಅಳುವ ಗಂಡನ ಚರಮಗೀತೆ ಕೇಳಿ:

ಟಿಯರ್ಸ್ ಕೆನಾಟ್ ರೆಸ್ಟೋರ್ ಹರ್
ದೇರ್‌ಫೋರ್ ಐ ವೀಪ್


ಅತ್ರೆ ಸತ್ತೋಳ್ ಎದ್ಬರ್ತಾಳಾ? ಇಲ್ಲ! ಅದಕ್ಕೇ ಅಳ್ತೀನಲ್ಲ... ಪೀಟರ್ ಪಾಪರ್ ಪ್ರೆಸ್ ಪ್ರಕಟಿಸಿದ ಕಾಮಿಕ್ ಎಪಿಟಾಫ್ಸ್ ಪುಸ್ತಕದಲ್ಲಿ ಇಂಥ ಅಸಂಖ್ಯ ಚರಮಗೀತೆಗಳಿವೆ. ಅವನ್ನೆಲ್ಲ ಜಗತ್ತಿನ ಅತ್ಯಂತ ಪುರಾತನ 'ಸ್ಮಶಾನ'ಗಳಿಂದ ಹೆಕ್ಕಿ ತಂದಿದ್ದೇವೆಂದು ಸಂಪಾದಕ ಬರೆದುಕೊಂಡಿದ್ದಾನೆ. 1957ರಲ್ಲಿ ಇಂಥ 'ಪಾಕೆಟ್‌ಬುಕ್'ಗಳಲ್ಲಿ ಜಗತ್ತಿನ 'ವಿಟ್ ಅಂಡ್ ವಿಸ್ಡಮ್'ಗಳೂ, ಅತ್ಯುತ್ತಮ ಕವನಗಳೂ ಪ್ರಕಟವಾದವು. ಇವತ್ತಿನ ಪ್ರಿಂಟಿಂಗಿಗೆ ಹೋಲಿಸಿದರೆ, ಆ ಪುಸ್ತಕಗಳ ಮುದ್ರಣ ಇವತ್ತಿಗಿಂತ ನೂರು ಪಟ್ಟು ಚೆನ್ನಾಗಿದೆ. ವಸ್ತುವಿನ ಆಯ್ಕೆಯಲ್ಲಂತೂ ಅವರನ್ನು ಸರಿಗಟ್ಟುವವರೇ ಇಲ್ಲ.

ಉದಾಹರಣೆಗೆ ಚರಮಗೀತೆಗಳು, ಹಾಯ್ಕುಗಳು, ಅವಮಾನಗಳು, ಜೀವನವಿಧಾನಗಳು, ಅಡುಗೆ-ಮುಂತಾದ ಅಸಂಖ್ಯ ಪುಸ್ತಕಗಳು, ಕೆ.ವಿ. ಸುಬ್ಬಣ್ಣ ಅನುವಾದಿಸಿದ ಝೆನ್ ಕತೆಗಳೂ. ಲಂಕೇಶ್ ಅನುವಾದಿಸಿದ ಬೋದಿಲೇರನ 'ಫ್ಲವರ್ಸ್ ಆಫ್ ಎವಿಲ್' ಪ್ರಕಟವಾದದ್ದು ಈ ಮಾಲಿಕೆಯಲ್ಲೇ.

ಜಾನ್ ಸ್ಟ್ರೇಂಜ್ ಎಂಬ ವಕೀಲ ಸತ್ತಾಗ, ಆತನ ಗೋರಿಯ ಮೇಲೆ ಬರೆದಿದ್ದರಂತೆ.

ಹಿಯರ್ ಲೈಸ್ ಎನ್
ಹಾನೆಸ್ಟ್ ಲಾಯರ್
ದಟ್ ಈಸ್ ಸ್ಟ್ರೇಂಜ್

ಪ್ರಾಮಾಣಿಕ ವಕೀಲ 'ಅಪರೂಪ' ಎಂಬ ಅರ್ಥವೂ ಹೊರಡುವಂತೆ ಮಾಡಿದ ಚರಮಗೀತಕಾರನಿಗೆ ನಮೋ ನಮಃ. ಇದನ್ನೆಲ್ಲ ಓದುತ್ತಿದ್ದರೆ ಆಶ್ಚರ್ಯವಾಗುತ್ತದೆ: ಕನ್ನಡದಲ್ಲಿ ಇಂಥದ್ದೊಂದು ಪ್ರಕಾರ ಯಾಕೆ ಜನಪ್ರಿಯವಾಗಲಿಲ್ಲ ಎಂದು ಆಶ್ಚರ್ಯವೂ ಆಗುತ್ತದೆ. ನಾವು 'ಸಾವ'ನ್ನು ಗಂಭೀರವೆಂದು ಪರಿಗಣಿಸುವ ಮಂದಿ. ಅದರ ಬಗ್ಗೆ ತಮಾಷೆ ಮಾಡಿದರೆ ನಮಗೆ ಇರಿಸುಮುರಿಸಾಗುತ್ತೆ; ಕೆಟ್ಟ ಸಿಟ್ಟು ಬರುತ್ತೆ. ಮಡಿವಂತಿಕೆಯಿಂದ ನಾವು ಎಷ್ಟನ್ನೆಲ್ಲ ಕಳೆದುಕೊಳ್ಳುತ್ತೇವೆ ಅನ್ನೋದಕ್ಕೆ



ಸಾಕ್ಷಿ ಇದು. ಸಾವನ್ನು ಕೂಡ ತಮಾಷೆಯಾಗಿ ತೆಗೆದುಕೊಳ್ಳುವುದು ನಮಗೆ ಹೊಸದೇನಲ್ಲ. 'ನಿನ್ನ ಮನೆ ಕಾಯ್ವಾಗ, ನಾಗರಹಾವು ಕಡಿಯ' ಎಂದೆಲ್ಲ ಪರರನ್ನು ಬೈಯುತ್ತೇವೆ. ಆದರೆ ನಮ್ಮ ಬಗ್ಗೆ ಒಂದು ತಮಾಷೆಯ ಚರಮಗೀತೆ ಬರಕೊಳ್ಳಲು ಹಿಂಜರಿಯುತ್ತೇವೆ. ಅಲ್ಲಿ ಜೀವಮಾನವಿಡೀ ದುಡಿದುಡಿದು ಹಣ್ಣಾದ ಹೆಣ್ಣುಮಗಳು ತನ್ನ ಚರಮಗೀತೆ ಬರೆದಿಡುತ್ತಾಳೆ– ಹಾಗೆ!




ಡಿಯರ್ ಫ್ರೆಂಡ್ಸ್ ಐ ಆಮ್ ಗೋಯಿಂಗ್
ವೇರ್ ವಾಷಿಂಗ್ ಆರ್ ನಾಟ್ ಡನ್
ಆರ್ ಕುಕ್ಕಿಂಗ್ ಆರ್ ಸ್ಯೂಯಿಂಗ್
ಡೋಂಟ್ ಮೌರ್ನ್ ಮಿ ನೌ
ಆರ್ ವೀಪ್ ಫಾರ್ ಮಿ ನೆವರ್
ಫಾರ್ ಐ ಗೋ ಟು ಡು ನಥಿಂಗ್
ಫಾರೆವರ್ ಅಂಡ್ ಎವರ್

ಬಾಯಾಳಿ ಹೆಂಡ್ತಿಯ ಗೋರಿಯ ಮೇಲೆ ಪಾಪದ ಗಂಡ ಹೀಗೆ ಬರೆಸಿದನಂತೆ:

ಹಿಯರ್ ಲೈಸ್ ಮೈ ವೈಫ್
ಇನ್ ಅರ್ಥೀ ಮೌಲ್ಡ್
ಹೂ ವೆನ್ ಷಿ ಲಿವ್ಡ್
ಡಿಡ್ ನಾಟ್ ಬಟ್ ಸ್ಕೋಲ್ಡ್
ಗುಡ್ ಫ್ರೆಂಡ್ಸ್ ಗೋ ಸಾಫ್ಟ್ಲೀ
ಇನ್ ಯುವರ್ ವಾಕಿಂಗ್
ಲೆಸ್ಟ್ ಷಿ ಷುಡ್ ವೇಕ್
ಅಂಡ್ ರೈಸ್ ಅಪ್ ಟಾಕಿಂಗ್

ಈ ಗೋರಿಯಲ್ಲಿದ್ದಾಳೆ ನನ್ನಾಕೆ ಸೀತಾ
ಬದ್ಕಿದ್ದಾಗ ಬೈಯ್ತಿದ್ಲು,
ಬೈತಾ ಹೊಡದ್ಲು ಗೋತಾ!
ಇಲ್ಲಿ ನಡೀಬೇಕಾದ್ರೆ ಮೆತ್ತಗೆ
ಸದ್ದು ಮಾಡದೇ ನಡೀರಿ ಸಾರ್!
ಸದ್ದಾದ್ರೆ ಎಲ್ಲಾದ್ರೂ ಎದ್ದು



ಮಾತು ಶುರು ಮಾಡಿಬಿಟ್ಟಾಳು ಹುಷಾರ್!

ಇವಿಷ್ಟನ್ನೂ ಓದುತ್ತಾ ಆಮೇಲೆ ನೋಡಿದರೆ ಇಂಥ ಹತ್ತಾರು ಪುಸ್ತಕಗಳು ಇಂಗ್ಲಿಷ್‌ನ್ನಲ್ಲಿವೆ ಅನ್ನುವುದು ಗೊತ್ತಾಯಿತು. ಅವನ್ನು ಅಷ್ಟೇ ಸೊಗಸಾಗಿ ಕನ್ನಡಕ್ಕೆ ತರಲು ಯತ್ನಿಸಿ, ಅನೇಕರು ಸೋತು ಕೈ ಬಿಟ್ಟಿದ್ದರು; ಎಚ್.ಎಸ್. ಬಿಳಿಗಿರಿಯೂ ಸೇರಿದಂತೆ!

ಕೊನೆಯದಾಗಿ, ಇಂಗ್ಲಿಷ್ ಬಲ್ಲವರಿಗಾಗಿ ಒಂದೆರಡು ಸೊಗಸಾದ 'ಗೋರೀಗೀತೆ'ಗಳು !

ಸ್ಟ್ರೇಂಜರ್ ಟ್ರೆಡ್
ದಿಸ್ ಗ್ರೌಂಡ್ ವಿತ್ ಗ್ರಾವಿಟಿ
ಡೆಂಟಿಸ್ಟ್ ಬ್ರೌನ್ ಈಸ್ ಫಿಲ್ಲಿಂಗ್
ಹಿಸ್ ಲಾಸ್ಟ್ ಕ್ಯಾವಿಟಿ
ಮೆತ್ತಗೆ ನಡಿ ಮಾರಾಯ,
ನಿಧಾನಕ್ಕೆ ತುಳಿ!
ಹಲ್ಲಿನ ಡಾಕ್ಟರ್ ಮುಚ್ಚಿದ್ದಾನೆ
ತನ್ನ ಕೊನೆಯ ಕುಳಿ!

ಇಂಥ ಪದ್ಯಗಳ ಜೊತೆಗೇ ಇಂಗ್ಲಿಷ್‌ನಲ್ಲಿ 'ನಾನ್ಸೆನ್ಸ್ ವರ್ಸ್' ಎಂಬ ಪ್ರಕಾರವೂ ಜನಪ್ರಿಯವಾಯಿತು. ಆಗ್ಡನ್ ನ್ಯಾಷ್ ಎಂಬಾತ ಇಂಥ ತರಲೆ ಪದ್ಯಗಳ ಸಾವಿರ ಪುಟಗಳ ಪುಸ್ತಕವನ್ನೇ ಹೊರತಂದ. ಅವು ಮೂವತ್ತಾರು ಮರುಮುದ್ರಣಗಳನ್ನು ಕಂಡು ಜನಪ್ರಿಯವಾಯಿತು. ಹಾಗೇ ಎಡ್ವರ್ಡ್ ಲಿಯರ್ ಎಂಬಾತನ 'NONSENSE OMNIBUS' ಎಂಬ ಸಾವಿರ ಪುಟದ ಸಂಕಲನದಲ್ಲಿ ಕಚಗುಳಿಯಿಡುವ ನಗೆಕವಿತೆಗಳಿವೆ.

ನ್ಯಾಷ್ ಅಂತೂ ಹತ್ತಾರು ಪುಟಗಳ ದೊಡ್ಡದೊಡ್ಡ ತರಲೆ ಕವಿತೆ ಬರೆದದ್ದುಂಟು. ಅವನ ಶೈಲಿ ತಿಳಿಯುವುದಕ್ಕೆ ಒಂದು ಪುಟ್ಟ ಕವನ ಹೀಗಿದೆ.

ಗಾಡ್ ಇನ್ ಹಿಸ್ ವಿಸ್ಡಂ ಮೇಡ್ ದಿ ಫ್ಲೈ
ಅಂಡ್ ದೆನ್ ಫರ್‌ಗಾಟ್ ಟು ಟೆಲ್ ಅಸ್ ವೈ
ಭಗವಂತ ಜಾಣ
ಸೃಷ್ಟಿ ಮಾಡ್ದ ನೊಣ
ಮರ್ತೇಬಿಟ್ಟ ಹೇಳೋಕೆ ಕಾರ್ಯಕಾರಣ!
ಅವನದೇ ಇನ್ನೊಂದು ನಗೆಗುಳಿಗೆ!
ಕೆಲವು ನೋವುಗಳು
ಫಿಸಿಕಲ್ಲು,
ಕೆಲವು ಮೆಂಟಲ್ಲು!
ಇವೆರಡೂ ಸೇರಿದ್ದು
ಡೆಂಟಲ್ಲು!



## ಚೋರಿಚೋರಿ... ಚುಪ್ಕೆ ಚುಪ್ಕೆ...

**ಸುಮಾ ರಮೇಶ್, ಹಾಸನ.**

**ಪೀ**ಳಿಗೆಯಿಂದ ಪೀಳಿಗೆಗೆ ಸಕಲವೂ ಬದಲಾದಂತೆ ಕಳ್ಳತನದ ಕೌಶಲಗಳೂ ವಿಕಾಸ ಹೊಂದಿವೆ. ಈ ಬದಲಾದ ಕಾಲಮಾನದಲ್ಲಿ ಪುಡಿಗಳ್ಳರ ಸಂಖ್ಯೆ ಕ್ಷೀಣಿಸಿದೆ. ಅರ್ಥಾತ್ ಅವರಿಗೂ ಒಂದು ಗ್ರೇಡ್ ಬಂದಿದೆ. ಕಳ್ಳರೂ ಅಪ್ಡೇ ಆಗಿ ಹೊಸ ಬಗೆಯ ಚೌರ್ಯಕ್ಕೆ ಶುರುವಿಟ್ಟಿರುವರು. ಅಂದು ಕೇವಲ ಭೌತಿಕ ವಸ್ತುಗಳಷ್ಟೇ ಅದೃಶ್ಯವಾಗುತ್ತಿದ್ದವು. (ಹೃದಯವನ್ನು ಹೊರತುಪಡಿಸಿ). ಶುರುವಿನಲ್ಲಿ ಈ ಹಾರ್ಟ್ ರಿಲೇಟೆಡ್ ಸ್ಟೋರಿ ಇಶ್ಯೂಸ್ ಅಷ್ಟು ಸುಲಭದಲ್ಲಿ ಹೊರಬರುತ್ತಿರಲಿಲ್ಲ. 'ಚೋರಿಚೋರಿ ದಿಲ್ ತೇರಾ ಚುರಾಯೇಂಗೇ' ಎಂದು ಪ್ರಾರಂಭವಾದರೂ ಅದು ಒನ್ ಸೈಡೆಡ್ ಆಗಿ ಆಶಾಭಂಗವಾಗುತ್ತಿತ್ತು. ಕಳೆದ ದಶಕದಲ್ಲಿ ರವಿಚಂದ್ರನ್, ಶಿಲ್ಪಾ ಶೆಟ್ಟಿ ಜೋಡಿ

ಚೋರಿಯಾಗಿದೇ ನನ್ನ ದಿಲ್ಲ್...

ಕಳೆದುಕೊಳ್ಳೋದೇ ಒಂದು ಥ್ರಿಲ್ಲ್...

ಎನ್ನುತ್ತಾ ಭರ್ಜರಿಯಾಗಿ ಕುಣಿದು 'ಪ್ರೀತ್ಸೋದ್ ತಪ್ಪಾ' ಎಂದು ಸವಾಲೆಸೆದ ನಂತರ ಚಿತ್ತಚೋರರಿಗೂ ಮಾನ್ಯತೆ ಲಭಿಸಿತು.

ದ್ವಾಪರದ ಕೃಷ್ಣ ಚೌರ್ಯಕ್ಕೇ ಹೆಸರಾದವನು. ಕೂಸಿದ್ದಾಗ ಬೆಣ್ಣೆ ಕದ್ದು 'ಕಳ್ಳ ಕೃಷ್ಣ'ನಾದರೆ, ಪ್ರಾಯದಲ್ಲಿ ಗೋಪಿಕೆಯರ ವಸ್ತ್ರ ಕದ್ದು ಅವರ ಮನ ಗೆದ್ದ. ನಂತರ ಹದಿನಾರು ಸಾವಿರ ಸ್ತ್ರೀಯರ ಹೃದಯ ಕದ್ದ. ಶಮಂತಕ ಮಣಿಯನ್ನು ಕದಿಯದೆಯೂ ಕಳ್ಳತನದ ಆರೋಪ ಹೊತ್ತ. ಆದರೂ ಅಂತ್ಯದಲ್ಲಿ ಆರೋಪ ಹೊರಿಸಿದ ಸತ್ರಜಿತನೇ ಸತ್ಯಭಾಮೆಯನ್ನು ಅವನಿಗೆ ಧಾರೆಯೆರೆದ. ಇವನೊಬ್ಬ 'ಬ್ಲೆಸ್ಡ್ ಥೀಫ್' ಅಂತ ಹೇಳ್ಬೋದು. ಇಂದಿಗೂ ಹಲವು ತಾಯಂದಿರು ಇವನ ಫ್ಯಾನ್ಸ್. ಹಾಗಾಗಿ ತಮ್ಮ ಕೂಸುಗಳಿಗೆ ಕೃಷ್ಣನ ವೇಷ ಹಾಕಿ 'ಛೀ! ಕಳ್ಳ' ಎಂದು ನೆಟಿಕೆ ತೆಗೆಯುವರು. ಈ ಎಲ್ಲಾ ಐಡಿಯಾಲಜಿಯಿಂದಲೇ ಇತ್ತೀಚೆಗೆ 'ಆ್ಯಂಟಿ ಹೀರೋ' ಕಾನ್ಸೆಪ್ಟ್ ಹುಟ್ಟಿಕೊಂಡಿರಬಹುದು.

ದ್ವಾಪರದಿಂದ ತ್ರೇತಕ್ಕೆ ಬ್ಯಾಕ್ ಫ್ಲಿಪ್ ಮಾಡಿದರೆ ರಾವಣ ಸೀತಾಮಾತೆಯನ್ನು ಅಪಹರಿಸಿ ಮೊದಲ ಕಿಡ್ನ್ಯಾಪ್ ಕೇಸಿಗೆ ಮುನ್ನುಡಿ ಬರೆದ. ಆಕೆಯನ್ನು ಪುಷ್ಪಕ ವಿಮಾನದಲ್ಲೇ ಹೊತ್ತೊಯ್ದು ತನ್ನ ಅಶೋಕವನದಂತಹ ರೆಸಾರ್ಟ್‌ನಲ್ಲಿ ಏನೂ ಹಾನಿ ಮಾಡದೆ ಇರಿಸಿಕೊಂಡರೂ, ಇಂದಿಗೂ ಅವನು ಮಹಿಳೆಯರ ದೃಷ್ಟಿಯಲ್ಲಿ ವಿಲ್ಲನ್! ಕೃಷ್ಣನಂತೆ ಅವನಿಗೆ ಮಹಿಳಾ ಫ್ಯಾನ್ ಫಾಲೋಯರ್ಸ್ ಭಾಗ್ಯವಿಲ್ಲ.

ಇತ್ತ ಪುನಃ ಕಲಿಯುಗದ ಚೌರ್ಯದ ವಿಕಾಸಯಾನದೆಡೆಗೆ ಬೆಳಕು ಚೆಲ್ಲಿದರೆ, ಹಲವು ದಶಕಗಳ ಹಿಂದೆ, ಕಳುವಾಗುತ್ತಿದ್ದ ವಸ್ತುಗಳೂ ತೀರಾ ಕಡಿಮೆ ದರ್ಜೆಯವಾಗಿದ್ದವು. ಹಿತ್ತಿಲಿನಲ್ಲಿ ಬೆಳೆದ ಗುಲಾಬಿ, ದಾಸವಾಳ, ಪಪ್ಪಾಯಿ, ಸೀಬೆ, ಮನೆಯ ಮುಂದೆ ಒಣಗಲು ಹಾಕಿದ ಸೀರೆ, ಪಂಚೆ, ಶರ್ಟು, ಒಳಉಡುಪುಗಳು, ಸೋಪು, ರಂಗೋಲಿಪುಡಿ, ಕುಕ್ಕೆ, ಚಕ್ಕೆಯಂತವು. ಇಂದು ಈ ವಸ್ತುಗಳು ತಿಂಗಳುಗಟ್ಟಲೆ ಹೊರಗೆ ಬಿದ್ದಿದ್ದರೂ ಯಾರೂ ತಿರುಗಿಯೂ ನೋಡರು. ಕಳ್ಳರೂ ಒಂದು ಸ್ಟ್ಯಾಂಡರ್ಡ್ ಸೆಟ್ ಮಾಡಿಕೊಂಡಿರುವರು, 'ಹೊಡೆದರೆ ಕೋಳಿಯನ್ನೇ ಹೊರತು ಮೊಟ್ಟೆಯನ್ನಲ್ಲ' ಎಂದು. ಹಾಗಾಗಿ ಬ್ಯಾಂಕು, ಬೃಹತ್ ಆಭರಣ ಮಳಿಗೆಯಂತವು ಇವರ ಟಾರ್ಗೆಟ್.



ಇದು ಪ್ರೊಫೆಷನಲ್ ಕಳ್ಳರ ಕತೆಯಾದರೆ, ಇನ್ನು ಕೆಲವು ಅಧಿಕೃತ ಕಳ್ಳರಿರುತ್ತಾರೆ. ಇವರು ತಮ್ಮ ಅಧಿಕಾರ ಬಳಸಿ ಭೂಮಿ, ಖನಿಜ, ಕಾಡುಮೇಡು ಎನ್ನುತ್ತಾ ನೈಸರ್ಗಿಕ ಸಂಪನ್ಮೂಲಗಳನ್ನು ಕೊಳ್ಳೆ ಹೊಡೆಯುವರು. ಈ ಕಳ್ಳರದ್ದು ಅಲಿಬಾಬಾ ನಾಯಕತ್ವದ ನಲವತ್ತು ಕಳ್ಳರ ಟ್ರೂಪ್‌ಗಿಂತಲೂ ದೊಡ್ಡ ಸರಪಳಿ ಇರುತ್ತದೆ. ತೆರೆಮರೆಯಲ್ಲಿದ್ದು ಹಲವು ಕೊಂಡಿಗಳ ಮುಖೇನ ಆಪರೇಟ್ ಮಾಡಿ 'ಈ ಕಳುವ ಬುತ್ತಿಯಲಿ... ಚಿಲ್ರೆ ಎಲ್ಲ ನಿಮಗಿರಲಿ... ನೋಟೆಲ್ಲಾ ನಮಗಿರಲಿ...' ಎಂದು ಶೇಕಡಾವಾರು ನೀಡಿ ದೊಡ್ಡ ಮಟ್ಟದಲ್ಲಿ ಲೂಟಿ ಮಾಡುವರು.




ಏಳನೇ ತರಗತಿಯ ಬಾಲಕನೊಬ್ಬ ಕಳ್ಳರ ಬಗ್ಗೆ ಪ್ರಬಂಧ ಬರೆದಿದ್ದ. 'ದೇಶದ ಆರ್ಥಿಕತೆಗೆ ಕಳ್ಳರು ಬೆನ್ನೆಲು ಬಿದ್ದಂತೆ. ಅವರಿಗಾಗಿಯೇ ಮನೆಯಲ್ಲಿ ಕಿಟಕಿ, ಬಾಗಿಲು, ಕಬ್ಬಿಣದ ಸರಳುಗಳು, ಬೀರು ಬೀಗ, ಸಿಸಿ ಕ್ಯಾಮರಾಗಳನ್ನು ಅಳವಡಿಸುವರು. ಇದರಿಂದ ಹತ್ತಾರು ಮಂದಿಗೆ ಉದ್ಯೋಗ ದೊರೆಯುವುದು. ಕಳ್ಳರಿಂದಲೇ ಕೋರ್ಟು, ಲಾಯರು, ಪೋಲೀಸರು, ಜೈಲು, ಜೈಲರು, ರೈಫಲ್ಲು ಎಲ್ಲವೂ ಇದ್ದು, ಇದು ಹಲವರಿಗೆ ಬದುಕು ನೀಡಿದೆ.' ಆ ಹೈಸ್ಕೂಲ್ ಬಾಲಕನದು ಎಂತಹ ತರ್ಕಬದ್ಧ ವಿಶ್ಲೇಷಣೆ ನೋಡಿ!

ಇನ್ನೊಂದು ಬಗೆಯ ಕಳ್ಳರಿದ್ದಾರೆ. ಇವರು ಸಂಪೂರ್ಣ ವಿಕಾಸ ಹೊಂದಿದ ಹೊಸಪೀಳಿಗೆಯ ಉತ್ಪನ್ನಗಳು. ಫುಲ್ ಹೈಟೆಕ್ ಇನ್ವಿಸಿಬಲ್ ಕಳ್ಳರು. ಎಲ್ಲೋ ಇದ್ದು ಮತ್ತೆಲ್ಲೋ ಕೊಳ್ಳೆ ಹೊಡೆಯುವ ರಿಮೋಟ್ ಚೋರರು. ಫೇಸ್ಬುಕ್, ಇನ್ಸ್ಟಾಗ್ರಾಂ ಇನ್ನಿತರ ಸಾಮಾಜಿಕ ಜಾಲತಾಣಗಳಲ್ಲಿ ತಂಗಿ, ಮಹಿಳೆಯರಿಗೆ 'ತಂಗಿ', ಸೋದರಿ ಎನ್ನುತ್ತಾ ಬೇಗ ಆತ್ಮೀಯರಾಗಿ, ನಂತರ ಕಳ್ಳಗಿಂಡಿಯಲ್ಲಿ ತಮ್ಮ ಚಾಳಿ ತೋರುವರು. ಯಾರದ್ದೋ ಪಟ ಹಾಕಿಕೊಂಡು ಅವರ ಸ್ನೇಹಿತರ ಬಳಿ ಸಾಲ ಪಡೆದು ಕಾಣೆಯಾಗುವರು. ಹಲವು ಮುಗ್ಧರು 'ಬೋರ್' ಎಂದು ಚಾಟ್ ಮಾಡಲು ಹೋಗಿ ಇಂತಹ 'ಚೋರ್'ಗಳಿಗೆ ಬಲಿಯಾಗುತ್ತಿರುವರು. ನೆಟ್ಟಗಿರುವ ನೆಟ್ಟಿಗರೂ ಇವರ ಜಾಲದಿ ಸಿಲುಕಿ ಸ್ವಾಸ್ಥ್ಯ ಕಳೆದುಕೊಂಡು ಮಟ್ಟಿಗರಾಗಿರುವರು.

ಆರ್ಥಿಕ ವ್ಯವಸ್ಥೆ ಡಿಜಿಟಲೀಕರಣಗೊಂಡಂತೆ ಸಾಲಿಡ್, ಲಿಕ್ವಿಕ್ ಕ್ಯಾಶ್ ಮಾಯವಾಗಿದೆ. ಕೇವಲ ಅಂಕಿ ಸಂಖ್ಯೆಗಳಲ್ಲಿ ಶೇಖರಗೊಳ್ಳುವ ಹಣಕ್ಕೆ ಯಾವುದೇ ಬೀರು, ಲಾಕರ್‌ಗಳು ಬೇಕಿಲ್ಲ. ಹಳಿಗಳ ಮೇಲಷ್ಟೇ ಓಡುವ ರೈಲಿನಂತೆ ಖಾತೆಯಿಂದ ಖಾತೆಗಷ್ಟೇ ಇದರ ಓಡಾಟ. ಇಂದು ಯಾರ ಜೇಬಿಗೆ ಕತ್ತರಿ ಹಾಕಿದರೂ ಒಂದಿಷ್ಟು ಬಿಲ್ಲು, ಕಾರ್ಡುಗಳು ದೊರೆಯುತ್ತವೆ, ಹಣ ಇರದು. ಇನ್ನು ಮೊಬೈಲ್‌ಗಳು ಜೇಬಿಗಿಂತ ಕೈಯಲ್ಲಿರುವುದೇ ಹೆಚ್ಚು. ಹಾಗಾಗಿ ಅವೂ ಸೇಫ್. ಇದರಿಂದ ಜೇಬುಗಳ್ಳರು, ಮುಡಿಗಳ್ಳರು ಮಾಯವಾಗಿ ಹ್ಯಾಕರುಗಳೆಂಬ ಹೊಸ ಕಳ್ಳರು ಹುಟ್ಟಿಕೊಂಡಿರುವರು.



ಇವರು ಚಾಕು, ಚೂರಿಯಂತಹ ಮಾರಕಾಸ್ತ್ರಗಳನ್ನು ಬಳಸದೆ, ಕೇವಲ ಓಟಿಪಿ ಎಂಬ ಅಸ್ತ್ರ ಬಳಸಿ ಲೂಟಿ ಮಾಡುವರು. ಎಲ್ಲೋ ಕುಳಿತು ಒಂದು ಫೋನ್ ಕಾಲ್ಮಾಡಿ ಯಾಮಾರಿಸಿ ಓಟಿಪಿ ಪಡೆದೋ, ಲಿಂಕ್ ಕ್ಲಿಕ್ ಮಾಡಿಸಿಯೋ ದೋಚುವರು. ಡಿಜಿಟಲ್ ಮೀಡಿಯಾಗೆ ತಡವರಿಸುತ್ತಲೇ ತೆರೆದುಕೊಂಡ ಹಳೆಯ ಪೀಳಿಗೆಯವರೇ ಇವರ ಟಾರ್ಗೆಟ್. ಕೆಲವೊಮ್ಮೆ ಎಲ್ಲಾ ತಿಳಿದವರೂ ಬೇಸ್ತು ಬಿದ್ದದ್ದಿದೆ.

ಹೆಣ್ಣು ಸಿಗದೆ ಪರದಾಡುತ್ತಿದ್ದ ಎಲಿಜೆಬಲ್ ಬ್ಯಾಚುಲರ್ ಒಬ್ಬ ಯಾವುದೋ ಮ್ಯಾಟ್ರಿಮೋನಿ ವೆಬ್ಸೈಟಲ್ಲಿ ಸುಂದರಿಯೊಬ್ಬಳ ಪಟವನ್ನು ನೋಡಿ ಮರುಳಾಗಿ ಮೇಯ್ಲ್ ಕಳಿಸಿದ. ಇಂತಹ ದಿನ ಇಷ್ಟು ಗಂಟೆಗೆ ಆನ್‌ಲೈನ್ ಇಂಟವ್ರ್ಯೂ ಇದೆ. ಬಯೋಡೇಟಾ, ಡಾಕ್ಯುಮೆಂಟ್ ಸಮೇತ ಸಿದ್ಧರಾಗಿರಿ ಎಂದು ಅತ್ತಣಿಂದ ರಿಟರ್ನ್ ಮೇಯ್ಲ್ ಬಂದಿದೆ. ಅವನು ಉತ್ಸಾಹದಿಂದ ಸರಿಯಾದ ಸಮಯಕ್ಕೆ ಸಿಸ್ಟಮ್ ಮುಂದೆ ಕುಳಿತಿದ್ದಾನೆ. ಇಂಟವ್ರ್ಯೂ ಸಮಯ ಸ್ಕ್ರೀನ್ ಮೇಲೆ ಮುದ್ದಾಗಿ ನಗುತ್ತಾ ಆಕೆ ಅವನ ಖಾಸಗಿ ವಿವರಗಳನ್ನು ಪಡೆದು ಗ್ರೀನ್ ಸಿಗ್ನಲ್ ನೀಡಿ, ಲೈವ್‌ನಲ್ಲೇ ಅವನ ಫೋಟೋ ಕ್ಲಿಕ್ಕಿಸಿ, ಯಾವುದೋ ಲಿಂಕ್ ಪ್ರೆಸ್ಸಿಸಿ, ಓಟಿಪಿ ಪಡೆದಿದ್ದಾಳೆ. ಹುಡುಗಿ ಸಿಕ್ಕ ಖುಷಿಯಲ್ಲಿ ಅವ ತೇಲುತ್ತಿದ್ದಾಗ ಬಂದ ಮತ್ತೊಂದು ಮೇಯ್ಲ್‌ನಲ್ಲಿ ಇಪ್ಪತ್ತೈದು ಲಕ್ಷ ರೂಪಾಯಿ ಲೋನ್ ಮಂಜೂರಾದ ಬಗ್ಗೆ ಮಾಹಿತಿ ಇದೆ. ಅವನು ದಂಗಾಗಿ ಸೆಕೆಂಡ್ ಚೆಕ್ ಮಾಡಿದಾಗ ಮಂಜೂರಾದ ಹಣ ಅದಾಗಲೇ ಡ್ರಾ ಕೂಡಾ ಆಗಿದೆ. ಈಗ ಅವ

ಚೋರಿಯಾಗಿದೆ ಫುಲ್ಲ್...

ಕಳೆದುಕೊಂಡಿರುವೆ ಆಲ್...

ಎಂದು ಡಲ್ ಆಗಿಕುಳಿತು 'ತಿರುಪತಿ ತಿರುಮಲ ವೆಂಕಟೇಶ...' ಎನ್ನುತ್ತಾ ಇಎಂಐ ಕಟ್ಟಲಾಗದೆ ಪರದಾಡುತ್ತಿರುವನು. ಅವನ ಆಪ್ತೇಷ್ಟರೆಲ್ಲಾ 'ಹೀಗೂ ಉಂಟೇ...!?' ಎಂದು ಹುಬ್ಬೇರಿಸುತ್ತಾ ಅವನನ್ನು ತಬ್ಬಿ ಸಂತೈಸುತ್ತಿರುವರು. ಛೀ! ಕಾಲ ಕೆಟ್ಹೋಯ್ತು ಬಿಡ್ರಿ.

## ಸುಮ್ನೆ ತಮಾಷೆಗೆ !!!

ರಾಂಕಿ ಬೆಳ್ಳೂರ್



# ಸೋಮಾರಿ ಕಲ್ಲು

ಕೇಫ

ನಿಟ್ಟೂರು ಬಿಟ್ಟು ನಾನು ರಾಜ ಚಂದಿ ತಲಕಾಡು ಹಾದಿ ಹಿಡಿದು–ಶಿವಪುರ ಸೇರುವಾಗ್ಗೆ ಸಾಯಂಕಾಲವಾಗಿತ್ತು. ನಾವು ಬಿಟ್ಟ ನಿಟ್ಟೂರು ಹೋಟೆಲಿನಲ್ಲಿ ಸೇರಿದ್ದ ರಾಜಕೀಯ ಸಭೆಯ ಸವಾಲು ಪಾಟೀಸವಾಲುಗಳು ಇನ್ನೂ ನನ್ನ ತಲೆಯನ್ನು ಬಿಟ್ಟಿರಲಿಲ್ಲ ಅವು ನನ್ನ ತಲೆಯನ್ನು ಬಿಡುವವರಿವಿಗೂ ಬೇರೆ ಯಾವ ಸಮಾಚಾರವೂ ನನ್ನ ತಲೆಯನ್ನು ಹೊಕ್ಕುವ ಅವಕಾಶವೂ ಇರಲಿಲ್ಲ. ಹೀಗಾಗಿ ನನ್ನ ಮೆದುಳು ಹಳೆಯ ವಿಷಯಗಳನ್ನು ಹೊರದೂಡುವುದಕ್ಕೂ ಹೊಸ ವಿಷಯಗಳನ್ನು ಆರಿಸಿಕೊಳ್ಳುವುದಕ್ಕೂ ಆತುರಪಡುತ್ತ–ಸಧ್ಯದಲ್ಲಿ ಖಾಲಿಯಾಗಿತ್ತು, ಹಾಗಾಗಿ–ನಾವು ಶಿವಪುರ ಸೇರಿದಾಗ ಊರು ಮುಂದೆ ತೋರಣವಿದ್ದದ್ದು ನನಗೆ ಗೋಚರವಾಗಲಿಲ್ಲ ಊರೊಳಗೆ ತುಸ ದೂರ ಹೋದಮೇಲೆ ಊರಲ್ಲಿ ಏನೋ ಒಂದು ಸಂಭ್ರಮವಿರುವ ಹಾಗೆ ಕಂಡು ಬಂತು.

"ಏನೋ ಹಬ್ಬವಿರಬೇಕು–ಅಥವಾ ಮಂತ್ರಿಯೋ ಕಂತ್ರಿಯೋ–ತಂತ್ರಿಯೋ ಈ ಊರಿಗೆ ವಕ್ರಿಸಬಹುದು" ಅಂದ ಚಂದಿ.

"ಇರಲೇಬೇಕು ಅದಕ್ಕೇ ಊರ ಮುಂದಿನ ತೋರಣ" ಅಂದ ರಾಜ. ಬಾಯಿ ಬಿಟ್ಟರೆ ಬಣ್ಣಗೇಡು ಅಂತ ನಾನು ಸುಮ್ಮನಿದ್ದೆ.

ಅಷ್ಟರಲ್ಲಿ ಊರೊಳಗಿನ ಜನರ ಧಾಂಧಲೆಯ ಕಣ್ಣಿಗೆ ಬಿತ್ತು. ನನಗೆ ಆಗಲೇ ಎದೆ "ದಿಘಡಿ" ಎಂದಿತು. ಏಕೆಂದರೆ ಆ ರಾತ್ರಿ ಶಿವಪುರದಲ್ಲೇ ನಮ್ಮ ಝಾಂಡವೆನ್ನುವ ಸೂಚನೆಗಳೆಲ್ಲವೂ ಇದ್ದವು. ಇದರ ಮೇಲೆ ಊರಲ್ಲಿ ಕೂಗಾಟ ಹೋರಾಟಗಳೂ ಇದ್ದು ಬಿಟ್ಟರೆ ರಾಜ ಚಂದಿ ಇಬ್ಬರಿಗೂ ಕೊಳ್ಳಿದೆವ್ವಗಳಿಗೆ ದೀಪಾವಳೀ ಹಬ್ಬ ಬಂದ ಹಾಗೆ! ಇದು ನನ್ನ ಯಾವತ್ತಿನ ಸಮಸ್ಯೆ !

ಮಹಾತ್ಮಾ ಗಾಂಧೀಕೀ ಜೈ! ಜವಹರ್ ಲಾಲ್ ನೆಹರೂಕೀ ಜೈ !!........ ........ಕೀ ಜೈ!!"

ಈ ಕೂಗಾಟಗಳು ನಾವು–ಮೂವರನ್ನೂ ನಮ್ಮ ವಾಹನಗಳಿಂದ ಇಳಿಸಿದುವು. ಲಾಟಿ ಸಜ್ಜಿತರಾದ ಬಾಲಕ ಬಾಲಕಿಯರ ಗುಂಪೊಂದು ರಸ್ತೆಯಲ್ಲಿ ಧಾವಿಸಿ ಬಂತು. ಗುಂಪಿನಲ್ಲಿ ಅತೀ ಧಡೂತಿಯಾಗಿದ್ದ ಬಾಲಕನನ್ನು ವಿಚಾರಿಸಲು–ಆಗಲೋ–ಇನ್ನೊಂದು ಘಳಿಗೆಗೋ–ಶಿವಪುರಕ್ಕೆ, ದೇಶದ ನಾಯಕರೊಬ್ಬರು, ಶಿವಪುರದ ಊರಮುಂದಿನ ಮೈದಾನದಲ್ಲಿ, ಶಿವಪುರದ ಸಾಹುಕಾರ ಖಜಾನಪ್ಪನವರು ಶಿವಪುರದ ಪುರಜನರಿಗೆ ದಾನ ಮಾಡಿದ ಒಂದು ಬೆಂಚುಕಲ್ಲನ್ನು ಸ್ಥಾಪನೆ ಮಾಡುವುದಕ್ಕಾಗಿ ಬರುವವರಿದ್ದಾರೆ ಅಂತ ತಿಳಿಯಿತು. ನಮಗೆ ಎರಡನೆ ಆಹ್ವಾನ ಬೇಕಾಗಿರಲಿಲ್ಲ. ಶಿವಪುರದ ಊರಮುಂದಕ್ಕೆ ನಾವೂ ಹಿಂತಿರುಗಿದೆವು.



ನಾವೆಲ್ಲ ಅಲ್ಲಿ ಸೇರುವ ಹೊತ್ತಿಗೆ ಊರಿನ ಎಂಟೂ ದಿಕ್ಕುಗಳಿಂದ ಜನರು ಬಂದು ನೆರೆದರು. ಮೂರು ಘಂಟೆಗಳ ಕಾಲ ಕಾದಮೇಲೆ ಕತ್ತಲೆಯಾಗುವ

ಹೊತ್ತಿಗೆ ಮುಖ್ಯ ಅತಿಥಿಗಳು ಸಿಬ್ಬಂದಿಯೊಡನೆ ಬಂದರು. ಶಿವಪುರದ ಜನರು ಜಯಭೇರಿಯೊಡನೆ ಅತಿಥಿಗಳನ್ನು ಅಂತರಿಕ್ಷಕ್ಕೇರಿಸಿದರು. ಜೊತೆಗೆ ಶಿವಪುರದ ಭೂಮಾತೆಯನ್ನೂ ಅಂತರಿಕ್ಷಕ್ಕೇರಿಸಿದರು.

ಧೂಳೆಲ್ಲ ಇಳಿದಮೇಲೆ ಮುಖ್ಯ ಅತಿಥಿಗಳು ಎರಡುಬಾರಿ ಕೆಮ್ಮಿ ಗಂಟಲು ಸರಿಪಡಿಸಿಕೊಂಡು ಎದ್ದು ನಿಂತಾಗ–ಶಿವಪುರದ ಜನರ ಸ್ವಾಗತ ಭಾಷಣ, ಶಿವಪುರದ ಪುರಜನರ ಭಾಷಣಗಳು, ಶಿವಪುರದ ಸಾಹುಕಾರ ಖಜಾನಪ್ಪನವರ ಪ್ರಶಂಸೆ, ಮುಖ್ಯ ಅತಿಥಿಗಳ ಅಮೃತಹಸ್ತದಿಂದ ಬೆಂಚುಕಲ್ಲಿನ ಸ್ಥಾಪನಾ ಸಮಾರಂಭ–ಇವೆಲ್ಲವೂ ಮುಗಿದು ಹೋಯ್ತೆಂದು ತಿಳಿಯಿತು. ಸಧ್ಯ–ಅಷ್ಟು ಸಂಕಟ ಕಡಿಮೆ ಯಾಯ್ತೆಂದು ಮನಸ್ಸಿನಲ್ಲಿ ಸಮಾಧಾನಪಡುತ್ತ ಮಾನ್ಯ ಅತಿಥಿಗಳ ಭಾಷಣಕ್ಕೆ ಕಿವಿ ಸರಿಪಡಿಸಿಕೊಂಡೆ, ಕೇಳಿದಮೇಲೆ ಮನಸ್ಸಿಗೆ ಎಷ್ಟೋ ನೆಮ್ಮದಿಯಾಯ್ತು.

ಹೌದು–ನೆಮ್ಮದಿ. ನನಗೆ ಅವತ್ತಿನವರಿವಿಗೆ–ನಮ್ಮ ದೇಶದ ಅಭಿವೃದ್ಧಿಗೆ–ನಮ್ಮ ದೇಶದ ಯಶಸ್ಸಿಗೆ ಯಾವನೋ ಒಬ್ಬ ಆದರ್ಶ ವ್ಯಕ್ತಿ ಕಾರಣನೆಂದು ಗುಮಾನಿ ಇತ್ತೇ ವಿನಹ ಆ ವ್ಯಕ್ತಿ ಯಾರೆಂದು ನನಗೆ ತಿಳಿದಿರಲಿಲ್ಲ, ಈಗ ತಿಳೀತು–ಇವರೇ ! ಅಯ್ಯೋ ! ಈತನಂತಹ ಕೇವಲ ಒಂದು ಡಜನ್ ಅಥವ ಅಷ್ಟದಿಕ್ಕಿಗೂ ಒಬ್ಬೊಬ್ಬನಾದರೂ ವ್ಯಕ್ತಿ ಇರಬಾರದೇ – ನಮ್ಮ ದೇಶದಲ್ಲಿ– ಅನ್ನಿಸಿತು! ಆದರೂ ಆತನಿಗೆ ಕಿಂಚಿತ್ತಾದರೂ ಜಂಭ ಉಂಟೆ? ಇಲ್ಲ. ಭಾಷಣ




ಮಾಡುವಾಗ ಹದಿನಾರು ಬಾರಿ ಮಹಾತ್ಮಾ ಗಾಂಧೀಜಿಯವರಿಗಾಗಿ ಕಣ್ಣೀರು ಸುರಿಸಿದರು. ಅವರು ಗಾಂಧೀಜಿಯವರ ಹೆಸರೆತ್ತಿದಾಗಲೆಲ್ಲಾ ನನಗೂ ಕಣ್ಣೀರು ಬರುತ್ತಿತ್ತು. ಆದರೂ ಈ ಒಬ್ಬ ವ್ಯಕ್ತಿ ಇಲ್ಲದಿದ್ದರೆ ಗಾಂಧೀಜಿಯವರಂತಹವರ ಕೈಲಿ ಏನೇನೂ ಕಿಸಿಯುತ್ತಿರಲಿಲ್ಲ ಅನ್ನುವ ಭಾವನೆಯೇ ನನ್ನನ್ನು ರಕ್ಷಿಸಿತು ! ಇಲ್ಲದಿದ್ದರೆ – ನನಗೆ ಹುಚ್ಚೇ ಹತ್ತುತ್ತಿತ್ತು! ಮುಖ್ಯ ಅತಿಥಿಗಳು ಭಾಷಣ ಮಾಡುವಾಗ ಗಾಂಧೀಜಿಯವರನ್ನು ಹೊಗಳಿದರು. ಜೊತೆಗೆ ಜವಹರಲಾಲ್ ನೆಹರೂರವರನ್ನೂ ಹೊಗಳಿದರು – ಇದು ಅವರ ಮನಸ್ಸಿನ ಉದಾರತೆಯನ್ನು ತೋರಿಸುತ್ತೆ. ಕಡೆಯಲ್ಲಿ ಸಂಪ್ರದಾಯಕವಾಗಿ ಈಗಿನಕಾಲದ ವಿದ್ಯಾರ್ಥಿಯರನ್ನು ಯತೇಚ್ಛವಾಗಿ ಬೈದರು. ತಾವು ವಿದ್ಯಾರ್ಥಿಯಾಗಿದ್ದಾಗ ಹೇಗೆ ಆದರ್ಶ ವಿದ್ಯಾರ್ಥಿಯಾಗಿದ್ದರು ಅಂತ ವರ್ಣಿಸಿದರು. ನನಗೆ ನಿಜಕ್ಕೂ ಅವರಲ್ಲಿ ಭಕ್ತಿ ಹೆಚ್ಚಿತು. ನನ್ನ ಮತವನ್ನು ಆ

ಕ್ಷಣದಲ್ಲಿಯೇ ಅವರಿಗೆ ದಾನಮಾಡಿಬಿಟ್ಟೆ.

ಭಾಷಣ ಮುಗಿಯುವ ಹೊತ್ತಿಗೆ ವಿದ್ಯಾರ್ಥಿಗಳ್ಯಾರೂ ಸಭೆಯಲ್ಲಿರಲಿಲ್ಲ. ಸಭೆ ಮುಕ್ತಾಯವಾಗುವಾಗ್ಗೆ–ಮುಖ್ಯ ಅತಿಥಿಗಳು, ಅವರ ಸಿಬ್ಬಂದಿ, ಖಜಾನಪ್ಪ – ಖಜಾನಪ್ಪನ ಸಿಬ್ಬಂದಿ, ನಾನು, ರಾಜ, ಚಂದಿ, ಬೆಂಚುಕಲ್ಲು–ಇಷ್ಟೇ ಅಲ್ಲಿದ್ದುದು. ಖಜಾನಪ್ಪನೇ ನಂದನಾರ್ಪಣೆ ಮಾಡಿದ. ನಾವೆಲ್ಲರೂ ಸೇರಿ ಅಪಸ್ವರದಲ್ಲಿ ಒಟ್ಟಿಗೆ ರಾಷ್ಟ್ರಗೀತೆ ಹಾಡಿದಮೇಲೆ ಸಭೆ–ಬೆಂಚುಕಲ್ಲು–ಉಳಿದು ಚೆಲ್ಲಾಪಿಲ್ಲಿಯಾಯ್ತು. ನಾನು, ರಾಜ, ಚಂದಿ, ಮಿಕ್ಕ ಜನರನ್ನೆಲ್ಲಾ ಅವರವರ ಪಾಡಿಗೆ ಬಿಟ್ಟು ಹಳಸಿದ್ದರೂ ಪರವಾಗಿಲ್ಲ. ಅನ್ನ ಹುಡುಕುತ್ತ ಹೊರಟೆವು.

ಶಿವಪುರದಲ್ಲಿ ಅಂದು ನಾವು ಇಳಿದುಕೊಂಡ ಹೋಟೆಲಿನಲ್ಲಿಯೇ, ಅಂದು, ಸಭೆಗಾಗಿ ಬಂದಿದ್ದ ಕೆಲವರೂ ಸೇರಿದ್ದರು. ಹಾಗಾಗಿ ಈ ಡಾಕ್ಟರುಗಳು ದಿನ ಬೆಳಗಾದರೆ ಮಾಡ್ತಾರಲ್ಲಾ ಪೋಸ್ಟ್‌ಮಾರ್ಟಂ!– ಅದೇ ತರಹ ಊಟಮಾಡುವಾಗ ಶಿವಪುರದ ಸಮಾರಂಭದ ಪೋಸ್ಟ್ ಮಾರ್ಟಂ ನಡೆಯಿತು. ಆಗ ಕೇಳಿಬಂದ ಕೆಲವು ಮಾತುಗಳು–

"ಅನ್ಯಾಯ–ಶಿವಪುರದಲ್ಲಿ ಒಂದು ಬೆಂಚುಕಲ್ಲಿಗಾಗಿ ಈ ಸಂಭ್ರಮ ಯಾಕೆ ಬೇಕಿತ್ತು?"

"ಸಿದ್ದಾಪುರದೋರು ಒಂದು ಭಾವೀಗಾಗಿ ನಮ್ಮ ಮುಂದೆ ಅಷ್ಟು ಸಂಭ್ರಮ ನಡೆಸಿರೋವಾಗ–ನಾವು–ಶಿವಪುರದೋರು ಸುಮ್ಮೆ ಇರೋಕಾಗುತ್ಯೇ ?"

"ಕಲ್ಲು––ಈ ಊರು ಬಂಡೇದೋ ಅಥವಾ........"

"ಈ ಊರು ಮುಂದೆ ಹಾಳು ಬಿದ್ದಿರೋ ಪಟಾಲಮ್ಮನ ಗುಡೀ ಮೆಟ್ಟಿಂದು ಖಜಾನಪ್ಪನೋರು ಕಷ್ಟ ಪಟ್ಟು ತಮ್ಮ ಆಳುಗಳಿಂದ ಅದನ್ನು ಕೀಳಿಸಿ–ಇಲ್ಲಿ ನೆಟ್ಟಿಸಿದರು"

"ಸಮಾರಂಭಕ್ಕೆ ಅವರೆಷ್ಟು ಖರ್ಚು ಮಾಡಿದರು"

"ಪಾಪ–ಎಲ್ಲಾ ಅವರೇ ಮಾಡೋಕಾಗುತ್ತೆ–ಊರಿನಲ್ಲಿ ಚಂದಾ ಎತ್ತಿದರು"

"ಆದರೂ ಭಾಷಣಕಾರರು–ನಮ್ಮ ಹುಡುಗರನ್ನ ಹಾಗೆ ಬಯ್ಯಬಾರದಿತ್ತು"

"ಥತ್ ! ಅವನೊಬ್ಬ ! ಅವನ ಮನೆ ಹಾಳಾಯ್ತು ! ಹೆಬ್ಬೆಟ್ಟು ಗುರುತಿನಲ್ಲೇ ಈಗಲೂ ತನ್ನ ಸೈನು ಮಾಡ್ತಾನೆ! ಯಾವುದೋ ಕಾರಣಕ್ಕೆ ಜೈಲಿಗೆ ಹೋಗಿದ್ದ. ಕಾಕತಾಳ ನ್ಯಾಯ–ಕೆಲವು ನಾಯಕರ ಜೊತೇಲಿ ಜೈಲಿನಲ್ಲಿ ಅಲೆದಾಡಿ ಅವರ ಜೊತೇಲಿ ಖುಲಾಸೆಯಾಗಿ ಬಂದ ಅವನೂ ನಾಯಕನಾದ ?"

"ಹಾಗಿದ್ದ ಮೇಲೆ–ಇವನ್ನ ಯಾಕ್ರೀ ಕರೆಸಬೇಕಾಗಿತ್ತು?"

"ಇನ್ನು ಯಾರಯ್ಯಾ–ತಮ್ಮ ಖರ್ಚಿನಲ್ಲೇ ಶಿವಪುರಕ್ಕೆ ಬರೋರು ?"

ಮಿಕ್ಕ ವಿಷಯ ಅಷ್ಟು ನನಗೆ ಜ್ಞಾಪಕವಿಲ್ಲ.

ಊಟವಾದ ಮೇಲೆ ನಾನು ರಾಜ ಚಂದಿ ಒಂದು ಕೋಣೆ ಬಿಡಿಸಿಕೊಂಡು ಸೇರಿಕೊಂಡೆವು.



"ಸಾರ್ಥಕವಾಯ್ತಯ್ಯ–ನಮ್ಮ ಪ್ರಜಾಪ್ರಭುತ್ವ !" ಅಂತ ಶುರುಹಚ್ಚಿದ ರಾಜ.

*ಅಲ್ರಯ್ಯಾ ಇಫ್ – ವೋಟರ್ಸ್– ಐ ಮೀನ್–ಈಗಿರೋ ವಯಸ್ಕರ ಮತದಾನ– ಮತದಾನ ಮಾಡುವವರು–ಶೇಕಡಾ 60–70 ಜನ–ಈ ತರಹ ಜನ ಮರುಳೋ ಜಾತ್ರೆ ಮರುಳೋ–ಅನ್ನೋಹಾಗೆ ಆದರೆ–ದೇವರೇ ಗತಿ !" ಅಂದ ಚಂದಿ,

ಅದಕ್ಕೆ ರಾಜ ಅಂದ–


"ಏನು ಮಾಡೋದು. ಇವೆಲ್ಲಾ ಅನ್‌ಅವಾಯ್ಡಬಲ್ ಸಿನ್ಸ್ ಮಿಸ್ಟೇಕ್ಸ್ !! ನನ್ನನ್ನ ಕೇಳಿದರೆ– ಈ ವಯಸ್ಕರ ಮತದಾನ–ಅಡಲ್ಟ್ ಫ್ರಾನ್ಚೈಸ್–ನ ಇನ್ನೂ ಹತ್ತು ವರ್ಷ ಕಾಲ ತಳ್ಳಿ ಹಾಕಬಹುದಿತ್ತು. ಪ್ರತಿಯೊಬ್ಬನಿಗೂ– ಈತ ಸೇಂಟ್ ಉ ಈತ ಸಿನ್ನರ್ ಉ– ಈ ವ್ಯತ್ಯಾಸ ತಿಳಿಯೋತನಕ–ಅಡಲ್ಟ್ ಫ್ರಾನ್ಚೈಸ್– ಅಪಾಯ ! ಆದರೆ – ನಮ್ಮ ದೇಶ ಇಂಗ್ಲೆಂಡಲ್ಲ ! ಯುದ್ಧ ಮುಗಿದ ತಕ್ಷಣ ಯುದ್ಧವನ್ನೇ ಗೆದ್ದು ಕೊಟ್ಟ ಚರ್ಚಿಲ್ಲನ್ನು ಮನೆಗೆ ಕಳುಹಿಸುವ ಮತದಾರರು ಇಲ್ಲಿಲ್ಲ! ಹಾಗೂ ತನ್ನ ಕೆಲಸ ಮುಗಿದಮೇಲೆ–ತಮ್ಮನ್ನು ಬಿಟ್ಟು ಬೇರೆ ಬುದ್ಧಿವಂತರೂ ದೇಶದಲ್ಲಿದ್ದಾರೆ ಅನ್ನುವ–ಚರ್ಚಿಲ್ಲರೂ ನಮ್ಮ ದೇಶದಲ್ಲಿಲ್ಲ"

–ಅಂತ !

ರಾಜ ಕೆಲವು ವೇಳೆ ಚೆನ್ನಾಗಿ ಮಾತನಾಡುತ್ತಾನೆ–ಆ ನಾನೇನೂ ಪ್ರತ್ಯುತ್ತರ ಕೊಡೋಕೆ ಹೋಗೊಲ್ಲ. ಈಗಲೂ ಹೋಗಲಿಲ್ಲ.

## ಸುಮ್ನೆ ತಮಾಷೆಗೆ !!!

ರಾಂಕಿ ಬೆಳ್ಳೂರ್




**ಸರ್ವಜ್ಞ (ಕಸ್ತೂರಿ) ವಚನ**

ಕೆಟ್ಟ ಚಾಳಿಯ ಪದ್ಯ
ಸೊಟ್ಟ ಶೈಲಿಯ ಗದ್ಯ
ಹಿಟ್ಟಿನಾಸೆಯ ಕ್ರಿಟಿಸಿಸಮುಗಳ
ಬರಿ ಕಸದ ಬುಟ್ಟಿಗೆ ಬಿಸುಡು

# ಕುರಿಹಟ್ಟಿ ಬಸವನಗೌಡ್ಯನು ನಡದುಬಂದ ದಾರಿ

ಕೊಳ್ಳೇಗಾಲದ್ನಾ ರಾಮಾನುಜ

"ಗೃಹ ತಟಾಕ ನಿರ್ಮಾಪಕೋ ಭವತಿ...ಪರಂತು..." ಅಂದರು. ಅಂದು ತಡವರಿಸಿದರು ಜಗಲಿ ಭೀಮಸೇನರು, ಜಗಲಿ ಭೀಮಸೇನರೆಂದರೆ ಕೊಳ್ಳೇಗಾಲದ ಜೋತಿಷ್ಯಕೇಸರಿ, ಮನೆ ಜಗಲಿಯಮೇಲೆ ಕುಳಿತು ಕವಡೆಹಾಕಿ ಜೋಸ್ಯ ಹೇಳುವ ಪದ್ಧತಿ ಅವರದು.

ಬಸವನಗೌಡ್ಯಾನಿಗೆ ಜೋತಿಷ್ಯಕ್ಕಿಂತ ಜೋಸ್ಕರಲ್ಲೇ ಹೆಚ್ಚು ನಂಬಿಕೆ. ಚಿಕ್ಕಂದಿನಿಂದಲೂ ಆತ ಮನೆ ಎಮ್ಮೆ ಕಾಣದೇ ಹೋಗಲಿ, ಆಕಳು ಮೈಸರಿಯಿಲ್ಲದೇ ಮಲಗಲೀ ಭೀಮಸೇನರ ಒಂದು ಮಾತು, ಒಂದು ಮಂತ್ರ ಪ್ರಭಾವವನು ಕಂಡರಿತಿದ್ದ. ಊರೆಲ್ಲಾ ಹುಡುಕಿದರೂ ಕಾಣದ ಎಮ್ಮೆ ಜಗಲೀ ಭೀಮಸೇನರ ಹುಂ, ಹೂಂ ಎಂದರೆ ಒಯ್ ಎನ್ನುತ್ತಾ ಓಡಿಬರುವುದು. ಅಂತಹ ಅದ್ಭುತ ಶಕ್ತಿಯನ್ನು ಕರಗತ ಮಾಡಿಕೊಂಡಿದ್ದ ಜೋತಿಷ್ಯಕೇಸರಿ ಜಗಲಿ ಭೀಮಸೇನರು ಬಸವನ ಗೌಡ್ಯಾನ ಎಳೆ ಮನಸ್ಸಿನಮೇಲೆ ಬಲವಾದ ಪ್ರಭಾವ ಬೀರಿದ್ದರು. ಮ್ಯಾಟ್ರಿಕ್ ಪರೀಕ್ಷೆಗೆ ಕವಡೆ ಹಾಕಿ ಕಟ್ಟು ಎಂದವರು ಅವರೇ. ಪರೀಕ್ಷೆಗೆ ಮೊದಲೇ ಜ.ಗ.ಭೀ ಉವಾಚ, ಪ್ರಶ್ನೆ ಪತ್ರಿಕೆ ನೂರುಸಲ ಬದಲಾಗಲಿ, ಮೂರೇ ಪ್ರಶ್ನೆಗಳಿಗೆ ಉತ್ತರಿಸಲಿ ಏನಂತೆ ?!

ಹಂಪಾಪುರದ ಒಂದು ಚೀಲ ಹೊಸ ಅವರೇಕಾಯಿ, ಎರಡು ಜಲ್ಲೆ ಪಟಾವಳೀ ಕಬ್ಬು, ಒಂದು ಬುಟ್ಟಿ ತುಂಬ ಸೊಪ್ಪಿಗೆ ಸೊಪ್ಪು, ದಂಟು, ಕರೂಜಗಳೊಡನೆ ಬಂದ ಬಸವನ ಗೌಡ್ಯಾ ಭೀಮಸೇನರಿಗೆ ಸಾಷ್ಟಾಂಗ ನಮಸ್ಕಾರಮಾಡಿದ. ಎಲ್ಲವನ್ನೂ ನಡವೆಯಲ್ಲಿ ಇಡಿಸಿ ಶುಭಮಸ್ತು ಅಂದರು ಕೈಯಲ್ಲಿ ಕವಡೆಗಳನ್ನು ಕುಲುಕುತ್ತಾ ಭೀಮಸೇನರು. "ಮುಂದೆ..." ಅಂದವನು ಬಸವನ ಗೌಡ್ಯಾ.

ಜಗಲೀ ಭೀಮಸೇನರು ಕುಲುಕುತ್ತಿದ್ದ ಕವಡೆಗಳನ್ನು ಸರಕ್ಕನೆ ನೆಲದಮೇಲೆ ಬಿಟ್ಟರು. ಎರಡು, ಮೂರು ಎಂದು ಅದೇನೇನೋ ಲೆಕ್ಕ ಹಾಕಿದರು. ತುಟಿ ಕಚ್ಚಿದರು. ಮುಖ ಸಿಂಡರಿಸಿದರು. ಅವರ ಮೊಗದಲ್ಲಿ ಆಗುತ್ತಿದ್ದ ಸಕಲ ವಿಕಾರಗಳೂ ಬಸವನ ಗೌಡ್ಯಾನ ಮೇಲೆ ವಿಚಿತ್ರ ಪ್ರಭಾವವನ್ನು ಬೀರುತ್ತಿದ್ದಿತು. ಅವರು ಅಂದದ್ದು ಆತನಿಗೆ ವೇದವಾಕ್ಯ, ಅಸ್ತು ಅಂದರೆ ಆಯಿತು. ಅ...ಹುಂ... ಎಂದರೆ ಮುಗಿಯಿತು! ಸೃಷ್ಟಿಸಿದ ಬೊಮ್ಮನಿಗಿಂತಲೂ ಮಿಗಿಲು. ಕವಡೇ ಜೋಸ್ಕರ ಮಾತೇ ಬಸವನಗೌಡ್ಯಾನ ಭವಿಷ್ಯವನ್ನು ನಿರ್ಧರಿಸುತಿತ್ತು.

ಕ್ರಮೇಣ ಭೀಮಸೇನರ ಗಂಟುಮೊಗದಲ್ಲಿ ಹಸನು ರೇಖೆಗಳು ಉದಿಸಿದವು. ಬಸವನಗೌಡ್ಯಾನಿಂದ ನಿಟ್ಟುಸಿರು ಹೊರಹೊಮ್ಮಿತು.

’ಗೃಹ ತಟಾಕ ನಿರ್ಮಾಪಕೋ ಭವತಿ, ಪರಂತು...’ ಎಂದು ತಡವರಿಸಿದರು ಜಗಲೀ ಭೀಮಸೇನರು.



".........."

"ಮನೆ, ಕೊಳ, ಕಟ್ಟೆ ಕಟ್ಟಿಸ್ತೀಯೋ, ಕೆರೆ, ಕುಂಟೆ, ಬಾವಿ, ಗೀವಿ ತೋಡಿಸ್ತೀಯೋ

ಪರಂತು...ಆದರೆ"

"ಆದರೆ..."

"ಇನ್ನೇನೋ...ಸಿವ್ಹಿಲ್ ಇಂಜನಿಯರಾಗ್ತಿಯೋ ! ಈ ಕಾಲದಲ್ಲಿ ಇಂಜನಿಯರಿಂಗ್ ಸೀಟೂಂತ ಕೋರ್ಟು ಕಛೇರಿ ಎಲ್ಲ ಜನ ಅಲೀತಾರೆ. ಪೂರ್ಟ್‌ಲಾಯರಿಯಿಂದ ಶುರುವಾಗಿ ಸುಪ್ರೀಂಕೋರ್ಟು ಸಾಲಿಸಿಟರ್ ವರ್ಗೆ ತೆತ್ತಬೇಕೋ! ಅಂಥದು... ಅಷ್ಟು ಕಷ್ಟಪಟ್ಟು ಮುಂದೆ ಅದೇನೋ ಸಾಬ್ಯಾಗ ಅಂತಾರಲ್ಲ...ಅಂಥಾದು... ಅರ್ಥಾತ್ ನಿನಗೆ ಇಂಜನಿಯರಿಂಗ್ ಸೀಟು ಖಾತ್ರಿಯೇಪರಂತು..."ಎಂದು ಮತ್ತೆ ತಡವರಿಸಿದರು ಜಗಲಿ ಭೀಮಸೇನರು.

"ಪರಂತು ?!..." ವ್ಯಾಕುಲನಾಗಿ ಬಸವನಗೌಡ್ಯಾ

"ಪರಂತು ವಿದ್ಯಾ ತಥಾತಥಾ ವಿಘ್ನಂ ಭವತಿ !'

ಇನ್ನೊಂದು ಸಲ ಕವಡೆ ಹಾಕಿ ಗುಣಿಸಿ ಭಾಗಿಸಿ ಜಗಲಿ ಭೀಮಸೇನರು ಹೇಳೇ ಬಿಟ್ಟರು.




ಬಸವನ ಗೌಡ್ಯಾ ತತ್‌ಕ್ಷಣ ಅಲ್ಲೇ ನಿಶ್ಚೇಷ್ಟಿತನಾಗಿ ನಿಂತುಬಿಟ್ಟ. ಜಗಲೀ ಭೀಮಸೇನರು "ಅಲ್ಲೋ ಬಸವನಗೌಡ್ಯಾ, ತಥಾತಥಾ ಅಂದರೆ ನಾವು ಯಥಾನು ಶಕ್ತಿ ಪರಿಹಾರ-ಶಾಂತಿ ಗೀಂತಿ ಮಾಡಿಸಬೋದೋ, ವಾರಿ ಜಾಸನೇ ಸಕಲ ಶಾಸ್ತ್ರ ದುದ್ದವೇಂತ ಕುಮಾರವ್ಯಾಸ ಹೇಳಿದಾನಲ್ಲ, ಅದನ್ನ ಪ್ರತಿನಿತ್ಯ ಪರಿಸೋ ಸರಸ್ವತಿ ನಿನ್ನ ಇಷ್ಟ ದೇವತೆಯಾಗಿ ಒಲೀತಾಳೋ. ಬೇಗ ಕೆರೆ ಕುಂಟೆ ತೆಗೆಸೋ ಭಾಗ್ಯ ಪಡೀತೀಯೋ. ಲಕ್ಷ್ಮೀ ಕೃಪೆ ಆಗುತ್ತೋ" ಅಂತ ಸಾಂತ್ವನಗೊಳಸಿ ಮನೆಗೆ ಕಳಿಸಿದರು ಅಮ್ಮನವರಿಗೆ ಅವರೇ ಹೇಳಿ, ಸೊಪ್ಪಿಗೆ ಸೊಪ್ಪು ಕೊಳಂಬು, ಮೆಂತ್ಯದ ಗೊಜ್ಜು ಎಂದು ಅಜ್ಞಾಪಿಸಿದರು.

ಸಮಾಜ ಸಮತಾವಾದಕ್ಕೆ ಮನ್ನಣೆ ನೀಡುತ್ತಿರುವ ಸರ್ಕಾರ ಪ್ರತಿಯೊಬ್ಬ ಮೂಲಭೂತ ಹಕ್ಕಿನತ್ತ ಗಮನ ಕೊಡುತ್ತಿದೆಯೇ ? ಈಕ್ವಾಲಿಟಿ ಆಫ್ ಆಪರ್ಚುನಿಟೀಸ್ ಎಂಬುದು ಸದ್ಯ ಇದೆಯೇ ? ತಾಂತ್ರಿಕ ವಿದ್ಯಾಭ್ಯಾಸದ ಸೀಟುಗಳ ಹಂಚಿಕೆಯಲ್ಲಿ ನ್ಯಾಯವಾದ ನಿಲುಗಡೆ ಇದೆಯೇ? ಆದಿಯಾಗಿ ಅಪೋಸಿಷನ್ ಬೊಬ್ಬೆಯಿಡಲು ಮಾನ್ಯ ಮಂತ್ರಿಗಳೇ ಖುದ್ದಾಗಿ ಪರಿಶೀಲನೆ ನಡೆಸಲು ಇಂಟರ್‌ವ್ಯೂನಲ್ಲಿ ಉಪಸ್ಥಿತರಾಗಿದ್ದರು. ಅಂದೇ ಬಸವನಗೌಡ್ಯನ ಇಂಟರ್‌ವ್ಯೂ, ಅದೇನೇನೋ ಪ್ರಶ್ನೆಗಳು. ಉಷ್ಣಾಂಶ ಎಂದರೇನು ? ಜಡತ್ವ, ಚಲನ ನಿಯಮ,

ಭಾರಮಾಪಕ... ಅಬಬ !... ಮಂತ್ರಿಗಳಿಗೆ ತಲೆ ಭಾರವಾಯಿತು. ಬೋರೋಬೋರು, ಸಾಕಪ್ಪಾ ಸಾಕು ಇಂಟರ್‌ವ್ಯೂ ಅಂತ ಬೆವರೊರೆಸಿಕೊಂಡರು. ಕೈವಾಚಿನತ್ತ ದೃಷ್ಟಿ ಬೀರಿದರು. ಅದೀಗ ಬಸವನಗೌಡ್ಯನು ಇಂಟರ್ವ್ಯೂ ಕೋಣೆಯೊಳಕ್ಕೆ ಕಾಲಿರಿಸಿದ. ಒಳಬಂದು ಕೈ ಜೋಡಿಸಿದ, ಮಂತ್ರಿಗಳತ್ತ ತಿರುಗಿ ಕೈ ಜೋಡಿಸಿ, ಶಿರಬಾಗಿಸಿ ಮುಗಳ್ನಗೆ ಮಿಂಚಿಸಿದ, ಮಂತ್ರಿಗಳು ಬುಕಿಬಿದ್ದರು, ಚಲೋ ಹುಡುಗ, ಚಲೋ ಗುಣ ಅಂದುಕೊಂಡರು.

"ಯಾವೂರಪ್ಪಾ, ಮಗೂ...ನಿಂದೂ" ಅಂದರು

"ಕೊಳ್ಳೇಗಾಲ.... "

"ಓಹೋ !...ಕೊಳ್ಳೇಗಾಲದವನೇನೋ ನೀನೂ...ದೊಡ್ಡಟ್ಟಿ ದಮಾಸೆಯವರ ಊರ ಹೈದನಾ ?... ದಮಾಶೆಯವರು ಹೇಗಿದ್ದಾರೆ ? ಪಟೇಲ್ ಪಂಚಾಕ್ಷರಯ್ಯನವರು ಪಂಚರ ಬಸಾರಿ ಎಲ್ಲಾ ಚೆನ್ನಾಗಿಧಾರ ? ಮಣೇಗಾರ .." ಎಂದು ಮುಂದುವರಿಸುತ್ತಿರುವಲ್ಲೇ ಮುಖ್ಯ ಪರೀಕ್ಷಕರು, ಪ್ರೊಫೆಸರ್ ಸಿವ್ವಿಲ್ ಇಂಜಿನಿಯರರು ಕೆಮ್ಮಿದರು, ಮಂತ್ರಿಗಳು ಸರಕ್ಕನೆ ಸುಮ್ಮನಾಗಿ ಮುಖವನ್ನು ಸಿಂಡರಿಸಿಕೊಂಡರು.

"ಕೊಳ್ಳೇಗಾಲದಲ್ಲಿ ಯಾವ ನದಿ ಹರಿಯುತ್ತೆ ?" ಎಂದರು ಮುಖ್ಯ ಪರೀಕ್ಷಕರು.

"ಕಾವೇರೀ..."

"ಕಾವೇರಿ ನೀರಿನ ಪರ್‌ಸೆಂಟೇಜ್ ಆಫ್ ಯುಟಿಲಿಟಿ...ಬಳಕೆ ಎಷ್ಟು ?"

"ನಿಲ್...ಸರ್ !"

"ವ್ವೈ? !...!"

"ಸರ್, ಈಗ ಊರು ಇರೋವಲ್ಲಿ ಕಾವೇರಿ ಇದ್ದು, ಕಾವೇರಿ ಇರೋವಲ್ಲಿ ಊರು ಇದ್ದಿದ್ದರೆ ಬಳಕೆಯ ಪ್ರಶ್ನೆ. ಸದ್ಯ ಊರ ಕೆರೆ ಕಾಲುವೆ ನೀರು ಕಾವೇರಿಗೆ ಹೋಗುತ್ತೆ...ಅಷ್ಟೆ !"

(ಮಂತ್ರಿಗಳು ಗೊಳ್ಳನೆ ನಕ್ಕರು)

"ಗಾಷ್, ವಿತ್ ಸಚತ್ ಎ ಬಿಗ್ ರಿವರ್ ಆ್ಯಸ್ ಕಾವೇರಿ ವಾಟರ್ ಇಸ್ ಲೆಫ್ಟ್ ಅನ್‌ಯೂಸ್ಡ್ ಇಸ್ ಇಟ್" ಎಂದರು ಪ್ರೊಫೆಸರ್ ಸಿವ್ವಿಲ್ ಇಂಜನಿಯರರು.

"ನೊ....ಸರ್...,ಕಾವೇರಿ ಪವಿತ್ರವಾದ ನದಿ ಸಾರ್, ಕಾಶಿಯಲ್ಲಿ ಗಂಗೆ ಹೇಗೋ... ಕೊಳ್ಳೇಗಾಲಕ್ಕೆ ಕಾವೇರಿ ಸರ್...ತುಲಾ ಸಂಕ್ರಮಣ ಸ್ನಾನ... ಮತ್ತು ...ಮತ್ತು ಸತ್ತವರನ್ನು ಸುಡಲಿಕ್ಕೆ..."

(ಮಂತ್ರಿಗಳು ಬಿದ್ದು ಬಿದ್ದು ನಕ್ಕರು)

ಪ್ರೊಫೆಸರರು ಸ್ವಲ್ಪ ಸೀರಿಯಸ್ ಆದರು. ಪ್ರಶ್ನೆಗಳನ್ನು ಬೇರೆ ಕಡೆ ತಿರುಗಿಸಿದರು.

"ಡಿ.ವಿ.ಜಿ. ಅಂದರೇನು ? ಕೇಳಿದ್ದೀಯಾ ?"

"ಡಿ.ವಿ. ಗುಂಡಪ್ಪ !...ಕೇಳೋದೇನ್ ಸಾರ್ ... ಅವರ ಕವಿತೆಗಳನ್ನು ಓದಿಯೂ ಇದೇನೆ... ವನಸುಮದಲ್ಲೆನ್ನ ಜೀವನವು, ಮಕುತಿಂಮನ..."

"ವೆರಿ ಗುಡ್ ಭೇಷ್... ಕನ್ನಡಾಂದರೆ ನಿನಗೆ ಬಲು ಇಷ್ಟಾಂತ ಕಾಣತ್ತೆ" ಅಂದರು ಮಂತ್ರಿಗಳು.

"ಯೂ ಕ್ಯಾನ್ ಗೋ" ಎಂದು ಪ್ರೊಫೆಸರರು ಬಸವನ ಗೌಡ್ಯಾನನ್ನು ಹೊರ



ಕಳುಹಿಸಿ ಮಂತ್ರಿಗಳತ್ತ ತಿರುಗಿ "ಹಿ ಹ್ಯಾಸ್ ಗಾಟ್ ಎ ವೆರಿ ಪೂರ್ ನಾಲೆಡ್ಜ್ ಆಫ್ ಇಂಜಿನೀರಿಂಗ್ ಆಕ್ಟಿವಿಟೀಸ್ ಗೋಯಿಂಗ್ ಆನ್ ಇನ್ ಇಂಡಿಯಾ... ದಾಮೋದರ್ ವೇಲಿ ಜಿನರೇಶನ್‌ಗೆ ಡಿ. ವಿ. ಗುಂಡಪ್ಪಾ ಅಂತಾನೆ..."

"ಅಯ್ಯೋ...ಅರೀದ ಹುಡ್ಗ... ಚಿಕ್ಕವನು... ಅವನಿಗೆ ದಾಮೋದರನ ಜನ ರೇಶನ್ ಹೇಗೆ ಗೊತ್ತಾಗಬೇಕು ? ಹುಡ್ಗ ಚೂಟಿಯಿಧಾನೆ, ಸೀಮ್ಸ್ ಟು ಬಿ ಇಂಟೆಲಿಜೆಂಟ್ ಯಾವ ತರ ಫೇಸ್ ಮಾಡ್ತಾನೆ ಪ್ರಾಬ್ಲಂಸ್‌ನ ! ಆವನಿಗೊಂದು ಸೀಟು ಕೊಡ್ಬಿಡಿ!" ಅಂದರು ಮಂತ್ರಿಗಳು.

"ಸರ್ ಪರ್ಸೆಂಟೇಜ್ ಆಫ್ ಮಾರ್ಕ್ಸ್ ಇಸ್ ಫಾರ್ ಬಿಲೋ ದ ಆವರೇಜ್!"

"ಡೋಂಟ್ ವರಿ ಎಬೌಟ್ ಆಲ್ ದೋಸ್ ಥಿಂಗ್ಸ್ ಗಿವ್ ಪ್ರಿಫೆರೆನ್ಸ್ ಟು ಟ್ಯಾಲೆಂಟ್ .ಎನಿ ಫೂಲ್ ಕ್ಯಾನ್ ಸ್ಕೋರ್ ಮಾರ್ಕ್ಸ್ ಉರು ಹೊಡ್ದು... ಹಿ ಇಸ್ ಫ್ರಂಮ್ ಕೊಳ್ಳೇಗಾಲ್..... ಕನ್ನಡಾಂದರೆ, ಕಾವೇರೀ ಅಂದರೆ, ಗುಂಡಪ್ಪನವರೂಂದರೆ ಭಕ್ತಿ ಇದೆ. ಕನ್ನಡನಾಡಿಗೆ ಹೊಸದಾಗಿ ಸೇರಿದ ಊರು ಕೊಳ್ಳೇಗಾಲ.... ರಿಸರ್ವ್ ಎ ಫ್ಯೂ ಸೀಟ್ಸ್ ಟು ಕ್ಯಾಂಡಿಡೇಟ್ಸ್ ಕಮಿಂದ್ ಫ್ರಂ ನವ ಕರ್ನಾಟಕ ಎಂಡ್ ಗಿವ್ ಒನ್ ಟು ಬಸವನ ಗೌಡ್ಯಾ...." ಅಂತ ಹೇಳಿ ಮುಂದಿನದು ನೀವು ನಡೆಸಿ, ನನಗೆ ತುರ್ತು ಕೆಲಸ ಇದೆ ಅಂತ ಹೊರಟು ಹೋದರು.

ಜಗಲೀ ಭೀಮಸೇನರ ಕೈಯಲ್ಲಿನ ಕವಡೆಗಳು ಕುಲುಕುಲು ನಗುತ್ತಿದ್ದವು.

* * * *

ಜಗಲೀ ಭೀಮಸೇನರ ಕವಡೆ ಪ್ರಭಾವ ಕೊಳ್ಳೇಗಾಲದ ಕುರಿಹಟ್ಟಿ ಬಸವನ ಗೌಡ್ಯಾ ಇಂಜನಿಯರಿಂಗ್ ಕಾಲೇಜು ಮೆಟ್ಟಲು ಹತ್ತುವಂತೆ ಆಯಿತು. ಸೀಟು ಸಿಕ್ಕುವುದಕ್ಕೆ ಸುಪ್ರೀಂ ಕೋರ್ಟ್ ಹತ್ತಿದವರುಂಟು. (ಬಸವನ ಗೌಡ್ಯಾನ ಸೀಟಿಗೆ, ಅರ್ಹತೆಗೆ ಪ್ರಶ್ನೆ ಹಾಕಿ ಸುಪ್ರೀಂ ಕೋರ್ಟಿಗೆ ಕೆಲವರು ಹೋದದ್ದು ಬೇರೆ ವಿಷಯ) ಅದು ಸ್ವಲ್ಪವೂ ಶ್ರಮವಿಲ್ಲದೆ ಬಸವನ ಗೌಡ್ಯಾನಿಗೆ ಸಿದ್ದಿಸಿತು. ಆದರೆ ಇಂಜನಿಯರಿಂಗ್ ಸೀಟೇ ಇಂಜನಿಯರಿಂಗ್ ಡಿಗ್ರಿ ಅಲ್ಲವಲ್ಲ ! ಪಾಟಗಳು ಗೌಡ್ಯಾನಿಗೆ ಸಾಕುಸಾಕೆನಿಸಿದವು. ಇಂಜನಿಯರಿಂಗ್ ಅಂದರೆ ಅವನ ಪೂರ್ವಕಲ್ಪಿತ ಊಹಾಪೋಹಗಳೆಲ್ಲ ಬರೀ ಪೊಳ್ಳೆನಿಸಿದವು. ಎಂಥದೂ ಈ ಹಾಳು ಇಂಜನಿಯರಿಂಗು?! ಇಟ್ಟಿಗೆ, ಕಲ್ಲು, ಹೆಂಚು, ಬಂಬು...ಬಿಲ್ಡಿಂಗ್ ಮೆಟೀರಿಯಲ್ಸ್ ಅಂದರೆ ಗೌಡ್ಯಾನಿಗೆ ಆಕಳಿಕೆ ಬರುತಿತ್ತು ಅಪ್ಲೈಡ್ ಮೆಕ್ಯಾನಿಕ್ಸ್. ತಲೆ ತಿನ್ನುತಿತ್ತು. ಡ್ರಾಂಯಿಂಗ್ ಕ್ಲಾಸ್ ಅಂದರೆ ನಡುನೋವು. ಪರಿಣಾಮವಾಗಿ ಗೌಡ್ಯಾನಲ್ಲಿ ಒಂದು ಬಗೆಯ ವೈಚಾರಿಕ ಆಂದೋಲನ ವೇರ್ಪಟ್ಟಿತು. ಮೆದುಳಿನಲ್ಲಿ ಟರ್ಬ್ಯುಲನ್ಸ್ ಹೃದಯದಲ್ಲಿ ವ್ಹಿರ್ಲ್‌ಪೂಲ್ ಫಲಸ್ವರೂಪ ನವ್ಯ ಕಾವ್ಯವಾಗಿ ಹರಿಯಿತು. ಪಾಠಗಳನ್ನು ಪ್ರೊಫೆಸರರು ಮಾಡುತಿದ್ದರು. ತೂಕಡಿಕೆ ಬರದಿದ್ದರೆ ಬಸವನಗೌಡ್ಯಾನು ಕವಿತೆಗಳನ್ನು ಬರೆಯುತ್ತಿದ್ದನು. ಉದಾಹರಣೆಗಾಗಿ: ಬಿಲ್ಡಿಂಗ್ ಮೆಟೀರಿಯಲ್ಸ್ ಗೌಡ್ಯಾನ ದೇಹಪೂರ ಉರಿ ಎಬ್ಬಿಸುತಿತ್ತು. ಪ್ರೊಫೆಸರರೋ ಒಂದು ಕ್ಷಣವೂ ಬಿಡದೆ ಪಿರಿಯಡ್ಡು ಪೂರ ಬೋರ್ಡಿನ ಮೇಲೆ ಇಟ್ಟಿಗೆ, ಹೆಂಚು ಎಂದು ಗೀಚುತ್ತಾ ಇರುತ್ತಿದ್ದರು. ಬಸವನ ಗೌಡ್ಯಾ ಇದನ್ನು ಈ ಕಿರು ಪ್ರತಿಮೆಯಲ್ಲಿ ಈ ರೀತಿ ಅಭಿವ್ಯಕ್ತಿಸಿದ್ದಾನೆ.



"ಪಾಟವೇನು ? ಪುಣ್ಯವೇನು ?... ನನಗೇನು ಗೊತ್ತಪ್ಪ ?!"

ಅಂತು. ಪಿರಿಯಡ್ಡಿಗೆ ಮೂವತ್ತು ಚಾಕ್ಪೀಸಗಳನ್ನುಜ್ಜುವ ಈ ದೇಶಿಕಪ್ಪ.

ಅದನಳಿಸಲು ಆ ಭಗವಂತನೇ ಬರಬೇಕಪ್ಪ.

ಎಂದು ಹೇಳಿದನಾದಪ್ಪ.

(ದೇಶಿಕಪ್ಪ ಪ್ರೊಫೆಸರು, ಆದಪ್ಪ ಆಟೆಂಡರು)

ವರ್ಷಪೂರ ಕ್ಲಾಸಿಗೆ ಚಕ್ಕರ್ ಹೊಡೆದು ಬಲ್ಲಾಳನ ಹೊಟೇಲಿನಲ್ಲಿ ದೋಸೆ ಹೊಡೆದು ಕೊನೆಗೆ ಪ್ರೊಫೆಸರರು ಅಟೆಂಡೆನ್ಸ್ No ! ಅಂದಾಗ ಪೆಚ್ಚು ಬಡಿದು ದಿಕ್ಕು ತೋಚದಿರುವಾಗ ಕುರಿಹಟ್ಟಿ ಬಸವನ ಗೌಡ್ಯಾ ಈ ರೀತಿ ಗೀಚುತ್ತಾನೆ.

ದಿಟ !...ಒಂದಿನಿತು ಕಾಫಿಯನು ಹೆಚ್ಚಾಗಿ ಕೊಟ್ಟರೆ

ಬಲ್ಲಾಳನಿಗೆ ಒಂದಾಣೆಯು ಹೋಯ್ತು !

ಆಟೆಂಡೆನ್ಸ್ ತಾ ಕ್ಲಾಸ್ ಮಾರ್ಕ್ಸ್‌ಷು ಕೊಟ್ಟರೆ

ಈ ದೇಶಿಕನಪ್ಪನ ಮನೆ ಗಂಟೇನ್ಹೋಯ್ತು ?!

ಹೀಗಾಗಿ ಜಗಲಿ ಭೀಮಸೇನರ ಎರಡನೆಯ ಅಂಬೋಣವು ಮೊದಲನೆಯ ವರ್ಷವೇ ಸಂಭವಿಸಿಬಿಟ್ಟಿತು. ವಿದ್ಯಾ ತಥಾ ತಥಾ ವಿಘ್ನಂ ಭವತಿ ಎಂಬಂತೆ ಮೊದಲ ಸಲ ಅಟೆಂಡೆನ್ಸ್ ಇಲ್ಲದೆ ಪರೀಕ್ಷೆಗೆ ಕೂಡ್ರಿಸದಿದ್ದರೆ ಮುಂದಿನ ಎರಡು ಸಲ ಪರೀಕ್ಷೆಗೆ ಕೂಡಿಯೂ ಫಲಿತಾಂಶ ಸೊನ್ನೆಯಾಯಿತು. ಬಸವನ ಗೌಡ್ಯಾ ಮಾರ್ಚ್ ಸೆಪ್ಟೆಂಬರ್ ಹೀರೋ ಆದ. ಆದರೂ ಆತ ಧೃತಿಗೆಡಲಿಲ್ಲ. "ತಟಾಕ ನಿರ್ಮಾಪಕೋ ಭವತೀ" ಅಂತ ಜಗಲೀ ಭೀಮಸೇನರೆಂದ ಮೇಲೆ ಆಗಿಹೋಯಿತು. ಆಗಿಯೇ ತೀರುವೆನೆಂಬುದು ಅವನ ಮತ.

* * * *

ಸದ್ಯ ನಾವು ಕೊಳ್ಳೇಗಾಲದ ಕುರಿಹಟ್ಟಿ ಬಸವನ ಗೌಡ್ಯಾನು ನಡೆದು ಬಂದ ದಾರಿಯ ಮುಖ್ಯ ಘಟ್ಟದವರೆಗೂ ಬಂದುಬಿಟ್ಟಿರುವೆವು. ಆ ದಾರಿಯು ಇಲ್ಲಿಯವರೆಗೂ ನೇರವಾಗಿ, ಸ್ಪಷ್ಟವಾಗಿ ನಮ್ಮ ಅರಿವಿಗೆ ಬಂದಿರುವುದು ಮತ್ತು ಇಲ್ಲಿ ಅರಿಯಲು ಸ್ವಲ್ಪ ತೊಡಕಾಗಿರುವುದು. ಅಂತೂ ನಮಗೆ ಸಾಧ್ಯವಾದಷ್ಟು ಸಂಗ್ರಹಿಸಿ ಹೇಳಿ ಈ ಲೇಖನದ ಪರಿಸಮಾಪ್ತಿ ಮಾಡಿಬಿಡುವೆವು.

"ವರಂತು ವಿದ್ಯಾ ತಥಾ ತಥಾ ವಿಘ್ನಂ ಭವತಿ" ಎಂದು ಭವಿಷ್ಯವಾಣಿ ನುಡಿದು ಭೀಮಸೇನರು ಅದರ ಪರಿಹಾರಕ್ಕಾಗಿ ಸರಸ್ವತಿಯ ಒಲವನ್ನು ಸಂಪಾದಿಸಲು ಒಂದು ಸಂಜೀವಿನಿಯನ್ನು ಉಪದೇಶಿಸಿದ್ದರಲ್ಲವೇ ? ಬಸವನ ಗೌಡ್ಯಾನು ಅತಿ ನಿಷ್ಠೆಯಿಂದ ಅನವರತ ಸುಬಹ ಔರ್ ಶ್ಯಾಮ್ ಕುಮಾರವ್ಯಾಸನ ವಾರಿಜಾಸನೇ ಸಕಲ ಶಾಸ್ತ್ರ ವಿಚಾರದುದ್ಭವೇ...ಆದಿ ತನ್ಮಯನಾಗಿ ಪಠಿಸುತ್ತಿದ್ದನು. ಹೀಗೆ ಒಂದು ದಿನ ಅವನಿಗೆ ಜ್ಞಾನೋದಯವಾಯಿತು.

ಅಂದು ಬೆಳಗ್ಗೆ !...ಎರಡನೆಯ ಮಾರ್ಚಿಗೆ ಹಣಕಟ್ಟುವ ಬೆಳಗ್ಗೆ, ವಾರಿ ಜಾಸನೇ ಅನ್ನುತ್ತಾ ಸರಸ್ವತಿ ಇನ್ನೂ ಒಲಿಯಲಿಲ್ಲವಲ್ಲಾ ಎನ್ನುತ್ತಿರುವಾಗ ಲಕ್ಷ್ಮಿ ಒಲಿದಳು. ಅದೇನೋ ಒಂದು ತರಹ ದೇಹಪೂರ ವಿದ್ಯುತ್ಪ್ರವಾಹ ಹರಿದಂತೆ ಭಾಸವಾಯಿತು. ಒಂದು ಕ್ಷಣ. ಮರು ಕ್ಷಣದಲ್ಲಿ ಬಸವನ ಗೌಡ್ಯಾನಲ್ಲಿ ಒಂದು ವಿಚಿತ್ರ ಪರಿವರ್ತನೆಯಾಗಿದ್ದಿತು, "ಕುರಿತೋದದೆಯುಂ ಕೆರೆ ಕುಂಟೆ ಮೇಣ್ ಭವ್ಯ ಭವ್ಯ ಮಹಲುಗಳಂ ನಮ್ಮವರ್ ನಾಡರ್ಕರ್ ಕಟ್ಟಿದರ್, ತಾಜಮಹಲು, ಕುತಬಮೀನಾರು, ಟಿಪ್ಪೂಸುಲ್ತಾನ ಪ್ಯಾಲೇಸು, ರೆಡ್ ಫೋರ್ಟು, ಬೇಲೂರು,



ಹಳೇಬೀಡು ಮೇಣ್...ಇನ್ನೇನು ? ಇನ್ನೇನು ?" ಎಂಬಂತೆ ಅಶರೀರವಾಣಿಯೊಂದರ ಅಂಬೋಣ, ಬಸವನ ಗೌಡ್ಯಾನು ಎದ್ದನು. ಪರೀಕ್ಷೆಯ ಅರ್ಜಿಪತ್ರವನ್ನು ಹರಿದೆಸೆದನು. ಪುಸ್ತಕಗಳನ್ನು ಜೋಡಿಸಿ ಸೆಲ್ಫಿನಲ್ಲಿಟ್ಟನು. ಪೂರ್ವಿಕರಿಗೆ ಇಂಜಿನಿಯರಿಂಗ್ ಡಿಗ್ರಿ ಯಾರೂ ಕೊಡಲಿಲ್ಲ. ಅಂತಹುದರಲ್ಲಿ ಇಂದಿನವರು ಅಚ್ಬಾ ಎನ್ನುವ ಎನ್ನುವ ಅದ್ಭುತ ಪವಾಡಗಳನ್ನು ಅವರು ಮಾಡಿ ತೋರಿರುವರು.

ಕಾವೇರಿ ಪೂರದಿಂದ ಸುತ್ತಮುತ್ತಲ ಹಳ್ಳಿಗಳ ಸರ್ವನಾಶವಾಗಿ ನಿರಾಶ್ರಿತರಿಗೆ ವಸತಿ ನಿರ್ಮಾಣ ಕಾರ್ಯಕ್ಕೆ ಪಂಚಾಯಿತಿಯವರು ಟೆಂಡರ್ ಕರೆದಿದ್ದರು, ಅದು ಬಸವನ ಗೌಡ್ಯಾನಿಗೆ ದಕ್ಕಿತು. ನಂತರ ನಗರದಲ್ಲಿ ಮಂತ್ರಿಗಳ ಭೇಟಿಯಾಯಿತು. ಸಿಮೆಂಟು ಚೀಲಗಳು ಗೌಡ್ಯಾನ ಗೋಡೋನಿಗೆ ರಾಶಿ ರಾಶಿಯಾಗಿ ಬಂದು ಬಿದ್ದವು. ಮತ್ತೆ ಮಾಯವಾಗುತ್ತಿದ್ದವು. ಕಾಡುಗಳನ್ನು ಸೀಳಿಸಿ, ಬಾವಿಗಳನ್ನು ತೋಡಿಸಿ ...ಅಹ ! ಕುರಿಹಟ್ಟಿ ಬಸವನ ಗೌಡ್ಯಾನ ಕಾರ್ಯಕಲಾಪಗಳನ್ನು ಈ ಬಡ ಲೇಖನಿ ಏನು ಬಣ್ಣಿಸುವುದು ?....ದೊಡ್ಡ ಯೋಜನೆಗಳಲ್ಲಿ ಈತನದು ಮುಖ್ಯ ಪಾತ್ರ. ನೂರಾರು ಲಾರಿಗಳು ಇವನ ಮನೆಯ ಸುತ್ತ ಓಡಾಡಿದವು. ಇವನ ಜೊತೆ ಇಂಜನಿಯರಿಂಗ್ ಸೇರಿ ಡಿಗ್ರಿ ಪಡೆದವರೆಲ್ಲಾ ಮೂಗಿನ ಮೇಲೆ ಬೆರಳಿಟ್ಟುಕೊಂಡರು– ಈತ ಮುಖ್ಯ ಮಂತ್ರಿಯವರ ಬಗಲಲಿ ಕೈಹಾಕಿ Spot investigation ಗೆ ಬಂದಾಗ ಅವರೆಲ್ಲಾ ಸರ್ಕಾರಿ ನೌಕರರು. ನೂರಿನ್ನೂರರ ಸಿಬ್ಬಂದಿಗಳು.

ಕಂಟ್ರಾಕ್ಟರ್ ಕುರಿಹಟ್ಟಿ ಬಸವನ ಗೌಡ್ಯಾನರ ಅದ್ಭುತ ಗಾಥಾ ಮುಗಿಯುವಲ್ಲಿಗೆ, ಅಗೋ ನೋಡಿರಿ ಮರಳೀ ಗುಡ್ಡದ ಮೇಲಿಂದ ದೂರದಲ್ಲಿ ಗುಡ್ಡದೆತ್ತರಕ್ಕೆ ಬೆಳೆದಿರುವ ಭವ್ಯ ಭವನವೊಂದುಂಟಲ್ಲ ! ಅದೇ ಬಸವನ ಗೌಡ್ಯಾನರ ನಿವಾಸ. ಗೃಹ ತಟಾಕ ನಿರ್ಮಾಪಕರಲ್ಲಿ ಅಗ್ರಗಣ್ಯರು! ಹದಿನೈದನೇ ಪಂಚವಾರ್ಷಿಕ ಯೋಜನೆಯಲ್ಲಿ ಕೊಳ್ಳೇಗಾಲದ ಕಾವೇರಿ ಯೋಜನೆ ಏನಾದರೂ ಸೇರಿದರೆ, ಕಾವೇರಿಯಿಂದ ಇವರ ಭವನಕ್ಕೆ ಕಾಲುವೆಯನ್ನು ತೋಡಿಸಿಯಾರು ! ಮನೆಯ ಅವರಣದಲ್ಲೇ ಬೃಂದಾವನ ಗಾರ್ಡನ್ಸ್ ಕಟ್ಟ್ಯಾರು !

ಧನ್ಯ ಕಂಟ್ರಾಕ್ಟರ್ ಕುರಿಹಟ್ಟಿ ಬಸವನ ಗೌಡ್ಯಾ !



# "ನಕ್ಕಾಂವಾ ಗೆದ್ದಾಂವಾ"

## ಬೆದರು

ಶೀನ (ಶ್ರೀನಿವಾಸ ವೈದ್ಯ)

**ಆ** ಮಾತು ನಡದು ಸುಮ ಸುಮಾರು ನಾಲ್ವತ್ತು ವರಷ ಆಗತ ಬಂತು. ಆವಾಗ ನಾ ಎಂಟಹತ್ತು ವರುಷದ ಸಾಲಿ ಹುಡುಗ ಇದ್ದೆ. ಇಷ್ಟ ವರಷ ಆದಮ್ಯಾಲ ಸಹಿತ ಅದೆಲ್ಲ ಹೆಂಗ ಹಂಗs ಹಂಗs ನಿಚ್ಚಳಾಗಿ ನಿನ್ನೆ ನಡದವರ್ಹಂಗ ನೆನಪಿನ್ಯಾಗದ.

ಆವಾಗ ನಾವು ಧಾರವಾಡದಾಗ ರವಿವಾರ ಪೇಟದ ಹತ್ತಿರ ಘಾಳೀ ಓಣಿ ಹಿಂದ ಕವಳೀಕಾಯಿ ಓಣಿಯೊಳಗ ಇರತಿದ್ವಿ. ನಮ್ಮ ಅಪ್ಪಾರುs ಕನ್ನಡ ಸಾಲೀ ಮಾಸ್ತರ ಇದ್ದರು. ಹಿಂಗಾಗಿ ಓಣಿಯೊಳಗ ನಮಗ ಒಂದಿಷ್ಟು ಇಬ್ಭ್ರತ್ ಇತ್ತು. ಹಿರೇಮರ ಮಾಸ್ತರ ಮನೀ ಎಲ್ಲೈತಿ ಆಂದ್ರ ಓಣ್ಯಾಗ ಯಾರಾದರೂ ತೋರಸ್ತಿದ್ದರು. ಆಗಿನ ಕಾಲಕ್ಕ ಸಾಲೀ ಮಾಸ್ತರಗಳಿಗೆ ಕಿಮ್ಮತ್ತು ಇತ್ತು. ಕನ್ನಡ ಸಾಲೀ ಮಾಸ್ತರಿಗೆ ಸಹಿತ !

ದೇಶಕ್ಕೆ ಸೊತಂತ್ರ ಸಿಕ್ಕು ಎರಡು ಮೂರು ವರಷ ಆಗಿತ್ತು. ಅಷ್ಟೊತ್ತಿಗಾಗಲೇ ಗಾಂಧಿನ್ನ ಹೊಡೆದು ಕೊಂದಿದ್ರು. ಆದರ ಸಹಿತ ಏನಾರ ಒಂದೀಟ ಸಣ್ಣ ಪುಟ್ಟ ಆದ ಕೂಡಲೇ, ಮಂದಿ ರೂಢಿ ಬಲದ ಮ್ಯಾಲೆ "ಘಾಂದೀಜಿ ಕಿ ಜೈ" "ಬಾರತ ಮಾಥಾ ಕಿ ಜೈ" ಅಂತ ಒದರ್ಯಾಡತಿದ್ದರು. ಆವಾಗಿನ್ನೂ "ಕರ್ನಾಟಕ ಮಾತಾ"ಂದು ಅಷ್ಟ ಧಾಂಧಲೇ ಇದ್ದಿದ್ದಿಲ್ಲ. ಹಂಗಾಗಿ ಜನ ಎಲ್ಲ ತಮ್ಮ ತಮ್ಮ ಊರಾಗ ಸುಕದಿಂದ ಇದ್ದರು.

ಊರಾಗಿನ ತಿಳದ ಮಂದಿ "ಜವಾಹರಲಾಲ ನೆಹರೂ," "ಫಾರಿನ್ ಪಾಲಿಸಿ" "ಪಂಚಶೀಲ" "ಇಂಡೋ ಚೈನಾ" "ಸುಯೇಜ ಕ್ಯಾನಲ್" ಅಂತ ಏನೇನೋ ಮಾತನಾಡತಿದ್ದರು. ತಿಳೀದೇ ಇದ್ದ ಮಂದಿ ಎಂದಿನಗತೇನ "ಜೋಳ ತುಟ್ಟಿ ಆಗ್ಯಾವ" "ಮಳೀ ಲಕ್ಷಣ ಇಲ್ಲ" "ಈ ಸರೇ ವೈಶಾಖ ಮಾಸದಾಗ ಲಗ್ಗಣ ಮುಹೂರ್ತನs ಇಲ್ಲ" ಅನಕೋತ ಯಥಾಪ್ರಕಾರ ಅಳಬುರುಕ ತನದ ಮಾತನಾಡತಿದ್ದರು. ಊರಾಗಿನ್ನೂ ಸಿಟಿ ಬಸ್ಸು ಬಂದಿದ್ದಿಲ್ಲ. ಮಂದಿ ಎಲ್ಲಿ ಬೇಕಂದಲ್ಲೆ ನಡಕೋತ ಅಡ್ಡ್ಯಾಡತಿದ್ದರು. ಊರಾಗ ಹಾರೂರು, ಲಿಂಗಾಯಿತರು, ಮುಸಲರೂ ಎಲ್ಲಾರು ಅಣ್ಣ ತಮ್ಮಂದಿರ ಗತೆ ಬಡದಾಡಿಕೋತ ಪ್ರೀತಿಯಿಂದ ಇದ್ದರು.

ಬ್ಯಾನೀಬ್ಯಾಸರಕೀ ಬಂದ್ರ ಮಂದಿ ತಮ್ಮಷ್ಟಕ್ಕೆ ತಾವs ಸಾಯ್ತಿದ್ರ ಹೊರತು ದಾಕ್ಟರ ಕೈಯಾಗ ಸಿಕ್ಕು ಸಾಯತಿದ್ದಿಲ್ಲ. ಇವತ್ತಿನಷ್ಟು ಜಡ್ಡs ಆವಾಗಿದ್ದಿದ್ದಿಲ್ಲ. ಜಡ್ಡಿನ ಹೆಸರೂ ಮಂದಿಗೆ ಗೊತ್ತಿದ್ದಿದ್ದಿಲ್ಲ. "ಹೊಟ್ಟಾಗ ಗಂಟ ಆಗಿ ಸತ್ತs" "ಮಲಿಕಟ್ಟಿನಂತ್ಯಾಕ ಹುಣ್ಣಾಗಿ ಸತ್ತಳು" ಅಂತ ಮಾತನಾಡಿಕೋತಿದ್ದರು. ಹಾಂಗ ನೋಡಿದರ ಇಷ್ಟೊಂದು ಡಾಕ್ಟರs ಇರಲಿಲ್ಲ. ಇದ್ದ ಒಬ್ಬಿಬ್ಬ ಡಾಕ್ಟರ ಸಹಿತ ಏನs ಬ್ಯಾನಿ ಬಂದರೂ ಮಲಾಮು ಕೊಟ್ಟು ಗುಣ ಮಾಡತಿದ್ದರು. ಕೆಮ್ಮು ಬಂದರೂ ಮಲಾಮು. ಕ್ಯಾನ್ಸರ್ ಆದರೂ ಮಲಾಮು.



ಹುಡುಗೂರು ಮಾಸ್ತರಿಗೆ ಅಂಜತಿದ್ದರು. ಮಾಸ್ತರು ಹುಡುಗೂರಿಗೆ ಅಂಜತಿದ್ದರು.

ಒಟ್ಟs ಮೂಚುಯಲ್ ರಿಸ್ಪೆಕ್ಟ್ ಇತ್ತು. ವಿದ್ಯಾರ್ಥಿಗಳು ಪರೀಕ್ಷಾದಾಗ ಹೆದರಿಕೋತ ಬೆದರಿಕೋತ ಕದ್ದೂ ಮುಚ್ಚಿ ಕಾಪಿ ಮಾಡುತಿದ್ದರು. ಈಗಿನ ಹಂಗ ಖುಲ್ಲಂ ಖುಲ್ಲಾ ಮಾಡುತಿದ್ದಿಲ್ಲ. ಕಾಲೇಜು ಹುಡುಗುರು ವಾಯಿಝುಮ ಹಾಕ್ಕೊಂಡು ಸಾಯಕಲ್ ಮ್ಯಾಲೆ ಆಡ್ಯಾಡತಿದ್ದರು. ಆವಾಗ ಅವರು ಬರೇ ಸಿಗರೇಟು ಸೇದತಿದ್ದರು. ಇನ್ನೂ ಕುಡಿಯಲಿಕ್ಕೆ ಹತ್ತಿದ್ದಿಲ್ಲ. ಪಾನ ಬೀಡಿ ಅಂಗಡ್ಯಾಗ ಮಟಕಾದ ನಂಬರ ಬರಕೋತಿದ್ದರು. ಕಾಟಾ ಕಳೀಲಿಕ್ಕೆ ಬೀಡಿ ಸಿಗರೇಟ ಅಷ್ಟs ಮಾರುತ್ತಿದ್ದರು. ಈಗಿನ್ಹಂಗ ನಿರೋಧ ಮಾರತಿದ್ದಿದ್ದಿಲ್ಲ.




ಮುನಸೀಪಾಲಿಟೀ ಕಂಪೌಂಡ್ ಗ್ವಾಡೀ ಸುತ್ತ ಒಂದಿಂಚ ಜಾಗಾ ಬಿಡಧಂಗ "ಬೇಡರ ಕಣ್ಣಪ್ಪ" ಮತ್ತು "ಹಾತಿಮ ತಾಯಿ ಕಾ ಬೇಟಾ" ಸಿನಿಮಾಗಳ ಪೋಸ್ಟರು ಹಚ್ಚಿ ಬಿಟ್ಟಿದ್ದರು.

ಬ್ರಿಟಿಶರ ದರ್ಪದ 'ಕಡಕ' ಆಳಿಕೆ ಆದs ಮುಗಿದಿತ್ತು. ಹಿಂಗಾಗಿ ಮಂದಿ ಇನ್ನೂ ಕಾಯ್ದೆಕ್ಕs ಪೋಲೀಸರಿಗೆ ಹೆದರತಿದ್ದರು. ಒಂದs ಮಾತಿ – ನ್ಯಾಗ ಹೇಳಬೇಕಂದ್ರ ಆವಾಗ ಲ್ಯಾಫಿಗೆ ಇನ್ನೂ ಒಂದೀಟು ಸ್ಯಾಂಕ್ಟಿಟಿ ಇತ್ತು. ಆದರೂ ಅಲ್ಲೊಬ್ಬರು ಇನ್ನೊಬ್ಬರು ಗೂಂಡಾಗಳೂ ರೌಡಿಗಳೂ ತಲೀ ಎತ್ತಾಕ ಚಾಲೂ ಮಾಡಿದ್ದರು.

ಧಾರವಾಡದ ರವಿವಾರ ವೇಟದ ಹತ್ತಿರದ ಫಾಳೀ ಓಣೀ ಹಿಂದ ಕವಳೀ ಕಾಯಿ ಓಣ್ಯಾಗ ನಾವು ಇರೋವಾಗ ನಮ್ಮ ಮನೀ ಮುಂದಿನ ಒಂದು ಹಳೇ ಹಾಳಬಿದ್ದ ಮನೀ ಒಳಗ "ಮೀಶಿ ಮುರಿಗೆಪ್ಪ" ಅಂತ ಒಬ್ಬಾಂವ ಗೂಂಡಾ ಬದ್ಮಾಷ ಸೂಳೆಮಗ ಇರತಿದ್ದ. ಹಾಂಗ ನೋಡಿದರ ಕವಳೀಕಾಯಿ ಓಣಿ ಒಳ್ಳೆ ಮಂದಿ ಓಣಿ ಇತ್ತು. ಓಣಿ ಒಳಗ ಮಾಸ್ತರೂ, ವಕೀಲರೂ, ಸರಕಾರೀ ನೌಕರದಾರ್ರೂ ಮತ್ತೂ ಒಬ್ಬಿಬ್ಬರು ಕಥಿ ಕವನ ಬರೆಯೋ ಅಪಹಾತರೂ, ಹಿಂಗ ಉಳದ ಮಂದೆಲ್ಲ ಛೊಲೋ ಸೂಳೆ ಮಕ್ಕಳs ಇದ್ದರು. ಆದರ ಮೀಶಿ ಮುರಿಗೆಪ್ಪ ಒಬ್ಬಾಂದ ಎಲ್ಲಿಂದ ಹೊಕ್ಕೊಂಡಿದ್ದನೋ ಹೊಕ್ಕೊಂಡಿದ್ದ. ಇಲ್ಲ ಅನಲಾರದ್ದಕ್ಕೆ ಓಣೀ ಕೊನೆಗೆ ಕವಳೀಕಾಯಿ ಓಣೀ ಫಾಳೀ ಓಣೀ ಕೂಡೋ ಅಲ್ಲೆ "ಬೆಟಗೇರಿ" ಚಂದ್ರಿದೊಂದು ಸಣ್ಣ ಮನೀ ಇತ್ತು. ಅದರ ಬೆಟಗೇರಿ ಚಂದ್ರಿ ಎಷ್ಟೆಂದರೂ ಹೆಣ್ಣ ಹೆಂಗಸು, ಹ್ಯಾಂಗಾರ ಮಾಡಬಹುದಾಗಿತ್ತು. ಆದರ ಈ ಮೀಶಿ ಮುರಿಗೆಪ್ಪಂದ ಹಾವಳಿ ಬಹಾಳ ಆಗಿತ್ತು,


ಮುರಿಗೆಪ್ಪ ಹ್ಯಾಂಗಿದ್ದ ಅಂದರ, ಕಂಸ ಕುಂಬಕರ್ಣ ಮಾರೀಚ ಮಹಿಷಾಸುರ

ಹಾಗೂ ಸರೋಜಿನಿ ನಾಯ್ಡು ಇವರನ್ನೆಲ್ಲ ಕೂಡಿಸಿ ಭಟ್ಟಿಗೆ ಹಾಕಿ ಎರಕ ಹೊಯ್ದು ಅಚ್ಚ ಹಾಕಿಸಿದರ ಹ್ಯಾಂಗಿರಬೇಕೋ ಹಾಂಗಿದ್ದ. ಹೊಚ್ಚ ಹೊಸ ಹೋಳೀ ಹೊಡಿಸಿದ ಬಿಸೂಕಲ್ಲಿನ್ಹಂಗ ಮಾರೀ ತುಂಬ ಮೈಲೀ ಕಲೆ ಇದ್ದವು. ಕರೇ ಬೋಗೋಣಿ ಹಂತs ಮಾರಿ. ಅರ್ಧಕ್ಕರ್ಧ ಮಾರಿ ಮುಚ್ಚೋಹಂಗ ಕಲ್ಲೀ ಮೀಶಿ, ಬಲಗಣ್ಣು ರಾವರಾವ ಇದ್ದರ ಎಡಗಣ್ಣು ಅತೀ ಚಿಕ್ಕದು, ಹಣೀಮ್ಯಾಗ ಎಡಗಣ್ಣಿನ ಹಂತ್ಯಾಕ ಎರಡಿಂಚಿನಷ್ಟು ಉದ್ದನೆ ಆಳ ಗಾಯದ ಗುರುತು, ಪರಾತಧಂಗ ಹರವಾದ ಕೂದಲು ತುಂಬಿದ ಎದಿ, ಕುಟ್ಟಿ ಕುಟ್ಟಿ ಮಾಡಿಸಿದಂತ ಕಲ್ಲಿನ ಮೈ, ಸೊಂಟದಾಗ ಯಾವಾಗ್ಲೂ ತೂಗಾಡ್ತಿರೋದು ಒಂದು ಚೂರಿ, ಅಂತೂ ಅವನ ವೃತ್ತಿಗೆ ತಕ್ಕಂತೆ ಮೀಶಿ ಮುರಿಗೆಪ್ಪ ಅಕರಾಳ ವಿಕರಾಳ ಆಗಿದ್ದ. ಅಷ್ಟೊತ್ತಿಗಾಗಲೇ ಅಂವ ನಾಕಾರು ಖೂನೀ, ಏಳೆಂಟು ದರೋಡೆ, ಹತ್ತಿಪ್ಪತ್ತು ಮಾನಭಂಗ ಇತ್ಯಾದಿ ಪ್ರಕರಣಗಳಲ್ಲಿ ಸಾಕಷ್ಟು ಪ್ರಸಿದ್ಧಿಗೆ ಬಂದಿದ್ದ. ಅಂವ ಹೊರಗಿರೋದರಕಿಂತ ಒಳಗಿರೋದು ಹೆಚ್ಚು. ಆದರ ಯಾವಾಗ್ಯಾವಾಗ ಹೊರಗ ಇರತಿದ್ದನೋ ಆವಾಗೆಲ್ಲ ಊರ ಮಂದಿಗೆ ತಲಿಬ್ಯಾನಿ ಆಗಿರತಿದ್ದ.

ಮೀಶಿ ಮುರಿಗೆಪ್ಪ ಇಡೀ ಊರಿಗೆ ಸಿಂಹಸ್ವಪ್ನ ಆಗಿದ್ದ. ಅಂವ ದಾರಿಯೊಳಗ ಎದುರಿಗೆ ಬರತಿದ್ದ ಅಂದ್ರ, ಸಣ್ಣ ಹುಡುಗೂರು ಉಚ್ಚೀ ಹೋಯ್ಕೊತಿದ್ದರು. ಹೆಣ್ಣ ಮಕ್ಕಳು ಚೀರಿಕೊಂಡು ಅಕ್ಕಪಕ್ಕದವರ ಮನೆಗಳಲ್ಲಿ ಹೊಕ್ಕೊಂಡು ಬಾಗಲಾ ಹಾಕ್ಕೊಂತಿದ್ದರು. ಗಂಡಸರು ಸಹಿತ ಅವನ್ನ ನೋಡಿದ್ರ ಗಲ್ಲಿ, ಸಂದಿಗೊಂದಿಗಳ ಒಳಗೆ ಹೊಕ್ಕು ತಲೆ ಮರೆಸಿಕೋತಿದ್ರು.

ಮುರಿಗೆಪ್ಪ ಯಾರಿಗ್ಯಾರ ದರಕಾರ ಮಾಡತಿದ್ದರ ಅದು ಊರಿನ ಫೋಜದಾರ ಉಳವಿ ಉಗ್ರಪ್ಪಗ ಒಂದs, ಉಗ್ರಪ್ಪ ರೂವದಾಗ ಮತ್ತು ಮನೋವೃತ್ತಿಯೊಳಗ ತೇಟ ಮೀಶಿ ಮುರಿಗೆಪ್ಪನ ಹಾಗಇದ್ದ. ಅಂವ ಖಾಖಿಡ್ರಸ್ ಹಾಕ್ಕೊಂಡು ಫಟ ಫಟಿ ಮ್ಯಾಗ ಮಂದಿನ್ನ ಹೆದರಸ್ತಿದ್ದ, ಇಂವ ಹಂಗ ಹೆದರಸ್ತಿದ್ದ. ಅಷ್ಟ ಫರಕು. ಧಾರವಾಡಕ್ಕ ವರ್ಗ ಆಗಿ ಬಂದ ಒಂದ ತಿಂಗಳದಾಗ ಬೆಟಗೇರಿ ಚಂದ್ರಿ ಫೋಜದಾರ ಉಗ್ರಪ್ಪ ಇಟಗೊಂಡ ಹೆಂಗಸಾದಳು. ಹಾಂಗ ನೋಡಿದರ ಉಗ್ರಪ್ಪ ಧಾರವಾಡಕ್ಕ ವರ್ಗ ಆಗಿ ಬರೋಕಿಂತ ಮುಂಚೆ ಚಂದ್ರಿ ಮೀಶಿ ಮುರಿಗೆಪ್ಪಗs ಸಾಮಿಲಾಗಿದ್ದಳು. ಚಂದಾಗಿ ಗೆಣಿತನ ಇತ್ತು. ಆದರ ಎಷ್ಟೆಂದರೂ ಫೋಜದಾರ ಫೋಜದಾರನs. ಹಿಂಗಾಗಿ ಖಾಖಿಡ್ರೆಸ್ ಹಾಕ್ಕೊಂಡು ಫಟ ಫಟ ಮ್ಯಾಗ ಬಂದು ಸ್ವತಃ ಉಗ್ರಪ್ಪನs ಮೀಶಿ ತಿರುವಿಕೋತ ಮಾಗಣಿ ಹಾಕಿದಾಗ ಚಂದ್ರಿ ಮುರಿಗೆಪ್ಪನ್ನ ಉಗಳಿ ಉಗ್ರಪ್ಪನ ಹಿಂಬಾಲೆ ಹೋದಳು. ಮುರಿಗೆಪ್ಪಗ ಎದ್ಯಾಗೆ ಬೆಂಕಿ ಹಾಕಿದಂಗೆ ಆಗಿತ್ತು. ಆದರೇನು ಎಷ್ಟಂದರೂ ಫೋಜದಾರ ಯಾವಾಗೇನು ಮಾಡ್ಯಾನೋ ಹೇಳಾಕ ಬರಂಗಿಲ್ಲ. ಅಂಥೇಳಿ ಮುರಿಗೆಪ್ಪ ಬಾಲಾ ಮುಚ್ಚಿಗೊಂಡಿದ್ದ. ಆದರೂ ಒಳಗೊಳಗೆ ಹಲ್ಲ ಕಡೀತಿದ್ದ.

ಇನ್ನ, ಬೆಟಗೇರಿ ಚಂದ್ರಿ ಹ್ಯಾಂಗಿದ್ದಳಂದ್ರ, ಬೆಟಗೇರಿ ಚಂದ್ರೇರು ಹ್ಯಾಂಗಿರ ಬೇಕೋ ಹಾಂಗ ಇದ್ದಳು. ಯಾರಿಗಾದರೂ 'ಈಕಿನ್ನ ಇಟಗೋಬೇಕ' ಅನಸವರ ಹಂಗ ಇದ್ದಳು.



ಹೀಂಗ ಇರಬೇಕಾರ ಒಮ್ಮೆ ಏನಾತಂದ್ರ ಫೋಜದಾರ ಉಳಿವಿ ಉಗ್ರಪ್ಪ ಚಂದ್ರಿಗೆ ಒಂದು ರೇಡಿಯೋ ತಂದುಕೊಟ್ಟ. ಆವಾಗಿನ್ನೂ ಊರಾಗ ರೇಡಿಯೋ ಅಷ್ಟ

ಭಾಳ ಬಂದಿದ್ದಿಲ್ಲ. ಅಲ್ಲೊಂದು ಇಲ್ಲೊಂದು ಶ್ರೀಮಂತರ ಮನ್ಯಾಗ, ಮುನಸೀ ಪಾಲಟೀ ಚಾವಡ್ಯಾಗ ಇದ್ದಿರಬೇಕ ಅಷ್ಟs ಮಂದಿ ಇನ್ನೂ ರೆಡಿಯೋ ಹ್ಯಾಂಗಿರತೆ" ತಂತ ನೋಡಲಾಕ ಹೋಗತಿದ್ದರು. ಹಂತಾದರಾಗ ನಮ್ಮ ಓಣಿ ಕಡೀಕs ಚಂದ್ರಿ ಮನ್ಯಾಗನss ರೆಡಿಯೋ ಬಂತಂತ ಕೇಳಿ ಓಣಿ ಮಂದಿಗೆಲ್ಲ ಸಂತೋಷ, ದುಃಖ, ಹೊಟ್ಟೆಕಿಚ್ಚು ಎಲ್ಲ ಏಕಕಾಲಕ್ಕೆ ಸುರು ಆದುವು. ರೆಡಿಯೋ ನೋಡಲಿಕ್ಕೆ ಓಣಿ ಹುಡುಗರೆಲ್ಲ ಚಂದ್ರಿ ಮನಿ ಮುಂದ ಮುಕುರಲಿಕ್ಕೆ ಹತ್ತಿದರು. ಹೆಣ್ಣ ಮಕ್ಕಳು "ಅಯ್ಯs ಶಿವನs ಇಕೀಗತೆ ಇದ್ದರ ರೆಡಿವೇ ಒಂದs ಏನ. ವಿಮಾನ ಸುದ್ಧಾ ತರಬಹುದು" ಅಂತ ಮೂಗು ಮುರದ್ರು. ಗಂಡಸೂರು "ಹೇಳಿ ಕೇಳಿ ಪೋಲೀಸ, ಸಿಖ್ಖಂಗ ತಿಂತಾನss, ತರದs ಏನ ಮಾಡ್ಯಾನು ? ಇವತ್ತ ರೆಡಿಯೋ ತರತಾನು, ನಾಳೆ ಮೋಟಾರ ಕಾರೂ ತಂದಾನು" ಎಂದು ತಮ್ಮ ಕಿಚ್ಚನ್ನು ಕಾರಿದರು. ರೇಡಿಯೋದಿಂದ ಚಂದ್ರಿ ಖ್ಯಾತಿ, ಚಂದ್ರೀಯಿಂದ ರೆಡಿಯೋದ ಖ್ಯಾತಿ ಓಣಿ ತುಂಬೆಲ್ಲ ಬೆಳೀಲಿಕ್ಕೆ ಹತ್ತಿತು.

ಒಮ್ಮೆ ಮೀಶಿ ಮುರಿಗೆಪ್ಪ ಚಂದ್ರಿ ಮನೀ ಮುಂದ ಹಾಯ್ದು ಹೋಗಬೇಕಾರ, ಬಿನ್ನಾಣಗಿತ್ತಿ ಚಂದ್ರಿ ಅವನ್ನ ನೋಡಿ ಬೇಕಂತs ರೇಡಿಯೋದ ಆವಾಜ ದೊಡ್ಡದು ಮಾಡಿ, ಕೆಣಕು ನಗೆ ನಕ್ಕು "ಮುರಿಗೆವ್ವಣ್ಣಾ ರೆಡಿವೇ ನೋಡಿ ಚಾ ಕುಡದ ಹೋಗೀಯಂತ ಬಾ" ಎಂದು ಕರೆದಳು. ಚಂದ್ರಿನ್ನ ಕಳಕೊಂಡ ನೋವಿನಲ್ಲಿ ಮುರಿಗೆಪ್ಪ ಮೊದಲೇ ಹತಾಶನಾಗಿದ್ದ. ಹಂತಾದರಾಗ ಈ ಕೆಣಕಾಟದಿಂದ ಹುಚ್ಚಸಿಟ್ಟು ನೆತ್ತಿಗೇರಿಧಂಗಾಗಿ "ಏ ಹುಚ್ಚರಂಡೇ ನಿಮ್ಮಪ್ಪನಂತಹ ರೆಡಿವೇ ತರದಿದ್ದರ ನಾ ಮುರಿಗೆಪ್ಪನ ಅಲ್ಲ" ಅಂತ ನಡು ಬೀದಿಯೊಳಗs ಆಕೀ ಮನೀ ಮುಂದ ನಿಂತು ಮೀಶಿಮ್ಯಾಲ ಕೈ ತಿರುವಿ ಶೆಡ್ಡು ಹೊಡೆದ. ಚಂದ್ರಿ ಪಿಚಕ್ಕಂತ ಬಾಯ್ತುಂಬುಲವನ್ನ ಉಗಳಿ "ಅಯ್ಯ ನೋಡೇನ ಹೋಗೋ ಗಂಡ್ಸs, ಚುಟ್ಟಾಕ್ಕ ಆಣೆ ದೋನಣೆ ಕೇಳತಿದ್ದಿ ನನ್ನ ಹಂತ್ಯಾಕss ಹಂತಾವ ರೇಡಿವೇ ತರತಾನಂತ ರೇಡಿವ" ಎಂದು ಕಿಲ ಕಿಲನೆ ಭಾಂಡೆ ಬಿದ್ದವರಂಗ ನಗಾಕ ಹತ್ತಿದಳು. ಕೂಡಿದ ಮಂದಿನೂ ಮುಸು ಮುಸು ನಕ್ಕರು.

ಸರಿ, ಮುಂದೇನು ಮಾಡಿದನೋ ಮಾಡಿದ. ಮರುದಿವಸ ಮುಂಝೂನೆ ಮೀಶಿ ಮುರಿಗೆಪ್ಪನ ಹಾಳಮನೀ ಕಟ್ಟೀಮ್ಯಾಲ ಒಂದು ದೆವ್ವನಂತಹ ರೇಡಿಯೋ ಝೆುಂಡಾ ಹಾಕಿತ್ತು. ಮೊದಲss ಭೀಮನಾಕಾರದ ರೆಡಿಯೋ, ಅದರ ಧನಿ ಸಹಿತ ಖಡಕ್ಕಾಗಿ ಇಡೀ ಊರಿಗೆಲ್ಲ ಕೇಳಸವರ್ಧಂಗ ಇತ್ತು. ಮುರಿಗೆಪ್ಪ ಕಟೀಮ್ಯಾಗ ಕುಂತು, ಬಾಜೂಕಿನ ರೆಡಿಯೋದ ಮ್ಯಾಲ ಪ್ರೀತಿಯಿಂದ ಬಲಗೈ ಅಡಿಸ್ಕೋತ, ಎಡಗೈಲೇ ಮೀಸಿ ಚೂಪ ಮಾಡಿ ತಿರವಿಕೋತ, ದಾರಿ ಮ್ಯಾಗ ಹೋಗೋ ಒರೋ ಮಂದಿ ಕಡೆ ಹೆಮ್ಮೆಯಿಂದ "ಹೆಂಗೈತಿ" ಅಂತ ಸನ್ನೆಯಿಂದನ ಕೇಳಲಿಕ್ಕೆ ಹತ್ತಿದ. ಸರಿ ಮದಲನೇ ದಿವ್ಸ ಕವಳೀಕಾಯಿ ಓಣಿವೂ ಆಜೂ ಬಾಜೂ ಓಣಿವೂ ಹುಡುಗರು ಮುರಿಗೆಪ್ಪನ ಮನೀಮುಂದ "ಹೋ" ಅಂತ ಮುಕರಲಿಕ್ಕೆ ಸುರು ಮಾಡಿದವು. ಆದರ ಅವನ ಮೀಶಿಗೆ ಹೆದರಿ ನಾವೆಲ್ಲ ಹುಡುಗರು ಧೂರಿಂದನs ಗದ್ದಲಾ ಮಾಡಲಾಕ ಹತ್ತಿದ್ದಿವಿ. ಒಬ್ಬರ ಮ್ಯಾಲ ಒಬ್ಬರು ಬೀಳೋದುs. ಮೊಣಕೈಲೇ ದುಗಸೂದುs ಅಂಗೀಜಗ್ಗಿ ಹಿಂದ ಸರಸೂದು, ಒಂದ ಎರಡss. ? ಹುಡುಗರದೇನು ಬಂತು ? ದೊಡ್ಡವರ ಸಹಿತ ಒಂದಿಲ್ಲೊಂದು ನೆವ ತಕ್ಕೊಂಡು ಮುರಿಗೆಪ್ಪನ ಮನಿ ಮುಂದ ಸುಳಿದಾಡಾಕ ಹತ್ತಿದರು. ಒಟ್ಟಿನ ಮ್ಯಾಲ ಕಿಚಿ ಕಿಚಿ ಗದ್ದಲ ಆತು. ರಸ್ತೆದ



ಮ್ಯಾಗ ಮಂದಿಗೆ ಅಡ್ಡ್ಯಾಡೋದು ಕಟಿಣ ಆತು.

ಮಡೀಲೇ ಗುಡಿಗೆ ಹೊಂಟಿದ್ದ ಗೋಪಾಲಾಚಾರಿನ್ನ ಯಾವನೊ ಮುಸಲರ ಹುಡುಗ ಮುಟ್ಟಿಬಿಟ್ಟಾಂತ ದೊಡ್ಡರುಗಳಲ್ಲಿನ ಆತು. ವತ್ತಾರ ಪಾರೋ ತೆಕ್ಕ ತೆಲೀಮ್ಯಾಲ ದೊಡ್ಡ ಕೊಡ ನೀರು ತುಂಬಿಕೊಂಡ ಹೊಂಟಾಕಿ ಗದ್ದಲದಾಗ ಕಾಲಮ್ಯಾಲ ಕೊಡ ಚೆಲ್ಲಿಕೊಂಡು ಚೀರ್ಯಾಡಿ ಅಳಾಕ ಹತ್ತಿದಳು. ದಿನಧಂಗ ಪಾಟೀಲ ವಕೀಲರು ಟಾಂಗಾದಾಗ ಕೋರ್ಟಿಗೆ ಹೊಂಟಿದ್ದರು. ಹುಡುಗರ ಗದ್ದಲಕ್ಕ ಮತೂ ರೇಡಿಯೋದ ಒದರ್ಯಾಟಕ್ಕ ಟಾಂಗಾದ ಕುದರಿ ಬೆದರಿ "ಹೆ...ಹೆ...ಹ" ಅಂತ ಹಿಂಗಾಲಮ್ಯಾಲ ನಿಂತು ಕೆನೆದು ಒಮ್ಮಿಗಿಲೇ ರಸ್ತೆದ ಮ್ಯಾಗ ಕಾಲುಮಡಿಚಿ ಕುಂತ ಬಿಟ್ಟಿತು. ಕುದರಿ ನೆಲದ ಮ್ಯಾಲ ಕುಂತ ಕೂಡಲೇ, ಕುದರಿ ಕೆಳಗ, ವಕೀಲರು ಮ್ಯಾಲೆ ಆದರು. ಅದ ವ್ಯಾಳ್ಯಾಕ್ಕ ಗೌಡರ ಆಳು ದನ ಹೊದಕೊಂಡು ಬಂದ. ಆಕಳಾ, ಎಮ್ಮಿ, ಕರಾ, ಮಣಕಾ ಎಲ್ಲ ದನದ ಹಾದಿಗೆ ಬಂದು, ಮುರಿಗೆಪ್ಪನ ಮನೀ ಮುಂದ ಗಾಬರ್ಯಾಗಿ ನಿಂತಬಿಟ್ಟವು. ಒಂದ ಕಥೆ ರೆಡಿವೇದ ಕಿರಿಚಾಟ, ಹುಡುಗರ ಗದ್ದಲ, ಇನ್ನೊಂದ ಕಡೆ ಕೆಳಗಿನ ಕುದರಿ ಕೆಳಗss ಮ್ಯಾಗಿನ ವಕೀಲರು ಮಾಗss ಇದನ್ನೆಲ್ಲ ನೋಡಿ ದನಾ ಎಲ್ಲ ದಿಕ್ಕೆಟ್ಟು "ಅಂಬಾ" ಅಂತ ಒದರಿಕೋತ ದಾರಿ ಸಿಕ್ಕಲ್ಲೆ ಓಡಲಿಕ್ಕೆ ಹತ್ತಿದವು. ದನಗೋಳನ್ನ ನೋಡಿ ಮಂದೆಲ್ಲ ಸತ್ತೆನೋ ಕೆಟ್ಟೆನೋ ಅಂತ ಬಿದ್ದಕೋತ ಎದ್ದಕೋತ ಓಡಾಕ ಹತ್ತಿದರು.

ಆಂತೂ ಮೀಶಿ ಮುರಿಗಪ್ಪನ ರೆಡಿಯೋ ಸ್ಟೇಶನ್‌ದ ಉದ್ಘಾಟನೆ ಜೋರಾಗೇ ಆತು. ಆ ಮ್ಯಾಲೆ ರೆಡಿಯೋ ಒಂದಳತೀ ಬಿಟ್ಟೂ ಬಿಡದ ಒದರಿಕೊಳ್ಳಲಿಕ್ಕೆ ಹತ್ತಿತು. ಮುಂಝೂನೆ, ಮಧ್ಯಾನ್ಹ, ಸಂಜೆ, ರಾತ್ರಿ ಯಾವಾಗಂತೀರಿ ಆವಾಗ ರೆಡಿಯೋನ ರೆಡಿಯೋ, ಮಂದಿಗೆಲ್ಲ ತಲಿ ಚಿಟ್ಟು ಹಿಡಿದು ಹುಚ್ಚ ಹಿಡಿಯೋದೊಂದು ಬಾಕೀ ಉಳಿತು.

ಮುಂಜಾನೆ ಏಳ ಏಳೂತಲೆ ಸುರು ಆಗುತಿತ್ತು ವಣಕ್ಕುಂ ವಣಕ್ಕುಂ ಅಮ್ಯಾಲೆ ಎಂಟಗಂಟೇಕ್ಕ ಸೈಗಲನ ಪದ. ಆದಾದ ಮ್ಯಾಲ ಗರ ಗರಕ್ ಗುರ್ರ್ ಗುರ್ರ್ ಅದಾದ ಮ್ಯಾಲ ಮುಂಗಾರಿ ಮಳೆ ಬಿತ್ತನೆ" ಅಥವಾ "ಹಿಂಗಾರಿ ಮಳಿ ಕೆತ್ತನೆ" ಅಂತ ಏನೋ ಹುಚ್ಚುಚ್ಚುರ. ಭಾಷಣ ಮಧ್ಯಾನ್ಹಕ್ಕ ಹೆಣ್ಣು ಮಕ್ಕಳಿಗೆ "ಗೃಹಲಕ್ಷ್ಮಿ ಸಂಜೆ ನಾಲ್ಕು ಗಂಟೆಕ್ಕ ದಕ್ಷಿಣ ಭಾರತ ಸಂಗೀತ ಸಭಾದಾಗ "ವಂಡೀsss ಒಗೆ ವಂಡೀss" "ನೀ ಸೀತಾರಾಮುಲು ಕಲ್ಯಾಣಮು ಸೂತಮುರಾರಂಡಿ" ಹಿಂತಾವೇನೋ ತೆಲಗೋ ತಮಿಳೋ ಪದs ಇದರ ನಡನಡಕ ಒಂದೊಂದು ಕನ್ನಡ ವದಾನೂ ಇರತಿದ್ದವಂತs. ಆದರ ಆ ಕನ್ನಡ ನಮಗೆ ತಿಳೀತಿದ್ದಿಲ್ಲ. ಆ ಮ್ಯಾಲ ಒಂದ್ಯಾವದಾರೂ ನಾಟಕ. ನಾಟಕ ಯಾವದs ಇದ್ದರೂ ದನೀ ಮಾತ್ರ ಅವs ಅವs ಇರತಿದ್ವು. ನಾಟಕದಾಗ ಮಾತಾಡವರ ಧನಿ, ಸಾಲೀ ಹುಡುಗರ ಗ್ರಾಫ್‌ದಂಗ ಒಮ್ಮೆ ಮ್ಯಾಗ ಹೋಗುತಿತ್ತು, ಒಮ್ಮೆ ಕೆಳಗ ಇಳೀತಿತ್ತು. ಗಂಡೂ ಹೆಣ್ಣು, ಹೆಣ್ಣ ಗಂಡು ಕೂಡಿ ಅಳತಿದ್ದವು ಒಮ್ಮೆ "ನೀನೇಕೆ, ಎನ್ನನಗಲಿದೆ ನಲ್ಲೆ ?" ಅಂತ ಅತ್ತರs ಇನ್ನೊಮ್ಮೆ "ನಿನ್ನ ಕಟಿಗೊಂಡು ನಾ ಸಾಯಲಾರೆನಲ್ಲೆ" ಅಂತ ಅಳತಿದ್ದರು ಒಟ್ಟು ನಾಟಕ ಅಂದ್ಕೂಡಲೇ ಅಳೋದು, "ಹ್ಯೊಂ" ಅಂತ ಅಳೋದು. ಆಮ್ಯಾಗ "ವಾರ್ತೆಗಳು ಓದುತ್ತಿರುವವರು ರಾಜಪ್ಪ ಶೆಟ್ಟಿ... ಉತ್ತರದಲ್ಲಿ ಭೂಕಂಪ... ದಕ್ಷಿಣದಲ್ಲಿ ಅನುಕಂಪ... ಆಹಾರಪರಿಸ್ಥಿತಿ ಗಂಭೀರ...ಅಂತ ಮತ್ತೂ ಮತ್ತೂ ಅವs ಸುಳ್ಳ ಹೇಳುತಿದ್ದರು. ಅಮ್ಯಾಗ ಒಬ್ಬಾಂವ ಯಾವನೋ "ನ್ಯೂಸ ಇನ್ ಇಂಗ್ಲೀಷ್, ಬೈ ಸಿಸಿಲ್ ಬಿ ಡೆಮಿಲಿ" ಅಂತ ಗೊಗ್ಗರ



ದನಿಲೇ ತೇಟ ಇಂಗ್ಲೀಷನವರ ಗತೇನ ಯಾರಿಗೂ ತಿಳೀಧಂಗ ಮಾತನಾಡತಿದ್ದ. ಮತ್ತ ಭಾಷಣ ಮತ್ತ ಸಂಗೀತ. ಕಡೀಕ ಮತ್ತೊಂದೀಟ ಗೊರ ಗೊರ್ರ್ ಗುರ್ರ್ ಗುರ್ರ್ ಆ ಮ್ಯಾಕ ಮುಗಿಯೋ ಮುಂದ "ನಮೋ–ನಮೋ ನಮೋ ಲಂಕಾ.... ಅಂಬೋ ಪದಾ  ಹೇಳಿ ರೇಡಿಯೋ ಬಂದ ಆಗತಿತ್ತು. ಮರು ದಿವ್ಸ ಮತ್ತ ಏಳ ಏಳೂತ್ತಲೇ "ವಣಕ್ಕುಂ... ವಣಕ್ಕುಂ..."

ಅಂತೂ ಮೊದಲಿನೆರಡು ದಿನದ ಉಮೇದಿ ಇಳಿದ ಮ್ಯಾಲ ಓಣಿಂತ ಓಣಿ ಮಂದಿಗೆಲ್ಲ ತಲಿ ಚಿಟ್ಟ ಹಿಡಧಂಗಾತು. ಜನ ಎಲ್ಲ ಒಬ್ಬರ ಮ್ಯಾಲ ಒಬ್ಬರು ಹರಿ ಹಾಯಾಕ ಹತ್ತಿದರು. ನಾಯಿ ಬೆಕ್ಕು ಸಹಿತ ಗೊಳೋ ಅಂತ ಅಳಾಕ ಸುರುಮಾಡಿದವು. ಒಂದು ಗಂಡು ಕತ್ತೆ ಪಾಪ ಏನು ತಿಳಿಕ್ಕೊಂಡಿತ್ತೋ ಏನೋ ರೆಡಿಯೋದ ಮುಂದೆ ನಿಂತುಕೊಂಡು ಪ್ರೇಮಾಲಾಪ ಮಾಡೇಮಾಡ್ತು. ಕಡಿಕ ಕಿವ್ಯಾಗ ಗಾಳಿಹೊಕ್ಕ ವರ್ಥಂಗ ಹಿಂಗಾಲ್ಗೇ ಒದಕೋತ ಓಡಿ ಹೋತು. ಓಣ್ಯಾಗ ದನಾ ಪನಾ ಸಹಿತ ಆಡ್ಡ್ಯಾಡಧಂಗಾದವು. ಬೆಳೆಯೋ ಹುಡುಗರು ಸುಂದಾದರು. ಬೆಳೆದ ದೊಡ್ಡವರು ಮಂದಾದರು.

ಏನಾದರೇನು ಮೀಶಿ ಮುರಿಗೆಪ್ಪಗ ರೆಡಿಯೋ ಬಂದ್ ಮಾಡಂತ ಹೇಳೋ ಛಾತೀವಾನ್ ಗಂಡಸು ಆವಾಗ ಇಡೀ ಊರಾಗs ಯಾರೂ ಇದ್ದಿದ್ದಿಲ್ಲ. ಓಣಿ ಮಂದೆಲ್ಲ ಫೋಜದಾರ ಉಗ್ರಪ್ಪಗ ತಕರಾರು ಹೇಳಬೇಕಂತ ಚಂದ್ರೀ ಮನಿಗೆ ಡೆಪ್ಯೂಟೇಶನ್ ತಕ್ಕೊಂಡು ಹೋದರು. ಫೋಜದಾರ ಎಂಟ ದಿನ ಟೂರ ಮ್ಯಾಗ ಹೋಗ್ಯಾನ ಅಂತ ತಿಳೀತು. ಮತ್ತೆರಡ ದಿನ ಕಳೀತು. ಕುಲಕರ್ಣಿ ರಂಗಣ್ಣನ ಹೆಂಡತಿ ಚಂಪಕ್ಕ–ರೆಡಿವೇದ ಒದರ್‍ಯಾಟಕ್ಕ ನರ್ವ್ಹಸ್ ಆಗಿ ಏಳರಾಗ ಹಲಿವುಳಿದಳು. ಪಿಂಜಾರ ಹುಶೇನ ಸಾಬನ ಮನ್ಯಾಗ ಮುದಿಕಿ ಎರಡ ವರಷದಿಂದ ಹಾಸಿಗಿ ಹಿಡಿದದ್ದು ಗೊಟಕ್ ಅಂತು.

ಇದೆಲ್ಲ ನಡೆದಾಗ ಮೀಶಿ ಮುರಿಗೆಪ್ಪ ಮಾತ್ರ ಮೀಶಿ ತಿರವಿಕೊಂತ ಚಂದ್ರಿ ಮನಿ ಮುಂದ ಆ ಕಡಿಂದ ಇ ಕಡೆ ಇಕಡೆದಿಂದ ಆ ಕಡೆ ಅಡ್ಡ್ಯಾಡೇ ಅಡ್ಡ್ಯಾಡತಿದ್ದ.

ಅಂತೂ ಕಡೀಕೆ ಓಣಿ ಮಂದೆಲ್ಲ ಬ್ಯಾಸತ್ತು ಜೋಯಿಸರ ಅಂತಪ್ಪನ್ನ ಕೇಳಿ ಊರ ಮುಂದಲ ದುರ್ಗವ್ವನ ಗುಡಿಗೆ ನೀರ ಹಾಕಬೇಕಂತ ಗಟ್ಟಿ ಮಾಡಿಕೊಂಡರು. ದುರಗವ್ವಗೊಂದು ದ್ಯಾಮವ್ವಗೊಂದ ಹಿಂಗ ಎರಡೆರಡು ಇಳಕಲ್ಲ ಸೀರಿ ರಬಕವಿ ಕಣ ತರಬೇಕಂತ ಮಾತಾತು, ಮತ್ತು ಬ್ಯಾಂಡು, ಡೊಳ್ಳು ಪ್ರಸಾದ ಹಿಂಗ ಒಟ್ಟ ಎಲ್ಲಾ ಖರ್ಚಿನ ಬಾಬು ಹಂಚಿಗೋಬೇಕಂತ ಮನಿ ಮನೀಗೆ ಪಟ್ಟಿ ಕೂಡಸಾಕ ಅಡ್ಯಾಡಾಕ ಹತ್ತಿದರು.

ಎರಡ ದಿವ್ಸದಿಂದ ಮುರಿಗೆಪ್ಪನೂ ಕಟೀಮ್ಯಾಗ ಕಾಣತಿದ್ದಿಲ್ಲ. ಎಲ್ಲಿ ಇರತಿದ್ದನೋ, ರೇಡಿವೇ ಮಾತ್ರ ಒಂದಳತೀ ಹೊಯ್ಕೊಂತಿತ್ತು.

ಆಗ ಆ ಘಟನಾವಳಿ ನಡದದ್ದು !



ಓಣಿ ಮುಂದೆಲ್ಲ ನಾಳೆ ಶುಕ್ರಾರ ದುರಗವ್ವಗ ನೀರ ಹಾಕೋದಂತ ಮಾತ ನಾಡಿಕೊಂಡಿದ್ದರು. ಅದರ ಹಿಂದಿನ ದಿನ ಸಂಜೀಕೆ ನಾನೂ ನಮ್ಮ ಅವ್ವಾರೂ ಈರಬದ್ರ ದೇವರ ಗುಡಿಗೆ ಹೋಗಿ ಹೊಳ್ಳಿ ಮನೀಗೆ ಬರಾಕ ಹತ್ತಿದ್ದೆವು. ಆವಾಗ ಎಲ್ಲಿದ್ದನೋ ಇದ್ದ ಮುರಿಗೆಪ್ಪ, ಅವನ ಹಾಳ ಮನೀ ಹತ್ತಿರ ಟಣ್ಣಂತ ಜಿಗಿದು

ಬಂದು ನನ್ನ ಕೈ ಹಿಡಕೊಂಡು "ವಿರಪಾಕ್ಷಿ ಒಂದೀಟ ಕೆಲಸೈತಿ ಬಾ" ಅಂತ ಎಳಕೊಂಡು ಹೊಂಟ. ಮುರಿಗೆಪ್ಪ ನನ್ನ ಎಳಕೊಂಡು ಹೊರಟದ್ದನ್ನ ನೋಡಿ ನಮ್ಮವ್ವ "ಯಾಕೋ ನಿನ ಮಂಜಾಳ ಹೋಗss ನಮ್ಮ ಹುಡುಗನ್ನ ಬಿಡತೀಯೋ ಇಲ್ಲೊ...ಅಯ್ಯಯ್ಯೋ... ಯಾರಾರ ಬರ್ರೆಪೊ... ಅಂತ ಎದೀ ಎದೀ ಬಡಕೊಂಡ ಅಳಾಕ ಹತ್ತಿದಳು. ನಾನೂ ಕೈ ಕೊಸರಿಕೋಂತ "ಹೋಂ" ಅಂತ ಆತಗೋತ ರಂಭಾಟ ಮಾಡಾಕ ಹತ್ತಿದೆ. ಅಷ್ಟೊತ್ತಿಗೆ, 'ಹಿರೇಮರ ಮಾಸ್ತರ ಮಗ ಇರ ಪಾಕ್ಷಿನ್ನ ಮೀಶಿ ಮುರಿಗೆಪ್ಪ ಹಿಡಕೊಂಡ ಹೊರಟಾನ "ಅಂಬೋ ಸುದ್ದಿ ಓಣಿ ತುಂಬ ಹಬ್ಬಿ ಜನ ಕೂಡ್ಲಾಕ ಹತ್ತಿದರು. ಒಂದಿಬ್ಬರು ಮುದಕರು "ಏ... ಏ... ಮುರಿಗೆಪ್ಪ... ಹಂಗಲ್ಲ ತಗಿ... ಹಂಗಲ್ಲ... ಪದ್ಧತಿ ಅಲ್ಲ ತಗಿ... ಅನಕೋತ ಮುರಿಗೆಪ್ಪನ ಬೆನ್ನ ಹತ್ತಿದರು ಧೂರಿಂದ. ಅವನ ಸುತ್ತೂ ಕಡೆ ಭಾಳ ಮಂದಿ ಕೂಡಿ ಒದರ್ಯಾಟ ಚೀರಾಟ ಮಾಡಾಕ ಹತ್ತೂತಲೇ ಮುರಿಗೆಪ್ಪ ಟೊಂಕದಾಗಿನ ಚಾಕೂ ಹಿರಿದು ನಿಂತ, ಚಾಕೂ ನೋಡೂತ್ಲೆ ಮಂದಿ ಹೆದರಿ ಎರಡ ಹೆಜ್ಜೆ ಹಿಂದೆ ಸರಿದರು. ನಮ್ಮವ್ವ ಗಾಬರ್ಯಾಗಿ ಇನ್ನೂ ಎದಿ ಎದಿ ಬಡಕೊಂತ ಮುರಿಗೆಪ್ಪಗ ಶಾಪ ಹಾಕಾಕ ಹತ್ತಿದಳು.

ಮುರಿಗೆಪ್ಪ ಏನಾದ್ರೂ ನನ್ನ ಕೈ ಬಿಡದs ನನ್ನ ಒಯ್ದು ರೇಡಿವೇದ ಮುಂದ ನಿಂದರಿಸಿ, ಮೋತಿ ಸಣ್ಣದು ಮಾಡಿ, ರಮಿಸೋ ದನಿಯೊಳಗ, "ವಿರಪಾಕ್ಷಿ ನಿನಗ ಅಟ್ಟೇರು ಕರದಂಟು ಕೊಡಸ್ತೇನಂತ, ಇವನಾಪನs ಈ ರೇಡಿವೇ ಒಂದೀಟ ಬಂದ ಮಾಡಿ ಕೊಡಪ್ಪ: ನಾಕುದಿನ ಆತು ತಲಿಬ್ಯಾನಿ ಬಂದು ಹೊಗೈತಿ. ಮಕ್ಕೊಂಡಾಗೂ ಕರಾ ಕರಾ ಮಾಡತಿರತೈತಿ. ಏನಾರ ಮಾಡಿ ಈ ರೇಡಿವೇ ಬಂದ ಮಾಡಿ ಒಗಿ ಇವನಾಪನs... ಎಂದು ದೈನಾಸಬಟ್ಟ. ಕೂಡಿದ ಜನ ಎಲ್ಲ ಬೆಕ್ಕಸ ಬೆರಗಾಗಿ ನೋಡಾಕ ಹತ್ತಿದರು. ಅಷ್ಟೊತ್ತಿಗೆ ನನಗೂ ಒಂದೀಟು ಹೆದರಿಕಿ ಬಿಟ್ಟು ಧೈರ್ಯ ಬಂದಿತ್ತು. ಚಂದ್ರೀ ಮನ್ಯಾಗ ಒಂದೆರೆಡು ಸಲ ಅಕಿ ರೇಡಿವೆ ಹಚ್ಚೋದನ್ನ ಬಂದ ಮಾಡೋದನ್ನ ನೋಡಿದ್ದೆ. ಅದು ಧೈರ್ಯಾದ ಮ್ಯಾಗ ರೇಡಿವೇದ ಬಟನ್ ಯಾವ ಯಾವದೋ ಎತ್ತೆತ್ತಾಗೋ ತಿರವಾಕ ಹತ್ತಿದೆ. ಮುರಿಗೆಪ್ಪ ದೂರಿಂದ ನೋಡಿ ಕೋತ "ಜ್ವಾಕಿ ಆಂ ಜ್ವಾಕಿ, ಶಾಕ ಹೊಡದೀತು" ಅನ್ನಾಕ ಹತ್ತಿದ್ದ. ಕಡೀಕ ರೇಡಿವೇ ಗರ ಗರ ಗ್ಯುಂ ಗುಡರ್ ಧುಡಧುಡರ್ರ್ ಅನಕೋತ ಕಟ್ ಅಂತ ಬಂದಾತು ಕೂಡಿದ ಮಂದೆಲ್ಲ "ಹೋ" ಅಂತ ಹರ್ಮೋದ್ಗಾರ ಮಾಡಿದರು. ಹುಡಗೂರು ಚಪ್ಪಾಳಿ ಹಾಕಿ ಕುಣ್ಯಾಕ ಹತ್ತಿದರು. ಕೂಡಿದ ಮಂದ್ಯಾಗ ನನ್ನ ಕಿಮ್ಮತ್ತ ಹೆಚ್ಚಾತು ಹಂಗs ಮೀಶಿ ಮುರಿಗೆಪ್ಪನ ಮಾನ ಮುಕ್ಕಾಗಿ ಮೀಶಿ ಇಳೀತು. ಹೆಂಗಸೂರು ಮುರಿಗೆಪ್ಪನ್ನ ನೋಡಿ ಸೆರಗು ಮುಚ್ಚಿಕೊಂಡು ನಗಾಕ ಹತ್ತಿದರು. ಹುಡುಗೂರು ದೊಡ್ಡವರು ಓಪನ್ನಾಗೆ ನಗಾಕ ಹತ್ತಿದರು. ಅರ್ಧ ತಾಸಿನ್ಯಾಗ ರೇಡಿವೇ ಬಂದಾದ ಸುದ್ದಿ ಓಣಿತುಂಬ ಹಬ್ಬಿತು.

ಅಷ್ಟೊತ್ತಿಗೆ ಎಲ್ಲಿದ್ದಲೋ ಏನೋ ಚಂದ್ರಿ, ಭಾಂಡೆ ಬಿದ್ದವರ ನಗೀ ನಕ್ಕೊಂತ ಬಂದ್ಲು, ಮುರಿಗೆಪ್ಪನ ಮನೀ ಮುಂದ ನಿಂತು, "ಮುರಿಗೆದ್ದಣ್ಣಾರss ಇನ್ನ ಆ ಮೀಶಿ ಬೋಳಿಸಿ ಬಿಡ್ರಿ, ಒಂದ ರೇಡಿವೇ ಆರಸಾಕ ಇಷ್ಟ ಸಣ್ಣ ಹುಡಗನ್ನ ಕರೀಬೇಕಾತss ಇನ್ನ ನಾಳೆ ಯಾತ್ಯಾತಕ ಯಾರ್‍ಯಾರ್‍ನ ಕರೀತಿಯೋ ಗಂಡ್ಸss ಊರ ಗಂಡ್ಸ" ಎಂದು ಕಿಲಕಿಲಾಡಿಸಿ ನಕ್ಕಳು.



ಮೀಶಿ ಮುರಿಗೆಪ್ಪ ಅಷ್ಟೊತ್ತಿಗೆ ಅಪಮಾನದಿಂದ ಕುದ್ಯಾಕ ಹತ್ತಿದ್ದ. ರೇಡಿವೇ ಬಂದ ಮಾಡಲಿಕ್ಕೆ ಬಾರದ ನೋವು, ಕೂಡಿದ ಜನರ ಎದುರಿಗೆ ಅಪಹಾಸ್ಯ... ಚಂದ್ರಿ ನಗೀ ಎಲ್ಲ ಕೂಡಿ ಅವನ್ನ ಹುಚ್ಚಿಗೆಬ್ಬಿಸಿದವು. ಅಂವ ಒಮ್ಮೆ ವೆಟ್ಟ ತಿಂದ ಹುಲೀಹಂಗ "ಏss... ಅಂತ ಒದರಿ ಒಳಗೋಡಿ ಹೋದ ಒಂದ ಮಿನೀಟ ಬಿಟ್ಟು ಹಂಗ ಒದರಿಕೊಂತನs ಹೊರಗ ಬಂದ. ಕೈಯಾಗ ಕೊಡ್ಲಿ ಇತ್ತು. ಮುರಿಗೆಪ್ಪನ ರುದ್ರ ಅವತಾರ, ಕೆಂಪಗಣ್ಣು, ಕೆಯಾಗಿನ ಕೊಡ್ಲಿ ನೋಡಿ ಮಂದೆಲ್ಲ ದಿಕ್ಕಾಪಾಲಾಗಿ ಓಡಾಕ ಹತ್ತಿದರು. ನಾನೂ, ನಮ್ಮವ್ವ, ಚಂದ್ರೀ ಮಾತ್ರ ಓಡಾಕ ಸಹಿತ ಬರಧಂಗ ಕಾಲಾಗಿನ ಶಕ್ತಿ ಕಳಕೊಂಡು ಅಲ್ಲೇ ನಡಗಿಕೋತ ಬೇರ ಬಿಟ್ಟು ನಿಂತಬಿಟ್ಟಿದ್ವಿ.

ಮೀಶಿ ಮುರಿಗೆಪ್ಪ ಎರಡೂ ಕೈಯಾಗ ಕೊಡ್ಲಿ ಹಿಡಕೊಂಡು ಇನ್ನೊಮ್ಮೆ "ಹೋss" ಅಂತ ಒದರಿಕೊಂಡ. ಆ ಮ್ಯಾಲ ಆ ಕಡೆ ಈ ಕಡೆ ನೋಡಿ ಕಟ್ಟೀ ಮ್ಯಾಲಿನ ರೇಡಿವೇ ಎಡಗಾಲಿಂದ ಜೋರಾಗಿ ಒದ್ದ. ರೇಡಿವೇ ಅಂಗಳದಾಗ ಬಿದ್ದ ಕೂದಲೇ, ಹುಚ್ಚಸಿಟ್ಟಿನ್ಯಾಗ ತಾನೂ ಕಟ್ಟಿಯಿಂದ ಜಿಗಿದು ಉರವಲ ಕಟಿಗೀ ಕಡಧಂಗ ರೇಡಿವೇ ಕಡಿಯಾಕ ಹತ್ತಿದ. ಎರಡು ಮಿನೀಟಿನ್ಯಾಗ ರೇಡಿವೇ ಚೂರು ಚೂರಾತು. ಆಮ್ಯಾಲ ಮುರಿಗಪ್ಪ ಕೈಯಾಗಿನ ಕೊಡಲಿ ಅಂಗಳದಾಗ ಬೀಸಿ ಒಗದು "ಹೋ...ಹೋ...ಹೋ... ಅಂತ ದೊಡ್ಡ ದನೀಲೇ ಆತಗೊಂತ ಮಾರಿ ಮುಚಿಗೊಂಡು ಓಡಿಹೋದ. ಹೋದಂವ ಹೋಗೇ ಬಿಟ್ಟ.

ಆ ಮ್ಯಾಲ ಮುರಿಗೆಪ್ಪನ ಧಾರವಾಡದಾಗ ಯಾರೂ ನೋಡ್ಲಿಲ್ಲ.



# ಅಡ್ರೆಸ್ ಬದಲಿಸಿರುವ ಮಾಡರ್ನ್ ಡ್ರೆಸ್

ಪ್ರೀತಿ ಎಮ್ ಸಂಗಮ್

**ಕೆ**ಲವು ವರ್ಷಗಳ ಹಿಂದೆ ನನ್ನ ಸ್ನೇಹಿತೆನನ್ನನ್ನು ಭೇಟಿ ಮಾಡಲು ಬಂದಳು. ತುಂಬಾ ವರ್ಷಗಳ ನಂತರ ಭೇಟಿಯಾಗಲು ಬಂದಿದ್ದ ಅವಳನ್ನು ಸ್ವಾಗತಿಸಲು ಬಾಗಿಲಲ್ಲಿ ನಿಂತ ನನಗೆ, ಅವಳ ಮುಖದ ಕಡೆಗೆ ಹರಿಯಬೇಕಾಗಿದ್ದ ದೃಷ್ಟಿ ಮೊದಲು ಅವಳು ಧರಿಸಿದ್ದ ವಿಚಿತ್ರ ಉಡುಪಿನ ಮೇಲೆ ಹರಿದಿತ್ತು. ಒಂದು ಕ್ಷಣ ಅವಳ ಡ್ರೆಸ್ ನೋಡಿ  ಶಾಕ್ ಆಯ್ತು. ಇದೇನಿದು! ಮನೆಯಲ್ಲಿ ಧರಿಸುವ ಲಂಗದ ಮೇಲೆ ಕುರ್ತಾ ಹಾಕಿಕೊಂಡು ಬಂದಿದ್ದಾಳಲ್ಲ! ಗಂಡಸರು ಮನೆಯಲ್ಲಿ ಧರಿಸುವ ಬರ್ಮುಡಾ ಮೇಲೆಯೇ ಒಂದು ಟೀಶರ್ಟ್ ಧರಿಸಿ ಇಡೀ ಊರು ಸುತ್ತುವ ಹಾಗೆ ಹೆಂಗಸರೂ ಕೂಡ ಮನೆಯಲ್ಲಿ ನೈಟಿ/ಸಾರಿ ಒಳಗೆ ಧರಿಸುವ ಲಂಗದ ಮೇಲೆ ಒಂದು ಕುರ್ತಿ ಧರಿಸಿ ಊರು ಸುತ್ತುವ ಹೊಸ ಫ್ಯಾಶನ್ ಶುರುವಾಯ್ತಾ ಹೇಗೆ ಅಂತ ಮನದಲ್ಲಿಯೇ ಅಂದುಕೊಂಡೆ. ಆದರೆ ಮಹಿಳಾಮಣಿಗಳು ಫ್ಯಾಷನ ವಿಷಯದಲ್ಲಿ ಎಂದೂ ಆಲಸ್ಯ ತೋರುವವರಲ್ಲ ಎಂದು ತಿಳಿದು ಬಹುಶಃ ಗಡಿಬಿಡಿಯಲ್ಲಿ ಲಂಗ ಬದಲಿಸಿ ಪ್ಯಾಂಟ್ ಧರಿಸಲು ಮರೆತಿರಬಹುದು. ಅವಳಿಗೆ ಇದನ್ನು ತಿಳಿಸಿದರೆ ಎಷ್ಟು ಮುಜುಗರ ಪಡ್ತಾಳೋ ಏನೋ ಅಂತ ತುಂಬಾ ವೇಗವಾಗಿ ಓಡುತ್ತಿರುವ ನನ್ನ ಮನದ ವಿಚಾರಧಾರೆಗೆ ಕೀಲಿ ಜಡಿದು ನನ್ನ ದೃಷ್ಟಿಯನ್ನು ಅವಳ ಮುಖದ ಕಡೆಗೆ ತಿರುಗಿಸಿ ನನ್ನ ತುಟಿಯಂಚಿನಲ್ಲಿ ಸಂತೋಷದ ನಗೆಯನ್ನು ಬೀರುತ್ತಾ ಅವಳನ್ನು ಸ್ವಾಗತಿಸಲು ಅಣಿಯಾದೆ.

ಮನೆಯ ಮುಂದಿರುವ ಪಾವಟಣಿಗೆಯ ಮೇಲೆ ಅವಳು ತನ್ನ ಒಂದು ಕಾಲನ್ನು ಎತ್ತಿಟ್ಟಾಗಲೇ ನನಗೆ ತಿಳಿದದ್ದು ಅವಳು ಧರಿಸಿದ್ದು ಲಂಗ ಅಲ್ಲ, ಲಂಗದ ತರಹ ಕಾಣುವ ಪ್ಯಾಂಟ್ ಎಂದು. ಅದನ್ನು ಲಂಗ ಎಂದು ತಿಳಿದು, ಅದನ್ನು ಅವಳಿಗೆ ತಿಳಿಸಿ ಅವಳನ್ನು ಮುಜುಗರ ಸ್ಥಿತಿಗೆ ಒಡ್ಡುವುದು ಬೇಡವೆಂದು ನನ್ನ ಬಾಯಿಗೆ ಬೀಗ ಜಡಿದದ್ದು ಒಳ್ಳೆಯದೇ ಆಯ್ತು. ಆ ವಿಷಯ ಪ್ರಸ್ತಾಪ ಮಾಡಲು ಬಾಯಿ ತೆರೆದಿದ್ದರೆ ಮಾಡರ್ನ್ ಡ್ರೆಸ್ ಬಗ್ಗೆ ಅಪ್ಡೇಟ್ ಆಗದಿದ್ದಕ್ಕೆ  ಮುಜುಗರ ಪಡುವ ಸ್ಥಿತಿ ನನ್ನದಾಗಿರುತ್ತಿತ್ತು ಎಂದು ಸಮಯಕ್ಕೆ  ಒದಗಿದ ನನ್ನ ಸಮಯಪ್ರಜ್ಞೆಗೆ ಮನದಲ್ಲೇ ಬೀಗಿದೆ.

ಆಗಷ್ಟೇ ಮಾರುಕಟ್ಟೆಗೆ ಲಗ್ಗೆ ಹಾಕಿದ್ದ, ಲಂಗದ ತರಹ ಕಾಣುವ ಈ ಪ್ಯಾಂಟ್‌ನ ಕೆಳಭಾಗದಲ್ಲಿ ಅರಮನೆಯಂತಹ ವಿಶಾಲವಾದ ಅಳತೆಯನ್ನು ಹೊಂದಿದ್ದಕ್ಕೆ  ಇದನ್ನು 'ಪಲಾಝೋ' ಎನ್ನುತ್ತಾರೆ ಎಂದು ಗೊತ್ತಾಗಿದ್ದು ಆನಂತರವೇ. ಲೆಗ್ಗಿಂಗ್ಸ್‌ನ ವಿರುದ್ಧಾರ್ಥಕ ಪದವೇ ಪಲಾಝೋ ಅಥವಾ ಅಂಬ್ರೆಲಾ ಟಾಪ್ಸ್‌ನ ಸಮಾನಾರ್ಥಕ ಪದವೇ ಪಲಾಝೋ ಎಂದರೆ ತಪ್ಪಾಗದು. 'ಪಲಾಝೋ' ಎನ್ನುವುದು ಇಟಾಲಿಯನ್ ಶಬ್ದ. ಪಲಾಝೋ ಎಂದರೆ ಅರಮನೆಯ ಕಟ್ಟಡ ಎಂದರ್ಥ. ನಿಜಕ್ಕೂ ಹೆಸರಿಗೆ ತಕ್ಕ ಹಾಗೆ ಇದು ಅರಮನೆಯೇ ಸರಿ. ಅರಮನೆಯಲ್ಲಿ ವಾಸಿಸದಿದ್ದರೇನಂತೆ, ಅರಮನೆಯಷ್ಟು ವಿಶಾಲವಾಗಿರುವ ಪ್ಯಾಂಟ್ ಹಾಕಿಕೊಂಡು ರಾಣಿಯ ಹಾಗೆ ಮಿಂಚಿದರೆ ಸಾಕಲ್ಲವೇ!



ಮೊದಲೆಲ್ಲ ಸಾರಿ ಬ್ಲೌಸ್ ಹಾಗೂ ಬೇರೆ ಡ್ರೆಸ್‌ಗಳ ಕೊರಳಿನ ಆಕಾರಗಳಲ್ಲಿ ಮಾತ್ರ 'ಯು' ಶೇಪ, 'ವ್ಹಿ' ಶೇಪ ಡಿಸೈನ್ ಅಂತೆಲ್ಲಾ ಇತ್ತು. ಈ ಫ್ಯಾಶನ್

ಯುಗದಲ್ಲಿ ಆವಿನ್ಯಾಸಗಳು ದಿರಸಿನ ಕೊರಳನ್ನು ದಾಟಿ ದಿರಸಿನ ಕೆಳ ಅಂಚಿನಲ್ಲಿಯೂ ತಮ್ಮ ಸ್ಥಾನವನ್ನು ಪಡೆದಿದೆ. ಚೂಡಿದಾರ ಟಾಪ್ ಇರಬಹುದು, ಅಥವಾ ದೊಡ್ಡವರು ಹಾಕುವ ಲಾಂಗ್ ಅಥವಾ ಶಾರ್ಟ್ ಫ್ರಾಕ್‌ನ ಕೆಳಗಿನ ಅಂಚನ್ನು ಯು, ವ್ಹಿ ಅಥವಾ ಉಲ್ಟಾ ಯು, ಉಲ್ಟಾ ವ್ಹಿ ಆಕಾರದಲ್ಲಿ ಕತ್ತರಿಸಿ ಅದಕ್ಕೆ ಮಾಡರ್ನ್ ಟಚ್ ಕೊಡುವುದು ಈಗಿನ ಫ್ಯಾಶನ್. ಯು, ವ್ಹಿ ಆಕಾರದಲ್ಲಿರುವ ಉಡುಪು-ಗಳನ್ನು ಫ್ಯಾಶನ್ ಲೋಕದ ಮಿಡಲ್ ಕ್ಲಾಸ್ ಮಹಿಳೆಯರು ಧರಿಸಿದರೆ, ಉಲ್ಟಾ ಯು, ಉಲ್ಟಾ ವ್ಹಿ ಆಕಾರದಲ್ಲಿರುವ ಬೋಲ್ಡ್ ಉಡುಪುಗಳು ಫ್ಯಾಶನ್ ಲೋಕದ ಬೋಲ್ಡ್ ಮಹಿಳೆಯರ ಮೇಲೆ ರಾರಾಜಿಸುತ್ತವೆ.



ಆಗೆಲ್ಲಾ ಶನಿವಾರ ಮಾತ್ರ ಬೆಳಿಗ್ಗೆ ಶಾಲೆ ಇರುತ್ತಿತ್ತು. ಕಣ್ಣನ್ನು ಉಜ್ಜುತ್ತಾ ಶಾಲೆಗೆ ಹೋಗುವ ಗಡಿಬಿಡಿಯಲ್ಲಿ ಒಂದು ಕಾಲಿಗೆ ಒಂದು ತರಹ ಕಾಲುಚೀಲ, ಇನ್ನೊಂದು ಕಾಲಿಗೆ ಮತ್ತೊಂದು ತರಹ ಕಾಲುಚೀಲ ಹಾಕಿಕೊಂಡು ಶಾಲೆಗೆ ಹೋದಾಗ ಅದನ್ನು ಬೇರೆಯವರು ಗಮನಿಸಿದಾಗ ಮುಜುಗರ ಪಟ್ಟುಕೊಳ್ಳುವುದು ಸಾಮಾನ್ಯವಾಗಿತ್ತು. ಆದರೆ ಎಷ್ಟೇ ಗಡಿಬಿಡಿಯಿದ್ದರೂ ಒಂದು ಕಾಲಿಗೆ ಕಾಲುಚೀಲ ಧರಿಸಿ ಇನ್ನೊಂದು ಕಾಲಿಗೆ ಕಾಲುಚೀಲ ಧರಿಸದೇ ಇದ್ದದ್ದನ್ನು ಎಂದೂ ಕಂಡಿಲ್ಲ, ಕೇಳಿಲ್ಲ. ಆದರೆ ಹಿಂದೆಂದೂ ಯಾರೂ ಕಾಣಲಾರದ್ದನ್ನು, ಯಾರೂ ಊಹಿಸಲಾಗದ್ದನ್ನು, ಯಾರೂ ಕೇಳಲಾಗದ್ದನ್ನು ಕಣ್ಮುಂದೆ ತಂದಿಡುವುದೇ ಫ್ಯಾಶನ್ ಲೋಕದ ಮಂತ್ರ. ಹಾಗಾಗಿ ಈಗ ದಿರಿಸಿನ ತೋಳುಗಳಲ್ಲಿ ಮಿಸ್ಸಿಂಗ್ ಪರಿಕಲ್ಪನೆಯ ವಿನ್ಯಾಸ ಕಾಣುತ್ತೇವೆ. ಒಂದು ತೋಳು (ಸ್ಲೀವ್) ಯಾವುದೋ ಒಂದು ವಿನ್ಯಾಸದಲ್ಲಿದ್ದರೆ ಇನ್ನೊಂದಕ್ಕೆ ತೋಳೇ ಇರುವುದಿಲ್ಲ. ಒಂದು ತೋಳನ್ನು ಮಿಸ್ ಮಾಡುವುದೇ ಮಿಸ್ಸಿಂಗ್ ತೋಳಿನ ಪರಿಕಲ್ಪನೆ. ಇದು ಟೇಲರ್ ಗಡಿಬಿಡಿಯಲ್ಲಿ ಮಾಡಿದ ತಪ್ಪಲ್ಲ, ಹಾಗಾಗಿ ಇದನ್ನು ಧರಿಸಿದವರು ಮುಜುಗರ ಪಡುವ ಮಾತೇ ಇಲ್ಲ ಎನ್ನುವುದು ಬೇರೆ ಮಾತು.

ಇನ್ನು ಕೆಲವು ಡ್ರೆಸ್‌ಗಳ ಕೊರಳು ಶುರುವಾಗುವುದೇ ಭುಜದ ಕೆಳಗಿನಿಂದ. ಕೊರಳಿನ ಅಡ್ರೆಸ್ ಬದಲಾದರೆ ಅದಕ್ಕೆ ಹೊಂದಿಕೊಂಡ ತೋಳುಗಳ ಅಡ್ರೆಸ್ ಕೂಡ ಬದಲಾಗಬೇಕಲ್ಲವೇ. ಹಾಗಾಗಿ ತೋಳುಗಳು ಶುರುವಾಗುವುದು ಮುಂದೋಳಿಗಿಂತ ಸ್ವಲ್ಪ ಮೇಲಕ್ಕೆ. ಕೊರಳು ಇನ್ನೂ ಸ್ವಲ್ಪ ಕೆಳಗಿಳಿದರೆ ತೋಳು ಶುರುವಾಗುವುದೇ ಮೊಣಕೈಯಿಂದ. ಒಟ್ಟಿನಲ್ಲಿ ಕೊರಳು ಹಾಗೂ ತೋಳು ನೇರ ಅನುಪಾತದಲ್ಲಿ ಕೆಳಗಿಳಿಯುತ್ತಾ ಹೋಗುತ್ತವೆ.



ಸಾಮಾನ್ಯವಾಗಿ ಚೂಡಿದಾರ ಟಾಪ್‌ಗೆ ಎರಡು ಸ್ಲಿಟ್‌ಗಳು. ಎಡಕ್ಕೊಂದು,

ಬಲಕ್ಕೊಂದು ಸ್ಲಿಟ್ ಮಾಡಿದಾಗ ಅದಕ್ಕೆ ಎರಡು ಭಾಗಗಳಾಗುತ್ತವೆ, ಮುಂದಿನದು ಹಾಗೂ ಹಿಂದಿನದು. ಆದರೆ ಘಾಗ್ರಾ ಲೆಹೆಂಗಾ ಮೇಲೆ ಹಾಕುವ ಮೊಣಕಾಲು ಉದ್ದದ ಟಾಪ್ ಹೊಲೆಯುವ ಟೇಲರ್‌ಗೆ ಅದೆಂತಹ ಕೋಪವೋ ಏನೋ. ಎಲ್ಲಿ ಬೇಕೆಂದರಲ್ಲಿ ಕತ್ತರಿ ಪ್ರಯೋಗ ಮಾಡಿರುತ್ತಾನೆ. ಎಲ್ಲಿ ನೋಡಿದರಲ್ಲಿ ಸ್ಲಿಟ್‌ಗಳು. ಮುಂದೆರಡು, ಹಿಂದೆರಡರಂತೆ ಒಟ್ಟು ನಾಲ್ಕು ಸ್ಲಿಟ್‌ಗಳು. ಹಾಗಾಗಿಆ ಟಾಪ್‌ಗೆ ನಾಲ್ಕು ಭಾಗಗಳು. ಮುಂದೊಂದು, ಹಿಂದೊಂದು ಎಡಕ್ಕೊಂದು, ಬಲಕ್ಕೊಂದು. ಇದನ್ನು ಧರಿಸಿ ಗಾಳಿಯಲ್ಲಿ ಹೊರಟರೆ ಸಾಕು; ಒಂದು ಭಾಗ ಪೂರ್ವಕ್ಕೆ, ಇನ್ನೊಂದು ಪಶ್ಚಿಮಕ್ಕೆ, ಮತ್ತೊಂದು ಉತ್ತರಕ್ಕೆ, ಮಗದೊಂದು ದಕ್ಷಿಣಕ್ಕೆ ಹಾರುತ್ತಿರುತ್ತವೆ. ಪಾಪ, ಧರಿಸಿದವರು ಲೆಹೆಂಗಾ ಭಾರವನ್ನು ಹೊತ್ತು ನಡೆಯುವುದೇ ದುಸ್ತರ, ಅಂತಹದರಲ್ಲಿ ಒಂದೊಂದು ದಿಕ್ಕಿಗೆ ಹಾರುತ್ತಿರುವ ಟಾಪ್‌ನ ಈ ನಾಲ್ಕೂ ಭಾಗಗಳನ್ನು ಸಂಭಾಳಿಸುವ ಹೊತ್ತಿಗೆ ಹೈರಾಣಾಗುವುದಂತೂ ನಿಶ್ಚಿತ.

ಇನ್ನು ಈಗಿನ ಸಿನೆಮಾ ತಾರೆಯರು ಹಾಕುವ ಡ್ರೆಸ್‌ಗಳನ್ನು ನೋಡಿದರಂತೂ ಸಿಕ್ಕಾಪಟ್ಟೆ ಗೊಂದಲವಾಗುತ್ತದೆ. ಅದರ ಆದಿ ಯಾವುದೋ, ಅಂತ್ಯ ಯಾವುದೋ, ಅದನ್ನು ಮೇಲಿಂದ ಧರಿಸಬೇಕೋ, ಕೆಳಗಿನಿಂದ ಧರಿಸಬೇಕೋ, ಚರ್ಮಕ್ಕೆ ಅಂಟಿಕೊಂಡ ಅಷ್ಟೊಂದು ಬಿಗಿ ಉಡುಪನ್ನು ನೋಡಿದರೆ ಮೈಮೇಲೆ ಬಟ್ಟೆ ಇಟ್ಟು ಡ್ರೆಸ್ ಹೊಲಿಸಿಕೊಳ್ಳುತ್ತಾರೋ, ಹಾಗೆ ಬಿಗಿಯಾಗಿ ಹೊಲಿಸಿಕೊಂಡ ದಿರಿಸನ್ನು ಬದಲಿಸಬೇಕಾದರೆ ಕತ್ತರಿಯಿಂದ ಕಟ್ ಮಾಡಿ ತೆಗೆಯುತ್ತಾರೋ, ಒಂದೂ ಅರ್ಥವಾಗುವುದಿಲ್ಲ. ಮ್ಯಾರೇಜ್ ಅಥವಾ ಪಾರ್ಟಿ ಗೌನ್ ಧರಿಸಿ ಅವರು ಮುಂದೆ ನಡೆದರೆ ಹಿಂದಿನಿಂದ ಅವರ ಗೌನ್ ಒಂದರ್ಧ ಕಿ.ಮೀವರೆಗೆ ಕಸ ಗುಡಿಸಿಕೊಂಡು ಅವರನ್ನು ಫಾಲೋ ಮಾಡುತ್ತದೆ ಇಲ್ಲವೇ ಅವರ ಅಸಿಸ್ಟೆಂಟ್ ಒಬ್ಬ ನೆಲಕ್ಕೆ ತಾಗದಂತೆ ಆ ಗೌನನ್ನು ಎತ್ತಿ ಹಿಡಿದುಕೊಂಡು ಅವರನ್ನು ಫಾಲೋ ಮಾಡ್ತಾ ಇರ್ತಾನೆ.

ಇಂತಹ ಚಿತ್ರವಿಚಿತ್ರ ದಿರಿಸಿನ್ನು ನೋಡಿ ಕಣ್ತುಂಬಿಕೊಳ್ಳುವ ಒಂದು ಕೆಟಗರಿಯಾದರೆ, ಯಾವಾಗ ಎಲ್ಲಿಂದ ಏನು ಜಾರುತ್ತದೋ ಎನ್ನುವ ಟೆನ್ಶನ್ ಮಾಡಿಕೊಳ್ಳುವುದು ಇನ್ನೊಂದು ಕೆಟಗರಿ. ಆದರೆ ಅವರಂತೂ ಯಾವುದೇ ಮುಜುಗರ ಅಥವಾ ಟೆನ್ಶನ್ ಮಾಡಿಕೊಳ್ಳದೇ ಇಂತಹ ದಿರಿಸುಗಳಲ್ಲದ ದಿರಿಸುಗಳಲ್ಲಿ ಆರಾಮಾಗಿ ಪೋಸ್ ಕೊಡ್ತಾನೇ ಇರ್ತಾರೆ.

ಒಟ್ಟಿನಲ್ಲಿ ಅಡ್ರೆಸ್ ಬದಲಿಸಿರುವ ಈ ಮಾಡರ್ನ್ ಡ್ರೆಸ್‌ಗಳನ್ನು ವಿನ್ಯಾಸ ಮಾಡಿದವರ ಹಾಗೂ ಅವರ ಆಣತಿಯಂತೆ ಎಲ್ಲಿ ಬೇಕೆಂದರಲ್ಲಿ ಕಟ್ ಮಾಡಿ ಅದನ್ನು ಹೊಲೆದ ದರ್ಜಿಯ ಹಾಗೂ ಅದನ್ನು ಮಾರಾಟಕ್ಕಿಟ್ಟ ಮಳಿಗೆಮಾಲೀಕನ ಹೊಟ್ಟೆ ತುಂಬಬೇಕೆಂದರೆ ದೊಡ್ಡ ಮನಸ್ಸು ಮಾಡಿ ಅಂತಹ ಡ್ರೆಸ್‌ಗಳನ್ನು ಕೊಂಡುಕೊಳ್ಳುವ ಹಾಗೂ ಮುಜುಗರ ಪಟ್ಟುಕೊಳ್ಳದೇ ಅದನ್ನು ಧರಿಸುವ ಮಹಿಳಾ ಗ್ರಾಹಕರು ಬೇಕೇ ಬೇಕು. ಇಂತಹ ಅನನ್ಯ ವಿನ್ಯಾಸದ ದಿರಿಸನ್ನು ಧರಿಸಿದ ತಮ್ಮನ್ನು ಜನ ನೋಡಬೇಕು ಎನ್ನುವ ಆಸೆ ಅಂತೂ ಇದ್ದೇ ಇರುತ್ತದೆ. ಒಂದು ನಯಾ ಪೈಸೆ ಖರ್ಚು ಮಾಡದೆ ಇಂತಹ ವಿಚಿತ್ರ ವಿನ್ಯಾಸದ ಡ್ರೆಸ್‌ಗಳನ್ನು ಕಣ್ತುಂಬಿಸಿಕೊಂಡು ಪುಕ್ಕಟೆ ಆನಂದವನ್ನು ಪಡೆಯಲು ಮತ್ತು ಧರಿಸಿದವರನ್ನು ಮತ್ತೆ ಮತ್ತೆ ತಿರುಗಿ ನೋಡಲು ನಮ್ಮ ನಿಮ್ಮಂಥ ವೀಕ್ಷಕರೂ ಬೇಕು. ಏನಂತೀರಾ?



# ಮುಂಗಾರು ಮಳಿ–ಆತಂಕ ಮತ್ತು ಖುಷಿ

ವಿಲಾಸ ನಾ ಹುದ್ದಾರ

**ಮ**ಳೆಗಾಲದ ಎರಡು ಅನುಭವಗಳನ್ನ ನಾ ಇಲ್ಲಿ ಹಂಚಿಕೊಳ್ತೇನಿ. ಒಂದ ಆತಂಕದ ಅನುಭವ ಆದ್ರ ಇನ್ನೊಂದು ಖುಷಿಯ ಅನುಭವ. ಮೊದಲೇಕ ಆತಂಕದ ಅನುಭವ ಹೇಳಿ ಆಮೇಲೆ ಖುಷಿಯ ಅನುಭವ ಹೇಳ್ತೇನಿ.

ಇದು ನಡೆದದ್ದು 1992ನೇ ಇಸ್ವಿಯ ಮಳೆಗಾಲದೊಳಗ. ನಾವು ಹುಬ್ಬಳ್ಳಿ ಲಕ್ಷ್ಮೀಪುರ ಬ್ಯಾಂಕ್ ಕಾಲನಿ (ಮುರುಡೇಶ್ವರ ಫ್ಯಾಕ್ಟರಿ ಎದುರಿಗೆ) ಒಳಗ ಮನೀ ಕಟ್ಟಿಸಿಕೊಂಡ ಅಲ್ಲೆ ಇರಲಿಕತ್ತ ಎರಡು ವರ್ಷ ಆಗಿತ್ತ. ಕಾಲನಿ ಒಳಗಿನ ರಸ್ತೇನೂ ಆಗಿರಲಿಲ್ಲ. ಮುರುಡೇಶ್ವರ ಫ್ಯಾಕ್ಟರಿ ರಸ್ತೇನೂ ಆಗಿರಲಿಲ್ಲ. ಅಂದ್ರ ಸಿದ್ಧಾರೂಢ ಮಠದಿಂದ ಗೋಕುಲ ರೋಡ ಕೂಡುಸೋ ರಸ್ತೇನೂ ಅಗಿದ್ದಿಲ್ಲಾ. ಒಂದ ಸಣ್ಣ ರಸ್ತೆ ಇತ್ತ. ಅದಲ್ಲದ ಮುರುಡೇಶ್ವರ ಫ್ಯಾಕ್ಟರಿಕ್ಕಿಂತ ಮೊದಲೇಕ ಒಂದ ಹಳ್ಳ ಅದ. ಅದರ ಮ್ಯಾಲೀನ ಸೇತುವೇ ಕೂಡಾ ಇನ್ನೂ ಆಗಿರಲಿಲ್ಲಾ. ಮಳೀ ಬಂದ್ರ ಆ ಹಳ್ಳ ತುಂಬಿ ನಮ್ಮ ಕಾಲನೀ ಒಳಗ ಎಲ್ಲಾ ನೀರ ಬರ್ತಿತ್ತು ಮತ್ತ ಹಳ್ಳದ ದಂಡೀ ಮ್ಯಾಲೆ ಇದ್ದ ಮನೀಯೊಳಗ ನೀರು ಹೋಗ್ತಿತ್ತು. ಹಳ್ಳ ತುಂಬಿ ಹರೀಲಿಕ್ಕತ್ತೆಂದ್ರ ಆ ಕಡೆ ಇದ್ದ ಮಂದಿ ಆಕಡೇನ, ಈ ಕಡೆ ಇದ್ದ ಮಂದಿ ಈ ಕಡೇನ.

ಅವತ್ತ ರವಿವಾರ ಇತ್ತು. ನನ್ನ ಅರ್ಧಾಂಗಿ ಅರುಣಾ, ನನ್ನ ತಾಯಿ ಮತ್ತ ಮಕ್ಕಳನ್ನ ಕರ್ಕೊಂಡ ಮಾಧವಪುರ(ಲ್ಯಾಮಿಂಗಟನ್ ರೋಡ್)ದೊಳಗ ಇರೋ ತನ್ನ ಮಾವಸಿ ಮನೀಗೆ ಊಟಾ ಮುಗಿಸಿಕೊಂಡ ಹೋಗಿದ್ಲು. ಗಡದ್ದಾಗಿ ರವಿವಾರದ ಊಟ ಆಗಿತ್ತ, ಅದಕ್ಕ ಗಡದ್ದಾಗಿ ಗೊರಕಿ ಹೊಡ್ಕೋತ ಮಲಗಿದ್ದೆ. ಖಡಲ್, ಖಡಲ್ ಅನ್ನೋ ಆವಾಜ್ ಕೇಳಿ ಗಡಬಡಿಸಿಕೊಂಡ ಎದ್ದೆ. ಆ ಆವಾಜಿಗೆ ಎದಿ ಬಡ್ಕೊಳಲಿಕ್ಕೆ ಹತ್ತಿತ್ತು. ನನ್ನ ಅವಸ್ಥಿಗೆ ನನಗ ನಗು ಬಂತು. ಎದ್ದು ಕಿಡಕಿ ಒಳಗ ಹಣಿಕಿ ಹಾಕಿದೆ. ಜಿಟಿಜಿಟಿ ಮಳೀ ಸುರು ಆಗಿತ್ತ. ಕತ್ತಲಿ ಗವಿ ಆಗಿತ್ತ. ಮುಗಿಲು ಎಲ್ಲಾ ಕಪ್ಪ ಆಗಿ, ಆಗಾಗ ಭಳ್ ಭಳ್ ಅಂತ ಮಿಂಚಲಿಕ್ಕತ್ತಿತ್ತು. ಮಣ್ಣಿನ ವಾಸನಿ ಮೂಗಿನೊಳಗ ತುಂಬಿಕೊಂಡ ಒಂದ ಥರದ ಖುಷಿ ಆತ. ಅದ ವ್ಯಾಳ್ಯಾಕ ಮತ್ತ ಖಡಲ್ ಖಡಲ್ ಅಂತ ಗುಡುಗು, ಭಳ್ ಭಳ್ ಅಂತ ಮಿಂಚ ಹೊಡ್ದಾಗ ನನ್ನ ಎದೀ ಹೊಡ್ಕೊಳ್ಳಿಕತ್ತು. ಇನ್ನ ಜೋರ ಮಳಿ ಸುರು ಆದ್ರ ರಸ್ತೆ ಬಂದ ಆಗ್ತದ ಅಂತ ವಿಚಾರ ಮಾಡಿ, ಅರ್ಧಾಂಗಿಗೆ ಫೋನಾಯಿಸಿ, ಮಳಿ ಸುರು ಆಗತದ ಲಗೂನೆ ಬಾ ಅಂತ ಹೇಳಿದೆ. ನನ್ನ ಅವಸರ ಕಂಡ ಅವಳ ಮಾವಸಿ ನಕ್ಕದ್ದು ನನಗ ಫೋನಿನೊಳಗ ಕೇಳಿಸ್ತು. ನನ್ನ ಸಂಕಟಾ ನನಗ ಗೊತ್ತು. ನನ್ನವಳಿಗೆ ಅದು ತಿಳಿದಿತ್ತು ನನ್ನ ಆತಂಕ ಏನ ಅಂತ. ಗಡಿಬಿಡಿಯಿಂದ ಎಲ್ಲಾರನ್ನೂ ಕರ್ಕೊಂಡ ರಿಕ್ಷಾ ಮಾಡ್ಕೊಂಡ ಅಲ್ಲಿಂದ ಹೊರಟಳು.

ನನ್ನ ಹೆದರಿಕಿ ಪ್ರಕೃತಿಗೆ ತಿಳಿತೋ ಏನೋ, ಮುಂದ ಐದ ಮಿನಿಟಿನೊಳಗ ಮುಗಿಲ ಹರದ್ಹಂಗ ಧೋ ಧೋ ಮಳೀ ಬೀಳಲಿಕ್ಕ ಸುರು ಮಾಡ್ತು. ನನ್ನ ಹೆದರಿಕಿ ಜಾಸ್ತಿ ಆಗಿ ಅಂಥಾದರೊಳಗ ಛತ್ರಿ ತೊಗೊಂಡ ಹಳ್ಳದ ದಂಡಿಗೆ ಬಂದ ನಿಂತೆ. ರಿಕ್ಷಾ ಆ ದಂಡಿಗೆ ಬಂದ ನಿಂತದ್ದ ಕಾಣಿಸ್ತು. ರಿಕ್ಷಾ ಡ್ರೈವರ್ ಸಾವಕಾಶ ಅಟೋ ಹಳ್ಳದೊಳಗ ಇಳಸಲಿಕತ್ತಾ. ನನಗ ಯಾಕೋ ಅನುಮಾನ ಬಂತು. ಹಳ್ಳದೊಳಗ ನೀರ ಜಾಸ್ತಿ ಹರದ ಬರಲಿಕ್ಕೆ ಹತ್ತಿದ್ಹಂಗ ಅನಿಸಿ ನಾನು ಜೋರ ಒದರಿ ಅವಂಗ ತಿರಗಿ ಹೋಗ್ಲಿಕ್ಕೆ ಹೇಳಿದೆ. ನನ್ನ ಗಾಬರಿ ಧ್ವನಿ ಕೇಳಿ ಡ್ರೈವರ್ ರಿಕ್ಷಾ ತಿರಗಿಸಿದಾ.



ನೋಡ ನೋಡತ ಹಳ್ಳ ತುಂಬಿ ನೀರ ಜೋರಾಗಿ ಹರದು  ದಂಡೀ ಮ್ಯಾಲೂ ಬರಲಿಕ್ಕತ್ತು. ಒಂದ ಕ್ಷಣ ನನ್ನ ಮೈ ಝುಂ ಅಂತು. ನಾ ಏನರೇ ಆ ಡ್ರೈವರ್‌ಗ ತಿರಗಿ ಹೋಗಲಿಕ್ಕೆ ಒದರಿ ಹೇಳಿದ್ದಿಲ್ಲಾಂದ್ರ ಒಂದ ಕ್ಷಣದೊಳಗ ತಾಯಿಯನ್ನೂ, ಪತ್ನಿಯನ್ನೂ ಮತ್ತು ಮಕ್ಕಳನ್ನೂ ಕಳದಕೊಂಡಬಿಡ್ತಿದ್ದೆ. ತಲೀ ಮ್ಯಾಲೆ ಇರೋ ಕೈ ಮತ್ತ ಜೊತೆ ಜೊತೆಯಾಗಿ ನಡಿಯುವ ಕೈ ಎರಡೂ ಕಣ್ಣ ಮುಚ್ಚಿ ಕಣ್ಣ ತಗ್ಯೋದರೊಳಗ ಕಣ್ಮರೆ ಆಗತಿದ್ದವು. ದೇವರಿಗೆ ಅಲ್ಲಿಂದ ಕೈ ಮುಗದೆ. ಅವರೆಲ್ಲಾರೂ ಘಾಬರಿ ಆಗಿದ್ರು. ಅದ ರಿಕ್ಷಾದೊಳಗ ತಿರಗಿ ಮಾವಸಿ ಮನೀಗೆ ಹೋಗಲಿಕ್ಕೆ ಹೇಳಿ ಮುಂಜಾನೆ ಬರಲಿಕ್ಕೆ ಹೇಳಿದೆ. ಮನೀಗೆ ಬಂದ ದೇವರಿಗೆ ತುಪ್ಪದ ದೀಪಾ ಹಚ್ಚಿಟ್ಟ ದೀರ್ಘದಂಡ ನಮಸ್ಕಾರ ಮಾಡಿದೆ.



ಇದು ನನ್ನ ಅತಂಕದ ಅನುಭವ ಆದ್ರ, ಖುಷಿ ಅನುಭವ ಈಗ ಹೇಳ್ತೇನಿ. ನಾನು ನನ್ನ ತಂದೆ-ತಾಯಿ. ಧರ್ಮಪತ್ನಿ, ಮಗಳ ಜೋಡಿ ಹುಬ್ಬಳ್ಳಿಯಿಂದ ಬೆಳಗಾವಿ ಹೊಂಟಿದ್ದೆ. ನನ್ನ ತಂದೀಗೆ ಬೆಳಗಾವಿಗೆ ಹೋಗೋದಂದ್ರ ಭಾರಿ ಹುರುಪ. ಅಲ್ಲೀ ಕುಂದಾ, ಚುರುಮರಿ, ಶೇಂಗಾ, ಬ್ರೆಡ್, ಪಲ್ಯಾ(ತರಕಾರಿ) ಅಂದ್ರ ಅವರಿಗೆ ಪಂಚಪ್ರಾಣ. ಭಾಳ ವರ್ಷ ಅಲ್ಲೆ ಇದ್ದವರು. ಹಿರೇಬಾಗೆವಾಡಿ ದಾಟಿ ಸ್ವಲ್ಪ ಮುಂದ ಹೋದ್ರ ಗುಡ್ಡಾ ಹತ್ತಿ ಬೆಳಗಾವಿಗೆ ಹೋಗಬೇಕು. ಗುಡ್ಡಾ ಹತ್ತೋಮುಂದ ನಿಮಗ ನಯನ ಮನೋಹರ ದೃಶ್ಯ ಕಾಣಸ್ತದ. ಹಾವಿನಂತೆ ಬಿದ್ದ ರಸ್ತೆ ಅಂಕುಡೊಂಕಾಗಿ ಗುಡ್ಡದ ಮ್ಯಾಲೆ ಹೋಗೋದು, ಆಜುಬಾಜು ಹಸಿರಿನಿಂದ ತುಂಬಿದ ಪ್ರಕೃತಿ ಕಣ್ಣಿಗೆ ಮುದ ನೀಡ್ತದ. ನಾವ ಹಿರೇ ಬಾಗೇವಾಡಿ ದಾಟಿ ಮುಂದ ಹೋಗ್ತಿದ್ದಂಗ ಮುಗಿಲೆಲ್ಲಾ ಕಪ್ಪ ಆಗಿ, ಮಳಿ ಬರೋಹಂಗ ಆತು. ನಾನು ಸಾವಕಾಶ ಕಾರಗುಡ್ಡದ ಮ್ಯಾಲೆ ಏರಸಲಿಕ್ಕತ್ತಿದೆ. ತುದಿ ಮುಟ್ಟಿ ಇನ್ನೇನ ಬಲಕ್ಕ ಹೊರಳಿ ಬೆಳಗಾವಿ ಕಡೆ ಹೋಗಬೇಕು, ನನ್ನ ಅರ್ಧಾಂಗಿ ಮತ್ತ ಮಗಳ, "ಕಾರ ಸೈಡಿಗೆ ತೊಗೋಳ್ರಿ..." ಅಂತ ಒಮ್ಮಗೀಲೆ ಚೀರಿದ್ರು. ಏನ ಆತಪಾ ಅಂತ ನಾನು ಘಾಬರಿ ಆಗಿ ಎಡಕ್ಕ ಸಪಾಟಾಗಿ ಇದ್ದ ಜಗದೊಳಗ ಕಾರ ನಿಂದ್ರಿಸಿದೆ. ನಾನು ಕಾರ ನಿಂದ್ರೋಸದಕ್ಕ ಅವರಿಬ್ರೂ ಧಡಕ್ಕ ಅಂತ ಕಾರಿನ ಬಾಗಲಾ ತಗದು ಹೊರಗ ಓಡಿಹೋಗಿ ಮುಗಿಲಿನ ಕಡೆ ಮಾರಿ ಮಾಡ್ಕೊಂಡ ನಿಂತ್ರು. ಆಗಷ್ಟ ತುಂತುರ ಮಳಿ ಹನಿಗಳು ಬೀಳಲಿಕ್ಕೆ ಹತ್ತಿದ್ವು. ಇದು ಆ ವರ್ಷದ ಮೊದಲನೇ ಮುಂಗಾರಿನ ಮಳಿ ಹನಿ. ನನ್ನ ಹೇಂಣ್ತಿಗೆ, ಮಗಳಿಗೆ ಮಳೀ ಒಳಗ ತೊಯ್ಸಗೊಳ್ಳೋದಂದ್ರ ಭಾರಿ ಖುಷಿ. ನನ್ನ ಘಾಬರಿ ಬೀಳಿಸಿ ಅವ್ವಾ-ಮಗಳ ಜೋಡಿ ಮಳ್ಯಾಗ ಮಜಾ ಮಾಡ್ಲಿಕತ್ತಿದ್ರು. ಮಗಳ ಬಂದ ನನ್ನನ್ನ ಎಳಕೊಂಡಹೋದ್ಲು. ನನ್ನ ತಂದಿ ಬಾಳ ತೊಯ್ಸಗೊಳ್ಳಬ್ಯಾಡ್ರಿ, ನೆಗಡಿ ಆಗ್ತದ, ಸಾಕಿನ್ನ ಲಗೂನ ಬರ್ರೀ ಅಂತ ಒತ್ತಾಯ ಮಾಡ್ಲಿಕತ್ರು. ಆದ್ರೂ ಅವ್ವಾ-ಮಗಳು ತೃಪ್ತಿ ಆಗೋವರೆಗೆ ಆ ಜಿಟಿಜಿಟಿ ಮಳೀಯೊಳಗ ಮಜಾ ಮಾಡಿ ಬಂದ್ರು. ಸಂಜೀ ಹೊತ್ತು, ಮುಗಲ ತುಂಬ ಕಪ್ಪಗಿನ ಮೋಡಗಳು, ಸುತ್ತಲೂ ಹಸಿರಿನ ಹೊದಿಕಿ, ತಂಪಾದ ವಾತಾವರಣ, ಮಂದವಾಗಿ ಬೀಸುತ್ತಿರುವ ಮಾರುತ, ಮೇಲಿನಿಂದ ತುಂತುರ ಹನಿಗಳು, ಎತ್ತರದ ಪ್ರದೇಶ ಕಣ್ಣು, ಮನಸ್ಸು ಧನ್ಯತೆಯನ್ನ ಅನುಭವಿಸಿದವು. ಹೀಂಗಿತ್ತ ನನ್ನ ಖುಷಿಯ ಅನುಭವ.



## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**ದಂಸಆ**

- ✓ ಕುರುಡನಿಗೆ ಕಣ್ಣು ಕಾಣಲು ಶುರುವಾದರೆ ಅವನು ಮೊದಲು ಮಾಡುವ ಕೆಲಸವೆಂದರೆ ತನಗೆ ಯಾವಾಗಲೂ ಆಸರೆಯಾಗಿದ್ದ ಕೋಲನ್ನು ಎಸೆಯುವುದು.
- ✓ ತಂದೆಯ ಸಂಪಾದನೆಯನ್ನು ಅನುಭವಿಸುವ ಸ್ವಾತಂತ್ರ್ಯ ಮಗನಿಗೆ ಸುಲಭವಾಗಿ ಸಿಗುತ್ತದೆ. ಆದರೆ ಮಗನು ಸಂಪಾದಿಸುವಾಗ ಅದನ್ನು ಅನುಭವಿಸುವ ಸ್ವಾತಂತ್ರ್ಯ ತಂದೆಗೆ ಸಿಗದು.
- ✓ ವಿ ಆರ್ ರೆಸ್ಪಾನ್ಸಿಬಲ್ ಫಾರ್ ಅವರ್ ಓನ್ ಇಗ್ನೊರೆನ್ಸ್.
- ✓ ಎಲ್ಲಿ ಏನು ಮಾತನಾಡಬೇಕು ಎಂಬುದಕ್ಕಿಂತ ಎಲ್ಲಿ ಏನು ಮಾತನಾಡಬಾರದು ಎಂದು ತಿಳಿದಿರುವವನೇ ಹೆಚ್ಚು ಬುದ್ಧಿವಂತ.
- ✓ ನಿಗೂಢತೆ ಆಡುವ ಮಾತಿನಲ್ಲಿ ಇರದು. ಅರ್ಥ ಮಾಡಿಕೊಳ್ಳುವ ಮನಸ್ಸಿನಲ್ಲಿ ಇರುತ್ತದೆ,
- ✓ ಅಡ್ವೈಸ್ ಟು ಚೆಸ್ ಪ್ಲಯರ್: ಜಸ್ಟ್ ಡೋಂಟ್ ಡು ಎನಿಥಿಂಗ್ ಕ್ರೇಜಿ. ಲೆಟ್ ಯುವರ್ ಅಪೊನೆಂಟ್ ಡು ಕ್ರೇಜಿ ಥಿಂಗ್ಸ್.
- ✓ ಮೃತರು ಮಾತ್ರ ಯುದ್ಧದ ಅಂತ್ಯವನ್ನು ಕಂಡಿರುತ್ತಾರೆ.
- ✓ ಪ್ರಶ್ನೆಗಳು ತಪ್ಪಿರುವುದಿಲ್ಲ. ಉತ್ತರಗಳು ತಪ್ಪಿರಲು ಸಾಧ್ಯ.
- ✓ ಡೋಂಟ್ ವಿಶ್ ಇಟ್ ವರ್ ಈಸಿಯರ್. ವಿಶ್ ಯು ವರ್ ಬೆಟರ್.
- ✓ ವರ್ತನೆ ಒಂದು ಕನ್ನಡಿ. ಅದರಲ್ಲಿ ಎಲ್ಲರೂ ತಮ್ಮ ಪ್ರತಿಬಿಂಬವನ್ನು ತೋರಿಸುತ್ತಾರೆ.
- ✓ ಯಶಸ್ಸು ನಿಮ್ಮನ್ನು ಹುಡುಕದು, ನೀವು ಹೋಗಿ ಅದನ್ನು ಪಡೆದುಕೊಳ್ಳಬೇಕು.
- ✓ ಮನಿ ಈಸ್ ನೆವರ್ ಆಕ್ಚುಯಲಿ ಯುವರ್ಸ್. ಇಟ್ ಈಸ್ ಜಸ್ಟ್ ಯುವರ್ ಟರ್ನ್ ಟು ಯೂಸ್ ಇಟ್.
- ✓ ತಲೆ ತಗ್ಗಿಸುವದಕ್ಕೂ ತಲೆ ಬಾಗಿಸುವದಕ್ಕೂ ತುಂಬಾ ವ್ಯತ್ಯಾಸವಿದೆ. ತಲೆ ತಗ್ಗಿಸುವವನಲ್ಲಿ ತಪ್ಪಿದೆ. ತಲೆ ಬಾಗಿಸುವವನಲ್ಲಿ ಸಂಸ್ಕಾರವಿದೆ.
- ✓ ಬದುಕು ನಮ್ಮ ಅಳುವಿನಿಂದ ಪ್ರಾರಂಭವಾಗುತ್ತದೆ. ಇತರರ ಅಳುವಿನಿಂದ ಅದು ಕೊನೆಗೊಳ್ಳುತ್ತದೆ. ನಡುವಿನ ಅಂತರವನ್ನು ಸಾಕಷ್ಟು ನಗುವಿನಿಂದ ತುಂಬಿ.



- ✓ ಪ್ರೂವ್ ಯುವರ್‌ಸೆಲ್ಫ್ ಟು ಯುವರ್‌ಸೆಲ್ಫ್, ನಾಟ್ ಅದರ್ಸ್.

# ಮೋಡಿ ಮಾಡಿದ ಮೋದಿ ಭೇಟಿ

ಸೀತಾ ಶ್ರೀಧರ್

**ಕೆ**ಲವೊಮ್ಮೆ ನಾವು ಕನಸಿನಲ್ಲೂ ಎಣಿಸದ ಸಂಗತಿಗಳು ಅನಿರೀಕ್ಷಿತವಾಗಿ ಘಟಿಸುತ್ತವೆ. ಅವಕಾಶಗಳು ಅಯಾಚಿತವಾಗಿ ಒದಗಿಬರುತ್ತವೆ ಎಂಬುದಕ್ಕೆ ನಾನೀಗ ಬರೆಯುತ್ತಿರುವ ಈ ವೃತ್ತಾಂತವೇ ಪ್ರತ್ಯಕ್ಷಸಾಕ್ಷಿ!

ಪ್ಯಾರಿಸ್‌ನಲ್ಲಿ ಪ್ರಧಾನಿ ಮೋದಿಯವರನ್ನು ನೋಡಿದ ಕ್ಷಣ... ಅವಿಸ್ಮರಣೀಯ ಅನುಭವ!

ಕಳೆದ ವರ್ಷ 2023ರ ಜೂನ್‌ನಲ್ಲಿ ಪ್ಯಾರಿಸ್‌ನಲ್ಲಿರುವ ಮಗಳ ಮನೆಗೆ ನಾವು ದಂಪತಿ ಹೋಗಿದ್ದ ಸಂದರ್ಭ. ಪ್ಯಾರಿಸ್ ಹಾಗೂ ಸುತ್ತಮುತ್ತಲ ತಿರುಗಾಟದಲ್ಲಿ, ಹೊಸಹೊಸ ತಾಣಗಳ ಸೌಂದರ್ಯ ವೀಕ್ಷಣೆಯಲ್ಲಿ ದಿನ ಕಳೆದದ್ದೇ ತಿಳಿಯಲಿಲ್ಲ.

ಜುಲೈ 14ರಂದು ಫ್ರ್ಯಾನ್ಸ್‌ನ ಸ್ವಾತಂತ್ರ್ಯ ದಿನಾಚರಣೆ. ಬಾಸ್ಟಿಲ್ ಡೇಗೆ ಅಧ್ಯಕ್ಷ ಇಮ್ಯಾನ್ಯುಯಲ್ ಮೆಕ್ರೋನ್‌ರಿಂದ ಆಹ್ವಾನಿತರಾಗಿ ವಿಶೇಷ ಅತಿಥಿಯಾಗಿ (ಗೆಸ್ಟ್ ಆಫ್ ಆನರ್) ನಮ್ಮ ಪ್ರಧಾನಿ ನರೇಂದ್ರ ಮೋದಿಯವರು ಪ್ಯಾರಿಸ್‌ಗೆ ಆಗಮಿಸುವ ವಿಷಯ ತಿಳಿದು ಹಿಗ್ಗಾಯಿತು. ಎಂದಿನಂತೆ ದೂರದರ್ಶನ, ಸುದ್ದಿ ಮೂಲಗಳ ಮೂಲಕ ನೋಡುವ ಉತ್ಸುಕತೆಯಿಂದ ತಯಾರಾದೆವು.

ಭಾರತದಲ್ಲಿ ಇರುವಾಗ ಪ್ರಧಾನಿಯವರನ್ನು ನೇರಾನೇರ ಭೇಟಿಯಾಗುವ ಅಥವಾ ಪ್ರತ್ಯಕ್ಷ ನೋಡುವ ಬಗ್ಗೆ ಒಮ್ಮೆಯೂ ಯೋಚಿಸಿರದ ಸಾಮಾನ್ಯ ವರ್ಗಕ್ಕೆ ಸೇರಿದವರು ನಾವು. ಬೆಂಗಳೂರಿನಲ್ಲಿ ನಡೆದ ಮೋದಿ ರೋಡ್ ಶೋಗೆ ಕೂಡ ಜನಜಂಗುಳಿ, ನೂಕುನುಗ್ಗಲಿನ ಭಯದಿಂದ ಆ ಕಡೆ ತಲೆ ಹಾಕದ ಮಂದಿ! ಮನೆಯಲ್ಲೇ ಕೂತು ಟಿ.ವಿ. ಪ್ರಸಾರ ವೀಕ್ಷಿಸಿ ತೃಪ್ತಿ ಪಟ್ಟಿದ್ದೆವು. ಆದರೆ ಇಲ್ಲಿಗೆ ಬಂದ ಮೇಲೆ ನಾವು ಭಾರತೀಯರು, ಮೋದಿ ನಮ್ಮ ಪ್ರಧಾನಿ ಎಂಬ ಅಭಿಮಾನ ಪುಟಿದೆದ್ದಿತ್ತು. ಅದಕ್ಕೆ ಸರಿಯಾಗಿ ಹೊಸ ಬೆಳವಣಿಗೆಯೊಂದು ತಿಳಿದುಬಂತು.

ಜುಲೈ ತಾ. 13ರಂದು, ಬಾಸ್ಟಿಲ್ ಡೇಯ ಹಿಂದಿನ ದಿನ ನರೇಂದ್ರ ಮೋದಿಯವರು ಇಲ್ಲಿನ ಅನಿವಾಸಿ ಭಾರತೀಯರನ್ನು ಭೇಟಿಯಾಗಲು ಬರುವವರಿದ್ದರು. ವಿಷಯ ತಿಳಿದು ಉತ್ಸಾಹ ಇನ್ನಷ್ಟು ಹೆಚ್ಚಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವವರು ಆಮಂತ್ರಣಕ್ಕಾಗಿ ಭಾರತೀಯ ದೂತಾವಾಸಕ್ಕೆ ಕೋರಿಕೆ ಸಲ್ಲಿಸಬೇಕಿತ್ತು. ಅಪರೂಪದ ಈ ಅವಕಾಶವನ್ನು ಬಿಟ್ಟವರುಂಟೆ?

ಸರಿ, ನನ್ನ ಮಗಳು, ಅಳಿಯ, ನನ್ನವರು, ಮೊಮ್ಮಕ್ಕಳು ಹಾಗೂ ನನ್ನ ಹೆಸರಲ್ಲಿ ಕೋರಿಕೆ ಪತ್ರಗಳು ಹೋದವು. ಒಂದೆರಡು ದಿನಗಳಲ್ಲಿ ಮಗಳು, ಅಳಿಯ ಮತ್ತು ನನ್ನವರಿಗೆ ಮಾತ್ರ ಆಮಂತ್ರಣ ತಲುಪಿತು ನಾನು ಪೆಚ್ಚಾದೆ. ನಂತರ ಎರಡು ದಿನದಲ್ಲಿ ಮೊಮ್ಮಕ್ಕಳಿಗೆ ಬಂತು. ನನ್ನ ದುಗುಡ ಹೇಳತೀರದು. ದೇವರು ಅನುಗ್ರಹಿಸಿದಂತೆ ಕೊನೆಯಲ್ಲಿ ನನಗೂ (ಆತ್ಮೀಯ) ಆಮಂತ್ರಣ ಬಂದು ಎಲ್ಲರಿಗೂ ನೆಮ್ಮದಿಯಾಯಿತು. ಆಹಾ! ಆವತ್ತು ನನಗಾದ ಆನಂದಕ್ಕೆ ಅಳತೆಯೇ ಇಲ್ಲ!



ಹದಿಮೂರು ಹಾಗೂ ಹತ್ತರ ವಯಸ್ಸಿನ ನನ್ನ ಮೊಮ್ಮಕ್ಕಳು ತನ್ವಿ, ದಿಯಾರಿಗೆ

ನಮ್ಮ ಪ್ರಧಾನಿಯವರನ್ನು ನೋಡುವ ಈ ಸದವಕಾಶ ಸಿಕ್ಕಿದ್ದು ಕೂಡ ನನಗೆ ತುಂಬ ತೃಪ್ತಿ ತಂದಿತು.

ಅಂತೂ ಜುಲೈ ತಾ.13ರ ಮಧ್ಯಾಹ್ನ ಬೇಗ ಊಟ ಮುಗಿಸಿ ನಮ್ಮ ದೇಶೀ ಉಡುಗೆ ಅಲಂಕಾರಗಳಿಂದ ಸಜ್ಜಾಗಿ ಸಮಾರಂಭ ನಡೆಯಲಿರುವ ಲಾಸೇನ್ ಮ್ಯೂಸಿಕಲ್ ಆಡಿಟೋರಿಯಂ (La Seine Musicale)ಗೆ ಪರಿವಾರ ಸಮೇತ ಹೊರಟೆವು.

ಮಧ್ಯಾಹ್ನ ಮೂರುವರೆಯಿಂದ ಐದುವರೆಯ ವರೆಗೆ ಮಾತ್ರ ಆಡಿಟೋರಿಯಂ ಒಳಗೆ ಪ್ರವೇಶ. ಪ್ಯಾರಿಸ್‌ನ ಜೀವನದಿ ಸೇನ್ ನದೀ ತೀರದಲ್ಲಿ ಕಟ್ಟಿದ ಡೂಮ್ ಆಕೃತಿಯ ವಿಶೇಷ ವಿನ್ಯಾಸದ ಸುಂದರ ಬಹುಮಹಡಿಯ ಬೃಹತ್ ಕಟ್ಟಡ.




ಎಲ್ಲರಂತೆ ನಮಗೂ ಆತಂಕ, ಸೀಟ್ ಸಿಗುತ್ತದೋ ಇಲ್ಲವೋ ಅಂತ. ಸುಮಾರು 250 ಮೀಟರ್ ಕ್ಯೂನಲ್ಲಿ (ಹೆಚ್ಚು ನಿಲ್ಲುವ ಪರಿಸ್ಥಿತಿಯೇ ಬರಲಿಲ್ಲ) ಸಾಗಿ, ಪಾಸ್ಪೋರ್ಟ್ ಮೂಲಕ ನಮ್ಮ ಗುರುತು, ದಾಖಲಾತಿ ಸಂಖ್ಯೆಯ ಪರೀಕ್ಷೆ ನಿಮಿಷದೊಳಗೆ ಮುಗಿದು, ಮತ್ತೆ ಅನತಿ ದೂರ ಸೇನ್ ನದಿಯ ಸೇತುವೆಯ ಮೇಲೆ ನಡೆದೆವು. ಭಾರತೀಯ ಜನಜಾತ್ರೆ! ದಾರಿಯುದ್ದಕ್ಕೂ ಅಲ್ಲಲ್ಲಿ ಕಂಬದಂತೆ ಖಡಕ್ಕಾಗಿ ನಿಂತ ಫ್ರೆಂಚ್ ಸೆಕ್ಯುರಿಟಿ ಅಧಿಕಾರಿಗಳಿಂದ ಸೂಚನೆಗಳು. ಎಲ್ಲ ಫ್ರೆಂಚ್ ಭಾಷೆಯಲ್ಲೇ. ಅರ್ಥವಾಗದಿದ್ದರೂ ಆದಂತೆ ನಟಿಸಿ, ತಲೆಯಾಡಿಸಿ ಮುಂದುವರಿದೆವು.

ಆಡಿಟೋರಿಯಂನ ಕ್ಯಾಂಪಸ್ ತಲುಪಿ, ಮತ್ತೊಮ್ಮೆ ಸೆಕ್ಯುರಿಟಿ ಪರೀಕ್ಷೆ ಆಗಿ ಒಳಗೆ ಸೇರಿದೆವು. ಕೈಯಲ್ಲಿ ಸೆಲ್ಫೋನ್ ವಿನಃ ಯಾವುದೇ ಸಾಮಾನು, ಬ್ಯಾಗ್, ನೀರಿನ ಬಾಟಲ್ ಕೂಡ ಇರಬಾರದೆಂದು ಮೊದಲೇ ಸೂಚನೆ ಇತ್ತು.

ಭಾರತೀಯ ರಾಯಭಾರಿ ಕಛೇರಿಯ ಹಸನ್ಮುಖಿ ಸ್ವಯಂಸೇವಕರಿಂದ ಸ್ವಾಗತ. ಪ್ರತಿಯೊಬ್ಬರಿಗೂ ಸಮೋಸ, ಡ್ರೈಜಾಮೂನ್, ಜ್ಯೂಸ್, ನೀರಿನ ಬಾಟಲ್‌ಗಳ ಪ್ಯಾಕ್ ನೀಡಿ ನಗೆಮೊಗದ ಆತಿಥ್ಯ. ಅಲ್ಲೇ ತಿಂದು ಮುಗಿಸಿ, ಸಮಾರಂಭ ನಡೆಯಲಿರುವ ಮೇಲಿನ ಹಾಲ್‌ಗೆ ಹೋಗಬೇಕು. ನೀರು ಕೂಡ ತೆಗೆದುಕೊಂಡು ಹೋಗುವಂತಿಲ್ಲ. ಒಟ್ಟಿನಲ್ಲಿ ಮದುವೆಮನೆ ಗಲಾಟೆ! ಕೆಲವರು ಗುರುತಿಸಿ ಮಾತಾಡಿಸುವವರು, ಹೊಸಬರು ಸ್ನೇಹದ ನಗು ಬೀರಿ ಪರಿಚಯ ಮಾಡಿಕೊಳ್ಳುವವರು, ಭಾರತದ ಬೇರೆಬೇರೆ ಕಡೆಗಳ ಭಾಷೆ, ಉಡುಪಿನವರು, ಕನ್ನಡದ ಗುಂಪುಗಳು, ಎಲ್ಲಕ್ಕಿಂತ ಹೆಚ್ಚಾಗಿ ಎಲ್ಲಿ ನೋಡಿದರೂ ಭಾರತೀಯರು! ಅದರಲ್ಲೂ ನನ್ನಂತೆ ಸೀರೆ ಉಟ್ಟ ನಾರಿಯರು! ಪ್ಯಾರಿಸ್‌ಗೆ ಬಂದಾಗಿನಿಂದ ಎಲ್ಲೂ

ಸೀರೆಯ ಸುಳಿವೇ ಕಾಣದ ಕಣ್ಣುಗಳಿಗೆ ತಂಪಾಯಿತು. ನಮ್ಮ ಜನಗಳನ್ನು ನೋಡಿ ಗಮ್ಮತ್ತಾಯಿತು. ಎಲ್ಲರ ಗುರಿ ಒಂದೇ. ಬೇಗ ಹೋಗಿ ಸೀಟ್ ಹಿಡಿಯುವುದು.

ತುಂಬ ದೊಡ್ಡ ಆಡಿಟೋರಿಯಂ ಆಗಿದ್ದರಿಂದ ನಮಗೆ ಸೀಟ್‌ಗಾಗಿ ಪರದಾಡಬೇಕಾಗಿ ಬರಲಿಲ್ಲ. (ಸುಮಾರು 6 ಸಾವಿರ ಜನರು ಹಿಡಿಸುವಂಥ ಸಭಾಂಗಣ) ವೃತ್ತಾಕಾರದ ಹಾಲ್. ಎಲ್ಲಿಂದ ನೋಡಿದರೂ ವೇದಿಕೆಯ ಮೇಲಿದ್ದವರು ಕಾಣಿಸಲೇಬೇಕು. ಸುತ್ತ ಜನಸಮುದ್ರ. ಇಷ್ಟೊಂದು ಭಾರತೀಯರು ಇಲ್ಲಿದ್ದಾರೆಯೇ! ದಕ್ಷಿಣ, ಉತ್ತರಭಾರತದ ಜನರನ್ನು ನೋಡುತ್ತ, ವಿವಿಧ ಭಾಷೆಗಳ ಮಾತುಕತೆ ಕಿವಿಗೆ ಬೀಳುವುದನ್ನು ಆಸ್ವಾದಿಸುತ್ತ ಕುಳಿತೆವು. ಆಗಾಗ್ಗೆ ಕಿವಿಗಡಚಿಕ್ಕುವಂತೆ ಭಾರತ್ಮಾತಾ ಕೀ ಜೈ, ವಂದೇ ಮಾತರಂ ಘೋಷಣೆ.(ನಾವೂ ದನಿಗೂಡಿಸುತ್ತ...)

ನನ್ನ ಪಕ್ಕದಲ್ಲಿ ಒಂದು ಸಿಂಧಿ ದೊಡ್ಡ ಕುಟುಂಬ ಸಾಲಾಗಿ ಕುಳಿತಿದ್ದರು. ಕಳೆದ 52 ವರ್ಷಗಳಿಂದ ಪ್ಯಾರಿಸ್‌ನಲ್ಲಿ ಬಿಸಿನೆಸ್ ನಡೆಸುತ್ತಿದ್ದಾರೆ ಅಂತೆ. ಸುನೀತಾ ಎಂಬ ಪಕ್ಕಾ ಫ್ರೆಂಚು ಮಹಿಳೆಯಂತೆ ಕಾಣಿಸುತ್ತಿದ್ದ ವೃದ್ಧೆ. ಆಕೆ ಭಾರತದ ಬಗ್ಗೆ ತುಂಬ ಆಸಕ್ತಿಯಿಂದ ಹಿಂದಿಯಲ್ಲಿ ವಿಚಾರಿಸಿದರು.


ಸಂಜೆ 5.30ರಿಂದ 7 ಗಂಟೆಯ ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು. ಭರತನಾಟ್ಯ, ಕೂಚಿಪುಡಿ, ಮೋಹಿನಿ ಆಟ್ಟಂ, ಒಡಿಸ್ಸಿ, ಗರ್ಭಾ, ರಾಜಸ್ಥಾನಿ ಜಾನಪದ ಹಾಡು, ನೃತ್ಯ, ಇತ್ಯಾದಿ, ಎಲ್ಲಕ್ಕೂ ಮಿಗಿಲಾಗಿ ಮೈನವಿರೇಳಿಸುವ ನಮ್ಮ ಇಂಡಿಯನ್ ಆರ್ಮಿಯ ಸೈನಿಕರಿಂದ ದೇಶಭಕ್ತಿ ಗೀತೆಗಳ ಬ್ಯಾಂಡ್ ವಾದನ (ಮರುದಿನದ Bastille Dayಗೆ ಅವರೂ ಕವಾಯತು ಮಾಡುವವರಿದ್ದರು) ಎಲ್ಲ ಒಂದಾದ ಮೇಲೊಂದರಂತೆ ಸಮಯ ಕಳೆದದ್ದು ಗೊತ್ತಾಗಲೇ ಇಲ್ಲ. ಉತ್ತಮ ಇಂಗ್ಲಿಷ್ ಮತ್ತು ಫ್ರೆಂಚ್ ಭಾಷೆಯ ನಿರೂಪಣೆ.

ಮತ್ತೆ ಅರ್ಧ ಗಂಟೆ ವಿರಾಮ. ಮೋದಿಯವರ ಭಾಷಣಕ್ಕೆ ಸ್ಟೇಜ್ ಸೆಟಿಂಗ್‌ಗೆ ಓಡಾಟ. ಸಮಯ ಕಳೆದಂತೆ ಉತ್ಸುಕ ಜನರಿಂದ ಮೋದಿ, ಮೋದಿ, ಮೋದಿ ಘೋಷ ಇನ್ನಿಲ್ಲದಂತೆ ಶುರುವಾಯಿತು. ಇನ್ನೇನು ನಮ್ಮ ಗೌರವಾನ್ವಿತ ಪ್ರಧಾನಿ ಇದೀಗ ಬರುತ್ತಾರೆ ಎಂದು ಆಯೋಜಕರು ಅನೌನ್ಸ್ ಮಾಡುತ್ತಲೇ ಇದ್ದರು.

ನೋಡುತ್ತಿದ್ದಂತೆ, ವೇದಿಕೆಯ ಬೆಳಕು ಸ್ವಲ್ಪ ಮಂಕಾಯಿತು. ಅದೋ, ಪಕ್ಕದಿಂದ ಬಂದೇಬಿಟ್ಟರು, ಬಹು ನಿರೀಕ್ಷಿತ ನಮ್ಮ ನೆಚ್ಚಿನ ನಾಯಕ! ಎಲ್ಲರಿಗೂ ಕೈಬೀಸುತ್ತಾ! ಚಪ್ಪಾಳೆಯೋ ಚಪ್ಪಾಳೆ...! ಮೋದಿ, ಮೋದಿ... ಎಂಬ ಉತ್ಸಾಹದ ಕೂಗು, ಕೇಕೆ ಒಂದು ನಿಮಿಷದವರೆಗೆ ಸತತವಾಗಿ...!

ನಮಷ್ಕಾರ್

ಎಂದ ಮೋದಿಯ ಸ್ವರ ಕೇಳುತ್ತಿದ್ದಂತೆ ಚಪ್ಪಾಳೆ ಮುಗಿಲು(ಛಾವಣಿ) ಮುಟ್ಟಿತು...! ಬೋನ್ಸೋಜ಼್ ಎಂದರು ಇನ್ನೊಮ್ಮೆ ಮೋದಿ! ಪುನಃ ಅದೇ ಚಪ್ಪಾಳೆ, ಕೇಕೆ! ಬಿಡುವಿಲ್ಲದೆ ಕೆಲಸ ಮಾಡಿದವು ಮೊಬೈಲ್‌ಗಳು!



ನಂತರ ಒಂದು ಗಂಟೆ ನಮ್ಮ ಪ್ರಧಾನಿ ತಮ್ಮ ಎಂದಿನ ಮೋಡಿ ಮಾಡುವ ಮೋದಿ ಭಾಷೆಯಲ್ಲಿ ಫ್ರಾನ್ಸ್, ಭಾರತ ಎರಡೂ ದೇಶಗಳ ನಡುವಿನ ಬಾಂಧವ್ಯ, ಈಗಿನ ನಮ್ಮ ಭಾರತದ ಸರ್ವಾಂಗೀಣ ಅಭಿವೃದ್ಧಿ, ಆಧುನಿಕ ತಂತ್ರಜ್ಞಾನದಲ್ಲಿ ನಮ್ಮ ಮುಂಚೂಣಿಯ ಸಾಧನೆ, ಫ್ರಾನ್ಸಲ್ಲಿ ಇರುವ ಅನಿವಾಸಿ ಭಾರತೀಯರ ಬಗ್ಗೆ

ಹೆಮ್ಮೆ, ನಮ್ಮ ಅದ್ಭುತ ಪರಂಪರೆಯ ವಿವರಣೆ, ಭಾರತದಲ್ಲಿ ಮೂಲಧನ ತೊಡಗಿಸಲು ಆಹ್ವಾನ, ಇನ್ನು ಕೆಲವೇ ದಿನಗಳಲ್ಲಿ ಐಫೆಲ್ ಟವರ್ ನೋಡಲು ಬರುವ ಭಾರತೀಯರು ನಮ್ಮ ರೂಪಾಯಿಗಳಲ್ಲೇ ಇಲ್ಲಿ ವ್ಯವಹರಿಸಬಹುದು ಎಂಬ ಸಂತಸಕರ ಮಾಹಿತಿ, ಭಾರತದಲ್ಲಿ ಜುಲೈ 14ರಂದು ಲಾಂಚ್ ಆಗಲಿರುವ ಚಂದ್ರಯಾನ–3; ಹೀಗೆ ನಿರರ್ಗಳವಾಗಿ ಮಾತಿನ ಮಳೆಯಲ್ಲಿ ನಮ್ಮನ್ನು ತೋಯಿಸಿದರು. ನೆರೆದ ಭಾರತೀಯರಿಂದ ಅವಿರತವಾಗಿ ಮೆಚ್ಚುಗೆ, ಹರ್ಷದ ಉದ್ಗಾರಗಳು!

ಸ್ವಲ್ಪ ದೂರದಿಂದ ನೋಡಿದಂತೆ ಅನಿಸಿದರೂ, ಹಿಂದೆಯೇ ಇದ್ದ ದೊಡ್ಡ ಟಿ.ವಿ. ಪರದೆಯ ಸಹಾಯದಿಂದ ಕೊರತೆ ಅನ್ನಿಸಲಿಲ್ಲ.

ಎಲ್ಲರಿಗೂ ವಿದಾಯ ಹೇಳಿ ಪ್ರಧಾನಿ ವೇದಿಕೆಯಿಂದ ನಿರ್ಗಮಿಸಿದ ಎಷ್ಟೋ ಹೊತ್ತಿನ ವರೆಗೆ ಕರತಾಡನ ರಿಂಗಣಿಸುತ್ತಲೇ ಇತ್ತು! ಮೋದಿ! ಮೋದಿ! ಎಂಬ ಘೋಷಣೆ ನಡೆಯುತ್ತಲೇ ಇತ್ತು!

ಸೆಕ್ಯುರಿಟಿ ಕಾರಣದಿಂದ ಮೋದಿಯವರ ಕಾರು ಹೊರಟ ಮೇಲೆಯೇ ನಮಗೆಲ್ಲ ಆಡಿಟೋರಿಯಂನಿಂದ ಹೊರಬರಲು ಅನುಮತಿ ಸಿಕ್ಕಿತು.

ಸುಮಾರು ಒಂಭತ್ತು ಗಂಟೆಗೆ ಹೊರಗೆ ಬಂದರೆ ಹೊರಗೆ ಇನ್ನೂ ನಿಗಿನಿಗಿ ಬಿಸಿಲು! ರಾತ್ರಿ 9ರ ಹೊತ್ತಿನಲ್ಲಿ! ಬೇಸಿಗೆಯ ಫ್ರಾನ್ಸ್!

ಒಂದಿಷ್ಟು ಜನ ಕನ್ನಡಿಗರು ಮತ್ತೆ ಮಾತಿಗೆ ಸಿಕ್ಕಿದರು. ಎಲ್ಲ ಒಟ್ಟಿಗೆ ಫೋಟೋ ಸೆಷನ್. ಅಳಿಯ ಹರಿಕೃಷ್ಣನ ಆಫೀಸ್‌ನ ಭಾರತೀಯ ಸಹೋದ್ಯೋಗಿಗಳು ಮಗಳು ಸಂಧ್ಯಾಳ ಪರಿಚಯದ ಕುಟುಂಬಗಳು ಎಲ್ಲರೂ ಭೇಟಿ. ಪಕ್ಕಾ ಬೆಂಗಳೂರಿನ ಯಾವುದೋ ಸಮ್ಮೇಳನದಲ್ಲಿದ್ದಂತೆ ಭಾಸ!

ಮನೆಗೆ ಬರುವಾಗ ರಾತ್ರಿ ಹತ್ತೂವರೆಗೆ ಹತ್ತಿರ. ಮನಸ್ಸಿನಲ್ಲೆಲ್ಲ ವಿಶೇಷ ಅನುಭವದ ಹರುಷದ ಸಂಚಾರ

ಪ್ಯಾರಿಸ್‌ನಂತಹ ವಿದೇಶಿ ನೆಲದಲ್ಲಿ ಯಾವುದೇ ತಂಟೆ ತಾಪತ್ರಯವಿಲ್ಲದೆ ಆದರ ಪೂರ್ವಕ ನಡೆಯೊಂದಿಗೆ ನಮ್ಮ ಪ್ರಧಾನಿಯವರನ್ನು ಪ್ರತ್ಯಕ್ಷ ನೋಡುವ, ಅವರ ಮಾತುಗಳನ್ನು ಆಲಿಸುವ ಅವಕಾಶ ಸಿಕ್ಕಿತೆಂದರೆ ನಮ್ಮ ಸುಯೋಗವಲ್ಲದೆ ಮತ್ತೇನು!

**ಸರ್ವಜ್ಞ(ಕಸ್ತೂರಿ) ವಚನ**

ಕೈ ಬೆರಳ ಉಗುರನು
ಗಂಡ ಜಗಿಯುವುದ ನೋಡಿ
ತಿದ್ದಿದಳು ಚಾಳಿಯನು
ಬಲು ಬೇಗ ಮಡದಿ
ಅವನ ಬಾಯ್ ಡೆಂಚರನು
ಪುಡಿ ಪುಡಿ ಮಾಡಿ

**– ನಾ. ಕಸ್ತೂರಿ**



# ಸೆಕ್ಯೂರಿಟಿ ಕ್ಯಾಮೆರಾದ ಕೋ(ಕೀ)ಟಲೆಗಳು ಮತ್ತು ಪೊಲೀಸಣ್ಣ

ಜಯಶ್ರೀ ದೇಶಪಾಂಡೆ

**"ಗ**ನ್ ಲೈಸೆನ್ಸಿಗೆ ಯಾರೆಲ್ಲ ಅರ್ಹರು?'' ಎಂಬ ಜಿಜ್ಞಾಸೆಯನ್ನು ಹೊಸಬಗೆಯಲ್ಲಿ ಕಾಪ್‌ನ ಮುಂದಿಟ್ಟ ಮಹಾಶ್ವೇತೆ ಡಾಲರ್ ಮಹಿಳೆಯೊಬ್ಬಳ ಉಪದ್ವ್ಯಾಪೀ ಪ್ರಶ್ನೆಯನ್ನು ಅಟ್ಲಾಂಟಾ ನಗರಿಯ ಷೆರೀಫ್ ಎಂಬ ಪೊಲಿಸ್/ ಕಾಪ್ ನಿಭಾಯಿಸಿದ ಪರಿಯನ್ನು ಪ್ರತ್ಯಕ್ಷದರ್ಶಿಯಾಗಿ ಕಂಡ ನಾನು– ತುಂಬಾ ಮೆಚ್ಚಿದ್ದರಿಂದ ಈ ಬಗ್ಗೆ ನಿಮಗೆಲ್ಲ ಹೇಳದಿರಲಾರೆ. (ಷೆರಿಫ್ ಎಂದರೆ ನಮ್ಮಲ್ಲಿ ಸೂಪರಿಂಟೆಂಡೆಂಟ್ ಆಫ್ ಪೊಲಿಸ್ ಇರೋ ಹಾಗೆ)

ಪೀಠಿಕೆ

ನಮ್ಮ ಅಥವಾ ನಮ್ಮಂಥ ಅನೇಕ ದೇಶಗಳೇ ಕಳ್ಳತನ, ದರೋಡೆಗಳ 'ಠೇಕಾ' ಏನೂ ತೊಗೊಂಡಿಲ್ಲ ಅನ್ನುವ ಹಾಗೆ ಇಲ್ಲಿಯೂ ಕಳ್ಳರ ಸಾಮ್ರಾಜ್ಯದ ಮೆಂಬರ್ ಮಹನೀಯರುಗಳು ಆರಾಮ್ಸೆ ಮನೆಮಠಗಳ ಮೇಲೆ – ಕಣ್ಣಿಗೆ ಎಣ್ಣೆ ಬಿಟ್ಕೊಂಡು ಕಾದು ಕೂತು– ಕನ್ನ ಹಾಕುವ ಅವಕಾಶ ಸಿಕ್ಕಾಗ ತಪ್ಪದೆ ನಿದ್ದೆಗೆಟ್ಟು ಹೋಗಿ ಲೂಟಿಪೀಟಿ ಮಾಡಿಕೊಂಡು (ಪರ)'ದೇಸಿ'ಗಳಾದ ಭಾರತದ ಪುತ್ರಪುತ್ರಿಯರು ಧರಿಸುವ ಚಿನ್ನದೊಡವೆಗಳನ್ನು ಕದ್ದು ಪಾರಾಗಿ ಕೆಲವೊಮ್ಮೆ ಆನಂದವಾಗಿ ಕದ್ದಮಾಲು ದಕ್ಕಿಸಿಕೊಳ್ಳುತ್ತ, ಕೆಲವೊಮ್ಮೆ ಗ್ರಹಚಾರ ಕೆಟ್ಟು ಸಿಕ್ಕಿಬೀಳುತ್ತ ಜೈಲಿನ ರೊಟ್ಟಿ– ಇದು ಯೂಎಸ್ ದೇಶದ ಜೈಲ್ ಸಮಾಚಾರ, ಹಾಗಾಗಿ ಬ್ರೆಡ್– ಕಡಿಯುತ್ತ ಸುಖವಾಗಿದ್ದಾರಂತೆ.

ಮುಂದೆ...

ಇಷ್ಟೆಲ್ಲಾ ಪುರಾಣ ಹೇಳುವ ಪ್ರಸಕ್ತಿ ಯಾಕೆ ಬಂತು ಅಂತೀರಿ ಗೊತ್ತು. ನನ್ನ ಊರಿಂದ ಅಟ್ಲಾಂಟಾಕ್ಕೆ ಬಂದ ಎರಡು ದಿನಕ್ಕೆ ಬೆಳಿಗ್ಗೆದ್ದು ನನ್ನ ಮಾಮೂಲಿ ವಾಕ್ ಹೋಗೋಣ ಅಂತ ಮನೆಬಾಗಿಲ ನಾಬ್ ತಿರುಗಿಸಿದೆನಾ? 'ಹೊಂಯ್ಯೋ... ವಂಯ್ಯೋ... ವಂಯ್ಯೋ...' ಅಂತ ಕಿವಿಗಡಚಿಕ್ಕುವ ಫೋರ್ಸಿನಲ್ಲಿ ಸೈರನ್ ಬಡಕೊಂಡಿತು! ಆಕಾಶವೇ ಭೋರ್ಗರೆದಂಥ ಭಯಂಕರ ಬೊಬ್ಬೆ ಅದು! ನಾ ಏನು ಮಾಡಿದರೂ ನಿಲ್ಲಲೇ ಇಲ್ಲ.. ಆಗ ಮೇಲಿನ ಫ್ಲೋರಿನಲ್ಲಿದ್ದ ನಮ್ಮ ಮನೆಯ ಸಮಸ್ತ ಸದಸ್ಯರು ಥೇಟು ಭೂಕಂಪವಾದಾಗ ಹೊರಗೋಡುವ ಸ್ಪೀಡಿನಲ್ಲಿ ಎಗರಿ ಎದ್ದು ಹೋಗಿ ಅಲ್ಲೇ ಮೇಲೆ ಯಾವ್ಯಾವುದೋ ಗುಂಡಿಗಳನ್ನು ಒತ್ತಿ ಅದರ ಬಾಯಿ ಮುಚ್ಚಿಸಿದರು. (ನನಗೆ ಈ ರಕ್ಷಣಾ ಪಡೆಯ ಕಾರ್ಯತಂತ್ರದ ಬಗ್ಗೆ ಅವರು ಈ ಮೊದಲು ಎಷ್ಟೇ ತಿಳಿಸಿ ಹೇಳಿದ್ದರೂ) ನನ್ನ ಮರೆವೆಂಬ ಮಹಾಮೋಡಿ ಕೈಕೊಟ್ಟು ನಡೆದಾಗ ನಡೆದ ಗಲಾಟೆಯಿದು! ಇದರ ಹಿನ್ನೆಲೆಯಲ್ಲಿರುವ ಕಾರ್ಯಕಾರಣ ಸಂಬಂಧ ಹೀಗಿದೆ ಕೇಳಿ.

ಎಲ್ಲೋ ಇದ್ದವರು ಇಲ್ಲಿ ಬಂದು ಬದುಕಬೇಕಾದ ಅನಿವಾರ್ಯ ಇಲ್ಲೇ ಇದ್ದವರಿಗೂ ಸಮಪ್ರಮಾಣದಲ್ಲಿರುವುದು ನಿಜ ತಾನೇ? ಹಾಗೆ ಇಲ್ಲಿ ಬಂದಾದಮೇಲೆ ಮೊದಲೇ ತಳವೂರಿದ ಅಮೆರಿಕನ್ನರ ಅಕ್ಕಪಕ್ಕದಲ್ಲೇ ಮನೆ ಮಾಡಿಕೊಳ್ಳುವ ಗುಂಪು



ವಸತಿಗಳಿಗೆ ‘ಕಮ್ಯೂನಿಟಿ ಡ್ವೆಲ್ಲಿಂಗ್’ ಅಂತಾರೆ ಇಲ್ಲಿ, ಅರ್ಥಾತ್ ಬಿಡಿಬಿಡಿ ಬಂಗಲೆಗಳ ಸಮುಚ್ಚಯ. ಚದರಡಿ ಲೆಕ್ಕ ಹಾಗೂ ಪರ್ಮಿಟೆಡ್ ಡಿಸ್ಪೈನ್ಸ್ ಪ್ರಕಾರ ಬಿಲ್ಡರುಗಳೇ ಕಟ್ಟಿಕೊಟ್ಟು ನೀವು ಕಷ್ಟಪಟ್ಟು ಕೈಕೆಸರು ಮಾಡಿಕೊಂಡು ‘ಮನೆ ಕಟ್ಟಿ ನೋಡು’ ಗಾದೆಯ ಹಂಗು, ಒದ್ದಾಟಗಳಿಲ್ಲದೇ ಮಾಲೀಕರಾಗುವ ಸುಖ ಅನುಭವಿಸಬಹುದಾದ ವಸತಿ ವ್ಯವಸ್ಥೆ.



ಇನ್ನು ಮನೆ ಅಂದಮೇಲೆ ರಕ್ಷಣೆ ಅದರದೇ ಭಾಗ ತಾನೇ? ಹಾಗಾಗಿ ಇಲ್ಲಿಯ ಮನೆರಕ್ಷಕ/ಸೆಕ್ಯೂರಿಟಿಯ ಗಾಥೆ ಹೀಗೆ ರೋಚಕವೂ ರಂಜನೀಯವೂ ಆಗಿದ್ದು ನನ್ನ ಅಡ್ವೆಂಚರ್‌ಗಳಿಂದಾಗಿ ಅಂತ ಪ್ರಾಂಜಲವಾಗಿ, ನಿರ್ಭಿಡೆಯಿಂದ ಒಪ್ಪಿಬಿಡ್ತೀನಿ.

ಬಂದ ದಿನವೇ ನನಗೆ ಈ ಯಂತ್ರೋದ್ಭವೀ ಸೆಕ್ಯೂರಿಟಿಗಳ ಪರಿಚಯ ಮಾಡಿಕೊಟ್ಟು ಮಗಳು ಅದರ ಸಂಪೂರ್ಣ ಜಾತಕ ಬಿಡಿಸಿ ಹೇಳಿದ್ದಳು. ‘ಇಗೋ ಇವೆಲ್ಲಾ ಕ್ಯಾಮರಾಗಳು. ಪ್ರತಿಯೊಂದು ಬಾಗಿಲು ಕಿಟಕಿಗೂ ಸೆನ್ಸರ್ ಇರುತ್ತೆ. ನಾವು ಹೊರಹೋಗುವಾಗ ಮತ್ತು ರಾತ್ರಿ ಸಮಯದಲ್ಲಿ ಇದನ್ನ ಆನ್ ಮಾಡಿಡ್ತೀವಿ. ಯಾರೇ ಒಳಗೆ ಕಾಲಿಟ್ಟರೂ ಟಕ್ಕಂತ ಫೋಟೋ ಹಿಡೀತವೆ. ಇನ್ನು ಎಲ್ಲಾ ಮುಖ್ಯ ಬಾಗಿಲು, ಕಿಟಕಿಗಳಿಗೂ ಸೆನ್ಸರ್ ಇದ್ದಿದ್ದು ಗೊತ್ತಿಲ್ದೆ ಮನೆ ಸೈಲೆಂಟಾಗಿದೆ, ಆದ್ದರಿಂದ ಒಳಗೆ ಯಾರಿಲ್ಲ ಬಿಡು ಅಂತ ಭಾವಿಸಿ ಯಾರೋ ಒಬ್ಬ ಅರ್ಥಾತ್ ಕಳ್ಳ ನುಗ್ಗಿದ ಅಂತಿಟ್ಕೋ, ಆಗ ಹೀಗೆ ಸೈರನ್ ಹೊಡ್ಕೊಂಡುಬಿಡುತ್ತೆ.

“ಅಂದರೆ ಈಗ ಆಯ್ತಲ್ಲ ಹಾಗೆ ಏನು?” ಅಂದು ನಾ ಅಷ್ಟು ಹೊತ್ತೂ ಕೂಗಿ ಕೂಗಿ ಸುಮ್ಮನಾಗಿದ್ದ ಅದನ್ನೇ ನೋಡಿ ಮರುಗಿದೆ.

“ಹೂಂ...ಅಲ್ಲಿ ನಾವು ಸೆಕ್ಯೂರಿಟಿಯ ಕಂಟ್ರೋಲ್ ಸೆಂಟರಿನಲ್ಲಿ ರಿಜಿಸ್ಟರ್ ಮಾಡ್ಕೊಂಡಿರ್ತೀವಿ. ಈಗ ನೀ ತೆರೆದ ಹಾಗೆ ಬಾಗಿಲು ಓಪನ್ ಏನಾದ್ರೂ ಆದರೆ ಅಲ್ಲಿಗೆ ತುರ್ತು ಸಂದೇಶ ಹೋಗುತ್ತೆ. ತಕ್ಷಣ ಅವರಿಂದ ನಮಗೊಂದು ಫೋನು ಬರುತ್ತೆ; “ಈಗ ಕೂಗಿದ್ದು ನಿಮ್ಮದೇ ಮನೆಯ ಜಾಗಟೆಯೇ? ಹೌದಾ?” ಅಂತ ಅವರು ಕೇಳ್ತಾರೆ. ಆಗ ನಾವು “ಹೌದು ನಮ್ಮದೇ” ಅಂತ ಕನ್ಫರ್ಮ್ ಮಾಡಿದಿವಿ ಅಂದರೆ ತಟ್ಟಂತ ಐದಂದ್ರೆ ಐದೇ ಐದು ನಿಮಿಷದಲ್ಲಿ ಇಲ್ಲಿಗೆ ಬಂದೂಬಿಡ್ತಾರೆ.” ಅಂದಳು.



“ಯಾರು ಬರ್ತಾರೆ?” ಅಂದುಬಿಟ್ಟೆ ನಾ ಪೆದ್ದಿಯ ಹಾಗೆ. ಬೆಳತನಕ ರಾಮಾಯಣ ಕೇಳಿ ರಾಮನಿಗೆ ಸೀತೆ ಏನಾಗಬೇಕು ಎಂಬ ಪ್ರಶ್ನೆ ಕೇಳಿದವರನ್ನು ನೋಡುವ ಕಣ್ಣಲ್ಲಿ ನನ್ನನ್ನು ನೋಡಿ “ಇನ್ಯಾರು? ಕಾಪ್ಸ್ ಬರ್ತಾರೆ” ಅಂದಳು.

‘ಏ’ ಅಂದೆ ನಾನು. ನಾನೇ ಹೊರ ಹೊಗಿ ಬರಬೇಕೆಂದ್ರೂ ಇದೇ ರಾಮಾಯಣವೇ? ಅಂತ ದುಃಖಾರ್ತಳಾದೆ.

ಇದೇನಿದು ಕರ್ಮ? ನಮ್ಮಿಂಡಿಯಾದಲ್ಲಾದ್ರೆ ‘ಬಾಗಿಲೆಳೆದುಕೊಂಡು’. ಒಂಚೂರು ಹಾಗೇನೇ ‘ಅಲ್ಲಿಲ್ಲಿಗೆ’ ಅಥವಾ ಎಲ್ಲೆಂದರಲ್ಲಿಗೆ ಕಾಲಾಡಿಸಿಕೊಂಡು ಹೋಗಿಬರುವ ಸ್ವಾತಂತ್ರ್ಯ ನಮಗಿನ್ನೂ ಇದೆ– ಅಥವಾ ಹಾಗಂದುಕೊಂಡಿದ್ದೀನಿ ನಾ... ನಮ್ಮ ಅಪಾರ್ಟಮೆಂಟಿನಲ್ಲಿ ಕೊನೆಮನೆ, ಕೆಳಗಿನಮನೆ, ಒಮ್ಮೊಮ್ಮೆ ಒಂಬತ್ತನೇ ಮಹಡಿಯ ನವೀನಕ್ಕ, ಯಾ ಮೇಲಿರೋ ಪಿ.ಶೇಷಾದ್ರಿ ಆವರ ಮನೆ, ಹೀಗೆ ಹತ್ತಿಪ್ಪತ್ತು ನಿಮಿಷದ ವಿಸಿಟಿಗೆ ಸಲೀಸಾಗಿ ನಾ ಹೋಗ್ಹೋಗಿ ಬರುವ ನೆನಪಾಯ್ತು. ಇರಲಿ! ನಮ್ಮೂರು ಎಂದಿಗಿದ್ರೂ ನಮ್ಮೂರೇ, ಅಷ್ಟಲ್ಲದೇ ‘ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ’ ಸುಳ್ಳೇನು ಮತ್ತೆ?

ನನಗಿದೆಲ್ಲ, ಅಂದರೆ ಸೆಕ್ಯೂರಿಟಿ ಉಪಕರಣಗಳೊಂದಿಗೆ ನಮಗಿರಬೇಕಾದ ಸ್ನೇಹಸಂಬಂಧವು ಎಷ್ಟು ಅರ್ಥ ಆಯಿತೋ ಕೇಳಬೇಡಿ... ಆದರೆ ಇದೇ ಕಾರಣಕ್ಕೆ 'ಕಾಪ್' ಅನಿಸಿಕೊಳ್ಳುವ ಇಲ್ಲಿನ ಪೊಲೀಸಣ್ಣಂದಿರೊಂದಿಗೆ ಭೇಟಿ ಮಾತ್ರ ಬಲು ಬೇಗ ಜರುಗಿದ ಪ್ರಸಂಗವಿಶೇಷ ಒಂಚೂರು ಹೀಗಿದೆ. ಅದನ್ನು ಹೇಳಲೆಂದೇ ಬಂದೆ.

ನಮ್ಮ ಕಮ್ಯೂನಿಟಿಯ, ವಸತಿ ಸಮುಚ್ಚಯದ ಅನ್ನಿ ಸರಳಗನ್ನಡದಲ್ಲಿ, ಹಿಂಭಾಗದಲ್ಲಿ ಹಚ್ಚಹಸುರಿನ ಕಾಡಿನಂತಿದ್ದ ಜಾಗದ ಇನ್ನೊಂದು ಕಮ್ಯುನಿಟಿಯ ಮನೆಗಳ ಗುಂಪಿನಲ್ಲಿ ಇದ್ದೊಂದು ಮನೆ ಇದ್ದಕ್ಕಿದ್ದಂತೆ ಗಲಾಟೆಯ ಗೂಡಾಯ್ತು. ಕಳ್ಳರ ಕಣ್ಣು ಬಿದ್ದ ಗಲಾಟೆ ಅದು.

ಇರಿ ಇರಿ... ಕಳ್ಳತನ ಅಂದಾಕ್ಷಣ ‘ಅಯ್ಯೋ ಅಯ್ಯೋ ಅಂತ ಎಗರಿ ಬೀಳುವವರಲ್ಲ ನಾವು ಭಾರತೀಯರು, ಅದೂ ಇನ್ನೊಬ್ಬರ ಮನೆಯಲ್ಲಾದಾಗಲಂತೂ! ‘ಛೇ. ಚೆ ಚೇ. ಛೀ’ ಅಂದು ಸರಕಾರ, ಪೋಲೀಸರನ್ನು, ಮನೆಯವರ ಬೇಜವಾಬ್ದಾರಿತನವನ್ನೂ ಒಂದಿಷ್ಟು ಬೈದು ಮತ್ತೆ ನಮ್ಮ ನಮ್ಮ ಜೀವನ ಮುಂದುವರಿಸುವ ಕಾಯಕದಲ್ಲಿರ್ತೀವಿ. ಅದು ಇಲ್ಲಿ ಸ್ವಲ್ಪ ಭಿನ್ನ ಕಣ್ರೀ.

ಪಕ್ಕದ ಕಮ್ಯೂನಿಟಿಯಲ್ಲಿ ಕಳ್ಳತನ ಏನು ನಡೆದು ಬಿಟ್ಟಿತೊ ಇಲ್ಲಿನ ಪೊಲೀಸ್ ಇಲಾಖೆಯ ಮಾನಾಭಿಮಾನಕ್ಕೆ ಅದು ಕ್ಷಣಮಾತ್ರದಲ್ಲಿ ಬಿದ್ದ ದೊಡ್ಡ ಪೆಟ್ಟಾಗಿ ಪರಿಣಮಿಸಿದ ಸೂಚನೆಯೋ ಏನೋ ಅನ್ನುವಂತೆ ನಮ್ಮಿಡೀ ಲೊಕ್ಯಾಲಿಟಿಯ ವಾಸಿಗರನ್ನು ಸಲಹೆ ಸೂಚನೆಯ ಸಭೆ ಒಂದಕ್ಕೆ ಇಲ್ಲಿನ ಷೆರಿಫ್ ಎಂಬ ಪೋಲಿಸಧಿಕಾರಿ ಕರೆದು ಆತ್ಮೀಯ ಆಹ್ವಾನವೊಂದನ್ನು ನೀಡಿದರು.



ರಾಜದೃಷ್ಟಿ, ದೇವದೃಷ್ಟಿ ಅಥವಾ ಪೊಲೀಸ್ ದೃಷ್ಟಿ ಬೀಳುವುದು ಅಷ್ಟೇನೂ ಹಿತವಲ್ಲ ಅಂತಾರೆ. ಅಂದರೆ ಅವೆಲ್ಲ ನಮ್ಮ ಮೇಲೇನಾದರೂ ಬಿದ್ದರೆ–ಗಿದ್ದರೆ ಕೆಟ್ಟದ್ದೋ ಒಳ್ಳೆಯದೋ ಎರಡರಲ್ಲಿ ಒಂದು ಖಾತ್ರಿ ಅಂತೆ! ಹಾಗಾಗಿ ಅದು ಬೀಳದೇ ಇರಲಿ ಅಂತ (ನಮ್ಮಲ್ಲಿನ ಹಾಗೆ) ಪ್ರಾರ್ಥಿಸುತ್ತಲೇ ಜನ ಎಲ್ಲಾ ಷೆರಿಫ್


ಕರೆದ ದಿನ ಕರೆದ ಸ್ಥಳಕ್ಕೆ ಕರೆದ ಸಮಯದಲ್ಲಿ ಹಾಜರಾದೆವು.

ಧೀರಗಂಭೀರ ಕೆಂಪು ವದನದ ತುಂಬೆಲ್ಲ ಕಾಳಜಿ ಛಾಪೊತ್ತಿದಂತಿದ್ದ ಷರೀಫು ಮತ್ತವರ ಇನ್ನುಳಿದ ಕಾಪ್ಸ್ ಪಡೆಯನ್ನು ಕಂಡು ನಮ್ಮ ಎದೆಗಳೂ ದ್ರವಿಸಿಹೋದುವು.

'ಬನ್ನಿ ಬನ್ನಿ ಕೂತ್ಕೊಳ್ಳಿ' ಅನ್ನುವ ಅವರ ಆಹ್ವಾನ ಅಲ್ಲಿ ನೆರೆದ ಅತಿ ಬಿಳಿ, ಬಿಳಿ, ಗುಲಾಬಿ, ತಿಳಿಗುಲಾಬಿ, ಆಫ್ ವೈಟು, ತಿಳಿಗೋಧಿ, ಗೋಧಿ, ಮತ್ತು ಡಾರ್ಕ್, ಡಾರ್ಕರ್, ಡಾರ್ಕೆಸ್ಟ್ ವರ್ಣಪೂರಿತ ನಮ್ಮ ಲೊಕ್ಯಾಲಿಟಿಯ ಸಮಸ್ತ ವಾಸಿಗರನ್ನೂ ಉದ್ದೇಶಿಸಿದ್ದನ್ನು ಕಂಡು ಪ್ರಪಂಚ ಎಷ್ಟುವರ್ಣಭರಿತವಾಗಿದೆಯಲ್ಲವೇ ಅಂತೆಲ್ಲ ಯೋಚಿಸುತ್ತಿದ್ದ ನನಗೆ ಷೆರಿಫ್ ಆಡಿದ ಮಾತುಗಳಲ್ಲಿ ಪ್ರಜಾಜನರ ಬಗೆಗಿನ ಕಾಳಜಿ ಉಮ್ಮಳಿಸಿದ್ದು ಕಂಡು 'ಹೀಗೂ ಇರತಾರಪ್ಪೋ ಪೊಲೀಸರು' ಅನಿಸಿದ್ದು ಸುಳ್ಳಲ್ಲ. ನಿಜ ಅಲ್ಲವೇ... ಪ್ರಪಂಚದ ಯಾವುದೇ ಮೂಲೆಯ ಜನರಲ್ಲಿಯೂ ಭಗವಂತ ಬೇಸಿಕ್ ಗುಣವಾಗಿ ಮಾನವೀಯತೆ ಎಂಬುದನ್ನು ತುಂಬದೆ ಇರುವನೆ? ನಮ್ಮಲ್ಲಿ ಸಹ ಜನಕ್ಕೊಳ್ಳೆಯದಾಗಲಿ ಅನ್ನುವ ಪೊಲೀಸ್ ಜನಎಷ್ಟಿಲ್ಲ... ತಮ್ಮ ಪ್ರಾಣವನ್ನೇ ಒತ್ತೆಯಿಟ್ಟು ಯಾರದೋ ಪ್ರಾಣ ಉಳಿಸುವ ಪೊಲೀಸರು ಕಡಿಮೆಯೇ?

ಇರಲಿ, ಕಿಕ್ಕಿರಿದು ನೆರೆದ ಆ ಸಭಾಗಾತ್ರವನ್ನು ಕಂಡೇ ಕೊಂಚ ಗಲಿಬಿಲಿಗೊಂಡಿದ್ದ ಆ ಅಮೇರಿಕನ್ ಕಾಪ್ಸ್ ತಮ್ಮ ಸೌಹಾರ್ದಸಭೆಯ ಯಶಸ್ಸಿಗಾಗಿ ಮನಸ್ಸಿಲ್ಲಷ್ಟು ಪ್ರಾರ್ಥಿಸಿಕೊಂಡಿರಲೇಬೇಕು.

ಒಟ್ಟಿನಲ್ಲಿ ಹೇಳಬೇಕೆಂದರೆ "ನಮ್ಮ ರಕ್ಷಣಾ ವಿಭಾಗದಡಿ ಬರುವ ನಿಮ್ಮೆಲ್ಲರ ಸಮಗ್ರ ರಕ್ಷಣೆ ನಮ್ಮ ಜವಾಬ್ದಾರಿ... ಆದ್ದರಿಂದ ನಿಮ್ಮೆಲ್ಲರ ಪ್ರಾಣ. ಮನೆಮಠ, ಧನಕನಕಗಳನ್ನು ಕಳ್ಳರಿಂದಕಾಪಾಡುವುದು ನಮ್ಮ ಹೊಣೆ, ಆದ್ಯತೆ ಮತ್ತು ಕರ್ತವ್ಯ. ಅದನ್ನು ನಾವು ಮಾಡಲು ಕಟಿಬದ್ಧರು. ದಿನಕ್ಕಿರುವ ಇಪ್ಪತ್ತುನಾಲ್ಕು ಗಂಟೆಗಳ ಯಾವುದೇ ಕ್ಷಣದಲ್ಲೂ ನೀವು ನಮ್ಮ ಬಾಗಿಲನ್ನು 911 ಸಂಖ್ಯೆಯ ಗಂಟೆ ಬಾರಿಸಿ ತಟ್ಟಬಹುದು... ನಮ್ಮ ನಿದ್ದೆ ಕೆಟ್ಟೀತೆಂದು ಯೋಚಿಸಬೇಡಿ. ನಾವಿರುವುದೇ ನಿಮಗಾಗಿ..." ಅನ್ನುವ ಮಂತ್ರವನ್ನು ಅವರುಗಳು ನಾನಾ ಬಗೆಯಾಗಿ ಉಚ್ಚರಿಸಿದರು. ಅರ್ಧ ಗಂಟೆ ತಮ್ಮ ಕಾರ್ಯ-ಕಾರಣ-ಕಷ್ಟಗಳ ಬಗ್ಗೆ ನಮ್ಮ ಮನದುಂಬಿಹೋಗುವಂತೆ ಸಂಭಾಷಿಸಿದರು ಶೆರಿಫ್. ಅದರಲ್ಲಿ ಪ್ರಜೆಗಳು ಉಪಯೋಗಿಸಬಹುದಾದ ಗನ್‌ಗಳ ಬಗ್ಗೆಯೂ ಮಾಹಿತಿ ಇತ್ತು- ನಾವೆಲ್ಲಾ ಕಿವಿಗೊಟ್ಟು ಕೇಳಿ ಆಗಿದೆ ಎಂದು ಖಾತ್ರಿ ಆದಮೇಲೆ ಡೂಸ್ ಅಂಡ್ ಡೋಂಟ್ಸ್‌ಗಳ (ಇದು ಮಾಡಿ- ಅದು ಮಾಡಬೇಡಿ ಎಂಬಂಥಾ) ಪೂರ್ವ ಮುನ್ನೆಚ್ಚರಿಕೆಗಳ ದೊಡ್ಡ ಫೈಲೊಂದನ್ನು ನಮ್ಮೆಲ್ಲರಿಗೂ ವಿತರಿಸಿ "ಸಂಶಯಾಸ್ಪದ ವ್ಯಕ್ತಿಗಳ ಸುಳಿದಾಟವೇನಾದರೂ ಕಣ್ಣಿಗೆ ಬಿದ್ದಲ್ಲಿ ತಕ್ಷಣ ಫೋನೆತ್ತಿಕೊಳ್ಳಿ, ನಮ್ಮನ್ನು ಕರೆಯಿರಿ. ನಾವು ಬಂದೇ ಬರ್ತೀವಿ...' ಅನ್ನುತ್ತಾ ನಕ್ಕು ನೆರೆದಿದ್ದವರ ಮೇಲಿನ ಭಾರದ ಬಂಡೆಗಳನ್ನು ಕೆಳಗಿಳಿಸಿದರು. ಕೆಳಗಿಳಿಸಿ, "ಇನ್ನು ನಿಮ್ಮ ಪ್ರಶ್ನೆಗಳೇನಿದ್ದರೂ ಕೇಳಿ, ಸ್ವರಕ್ಷಣಾ ಕಾರಣಕ್ಕೆ ಗನ್ ಪರವಾನಗಿಗಳನ್ನು ನಮ್ಮ ಸರಕಾರ ಪ್ರಜೆಗಳಿಗೆ ಕೊಡುವ ಯೋಜನೆಯ ಬಗ್ಗೆ ಕೇಳುವುದಿದ್ದರೆ ಕೇಳಿ, ಸಂಕೋಚ ಬೇಡ" ಅಂತ ನಕ್ಕರು.



ಆ ಹೊತ್ತಿನಲ್ಲಿ ಮೇಲ್ಕಂಡ ಬಿಳಿಯಮ್ಮ ಕೇಳಿದ ಪ್ರಶ್ನೆ. "ಓಕೆ. ನನ್ನ ಕಾರಿನೆದುರಿನಲ್ಲಿ ಬಂದ ಒಬ್ಬಾತನ ನಡವಳಿಕೆ ನನಗೆ ಸಂಶಯಾಸ್ಪದ ಅನಿಸಿತು

ಅಂತಿಟ್ಟುಕೊಳ್ಳಿ. ಆಗ ನಾನವನ ಕಾರಿನ ಟೈರಿಗೆ ಗುಂಡು ಹೊಡೆಯಬೇಕು. ಅದಕ್ಕಾಗಿ ನನಗೆ ಗನ್ ಲೈಸೆನ್ಸ್ ಕೊಡ್ತೀರಿ ತಾನೇ?"

ಆ ಮಹಾಶ್ವೇತೆಯ ಮಾತಿಗೆ ಇಡೀ ಸಭೆ ಬೆಚ್ಚಿ ಬೆರಗಾಗಿ ಅವಳನ್ನೇ ನಿಟ್ಟಿಸತೊಡಗಿತು. ಸ್ವರಕ್ಷಣೆ ಮತ್ತು ಬೇಟೆ ಇವೆರಡು ಕಾರಣಕ್ಕೆ ಇಲ್ಲಿ ಗನ್ ಲೈಸೆನ್ಸ್ ಕೊಡುವುದು ಮಾಮೂಲಿ, ಈ ಶ್ವೇತಮ್ಮ ಯಾವನ ಮೇಲೆಯೋ ಬಂದ ಸಂಶಯಕ್ಕೆ ಗುಂಡು ಹಾರಿಸಲು ತಯಾರಾಗಿ ನಿಂತಿದ್ದಲ್ಲ!

ಶೆರೀಫಣ್ಣನೂ ಕೊಂಚ ಗಲಿಬಿಲಿಗೊಂಡ ಅಂತ ನನಗನಿಸಿತ್ತು. ಆದರೆ ಇಂಥ ಪೆದ್ದಮ್ಮರನ್ನೆಷ್ಟು ನಿಭಾಯಿಸಿದ್ದನೋ ಆತ! ಅತ್ಯಂತ ಕೂಲಾಗಿ "ಜಗತ್ತಿನ ಯಾರಿಗೇ ಆದರೂ ಗನ್ ಲೈಸೆನ್ಸ್ ಕೊಟ್ಟೇನು. ಆದರೆ ನಿನಗೆ ಮಾತ್ರ ಕೊಡಲ್ಲ ತಾಯೀ" ಅಂದುಬಿಟ್ಟ. ಒಂದು ಕ್ಷಣ ಪಿನ್ ಡ್ರಾಪ್ ಸೈಲೆನ್ಸ್ ಅಲ್ಲಿ... ಆಮೇಲೆ ಬುಗ್ಗೆಯಂತೆ ಉಕ್ಕಿತು ನಗೆಯ ನಯಾಗರಾ.

ಅಲ್ಲ, ಯಾರದೋ ಮೇಲೆ ಸಂಶಯ ಬಂತು ಅಂತಿಟ್ಕೊಳ್ಳಿ, ಪಿಸ್ತೂಲ್ ಎತ್ತಿ ಹೊಡೀಬಹುದಾ? ಅವಳಿಗೆ ಇದಕ್ಕೆ ಗನ್ ಲೈಸೆನ್ಸ್ ಕೊಡಬೇಕಾ?

ಸರಿಯೋ ಅಲ್ವೋ ನೀವೇ ಹೇಳಿಬಿಡಿ!

**ಲಕ್ಷ್ಮಣ ಕೊರವಂಜಿ**

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷ್ಮಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



" ನಿಮ್ಮ ತಂದೆ ಮನೇಲಿದಾರೆಯೇ ಮಗು?" " ಇಲ್ಲ, ಹೊರಗೆ ಹೋಗಿದ್ದಾರೆ "
" ಕಛೇರಿಗೆ ಹೋಗಿದ್ದಾರೆಯೇ?" " ಇಲ್ಲ" " ಅದು ಹೇಗೆ ಗೊತ್ತು?"
" ಓಡಿ, ಓಡಿ ಹೋಗುತ್ತಿದ್ದರು "

# ಹೀಗೊಂದು ವಿದಾಯ

ಜ್ಯೋತಿ ರಾಜೇಶ್

**ತುಂ**ಬಾ ದಿನಗಳಿಂದ ಇದು ನನಗೆ ತೊಂದರೆ ಕೊಡುತ್ತಿದ್ದರೂ, ನೋವು ನೀಡುತ್ತಿದ್ದರೂ, ನನಗೆ ಬೇಸರವಾಗುತ್ತಿತ್ತೇ ಹೊರತು ನಾನೆಂದೂ ಅದನ್ನು ನನ್ನಿಂದ ದೂರ ಮಾಡುವ ಯೋಚನೆ ಮಾಡಿರಲಿಲ್ಲ. ನಮ್ಮ ಮನೆಯವರೂ, ಮಗನೂ ಕೂಡ 'ಇದೆಂಥ ಸೆಂಟಿಮೆಂಟ್ ನಿನ್ನದು? ಇಷ್ಟೊಂದು ಕಷ್ಟವಾಗುವಾಗಲೂ ಅದನ್ನು ಅನುಭವಿಸುತ್ತಾ, ನಿನಗೆ ಈ ಪರಿ ನೋವು ಕೊಡುವಂಥಹದ್ದನ್ನು ಸಹಿಸಿ ಕೊಳ್ಳುವ ಕರ್ಮವಾದರೂ ಏನು? ನೀನೇನು ಪ್ರಪಂಚದಲ್ಲಿ ಮೊದಲ-ನೆಯವಳಲ್ಲ, ಈ ಕೆಲಸ ಮಾಡುತ್ತಿರುವವಳು. ಎಷ್ಟೊಂದು ಜನ ಹೀಗೆ ಮಾಡಿದ್ದಾರೆ' ಎಂದೆಲ್ಲ ಹೇಳಿದರೂ ನನ್ನಲ್ಲಿ ಏನೋ ಒಂದು ಅಪರಾಧಿ ಭಾವ. 'ಇಷ್ಟು ದಿನ ನನ್ನ ದೇಹದ ಭಾಗವೇ ಆಗಿದ್ದ ಇದನ್ನು ಮುಂದೆ ನನಗೆ ತೊಂದರೆಯಾಗಬಾರದು




ಎಂಬ ಒಂದೇ ಒಂದು ಉದ್ದೇಶಕ್ಕಾಗಿ ತೆಗೆದು ಬಿಸುಡುವುದಾದರೂ ಹೇಗೆ? ಕಣ್ಣಿಗೆ ಕಾಣದಿದ್ದರೂ ಅದರೊಟ್ಟಿಗಿನ ನನ್ನ ಬಾಂಧವ್ಯವನ್ನು ಇವರಿಗೆಲ್ಲ ಅರ್ಥ ಮಾಡಿಸುವುದಾದರೂ ಹೇಗೆ?' ಎಂಬ ಕಳವಳ ದಿನೇ ದಿನೇ ನನ್ನಲ್ಲಿ ಜಾಸ್ತಿಯಾಗತೊಡಗಿತು. 'ನನ್ನಲ್ಲೇ ಮೊಳಕೆಯೊಡೆದು ಇಷ್ಟೊಂದು ದಿನ ನನ್ನ ದೇಹದ ಭಾಗವಾದ ಇದನ್ನು ಇನ್ನು ಮುಂದೆ ನನ್ನದಲ್ಲವೆನ್ನಲು ನನ್ನ ಮನಸೇಕೋ ಒಪ್ಪುತ್ತಲೇ ಇಲ್ಲ. ಅದೂ ಬೇರೆಯವರಲ್ಲಿ, ಪರಿಚಯವಿಲ್ಲದವರಲ್ಲಿ ಅದನ್ನು ಬಿಟ್ಟು ಬರುವುದಾದರೂ ಹೇಗೆ?' ಎಂಬುದೇ ನನ್ನ ಮನವ ಕಾಡುವ ಚಿಂತೆ.

ಹಾಗೂ ಹೀಗೂ ಒಂದು ತಿಂಗಳು ಮುಂದೂಡಿದೆ, ಮಾನಸಿಕ, ದೈಹಿಕ ಕಿರಿಕಿರಿ ಎಲ್ಲ ಸಹಿಸಿದೆ. ಕೊನೆಗೆ ದೇವರ ಮೇಲೆ ಭಾರ ಹಾಕಿ ಏನಾದರಾಗಲಿ ಎಂದು ಆ ಸ್ಥಳಕ್ಕೆ ಹೋದೆ. ಅಲ್ಲಿನ ಉಪಕರಣಗಳನ್ನೂ, ಮುಖ ಮುಚ್ಚಿಕೊಂಡು ಗಂಭೀರವಾಗಿ ಓಡಾಡುತ್ತಿದ್ದವರನ್ನೂ, ಕಂಡು ಮತ್ತೂ ಭಯವಾಗತೊಡಗಿತು. ಸ್ವಲ್ಪ ಹೊತ್ತಿನಲ್ಲಿಯೇ ಒಳಗೂ ಕರೆದುಬಿಟ್ಟರು. ನಾನು ಆಸೀನಳಾಗಬೇಕಿದ್ದ ಸಿಂಹಾಸನ ನೋಡಿ ತಲೆಬಿಸಿ, ಹೇಳಲಸಾಧ್ಯವಾದ ಕಳವಳ ಎರಡೂ ಆಯ್ತು. ನನ್ನ ಹಾಗೇ ಅಲ್ಲಿ ಬಂದಿದ್ದ ಒಬ್ಬೊಬ್ಬರದೂ ಒಂದೊಂದು ಬಗೆಯ ಸ್ಥಿತಿ. 'ಏನ್ಮಾಡೋದು? ಈ ಜಗತ್ತಿಗೆ ಬಂದಮೇಲೆ ಇದನ್ನೆಲ ಸಹಿಸಲೇಬೇಕಲ್ಲವಾ?' ಅಂತ ನನಗೆ ನಾನೇ



ಸಮಾಧಾನ ಮಾಡಿಕೊಂಡೆ. ಒಳಗೆಲ್ಲೋ "ಕೊನೆಗೂ ನನ್ನನ್ನು ದೂರ ಮಾಡುತ್ತಿದ್ದೀಯಲ್ಲ, ಇಷ್ಟೇನಾ ನನ್ನ ಮೇಲಿನ ನಿನ್ನ ಪ್ರೀತಿ, ಅಂತಃಕರಣ?" ಎಂಬ ಧ್ವನಿ ಕೇಳಿದಂತಾಗಿ ಕರುಳು ಹಿಂಡಿದಂತಾಯಿತು. 'ಎಂಥ ತಪ್ಪು ಮಾಡುತ್ತಿದ್ದೇನೆ! ಮುಂದೆ ನನಗೆ ನರಕದರ್ಶನ ಕಟ್ಟಿಟ್ಟ ಬುತ್ತಿ' ಎಂದನಿಸಿ ಭಯವಾಗತೊಡಗಿತು. ಏನಾದರಾಗಲಿ ಅಂತ ಕಣ್ಣು ಮುಚ್ಚಿ 'ದೇವರೇ, ನೀನೇ ಗತಿ' ಎಂದು  ಅವರು ಹೇಳಿದಲ್ಲಿ, ಹೇಳಿದ ಭಂಗಿಯಲ್ಲಿ ಕುಳಿತೆ.

ಐದೇ ಐದು  ನಿಮಿಷ ಮಾರಾಯ್ರೆ! ಸ್ವಲ್ಪವೂ ಕರುಣೆ ತೋರದೆ ಕಿತ್ತು ತೆಗೆದೇಬಿಟ್ಟರಲ್ಲ... ನನ್ನ ಬಾಯಿಂದ ಬೇರಾದ ಹಲ್ಲು ಟಣ್ಣಂತ ಅಲ್ಲೇ ಎದುರಲ್ಲಿದ್ದ ಪ್ಲೇಟಲ್ಲಿ ಬಿತ್ತು. ಪಾ...ಪ. ನನ್ನ ಪುಟ್ಟುಟಾಣಿ ಹಲ್ಲುಟ್ಟ... ಅದನ್ನು ಅಲ್ಲೇ ಬಿಟ್ಟು ಬರುವಾಗ ಅದೆಷ್ಟು ಬೇಜಾರಾಯ್ತು ಗೊತ್ತಾ? ಕೊಡ್ತೀರಾ ಮನೆಗೆ ಒಯ್ತೀನಿ ಅನ್ನುವ ಮಾತು ನಾಲಿಗೆ ತುದಿ ತನಕ ಬಂದಿತ್ತು. ಕೊನೆಗೆ ಡಾಕ್ಟರ್ ಗೊಳ್  ಅಂತ ನಗಬಹುದು, ಅವರ ಜೊತೆ ನಮ್ಮನೇವ್ರೂ 'ಇದಕ್ಕೆ ಸ್ಕ್ರೂ ಸ್ವಲ್ಪ ಲೂಸಾ' ಅನ್ನೋ ಥರ ನನ್ನತ್ತ ನೋಡ್ಬಹುದು ಅಂತನ್ನಿಸಿ ನನ್ನ ನೀರ್ತುಂಬಿದ ಕಣ್ಣುಗಳಿಂದ ನನ್ಹಲ್ಲುಟ್ಟನಿಗೆ ವಿದಾಯ ಹೇಳಿ ಭಾರವಾದ ಹೃದಯದಿಂದ ಹೊರಬಂದೆ.

ಮತ್ತಿನ್ನೊಂದು ವಿಷಯ ಗೊತ್ತಾ? ಅಲ್ಲಿ  ನನ್ನ ಹಲ್ಲನ್ನು ಅವರಿಗೆ ಕೊಟ್ಟಿದ್ದಲ್ಲದೇ ಅವರಿಗೆ ಅದನ್ನು ಇಟ್ಟುಕೊಂಡಿದ್ದಕ್ಕೆ ದುಡ್ಡು ಬೇರೆ ಕೊಡ್ಬೇಕಂತೆ ಮಾರಾಯ್ರೆ! ಏನ್ಮಾಡೋದು! ಕಲಿಗಾಲ ನೋಡಿ, ಸುಮ್ಮನೆ ವಾದ ಯಾಕೆ ಅಂತ ಕೊಟ್ಟು ಬಂದೆ. ನಿಮ್ಮಲ್ಲೂ ಹೀಗೇನಾ? ಎಂಥ ಅನ್ಯಾಯ!

**ಕಸ್ತೂರಿ ಚಟಾಕಿ**

ಚಿನ್ನಯ್ಯನ ಮನೆಗೆ ಯಾರೋ ಕಳ್ಳರು ನುಗ್ಗಿ ಪಾತ್ರೆ ಪದಾರ್ಥ ಎಲ್ಲ ದೋಚಿ ಬಿಟ್ಟಿದ್ದರು.

ಪೊಲೀಸಿನವರು ಕಡೆಗೆ ಆ ಕಳ್ಳನನ್ನೂ ಕದ್ದ ಮಾಲನ್ನೂ ಪತ್ತೆ ಹಚ್ಚಿದರು.

ವಿಚಾರಣೆಯ ದಿನ ಚಿನ್ನಯ್ಯನನ್ನು ಕರೆಸಿದ್ದರು.

"ಈ ಹಿತ್ತಾಳೆ ಕೊಡ ನಿನ್ನದು ಅಂತ ಹೇಳುವುದಕ್ಕೆ ಏನಯ್ಯ ಗುರುತು?" ಅಂತ ಜಡ್ಜಿಗಳು ಅವನನ್ನು ಕೇಳಿದರು.

"ತಳದಲ್ಲಿ ಕೊಂಚ ಸೋರುತ್ತೆ" ಅಂದ ಚಿನ್ನಯ್ಯ.

ಆಗ ಜಡ್ಜಿಗಳು ಅಂಥ ಗುರುತು ಸಾಲದು, ನನ್ನ ಮನೆಯಲ್ಲೂ ಒಂದು ಹಿತ್ತಾಳೆ ಕೊಡ ಇದೆ. ಅದೂ ಕೊಂಚ ತಳದಲ್ಲಿ ತೂತು" ಅಂದರು.

ಚಿನ್ನಯ್ಯನ ಕಣ್ಣು ಅರಳಿತು, "ಸ್ವಾಮಿ ! ಸ್ವಾಮಿ ! ಅದೂನೂ ನನ್ನದೆ ಸ್ವಾಮಿ ! ಎರಡು ಕೊಡ ಕಳುವಾಗಿದೆ ನನ್ನ ಮನೆಯಲ್ಲಿ" ಅಂದ.



## ಒಂದು ಓರೆ ನೋಟ


ಎಚ್.ಗೋಪಾಲಕೃಷ್ಣ

**ಈ**ಚಿನ ಮಲಯಾಳಿ ಹೆಸರುಗಳು ನನಗೆ ಭಾರೀ ವಿಸ್ಮಯ ಹುಟ್ಟುಹಾಕಿರುವ ಸಂಗತಿ. ಹಿಂದೆ ಮೂವತ್ತು ನಲವತ್ತು ವರ್ಷಗಳ ಹಿಂದೆ ಮಲಯಾಳಿಗಳು ಹೆಸರು ಅರ್ಥಪೂರ್ಣ ಆಗಿರುವ ಹಾಗೆ ಮತ್ತು ಆಕರ್ಷಕ ಸಹ ಇರುವಂತೆ ಇಡುತ್ತಿದ್ದರು. ದಿವಾಕರನ್, ಗಂಗಾಧರನ್, ಕರುಣಾಕರನ್, ವಿನಾಯಗನ್, ಪಾರ್ತಿಬನ್, ಸೋಮನ್, ಸಿದ್ದಾರ್ಥನ್, ಶ್ರೀಧರನ್... ಹೀಗೆ ಹಿಂದೂ ಹುಡುಗರ ಹೆಸರು ಇರುತ್ತಿತ್ತು. ಕ್ರಿಶ್ಚಿಯನ್ ಆದರೆ ಜಾನ್, ಜೇಕಬ್, ಮೈಕೆಲ್, ಪೀಟರ್, ಸಿಂಸನ್, ಏಸುಪಾದಂ ಈ ರೀತಿ ಇರುತ್ತಿತ್ತು. ಮುಸ್ಲಿಂ ಆದರೆ ಖಾಜಿ, ಎಬ್ರಹಮ್, ಅಜೀಂ, ಸಲೀಂ, ಸಲಾಂ... ಹೀಗೆ ಈ ವರಸೆಯವು.

ಹೆಣ್ಣುಮಕ್ಕಳ ಹೆಸರುಗಳು ಕಮಲ, ವಿಮಲ, ಲೀಲಾ, ಅರುಂಧತಿ, ಭಾಮಾ, ರಂಭಾ, ಮಾಲತಿ, ವಿನುತಾ, ಕಾಮಿನಿ.., ಹೀಗೆ ಇರುತ್ತಿತ್ತು. ಹೆಸರಿನ ಬಾಲಕ್ಕೆ ನಾಯರ್, ವಾರಿಯರ್, ಅಯ್ಯರ್, ಪಣಿಕ್ಕರ್... ಹೀಗೆ ಸೇರಿರುತ್ತಿತ್ತು. ಬಾಯ ತುಂಬಾ ಅವರ ಹೆಸರನ್ನು ಕರೆಯುತ್ತಿದ್ದೆವು ಮತ್ತು ನೆನಪಿನಲ್ಲಿ ಸಹಾ ಉಳಿಯುತ್ತಿತ್ತು. ನನ್ನ ಕೊಲೀಗುಗಳಲ್ಲಿ ಕೇರಳದ ಹೆಣ್ಣುಮಕ್ಕಳ ಹೆಸರು ಇಂಪು ಸೊಂಪು ಕಂಪು ಇದ್ದವು, ಥೇಟ್ ಅವರ ಹಾಗೇ! ಆಗ ತಾನೇ ತಲೆಸ್ನಾನ ಮಾಡಿ ಒದ್ದೆಕೂದಲಿನ ಬುಡದಲ್ಲಿ ಒಂದು ಟೇಪು ಕಟ್ಟಿಕೊಂಡು ಗುಂಗುರು ಮುಂದಲೆ ಗಾಳಿಗೆ ಹಾರಾಡಿಸುತ್ತಾ ಈ ಹೆಂಗಸರು ನಡೆದು ಬರ್ತಾ ಇದ್ದರೆ ಗಂಡುಮುಂಡೇವು ಕಣ್ಣುಬಾಯಿ ತೆಗೆದುಕೊಂಡು ಸಾಲಾಗಿ ನಿಂತುಬಿಡೋವು.

ರಾಧಾ, ರತ್ನಾ, ಸೀತಾ, ರೋಜಾ ಹೆಸರಿನವರು ರತ್ನಮ್ಮ, ರಾಧಮ್ಮ, ಸೀತಮ್ಮ, ರೋಜಮ್ಮ ಆಗಿ ಕಾಲಾನುಕಾಲಕ್ಕೆ ವಯಸ್ಸು ಏರಿದಂತೆ ಹೆಸರಿನಲ್ಲಿ ಮಾತ್ರ ಬದಲು ಆಗುತ್ತಿದ್ದರು. ಇದು ಆಗ...

ಈಗ ಇಲ್ಲಿ ಹೆಸರುಗಳು ಭಾರೀ ಬದಲಾವಣೆ ಆಗುತ್ತಿವೆ. ಕೆಲವು ಉದಾಹರಣೆ ಅಂದರೆ ಶಾಜಿ, ಫಾಜಿ, ಬಾಜಿ, ದಾಜಿ, ರಾಜಿ, ರೋಜಿ, ಶೋಜಿ... ಹೀಗೆ. ಬರೆ ಎರಡು ಅಕ್ಷರದವು. ಇವು ಗಂಡುಕೂಸುಗಳ ಹೆಸರಾದರೆ, ಹೆಣ್ಣುಕೂಸುಗಳು ಇವೇ ಹೆಸರಿನ ಸ್ತ್ರೀಲಿಂಗ ಫಾರ್ಮ್ ಹೊಂದಿರುತ್ತವೆ. ಶೀಜಿ, ಫೀಜಿ, ಬೀಜಿ, ದಿಜಿ, ರೀಜಿ, ಬೀನಿ... ಹೀಗೆ. ಒಂದು ಇಪ್ಪತ್ತುಮೂವತ್ತು ವರ್ಷದಲ್ಲಿ ಹೀಗ್ಯಾಕೆ ಬದಲಾವಣೆ ಆಯಿತು ಎಂದು ಸೋಜಿಗ ನನಗೆ. ನಮ್ಮೂರಲ್ಲಿ ವೆಂಕಟಲಕ್ಷ್ಮಿ, ಮುನಿಯಮ್ಮ, ಪಂಕಜವಲ್ಲಿ, ಮೋಹನವಲ್ಲಿ, ಕಮಲಾಬಾಯಿ, ಜಯಲಕ್ಷ್ಮಿಬಾಯಿ... ಇಂತಹ ಹೆಸರು ಯಾವ ಅಪ್ಪಅಮ್ಮ ಸಹ ಈಗ ಇಡೋದು ಇಲ್ಲ. ಅಲ್ಲೂ ಬದಲಾಗಿವೆ ಮತ್ತು ಈಗಿನ ಟ್ರೆಂಡ್ ಅಂದರೆ ಮೂರಕ್ಷರದ್ದು ಹಾಗೂ ಅಪರೂಪದ್ದು. ವಿಷ್ಣುಸಹಸ್ರನಾಮ, ಲಲಿತಾಸಹಸ್ರನಾಮ, ಇನ್ನೂ ಯಾವಯಾವುದೋ ಸಹಸ್ರನಾಮ ಹುಡುಕಿ ಹುಡುಕಿ ಅಲ್ಲಿಂದ ಹೆಸರನ್ನು ಹೆಕ್ಕುವ ಸುಮಾರು ಜನ ನನಗೆ ಗೊತ್ತು. ಇನ್ನೂ ತಮಾಷೆ ಅಂದರೆ ಹೆಸರಿಗೂ ಒಂದು ಅರ್ಥ ಬೇಕು ಎನ್ನುವ ಹಳೇ ತಿಂಕಿಂಗ್ ಹೋಗಿ ಅರ್ಥಪರ್ಥ ಇಲ್ಲದಿರುವ ಶಾರ್ಟ್ ಮತ್ತು ಸ್ವೀಟ್ ಹೆಸರುಗಳಿಗೆ ಜನ ಮಾರು ಹೋಗುತ್ತಿದ್ದಾರೆ. ಇನ್ನೂ ಒಂದು ಕಾರಣ ನಾನು ಅಂದುಕೊಂಡಿರೋದು ಅಂದರೆ ಕೂಗಲು ಸುಲಭ ಮತ್ತು ನೆನಪಿನಲ್ಲಿ ಇಟ್ಟುಕೊಳ್ಳುವುದು ಸಹ ಸುಲಭ. ಹಾಗೂ



ಅದರ ಜತೆಗೆ ನಮ್ಮಂತಹವರಿಗೆ ಮರೆಯಲು ಸುಲಭ. ಆದರೂ ಸುಮಾರು ಕೇರಳಿಗರು ಈ ಪುಟ್ಟ ಪುಟ್ಟ ಹೆಸರುಗಳಿಗೆ ಮಾರು ಹೋಗಿದ್ದಾರೆ ಮತ್ತು ಮುಂದಿನ ಇಪ್ಪತ್ತುಮೂವತ್ತು ವರ್ಷಗಳು ಬರೆ ಎರಡಕ್ಷರಗಳ ಹೆಸರಿನಿಂದ ಕೇರಳ ತುಂಬಿ ತುಳುಕುತ್ತದೆ. ನಂತರ ಏನಾಗಬಹುದು ಅಂದರೆ ಒಂದಕ್ಷರದ ಹೆಸರುಗಳು ಚಲಾವಣೆಗೆ ಬರಬಹುದು. ಕೆಲವು ಸಲ ಅದರ ಉಚ್ಚಾರಣೆ ಸಹ ಕಷ್ಟ ಆಗಬಹುದು. ಆಗ ಹೇಗೆ ಒಬ್ಬರನ್ನೊಬ್ಬರು ಸಂಬೋಧನೆ ಮಾಡುತ್ತಾರೋ ಎನ್ನುವ ಆತಂಕ ನನಗೆ. ಈ ಆತಂಕವನ್ನು ನನ್ನ ಮನದನ್ನೆಯೊಂದಿಗೆ ಹಂಚಿಕೊಂಡೆ. 'ಅಯ್ಯೋ ಬಿಡಿ. ಅದಕ್ಕೆ ಇನ್ನೂ ಐವತ್ತು ಅರವತ್ತು ವರ್ಷ ಇದೆ, ಇನ್ನೆಷ್ಟು ಜನ್ಮ ಎತ್ತಿರುತ್ತೇವೋ ಅಷ್ಟು ಹೊತ್ತಿಗೆ' ಅಂತ ಉತ್ತರ ಬಂತು! ಅಯ್ಯೋ ಹೌದಲ್ಲವೇ! ಇರೋ ಪ್ರಾಬ್ಲಂಗಳೇ ಹಾಸಿ ಹೊದ್ದು ಮಲಗುವಷ್ಟಿದೆ, ಈಗ ಅದು ಬೇರೆ ಬೇಕಾ ಅಂತ ತೆಪ್ಪಗೆ ಕೂತೆ.





ತಿರುವನಂತಪುರದಲ್ಲಿ ನಮ್ಮ ಹಾಗೆ ಬಿಎಂಟಿಸಿ ಬಸ್ಸುಗಳು ಇದೆಯೋ ಇಲ್ಲವೋ ಎನ್ನುವ ಸಂಶಯ ನಿಮಗೆ ಹೇಳಿದ್ದೆ. ಏರ್ ಪೋರ್ಟ್ ರಸ್ತೆಯಲ್ಲಿ ನಾವು ಹೋದ ನಾಲ್ಕನೇ ದಿವಸ ಒಂದು ಬಸ್ಸು ಕಾಣಿಸಿತು. ಅದರ ಹಿಂದೆಯೇ ಹೋದೆ. ಅಲ್ಲಲ್ಲಿ ನಿಂತು ಪ್ರಯಾಣಿಕರನ್ನು ಹತ್ತಿಸಿಕೊಂಡಿತು. ಸುಮಾರು ಜನ ಕಾಲೇಜು ವಿದ್ಯಾರ್ಥಿಗಳು ಮತ್ತು ಅದು ಸುಮಾರು ಹತ್ತು ಗಂಟೆಯ ಆಸುಪಾಸು. ಐದು ಐದೂವರೆ ಸುಮಾರಿಗೆ ಏರ್ಪೋರ್ಟ್ ರಸ್ತೆಯಿಂದ ವಾಪಸಾಗುವ ಸಂದರ್ಭದಲ್ಲಿ ಸುಮಾರು ಮೂವತ್ತರ ಆಸುಪಾಸಿನ ಹೆಣ್ಣುಗಂಡು ಬಸ್ಸು ಹತ್ತಿದವು. ಹತ್ತಿರದಲ್ಲೇ ಅಯ್ಟಿ ಪಾರ್ಕು ಮತ್ತು ಇನ್ಫೋಸಿಸ್ ಸಂಸ್ಥೆ. ಹೆಗಲಿಗೆ ಒಂದು ಲಾಪ್ಟಾಪ್ ಬ್ಯಾಗು, ಸುಮಾರು ಬಿಗಿಯಾದ ಕಪ್ಪುಬಣ್ಣದ ಟಿಶರ್ಟ್ ಮತ್ತು ಅದೇ ಬಣ್ಣದ ಪ್ಯಾಂಟ್ ಇವರ ಡ್ರೆಸ್, ಬೆಂಗಳೂರಿನ ಹುಡುಗಿಯರ ಹಾಗೇ! ಐಟಿ ಸೆಕ್ಟರ್‌ನ ಅನ್ ರಿಟನ್ ಡ್ರೆಸ್ ಕೋಡ್ ಇರಬಹುದು ಅನಿಸಿತು. ಬಹುಶಃ ಅಲ್ಲಿ ಕೆಲಸ ಮಾಡುವವರು ಇರಬೇಕು. ಯಾವ ಬಸ್ ಸ್ಟಾಪಿನಲ್ಲಿಯೂ ಹೆಚ್ಚು ಜನ ಇಲ್ಲ ಮತ್ತು ಸಾವಧಾನವಾಗಿ ಬಸ್ಸಿಗೆ ಕಾಯುತ್ತಿದ್ದವರು. ನಮ್ಮ ಬೆಂಗಳೂರು ನೆನಪಿಗೆ ಬಂತು. ದಿನದ ಇಪ್ಪತ್ತುನಾಲ್ಕು ಗಂಟೆ ಅಲ್ಲದೇ ಎಲ್ಲಾ ಸಮಯದಲ್ಲೂ ಗಿಜಿಗಿಜಿಗುಡುವ ಜನಜಂಗುಳಿ. ಗುಂಪು ನೋಡಿದ ಕೂಡಲೇ ಬಸ್ಸಿಗಾಗಿ ಕಾಯುತ್ತಿರುವ ಜನ ಎಂದು ಹೇಳಬಹುದು! ಬಸ್ಸು ಬಂದ ಕೂಡಲೇ ಬೆಂಗಳೂರಿನವರ ಹಾಗೆ ನುಗ್ಗೋದಿಲ್ಲ; ಸಾವಧಾನವಾಗಿ ಬಸ್ ಹತ್ತುತ್ತಾರೆ. ನಮ್ಮೂರು ನೆನಪು ಬಂದು ನೂರು ವರ್ಷ ಹಿಂದೆ ನಮ್ಮೂರೂ ಸಹ ಹೀಗೇ ಇತ್ತಲ್ಲವಾ ಅನಿಸುತ್ತೆ. ಅಂದಹಾಗೆ ಎಲ್ಲಾ ಬಸ್ಸುಗಳೂ ಮಲಯಾಳದಲ್ಲೇ ನಾಮಫಲಕ

ಹೇರಿಕೊಂಡಿತ್ತು. ಒಂದೇ ಒಂದು ಇಂಗ್ಲೀಷ್ ಅಕ್ಷರ ಕಾಣಲಿಲ್ಲ. ನಮ್ಮೂರಿನಲ್ಲಿ ಬರೀ ಕನ್ನಡ ಬೋರ್ಡ್ ಇದ್ದರೆ ಎಷ್ಟು ಜನ ಇಂಗ್ಲಿಷಿನ ವಾಚಕರ ವಾಣಿಗೆ, ರೀಡರ್ಸ್ ಕಾಲಂಗೆ, ಫೇಸ್‌ಬುಕ್‌ನಲ್ಲಿ ಪ್ರತಿಕ್ರಿಯೆ ಮಾಡುತ್ತಾರೆ ಅನ್ನುವುದು ನೆನಪಿಗೆ ಬಂತು. ಅಂದಹಾಗೆ ಟ್ರಿವಾಂಡ್ರಂ ಸಂಪೂರ್ಣ ಮಲಯಾಳಿ ಆಗಿದೆ. ದೊಡ್ಡ ಅಂಗಡಿ, ಪುಟ್ಟ ಅಂಗಡಿ, ಎಲ್ಲಾ ಕಡೆ ಮಲಯಾಳಿ ಭಾಷೆಯ ನಾಮಫಲಕ. ಯಾರೂ ಕರ್ನಾಟಕದವರ ಹಾಗೆ ಕನ್ನಡ ಉಳಿಸಿ ಕನ್ನಡ ಬೆಳೆಸಿ ಮಾದರಿಯಲ್ಲಿ ಮಲಯಾಳ ಉಳಿಸಿ ಮಲಯಾಳ ಬೆಳೆಸಿ ಚಳುವಳಿ ಮಾಡಿದ್ದು ಕಾಣೆ. ಇಡೀ ಏರ್ಪೋರ್ಟ್ ರಸ್ತೆಯಲ್ಲಿ ಒಂದೂ ಬಸ್ ನಿಲ್ದಾಣ ಇಲ್ಲ. ಅಲ್ಲೆಲ್ಲೋ ಒಂದು ಕಡೆ ನಿಲ್ದಾಣ ನೋಡಿದೆ. ಅದರಲ್ಲಿ ಕೆಲವರು citu ಬಾವುಟ ಹಿಡಿದು ಧರಣಿ ಮಾಡುತ್ತಿದ್ದರು! ಊರಿನ ಒಳಹೊಕ್ಕರೆ ಬಸ್ ಸ್ಟಾಪುಗಳಲ್ಲಿ ಕೆಂಪುಬಾವುಟ ಹಿಡಿದು ಧರಣಿ ಮಾಡುತ್ತಿರುವ ಗುಂಪುಗಳು ಕಾಣುತ್ತವೆ. ಬಸ್ ಸ್ಟಾಪ್ ಜಾಗ ಹೀಗೆ ಬಹು ಚೆನ್ನಾಗಿ ಉಪಯೋಗವಾಗುತ್ತಿದೆ.

ಇನ್ನೊಂದು ನಮ್ಮ ಊರಿನಲ್ಲಿ ಈಗ ಇಲ್ಲದಿರುವುದು ನೋಡಿದ್ದು. ಇಲ್ಲಿ ಡಬಲ್ ಡೆಕ್ಕರ್ ಓಡಾಡುತ್ತವೆ. ಬೆಂಗಳೂರಿನಿಂದ ಇದು ಕಣ್ಮರೆಯಾಗಿ ಸುಮಾರು ವರ್ಷ ಕಳೆದಿದೆ. ಇಲ್ಲಿ ಮೆಟ್ರೋ ಬಗ್ಗೆ ಒತ್ತಡ ಇದ್ದಹಾಗಿಲ್ಲ ಅಂತ ಹೇಳಿದ್ದೆ. ನಗರ ಹೀಗೆ ಉದ್ಯಮಗಳು ಬೆಳೆಯದೆ, ಜನಸಂಖ್ಯೆ ಇಷ್ಟೇ ಇದ್ದರೆ ಮತ್ತು ಇಲ್ಲಿನ ಯುವಶಕ್ತಿ ಹೊರಗಡೆ ಹೋಗುತ್ತಲೇ ಇದ್ದರೆ ಇನ್ನು ನೂರು ವರ್ಷ ಆದರೂ ಇಲ್ಲಿ ಮೆಟ್ರೋ ಬೇಕಿಲ್ಲ! ಇಲ್ಲಿ ಎಸ್ಸೆಲ್ಸಿ ಆದಕೂಡಲೇ ಹುಡುಗಹುಡುಗೀರು ಬೆಂಗಳೂರು ದುಬೈಗೆ ಹೋಗಿಬಿಡ್ತಾರೆ. ಟ್ರಾಫಿಕ್ ಹೆಚ್ಚಿದ್ದರೆ, ಅದರಿಂದ ತೊಂದರೆ ಅನುಭವಿಸಿದಾಗ ಆರ್ಭಟ ಹೆಚ್ಚಾದರೆ ಪರ್ಯಾಯ ಮಾರ್ಗದ ಅವಶ್ಯಕತೆ ಹುಟ್ಟುತ್ತೆ.

ಅಂದರೆ ಇಲ್ಲಿ ವಲಸೆ ಕಾರ್ಮಿಕರು ಇಲ್ಲವೇ? ಇದ್ದಾರೆ, ತುಂಬಾ ಅಂದರೆ ತುಂಬಾ ಮೈನಾರಿಟಿಯಲ್ಲಿ. ಅದೂ ಬೇರೆ ಕಡೆಯಿಂದ ವರ್ಗ ಆಗಿ ಬಂದೀರೋರು. ಸ್ಟಾರ್ ಹೆಲ್ತ್ ಇನ್ಸುರೆನ್ಸ್ ಹೆಸರಿನ ಒಂದು ಕಂಪನಿಗೆ ಹೋಗಿದ್ದೆ. ಕಂಪನಿ ಅವರು ಇನ್ಸೂರೆನ್ಸ್ ನೇಮ್ ಅನ್ನು ತಿರಸ್ಕರಿಸಿದ್ದರು. ಅದರ ಬಗ್ಗೆ ಸಮಜಾಯಿಷಿ ಕೊಟ್ಟೆ, ಇಂಗ್ಲಿಷ್‌ನಲ್ಲಿ. ಅಲ್ಲಿದ್ದ ಒಬ್ಬ ಆಫೀಸರ್ ತಮಿಳಲ್ಲಿ ಹೇಳಿ ಅಂದ! ಬಹುಶಃ ಹೊಸದಾಗಿ ಬಂದವನು ಇರಬೇಕು. ಇಂಗ್ಲಿಷ್ನಲ್ಲೇ ನೀನು ಮೊದಲು ಮಲಯಾಳ ಕಲಿ, ಇಲ್ಲಿ ಕೆಲಸ ಮಾಡಲು ನೀನು ಅನ್‌ಫಿಟ್ ಅಂತ ಬುದ್ಧಿ ಹೇಳಿದೆ!

ಅಂದಹಾಗೆ ಇಲ್ಲಿನ ಆಟೋಗಳು ಪೆಟ್ರೋಲು, ವಿದ್ಯುತ್, ಡೀಸೆಲ್ ಮತ್ತು ಗ್ಯಾಸ್‌ನಲ್ಲಿ ಓಡಾಡುತ್ತವೆ. ನಮ್ಮ ಹಾಗೆ ಬರೆ ಗ್ಯಾಸ್ ಆಟೋ ಇಲ್ಲ. ಡೀಸೆಲ್ ಆಟೋದಲ್ಲಿ ಕೂತರೆ ಇಂಜಿನ್ ಶಬ್ದದಲ್ಲಿ ನಿಮಗೆ ಮಾತು ಆಡೋದು ತುಂಬಾ ಕಷ್ಟ! ಒಂದು ಸಮಾಧಾನ ಅಂದರೆ ಯಾವುದೇ ಆಟೋದಲ್ಲಿ ಪ್ರಯಾಣ ಮಾಡಿದರೂ ಉಬರ್ ದರ ಅಷ್ಟೇ. ಇನ್ನೊಂದು ವಿಶೇಷ ಅಂದರೆ ಇಲ್ಲಿನ ಕ್ಯಾಬ್ ಮತ್ತು ಕಾರ್‌ಗಳು ಇನ್ನೂ ಟಿಂಟೆಡ್ ಗ್ಲಾಸ್ ಉಪಯೋಗಿಸುತ್ತವೆ. ಬಹುಶಃ ಮಹಿಳಾ ಲೈಂಗಿಕ ದೌರ್ಜನ್ಯದಂತಹ ಬೆಂಗಳೂರಿನ ಕಹಿ ಕಹಿ ಪ್ರಸಂಗಗಳು ಅಲ್ಲಿ ನಡೆದಿರಲಾರದು ಎಂದು ತಿಳಿದಿದ್ದೇನೆ. ಸದ್ಯ ನಗರ ಇದೇ ರೀತಿ ಇರಲಿ ಎನ್ನುವ ಸದಭಿಲಾಷೆ ನನ್ನದು. ಅಂದರೆ ಹಸಿರು ಇನ್ನೂ ಉಳಿದಿದೆ, ಧೂಳಿನಿಂದ ಕೂಡಿದ ರಸ್ತೆ ಇಲ್ಲ ಮತ್ತು ಕಿವಿಗವಡುಚಿಕ್ಕುವ ಹಾರ್ನ್‌ಗಳು ಇಲ್ಲ!




ಸಾರ್ವಜನಿಕ ಸ್ಥಳಗಳಲ್ಲಿ ಬಹುತೇಕ ಮಲಯಾಳಿ ಭಾಷೆಯ ಬೋರ್ಡುಗಳೆ. ನಮ್ಮ ಬೆಂಗಳೂರಿನ ಹಾಗೆ ಪುಟ್ಟ ಪೆಟ್ಟಿಗೆ ಅಂಗಡಿಗೂ ಇಂಗ್ಲಿಷ್ ಬೋರ್ಡ್ ಇಲ್ಲ. ಅಖಿಲ ಭಾರತ ಮಟ್ಟದ ಬ್ಯಾಂಕುಗಳು ಕೇಂದ್ರಸರ್ಕಾರದ ಅಧೀನದ ಕಾರ್ಯಾಲಯಗಳು ಇಂಗ್ಲಿಷ್ ಬೋರ್ಡ್ ಸಹ ಹೊತ್ತಿರುತ್ತೆ. ರಾಜ್ಯಸರ್ಕಾರದ ಇಲಾಖೆಗಳು ಮತ್ತು ಖಾಸಗಿಯವರ ಅಂಗಡಿ ಮುಂಗಟ್ಟುಗಳು ಮಲಯಾಳ ಭಾಷೆಯ ಬೋರ್ಡ್ ಹಾಕಿಕೊಂಡಿರುತ್ತೆ. ಒಂದು ದೇವಸ್ಥಾನದಲ್ಲಿ dont spit here ಎನ್ನುವ ಇಂಗ್ಲಿಷ್ ಬೋರ್ಡ್ ಕೆಳಗೆ ಹಿಂದಿಯ ಬೋರ್ಡ್ ಇತ್ತು!

ಅಲ್ಲಿ ಯಾರೂ ಮಲಯಾಳ ನಮಗೆ ಅರ್ಥ ಆಗಲ್ಲ, ಇಂಗ್ಲಿಷ್ ಬೋರ್ಡ್ ಬೇಕು ಅಂತ ಪತ್ರಿಕೆಗಳಿಗೆ ಬರೆದು ಸುದ್ದಿ ಮಾಡರು! ಹಾಗೂ ಸ್ಥಳೀಯ ವಾಹಿನಿಗಳು ಬೆಂಬಲ ಸಹ ನೀಡವು. ಬೆಂಗಳೂರಿನಲ್ಲಿ ಇದಕ್ಕೆ ತದ್ವಿರುದ್ಧ!

ಪ್ರತಿ ದಿನ ಒಂದು ಗುಂಪು ಗಂಡಸರು ಒಂದು ರಸ್ತೆ ತಿರುವಿನ ಕಟ್ಟೆಯ ಮೇಲೆ ಮೈತುಂಬಾ ದುಗುಡ, ಯೋಚನೆ ತುಂಬಿಕೊಂಡು ಕೂತಿರೋದನ್ನು ಗಮನಿಸುತ್ತಾ ಇದ್ದೆ. ಸುತ್ತಮುತ್ತ ಎಲ್ಲೂ ಬೀಡಿ ಸಿಗರೇಟ್ ಅಂಗಡಿ ಇಲ್ಲ, ಚಾ ಅಂಗಡಿ ಟೀಕಡೆ ಸಹ ಇಲ್ಲ. ಇವರು ಯಾಕೆ ಹೀಗೆ ಕೂತಿರ್ತಾರೆ ಅಂತ ಆಶ್ಚರ್ಯ. ಕೊನೆಗೂ ಈ ರಹಸ್ಯ ಭೇದಿಸಿದೆ. ಅದರ ವಿವರ ಹೀಗೆ. ಕೇರಳದ ಹೆಚ್ಚಿನ ಪ್ರದೇಶದಲ್ಲಿ ಮರುಮಕ್ಕತ್ತಾಯಂ ಕಾನೂನು. ಹೀಗಂದರೆ ಅಳಿಯಸಂತಾನ ಕಾನೂನು ಅಂತ. ಅಂದರೆ ಮನೆಯಲ್ಲಿ ಸಂಪೂರ್ಣ ಹಣಕಾಸಿನ ಹಿಡಿತ ಮನೆಯ ಹೆಂಗಸು ನೋಡಿಕೊಳ್ಳುತ್ತೆ. ಗಂಡಸಿಗೆ ಅಷ್ಟು ಅಧಿಕಾರ ಈ ಕಾರಣದಿಂದ ಇಲ್ಲ ಮತ್ತು ಮನೆಕೆಲಸ ನಿರ್ವಹಣೆ ಸಹ ಗಂಡಸರ ಜವಾಬ್ದಾರಿ. ಸಹಜವಾಗೇ ಇಂತಹ ಪರಿಸರ ಅಂದರೆ ಯಾರಿಗೇ ಆಗಲಿ ಸಿಟ್ಟುಸೆಡವು, ಕೋಪತಾಪ ಎಲ್ಲವೂ ಇರಲೇಬೇಕು. ಕೆಲಸ ಮಾಡಿ ಮಾಡಿ ಗಂಡಸು ಸುಸ್ತು ಹೊಡೆದು  ಹೋಗಿರುತ್ತಾನೆ. ಆಗ ಮನೆಯ ಗಂಡಸು ಆಚೆ ಬಂದು ಕೂರುತ್ತಾನೆ ಮತ್ತು ಇವನ ಜತೆಗೆ ಇವನ ಹಾಗೇ ನೊಂದ ಜೀವಿಗಳು ಸೇರಿಕೊಳ್ಳುತ್ತವೆ. (ಅಂದಹಾಗೆ ವಿಕ್ಟರ್ ಹ್ಯೂಗೋನ ಲೇ ಮಿಸರಬಲ್ಸ್ ಕಾದಂಬರಿಯನ್ನು ಕನ್ನಡದಲ್ಲಿ  ನಾ.ಕಸ್ತೂರಿ ಅವರು ಭಾಷಾಂತರ ಮಾಡಿದ್ದಾರೆ, ಅದರ ಹೆಸರು ನೊಂದ ಜೀವಿ. ಕಸ್ತೂರಿ ಹುಟ್ಟಾ ಮಲಯಾಳಿ!) ಇಲ್ಲಿ ಸುಮಾರು ಗಂಡಸರ ಪಾಡು ಇದೇ ಆಗಿದೆ ಅಂತ ನಾನು ಸಂಶೋಧಿಸಿದ ಸತ್ಯ!

ಯಾವುದೇ ಊರು ಅಥವಾ ದೇಶ ಇರಲಿ, ಒಂದೆರೆಡು ವಾರ ಅಲ್ಲಿದ್ದು ಇದು ಹೀಗೇ ಎಂದು ನಿಖರವಾಗಿ ಹೇಳುವುದು ಸರಿಯಲ್ಲ ಎಂದು ನನ್ನ ಅಭಿಮತ. ಹೆಚ್ಚೆಂದರೆ ಕುರುಡ ಆನೆ ನೋಡಿದ ಹಾಗೇ ಇಂತಹ ಸತ್ಯ ಎಂಬುದು ಎಲ್ಲರೂ ಒಪ್ಪಲೇಬೇಕಾದ ಮಾತು. ಈ ದೃಷ್ಟಿಯಿಂದ ತಿರುವನಂತಪುರದ ನನ್ನ ಈ ನೋಟವನ್ನು ಒಂದು ಪಾರ್ಶ್ವನೋಟವನ್ನಾಗಿಯೋ ಅಥವಾ ಒಂದು ಓರೆನೋಟ ಎಂದು ಪರಿಗಣಿಸಬಹುದು. ಇನ್ನೂ ಹೇಳಬೇಕೆಂದರೆ ಒಂದು ತಿಳಿ ಲಘು ಯೋಚನೆ ಹರಿಬಿಟ್ಟಿದ್ದೇನೆ ಅಷ್ಟೇ.

ಒಂದು ಚಾಯ್ಸ್ ನಿಮಗೆ ಕೊಟ್ಟರೆ ಬೆಂಗಳೂರು ಇಷ್ಟ ಪಡುವಿರೋ, ತಿರುವನಂತಪುರ ಇಷ್ಟಪಡುವಿರೋ ಅಂತ ಅಕಸ್ಮಾತ್ ನೀವು  ಕೇಳುತ್ತೀರಿ ಅಂತ ಮಸಲಾ ನಾನು ಅಂದುಕೊಂಡರೆ ನನ್ನ ಉತ್ತರ ಹೇಗಿರುತ್ತೆ...?



**'ಗೌತಮ'ಎಸ್. ರಾಮಮೂರ್ತಿ**

**ಅ**ರವತ್ತು ವರ್ಷಗಳ ಹಿಂದಿನ ಮಾತು. ಡಿಪ್ಲೊಮಾ ಎರಡನೇ ವರ್ಷ. ನಾನು ಮಹಾ ಮೇಧಾವಿ ಅಲ್ಲದಿದ್ದರೂ ಶತಪೆದ್ದನೂ ಆಗಿರಲಿಲ್ಲ. ಸರಾಸರಿ ವಿದ್ಯಾರ್ಥಿ (average studentಗೆ ಗೂಗಲ್ ಟ್ರಾನ್ಸ್‌ಲೇಷನ್ನು). ಎಂಜಿನಿಯರಿಂಗ್ ಡ್ರಾಯಿಂಗ್ ಕ್ಲಾಸು. ಲೆಕ್ಚರರ್ರೋ ಕಡುಗಪ್ಪು. ದಪ್ಪನೆ ತುಟಿಗಳು. ರಕ್ಕಸ ಕಣ್ಣುಗಳು. ದೊಣ್ಣೆ ಮೂಗು. ನಗೆಯನ್ನೇ ಕಾಣದ ಮುಖ. ಇದರ ಜೊತೆ ಸ್ವಲ್ಪ ಗೂನು ಬೇರೆ. ಕುಳ್ಳ. ಕಣ್ಣಿಗೆ ಕಾಣಿಸದ ಕತ್ತು. ಉಡುಪೋ ಕರೀ ಸೂಟು. ಹುಲಿಸಿಂಹಗಳೂ ಬೆಚ್ಚಿಬೀಳುವಂಥ ಧ್ವನಿ. ಸಾಕ್ಷಾತ್ ಯಮದೂತರೇ. ಅವರಿಗೆ 'ಹಟಾರಿ' ಅಂತ ಹೆಸರಿಟ್ಟಿದ್ದೆವು. ಅದೇ ಕಾಲದಲ್ಲಿ ಅದೇ ಹೆಸರಿನ ಒಂದು ಇಂಗ್ಲಿಷ್ ಸಿನಿಮಾ ಬಂದಿತ್ತು, ಅದರಲ್ಲಿನ ಹೀರೋ (ಘೇಂಡಾಮೃಗದಂಥ ಒಂದು ಪ್ರಾಣಿಯೇ ಹೀರೋ). ಹಟಾರಿ ಅಂದರೆ ಸ್ವಾಹಿಲಿ ಭಾಷೆಯಲ್ಲಿ ಅದರರ್ಥ 'ಅಪಾಯಕಾರಿ'ಯಂತೆ.




ಡ್ರಾಯಿಂಗ್ ಬೋರ್ಡ್ ಕೊಂಡುಕೊಳ್ಳೋ ಶಕ್ತಿ ಇರಲಿಲ್ಲ. ಬಡತನ. ನಮ್ಮ ಅಣ್ಣಯ್ಯ ತನ್ನ ಸ್ನೇಹಿತರನ್ನೆಲ್ಲಾ ಕೇಳಿ, ಗೋಗರೆದು ಕೇವಲ ನಲವತ್ತು ರುಪಾಯಿಗೆ ಚೌಕಾಸಿ ಮಾಡಿ ಒಂದು ಡ್ರಾಯಿಂಗ್ ಬೋರ್ಡ್ (ಸೆಕೆಂಡ್ ಹ್ಯಾಂಡ್) ತಂದ. ಆ ಕಾಲಕ್ಕೆ ನಮಗದು ದೊಡ್ಡ ಮೊತ್ತಾನೇ. ಕೊಟ್ಟವರೂ ಸಹೃದಯಿಗಳೇ. ಅವರೂ ಲಕ್ಷಾಧೀಶ್ವರರೇನಲ್ಲ. ತಿಂಗಳಿಗೆ ನಾಲ್ಕು ರುಪಾಯಿಯಂತೆ ಹತ್ತು ತಿಂಗಳಲ್ಲಿ ತೀರಿಸೋ ಅವಕಾಶ ಅವರಾಗವರೇ ಮಾಡಿಕೊಟ್ಟರು. ಟಿ–ಸ್ಕ್ವೇರ್ ಉಚಿತ.

ಇನ್ನು ಡ್ರಾಯಿಂಗ್ ಷೀಟೋ, ಒಂದಕ್ಕೆ ನಾಲಕ್ಕಾಣೆ. ಉಳ್ಳವರು ಒಂದು ಷೀಟಲ್ಲಿ ಒಂದೇ ಡ್ರಾಯಿಂಗ್ ಮಾಡಿದರೆ, ನನ್ನಂಥವರು ಎರಡೂ ಬದಿಗಳನ್ನು ಉಪಯೋಗಿಸಿ, ಒಂದೊಂದು ಬದಿಯಲ್ಲೂ ಎರಡು, ಮೂರು, ಸಾಧ್ಯವಾದರೆ, ನಾಲಕ್ಕು ಡ್ರಾಯಿಂಗ್‌ಗಳನ್ನೂ ಮಾಡುತ್ತಿದ್ದೆವು.

ಎಲ್ಲೋ ಹೋಗಿಬಿಟ್ಟೆ, ಕ್ಷಮಿಸಿ. ಹಟಾರಿ ಯಾವಾಗಲೂ ಕ್ಲಾಸಿನೊಳಗೆ ಎಂಟ್ರಿ ಆಗ್ತಿದ್ದದ್ದು ಹತ್ತು ನಿಮಿಷ ತಡವಾಗಿಯೇ. ಅಷ್ಟರೊಳಗೆ ಎಲ್ಲರೂ ಕ್ಲಾಸಿನೊಳಗೆ ತಮ್ಮ ತಮ್ಮ ಟೇಬಲ್ಲುಗಳ ಮುಂದೆ ನಿಂತಿರಬೇಕು. ಆಮೇಲೆ ಬಂದವರನ್ನ ಸೇರಿಸ್ತಾ ಇರಲಿಲ್ಲ. ಪ್ರತಿಯೊಂದು ಟೇಬಲ್ ಮುಂದೆಯೂ ನಿಂತು ನಿಂತು ಡ್ರಾಯಿಂಗನ್ನ ಕೂಲಂಕಷವಾಗಿ ನೋಡಿ, ಸರಿಯಿದ್ದರೆ ಅದರ ಮೇಲೇನೇ ದೊಡ್ಡದಾಗಿ ಒಂದು ರೈಟ್ ಗುರುತನ್ನು ಎಳೆಯೋದು, ತಪ್ಪೇನಾದರೂ ಇದ್ದರೆ, 'ರಫ್' ಅಂತ ಆ ಡ್ರಾಯಿಂಗ್ ಮೇಲೆ ಅಂಗೈಯನ್ನ ಅಪ್ಪಳಿಸಿ ಡ್ರಾಯಿಂಗ್ ಷೀಟನ್ನ ಮುದುರಿ ಮುದ್ದೆ ಮಾಡಿ, ಇಡೀ ಹಾಳೆಯನ್ನ ಮತ್ತೆ ಉಪಯೋಗಿಸದಂತೆ ಮಾಡೋದು ಆಯಪ್ಪನ ಕರೆಕ್ಷನ್ ಮೆಥಡ್ಡು. ಷೀಟಿನ ಮೇಲೆ ಹೊಡೆದು ಷೀಟನ್ನ ಮುದುರಿ



ಮುದ್ದೆ ಮಾಡುತ್ತಿದ್ದರೆ ನಮ್ಮ ಮೈ ಉರಿದುಹೋಗುತ್ತಿತ್ತು. ನಿನ್ನೆ ತಾನೇ ನಾಲ್ಕಾಣೆ ಕೊಟ್ಟು, ಪರವಾಗಿಲ್ಲ ಇನ್ನೊಂದೈದಾರು ಕ್ಲಾಸಿನವರೆಗೂ ಖರ್ಚಿರಲ್ಲ, ಅಂತ ನಿರಾಳವಾಗಿದ್ದಾಗ ಹೀಗಾದರೆ? ಸಿಟ್ಟು ನೆತ್ತಿಗೇರುತ್ತಿತ್ತು. ಹಾಗಂತ ನಾವೇನು ತಾನೇ ಮಾಡೋ ಹಾಗಿದ್ದೆವೂ? ಮನಸ್ಸಿನಲ್ಲೇ ಅತ್ತು ಕಣ್ಣೀರು ಸುರಿಸ್ತಾ ಇದ್ದೆವು.

ಅದೊಂದು ದಿನ. ಹಾಗೇ ಎರಡು ಮೂರು ಟೇಬಲ್‌ಗಳ ಡ್ರಾಯಿಂಗ್‌ಗಳನ್ನ ವೀಕ್ಷಿಸಿದ ಹಟಾರಿ ನನ್ನ ಪಕ್ಕ ಬಂದು ನಿಂತಾಗ, ಇಡೀ ಕ್ಲಾಸಿನಲ್ಲಿ ಪಿನ್ ಡ್ರಾಪ್ ಸೈಲೆನ್ಸು. ಹೀಗೆ ಹೀಗೆ ಮಾಡ್ತೀನಿ ಅಂತ ಎಲ್ಲರಿಗೂ ಮುಂಚೇನೇ ಹೇಳಿದ್ದರಿಂದ, ಎಲ್ಲರ ಕಣ್ಣೂ ಇಲ್ಲೇ ನೆಟ್ಟಿದ್ದವು. ನನ್ನ ಎದೆಯಲ್ಲೂ ಡವಡವ. ಕಣ್ಣಲ್ಲಿ ಕಾತರದ ಜೊತೆ ಕುತೂಹಲ, ಭಯ. ಎಡಗೈಯ್ಯಲ್ಲಿ ಕೋಟನ್ನು ಹಿಂದೆ ಸರಿಸಿ ಸೊಂಟದ ಮೇಲೆ ಕೈಯಿಟ್ಟುಕೊಂಡು ಡ್ರಾಯಿಂಗನ್ನು ವಿವರವಾಗಿ ನೋಡೋಕೆ ಶುರು ಮಾಡಿದಾಗಲೇ ಸಿದ್ಧನಾಗಿದ್ದೆ. ಹಟಾರಿಯ ಬಲಗೈ ಬಲವಾಗಿ ಬೋರ್ಡಿನ ಮೇಲೆ ಅಪ್ಪಳಿಸಿತು. ಆ 'ಧಡ್' ಶಬ್ದದ ಹಿಂದೆಯೇ 'ಅಯ್ಯೋ' ಅಂತ ನೋವಿನಿಂದ ಚೀರಿದ ಶಬ್ದ ಇಡೀ ಕ್ಲಾಸನ್ನೇ ನಡುಗಿಸಿತು. ಕಣ್ಣು ಮಿಟುಕಿಸುವಷ್ಟರಲ್ಲಿ ನಾನು ಕ್ಲಾಸಿಂದ ಆಚೆಗೆ ಹಾರಿದ್ದೆ. ಹಿಂತಿರುಗಿ ನೋಡಿದೆ. ಸಹಪಾಠಿಗಳೆಲ್ಲಾ ಹಟಾರಿಯ ಸುತ್ತ ಸೇರಿದ್ದರು. ನಾಲಕ್ಕೈದು ಜನ ಆ ದೃಶ್ಯವನ್ನ ನೋಡುತ್ತ ಖುಷಿಯಿಂದ ನಗುತ್ತಿದ್ದರು.

ಆಗಿದ್ದಿಷ್ಟೇ. ಎರಡೆರಡು ದಿನಕ್ಕೆ ಒಂದೊಂದು ಡ್ರಾಯಿಂಗ್ ಷೀಟ್ ಕೊಳ್ಳೋದು ಅಂದರೆ ಸುಮ್ಮನೇನಾ? ಆದರೆ ಆ ಕಷ್ಟಾನ ಹೇಗೆ ಹೇಳಿಕೊಳ್ಳೋದೂ? ಕಟುಕನ ಮುಂದೆ ಕಣ್ಣೀರು ಹಾಕಿದಂತೆ. ಪ್ರಿನ್ಸಿಪಾಲರಿಗೆ ದೂರು ಕೊಡುವ ಧೈರ್ಯ ಯಾರಿಗೂ ಇರಲಿಲ್ಲ. ಎಲ್ಲರೂ ಸೇರಿ ಇದಕ್ಕೊಂದು ಉಪಾಯ ಹುಡುಕಿದೆವು. ಆದರೆ ಬೆಕ್ಕಿಗೆ ಗಂಟೆ ಕಟ್ಟೋರು ಯಾರು? ಅದ್ಯಾವ ಭೂತ ನನ್ನ ಮೈಯ್ಯಲ್ಲಿ ಹೊಕ್ಕಿತ್ತೋ, ನಾನೇ ಒಪ್ಪಿಕೊಂಡುಬಿಟ್ಟೆ ಗಂಟೆ ಕಟ್ಟೋದಕ್ಕೆ. ಉದ್ದೇಶಪೂರ್ವಕವಾಗಿ ಡ್ರಾಯಿಂಗ್‌ನಲ್ಲಿ ಒಂದು ದೊಡ್ಡ ತಪ್ಪು ಮಾಡಿದೆ. ಸುಮಾರು ಮೂರಡಿಗೆ ಎರಡಡಿಯ ಬೋರ್ಡ್ ಮಧ್ಯದಲ್ಲಿ ನಾಲಕ್ಕು ಕೊಡೆತಲೆ ಸೂಜಿ (ಥಮ್ಬ್ ಪಿನ್/ ಪುಶ್ ಪಿನ್) ಗಳನ್ನು ತಲೆಕೆಳಗಾಗಿಟ್ಟೆ ಬೋರ್ಡಿನ ಆ ಕಡೆ ಈ ಕಡೆ ಸೂಜಿಯ ಎತ್ತರಕ್ಕಿಂತ ಸ್ವಲ್ಪ ಹೆಚ್ಚಾದ ಎರಡು ಬೆರಳಗಲದ ಎರಡು ರಿಪೀಸುಗಳನ್ನಿಟ್ಟು, ಅವುಗಳ ಮೇಲೆ ಡ್ರಾಯಿಂಗ್ ಷೀಟನ್ನು ಹರವಿ, ಅದರ ನಾಲ್ಕೂ ಮೂಲೆಗಳನ್ನು ಕೊಡೆತಲೆ ಸೂಜಿಗಳಿಂದ ಬೋರ್ಡಿಗೆ ಸಿಕ್ಕಿಸಿದ್ದೆ.

ಮಧ್ಯೆ ಮಧ್ಯೆ ರಜೆಗಳಿದ್ದದ್ದರಿಂದ ಮುಂದಿನ ಡ್ರಾಯಿಂಗ್ ಕ್ಲಾಸ್ ಇದ್ದದ್ದೇ ಹತ್ತು ದಿನಗಳ ನಂತರ. ಎಲ್ಲರೂ ಭಯಭಯದಿಂದಲೇ ಕ್ಲಾಸಲ್ಲಿ ಸೇರಿದ್ದೆವು. ಎಂದಿನಂತೆ ಹತ್ತು ನಿಮಿಷ ತಡವಾಗಿ ಬಂದ ಹಟಾರಿ ಏನೂ ಆಗಿಯೇ ಇಲ್ಲದವರಂತೆ ಕ್ಲಾಸ್ ತೊಗೊಂಡರು. ಆದರೆ, ಅಂದು ಹಟಾರಿ ಯಾರ ಡ್ರಾಯಿಂಗ್ ಷೀಟಿನ ಮೇಲೂ ಕೈ ಮಾಡಲಿಲ್ಲ.

ಕಳೆದ ಅರವತ್ತು ವರ್ಷಗಳಲ್ಲಿ ಈ ಘಟನೆ ಅನೇಕ ಸಾರಿ ಕಣ್ಣ ಮುಂದೆ ಬಂದಿದೆ. ಪ್ರತಿ ಸಾರಿ ಈ ಘಟನೆ ನೆನಪಾಗಿ ಕಣ್ಣ ಮುಂದೆ ಬಂದಾಗಲೂ ಒಂದು ಪ್ರಶ್ನೆಯನ್ನು ಕೇಳಿಕೋತೀನಿ. ನಾನು ಮಾಡಿದ್ದು ಸರಿಯೇ?

ಇಂದಿಗೂ, ನನ್ನೊಳಗಿನಿಂದ ಆ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ.



# ಆಯುಧ ಪೂಜೆ

ಸಿ.ಆರ್.ಸತ್ಯ

ನಮ್ಮ ವಠಾರದಲ್ಲೇ ವಾಸಿಗಳಾದ ನಂಜುಂಡ ಶಾಸ್ತ್ರಿಗಳು ಈಚೀಚೆಗೆ ಮನೆ ಬಿಟ್ಟು ಹೊರಗೇ ಬಂದಿರಲಿಲ್ಲ. ಅವರ ಮನೆಯ ದಿಕ್ಕಿನಿಂದ ಅವರಾಡೋ ಮಾತು ಕೂಡ ಕೇಳಬರದೇ ಇದ್ದರಿಂದ ನನಗೆ ಸ್ವಲ್ಪ ಗಾಬರಿಯೇ ಆಯಿತು. ಏನು ವಿಷಯವೋ ವಿಚಾರಿಸೋಣ ಅಂತ ಶಾಸ್ತ್ರಿಗಳ ಮನೆ ಬಾಗಿಲು ತಟ್ಟಿದೆ. ಅದರ ಹೆಂಡತಿ ಬಾಗಿಲು ತೆಗೆದು ನನ್ನ ನೋಡಿ ಬಿಕ್ಕಿ ಬಿಕ್ಕಿ ಅತ್ತರು.

"ಏನು ಹೇಳಲಪ್ಪ, ಕಳೆದ ಆಯುಧ ಪೂಜೆಯ ದಿನದಿಂದ ಮಾತೇ ಬಿಟ್ಟಿಟ್ಟಿದ್ದಾರೆ. ಮೂಲೇಲಿ ಯಾದಾಗಲೂ ಮಂಕಾಗಿ ಕೂತಿದ್ದಾರೆ. ನಾನು ಇನ್ನು ಮೇಲಿಂದ ಯಾದ ಪೂಜೆ ಪುನಸ್ಕಾರಗಳನ್ನೂ ಮಾಡಿಸೋದಿಲ್ಲ ಅಂತ ಒಂದೆರಡು ಸಲ ಬಾಯಿಬಿಟ್ಟು ಕೂಗಿದರು ಅಷ್ಟೆ. ಪುರೋಹಿತರು ಅಂತ ಅನ್ನಿಸಿಕೊಂಡು ಪೂಜೆಯೇ ಮಾಡಿಸೋಲ್ಲ ಅಂತ ಹಠ ಹಿಡಿದರೆ, ನಮ್ಮ ಹೊಟ್ಟೆಪಾಡು ಹ್ಯಾಗಪ್ಪಾ?" ಅಂತ ಆಕೆ ಗೋಗರೆದರು.

"ಏನು ವಿಷಯ ಶಾಸ್ತ್ರಿಗಳೇ? ಹೆದರಬೇಡಿ ಹೇಳಿ" ಅಂತ ಶಾಸ್ತ್ರಿಗಳನ್ನ ಹಾಗೇ ಪುಸಲಾಯಿಸಿದೆ. ಅದರು ತಮ್ಮ ಪೆಚ್ಚು ಮುಖವನ್ನ ಎತ್ತಿ ನನ್ನನ್ನೇ ದೃಷ್ಟಿಸಿದರು. ತಮ್ಮ ಕೈ ಬೆರಳಿಂದ ಅಲ್ಲೇ ಟೇಬಲ್ ಮೇಲೆ ತೋರಿಸಿದರು. ಅಲ್ಲೊಂದು ಡೈರಿ ಇತ್ತು. ಓದು ಓದು ಅಂತ ಸಂಜ್ಞೆ ಮಾಡಿದರು ಶಾಸ್ತ್ರಿಗಳು. ಡೈರಿ ಬರೆಯೋ ಅಭ್ಯಾಸ ಬ್ರಿಟಿಷರೊಡನೆ 1947 ಇಸವಿಯಲ್ಲೇ ಮಂಗಮಾಯವಾಯ್ತು ಅಂತ ನಂಬಿದ್ದ ನನಗೆ, ನಮ್ಮ ಶಾಸ್ತ್ರಿಗಳು ಡೈರಿ ಬರೀತಾರ ಅಂತ ತಿಳಿದು, ಆಶ್ಚರ್ಯವೇ ಆಯಿತು! ಡೈರಿಗಳ ಪುಟಗಳನ್ನ ತಿರುವಿದೆ. ಲಾಸ್ಟ್ ಎಂಟ್ರಿ ಆಯುಧ ಪೂಜೆಯ ದಿನದ್ದು. ಓದಿದೆ:–

(ಶಾಸ್ತ್ರಿಗಳು ಬರೆದದ್ದು)

ಇಂದು ಬೆಳಿಗ್ಗೆ ಕರ್ಮವಿಧಿಗಳನ್ನೆಲ್ಲಾ ಮಾಮೂಲಿಯಾಗಿಯೇ ಮುಗಿಸಿದೆ. ಹಾಗೇ ಕಾಫಿ ಹೀರುತ್ತಾ ಇಂದಿನ ಪೂಜೆ ಕಾರ್ಯಕ್ರಮವನ್ನ ಮೆಲಕು ಹಾಕುತ್ತಿದ್ದೆ. ಆಗ ಬಾಗಿಲ ಬದಿ ಯಾರೋ ನಿಂತು ಕೆಮ್ಮಿದ ಹಾಗಾಯಿತು. ನೋಡಿದರೆ ಒಬ್ಬ ಗಟ್ಟುಮಸ್ತಾದ ಕರೀ ಮೀಸೆಯ ಆಳು. ಒಂದು ಬಿಳೀ ಬನಿಯನ್ ಖಾಕೀ ಚಡ್ಡಿ ತೊಟ್ಟಿದ್ದ. "ನೀವು ನಮ್ಮ ಮನೆಗೆ ಈಗಲೇ ಬಂದು ಆಯುಧ ಪೂಜೆ ಮಾಡಬೇಕು. ನನ್ನತ್ರ ಮೆಟಡಾರ್ ವ್ಯಾನಿದೆ. ವಾಪಸ್ಸು ಮನೆಗೆ ಕರೊಂಡು ಬರ್ತೀನಿ. ಐದು ನೂರು ರೂಪಾಯಿ ಸಂಭಾವನೇನೂ ಕೊಡ್ತೀನಿ ಶಾಸ್ತ್ರಿಗಳೇ, ನೀವು ಬಂದೇ ಬರಬೇಕು" ಅಂತ ಕರೆದ. ಚಾಮುಂಡೇಶ್ವರಿ ದೆಸೆಯೇ ಇದು ಅಂತ ಅಂದುಕೊಂಡು ಅವನ ಜೊತೆ ಹೊರಟೆ.



ವ್ಯಾನಿನಲ್ಲಿ ಯಲಹಂಕ ದಾಟಿ ಎಲ್ಲೋ ಬಯಲೊಳಗೆ ನುಗ್ಗಿ ಒಂದು ಮನೆಯೊಳಗೆ ಹೋಗಿ ನಿಲ್ಲಿಸಿದ. "ಬನ್ನಿ, ಬನ್ನಿ" ಅಂದ. ಒಳಗೆ ಹೋಗಿ ನೋಡಿದರೆ ಅವನ ತರಹಾನೇ ಇನ್ನೂ ಹತ್ತು ಜನ (ಬನಿಯನ್ನು ಖಾಕಿ ಚಡ್ಡಿ) ನಿಂತಿರೋದೇ!

ಕನ್ನಡ, ತಮಿಳು, ತೆಲಗು, ಹಿಂದಿ ಎಲ್ಲರೂ ಎಲ್ಲಾ ಎಲ್ಲಾ ಭಾಷೆಗಳನ್ನೂ ಮಾತಾಡ್ತಿದ್ದರು. ಪಡಸಾಲೆಯಲ್ಲಿ ಗೋಡೆಯ ಬದಿಗೆ ಕೆಲವು ದೊಣ್ಣೆಗಳು, ಹಾರ, ಚೂರಿಗಳನ್ನು ಇಟ್ಟಿದ್ದರು. ಎದುರಿಗೆ ಒಂದು ಬೆಳ್ಳಿ ತಟ್ಟೆಯಲ್ಲಿ ಒಂದು ಸೈಜ್ ಕಲ್ಲು, ಹೂವು, ಹಣ್ಣುಗಳೂ ಇದ್ದವು ಅನ್ನಿ. "ಇದೇ ನಮ್ಮ ಆಯುಧಗಳು ಶಾಸ್ತ್ರಿಗಳೇ. ಪೂಜೆ ಮಾಡಿ ನಮಗೆಲ್ಲಾ ಆಶೀರ್ವಾದ ಮಾಡಿ" ಅಂತ ಕೇಳಿಕೊಂಡ ಆ ಲೀಡರ್ರು. ನನಗೆ ಪರಿಸ್ಥಿತಿ ಸರಿಯಾಗಿ ಅರ್ಥವಾಗಲಿಲ್ಲ. "ಹಮಾರಾ ಕಾಮ್‌ಮೇ ಬಯೀ ಹಮಾರಾ "ಆಯುಧ್ ಶಾಸ್ತ್ರೀಜಿ" ಅಂತ ಇನ್ನೊಂದು ಖಾಕಿ ಚಡ್ಡಿ ಹೇಳಿದ. ಸರಿ ಪೂಜೆ ಶುರು ಮಾಡಿದೆ.




ಪೂಜೆ ಮಾಡ್ತಾ ಮಾಡ್ತಾ ನನ್ನ ಮಂದ ಬುದ್ದೀಗೆ ಚಕಾರ್ ಅಂತ ಹೊಳೀತು. ಬೆಂಗಳೂರಿನ ಸುತ್ತ ಮುತ್ತ ಈಚೀಚೆಗೆ ಡಕಾಯಿತಿಗಳನ್ನು ನಡೆಸಿದ ಪಟಾಂಗಿ–ಗಳು ಇದರೇ ಅಂತ! ಮಂಗಳಾರತಿ ಹಿಡಿದ ಕೈ ನಡುಗಿತು. "ಇಂಗೆ ಇರ್ಕಿಂಗ ಅಳುಕೆಲ್ಲಾ ನಲ್ಲ ಆಶೀರ್ವಾದ ಪಣ್ಣುಂಗು" ಅಂತ ಅಂದ ಇನ್ನೊಬ್ಬ ಖಾಕಿ ಚಡ್ಡಿ, ಆಶೀರ್ವಾದ ಮಾಡೋಹಾಗೆ ನಟಿಸುತ್ತಾ "ದೇವರೇ, ಈ ರಾಕ್ಷಸರ ಕೈಲಿಂದ ನನ್ನ ಪಾರುಮಾಡಪ್ಪಾ, ಸಧ್ಯ ನಿನ್ನ ಆಶೀರ್ವಾದ ನನಗೆ ಇದ್ದರೆ ಸಾಕಪ್ಪಾ" ಅಂತ ಅಂದುಕೊಂಡೆ. ಆಗ ಆ ಲೀಡರ್ರು "ನೀವು ಇಲ್ಲಿಗೆ ಬಂದು ಪೂಜೆ ಮಾಡಿಸಿದ್ದು ಯಾರಿಗೂ ತಿಳೀಬಾರ್ದು ಶಾಸ್ತ್ರಿಗಳೇ. ಅದರಲ್ಲೂ ಪೋಲಿಸರಿಗೇನಾದರೂ ನೀವು ಸುದ್ದಿ ಕೊಟ್ಟರೆ, ಇದೇ ನಿಮ್ಮ ಕಡೆಯ ಆಯುಧ ಪೂಜೆ, ಹುಷಾರ್!" ಅಂತ ಗುಡುಗಿದ. ಇನ್ನೊಬ್ಬ ಖಾಕಿ ಚಡ್ಡಿ ವಾಪಸ್ ನನ್ನ ಕರೊಂಡು ಬಂದು ಮನೆಯಲ್ಲಿ ಬಿಟ್ಟು "ವಸ್ತಾನು, ಶಾಸ್ತ್ರಿಗಾರು" ಅಂತ ಹೇಳಿ ಹೊರಟು ಹೋದ. ಹಾಗೇ ನಡಗುತ್ತಾ ಕೂತೆ.

ಹೊರಗಡೆ ಒಂದು ಕಾರು ಬಂದು ನಿಂತ ಶಬ್ದವಾಯಿತು. ಇದು ಪೋಲೀಸರ ಭೇಟಿಯೇ ಸರಿ, ನನ್ನ ಕತೆ ಮುಗಿಯಿತು ಎಂತಲೇ ಭಯದಿಂದ ಬಾಗಿಲು ತೆರೆದೆ. ನೋಡಿದರೆ ಸಫಾರಿ ಸೂಟಿನಲ್ಲಿರೋ ಮಧ್ಯವಯಸ್ತನೊಬ್ಬ ಬಂದ. "ಶಾಸ್ತ್ರಿಗಳೇ, ನಮ್ಮ ಮನೆಯಲ್ಲಿ ಒಂದು ಪ್ರಿಂಟಿಂಗ್ ಪ್ರೆಸ್ ಇಟ್ಟಿದ್ದೀನಿ. ನಿಮ್ಮ ಕೈಯಿಂದ ಇವತ್ತು ಪೂಜೆ ಮಾಡಿಸಿದರೆ ನನಗೆ ತುಂಬಾ ಸಮಾಧಾನ ಆಗುತ್ತೆ. ನೀವು ಈಗಲೇ ಬರಬೇಕು" ಅಂತ ಗೋಳು ಹೊಯ್ಕಂಡ. ಸರಿ ಅಂತ ಹೊರಟೆ.



ಈ ಸಲ ನನ್ನ ಯಾತ್ರೆ ಮಾರುತಿ ವ್ಯಾನಿನಲ್ಲಿ ಹೊಸೂರು ರೋಡಿನಾಚೆ ಅಲ್ಲೆಲ್ಲೋ, ದೊಡ್ಡ ಮನೆ. ಗ್ರೌಂಡ್ ಫ್ಲೋರಿನಲ್ಲಿ ಅವನ ಪ್ರಿಂಟಿಂಗ್ ಮೆಶಿನ್ನು. ಪೂಜೆ ಮಾಡಿದೆ. ಹಣ್ಣು ಕಾಯಿ ಇಟ್ಟು ನನಗೆ ನಮಸ್ಕಾರ ಮಾಡಿದ. ಅವನ ಹೆಂಡತಿ "ರೀ ದಕ್ಷಿಣೇನೇ ಮರೆತುಬಿಟ್ಟರಲ್ರೀ" ಅಂತ ಜ್ಞಾಪಿಸಿದ್ದಕ್ಕೆ ಸಾರಿ, ಸಾರಿ ಅಂತ ಮೆಶಿನ್ ಸ್ವಿಚ್ ಹಾಕಿದ. ಟಿಕಾಟಿಕ್ ಅಂತ ನನ್ನ ಕಣ್ಣೆದುರಿಗೇ–ಐದು ನೂರು ರೂಪಾಯಿಗಳ ನೋಟುಗಳು–ಪ್ರಿಂಟ್ ಆಗಿ ಬರೋದೇ? ಬಿಸಿ ಬಿಸಿಯಾದ ನೋಟುಗಳನ್ನ ನನ್ನ ಕೈಗಿಟ್ಟು, "ಎಲ್ಲಾ ನಿಮ್ಮ ಆಶೀರ್ವಾದ ಶಾಸ್ತ್ರಗಳೇ. ಆದರೆ ಈ ವಿಷಯ ಎಲ್ಲಾದರೂ ಬಾಯಿ ಬಿಟ್ಟರೆ, ನಿಮ್ಮ ಸಂಸಾರಕ್ಕೆ ಸ್ವಲ್ಪ ಕಷ್ಟ ಆಗುತ್ತೆ ಅಷ್ಟೆ. ಬನ್ನಿ, ಡ್ರಾಪ್ ಮಾಡ್ತೀನೆ" ಅಂದೆ. ತಪ್ಪಗೆ ಮನೆಗೆ ಬಂದು ಬಾಯಿ ಮುಚೊಂಡು ಕೂತೆ. ಮಧಾಹ್ನದ ಊಟಕ್ಕೆ ಅಂತ ಬಾಯಿ ಬಿಟ್ಟಿದ್ದು ಎಷ್ಟೋ ಅಷ್ಟೆ.

ಚಾಮುಂಡೇಶ್ವರಿ, ನಿನ್ನ ದೆಸೆಯಿಂದ ಇವತ್ತು ಧನಲಾಭದೊಂದಿಗೆ ವಾಹನ ಯೋಗವೂ ಬಂದು, ಮೆಟಡರ್, ಮಾರುತಿ ವ್ಯಾನಿನಲ್ಲಿ ತಿರುಗಿದೆ. ಈಗ ಇನ್ಯಾವ ವಾಹನವಮ್ಮಾ? ಅಂತ ಕೇಳಿಕೊಂಡೆ. ತಕ್ಷಣ ಹೊರಗಡೆ ಒಂದು ಜೀಪು ಬಂದು ನಿಂತಿತು. ಅದರಿಂದ ಒಬ್ಬ ಧಢೂತಿ ಅಸಾಮಿ ಕೆಳಗಿಳಿದ. "ವಾದ್ಯಾರೇ, ಇಪ್ಪೊಮೇ ನೀಂಗು ವಂದು ಪೂಜೆ ಪಣ್ಣುಣು" ಅಂತ ಹುಕುಂ ಕೊಟ್ಟ. "ಆಗಲ್ಲಪ್ಪಾ" ಅಂದೆ. "ಆಗಾದು ಅನ್ನ ಚುಮ್ಮ ವಿಡುಮಾಟೆ" ಅಂತ ಗುಡುಗಿದ ಆ ಮೀಸೆ. "ಸರಿಯಪ್ಪಾ" ಅಂತ ಹೊರಟೆ.

ಈ ಸಲ ಜೀಪು ಹಿಡಿದ ದಾರಿ ಕನಕಪುರಾ ಕಡೆಗೆ ಸುತ್ತಿ ತಿರುವಿ ಕೊನೆಗೆ ಒಂದು ಮನೇಗೆ ಬಂದ್ವಿ. ಒಳಗೆ ಕಾಲಿಟ್ಟರೆ ಗೋಡೆ ಮೇಲೆಲ್ಲಾ ಆನೆ ಕೊಂಬುಗಳೇ! "ಇವರಿಕೆ ಆನೆಗಳು ಅಂದರೆ ತುಂಬಾ ಇಷ್ಟ !" ಅಂತ ಅವನ ಹೆಂಡತಿ ವಿವರಿಸಿದಳು. "ನೀವು ಯಾವ ಊರಮ್ಮಾ?" ಅಂತ ಕೇಳಿದೆ. "ಇಂಗೆದಾ, ನಾಗರಹೊಳೆ ಪಕ್ಷತಲೆ" ಅಂದಳು. ಅರ್ಥದಾಯ್ತು! ಆದರೆ ಆ ಘಟಿಂಗ ಬಿಟ್ಟಾನೆಯೆ? ಪೂಜೆ ಮಾಡಿಸ್ಕೊಂಡೇ ಬಿಟ್ಟ. ಅಲ್ಲೇ ಸ್ಟೂಲ್ ಮೇಲೆ ನಾಜೂಕಾಗಿ ಇಟ್ಟಿದ್ದ ಒಂದು ಬಂದೂಕಕ್ಕೆ ಮಂಗಳಾರತೀನೂ ಮಾಡಿಸ್ಕೊಂಡ. ಐನೂರು ರೂಪಾಯಿ ಸಂಭಾವನೇನೂ ಕೈಗಿಟ್ಟ. (ಮುಂಚೇನೇ ಪ್ರಿಂಟ್ ಆದದ್ದು). "ಇಂಗೆ ವಂದ ವಿಷಯ ಯಾರಿಕ್ಕಾನಾ ಶೊನ್ನಾ, ಈ ಗನ್ನಲ್ಲೇ ಉಂಗಳ ವಾಯಿಯಲ್ಲಿ ಆಡಿಪೆ !" ಅಂದ.

"ಅಪ್ಪಾ, ನನ್ನ ಬಿಟ್ಟುಡಪ್ಪಾ, ನಾನು ಇವತ್ತಿಂದ ಯಾರಿಗಾದರೂ ಹೇಳೋದು ಇರಲಿ, ಜೀವ ಪರ್ಯಂತ ಮಾತೇ ಆಡೋಲ್ಲ" ಅಂತ ಭಾಷೆ ಕೊಟ್ಟೆ. "ಪಾಪ, ರೊಂಬ ನಲ್ಲ ವಾದ್ಯಾರ್ರು !" ಅಂತ ಅವನ ಹೆಂಡತಿ ಬೇರೆ ಶಿಫಾರಸಿ ಮಾಡಿದಳು. "ಸರಿ, ವಾಂಗು ಪೋಲಾಂ" ಅಂತ ಅದೇ ಜೀಪಿನಲ್ಲೇ ಕರೆದುಕೊಂಡು ಬಂದು ಮನೆಗೆ ತಳ್ಳಿ ಹೋದ!

ಮನೆಗೆ ಬಂದ ಮೇಲೆ ನನ್ನ ಕೈಕಾಲುಗಳಲ್ಲಿ ಏನೋ ಗಡಗಡ ನಡುಕ ಶುರುವಾಯಿತು. ಅಪ್ಪಿ ತಪ್ಪಿ ನನ್ನ ಬಾಯಿಂದ ಏನಾದರೂ ಮಾತು ಹೊರಟು ಇವತ್ತಿನ ಆಯುಧ ಪೂಜೆಗಳ ಸುದ್ದಿ ಹೊರ ಬಿದ್ದು ಪೋಲೀಸರ ಕಿವಿಗೂ ಮುಟ್ಟಿದರೆ ನನ್ನ ಗತಿ, ನನ್ನ ಸಂಸಾರದ ಗತಿ ಏನಾಗಬಹುದೆಂದು ಯೋಚಿಸಿದೆ. ಈ ಯೋಚನೆಯಿಂದಲೋ ಇಲ್ಲಾ ಗಾಭರಿಯಿಂದಲೋ, ಆ ಕ್ಷಣ ನನ್ನ ಗಂಟಲಲ್ಲಿ ಮಾತೇ ನಿಂತು ಹೋಯ್ತು. ನನ್ನ ಕಾಲ ತೀರಿದ ಮೇಲಾದರೂ ಜನಕ್ಕೆ ನಿಜ



ಸಂಗತಿ ತಿಳಿಯಲಿ ಎಂದು ಈಚೀಚೆಗೆ ಡೈರಿಯಲ್ಲಿ ಇದೆಲ್ಲಾ ಬರೆದಿಟ್ಟಿದೀನಿ, ಬಹುಶಃ ನನಗೆ ತೀರಾ ಆತ್ಮೀಯರಾರಾದರೂ ಕೇಳಿದರೆ ಮಾತ್ರ ಈ ಡೈರಿ ತೋರಿಸಬಹುದು ಅಂತ ನಿಶ್ಚಯಿಸಿಕೊಂಡಿದ್ದೀನಿ ನಂಜುಂಡ ಶಾಸ್ತ್ರಿ.

(ಇಲ್ಲಿಗೆ ಡೈರಿ entry ಮುಗಿದಿತ್ತು)

"ಈಗ ಏನ್ಮಾಡೋದು ಅಂತ ತಿಳೀತಿಲ್ವಲ್ಲಪ್ಪಾ?" ಅಂತ ಶಾಸ್ತ್ರಿಗಳ ಹೆಂಡತಿ ಮೊರೆಯಿಟ್ಟರು. ನಾನೊಂದು ದೀರ್ಘ ನಿಟ್ಟುಸಿರು ಬಿಟ್ಟು, "ಅದರ ಪಾಡಿಗೆ ಅವರನ್ನ ಸ್ವಲ್ಪ ದಿವಸ ಬಿಟ್ಟುಬಿಡೀಮ್ಮ. ಇದು ಕಾಂಪ್ಲಿಕೇಟಡ್ ಕೇಸು. ಇದನ್ನ ಲಾಯರ್ ಆಗಲಿ, ಡಾಕ್ಟರ್ ಆಗಲಿ, ಪೊಲೀಸ್ ಆಗಲಿ ಬಗೆಹರಿಸೋಕ್ಕೆ ಸಾಧ್ಯದೇ ಇಲ್ಲ. ನಾನಿನ್ನು ಬರ್ತೀನೆ. ಬಾಗಿಲು ಹಾಕ್ಕೊಳ್ಳಿ" ಅಂತ ಹೇಳಿ ಅಲ್ಲಿಂದ ಕಾಲುಕಿತ್ತೆ!

**ನಾ ಕಸ್ತೂರಿಯವರ ಅನರ್ಥಕೋಶದಲ್ಲಿ ಹರಿತ ವ್ಯಂಗ್ಯದ ಉದಾಹರಣೆ**

| | | |
|---|---|---|
| **ಓಟು** | : | ಐದು ವರ್ಷಕ್ಕೊಮ್ಮೆ ಘನವಾಗುವ ವಸ್ತು. ದೇಶ ದ್ರೋಹವೆಸಗಲು ನಮ್ಮ ಕೈಗೆ ಬಂದಿರುವ ಅಸ್ತ್ರ. |
| **ಇಸ್ಪೀಟು** | : | ಭಂಡರ ಭಾಗವತ, ಸೈತಾನನ ವೇದ. |
| **ಐಸ್** | : | ಆಧುನಿಕ ಕವನಗಳನ್ನು ಓದುವಾಗ ತಲೆಯ ಮೇಲಿರಬೇಕಾದ ವಸ್ತು. |
| **ಅಂಚೆ** | : | ದಮಯಂತಿ ಪ್ರಾರಂಭಿಸಿದ ಡಾಕ್ ಪದ್ಧತಿ. |
| **ಅಡುಗೆ** | : | ಸಂಪಾದಿಸಿ ತಂದದ್ದನ್ನು ಮನೆಯಲ್ಲಿ ಹಾಳು ಮಾಡುವ ವಿಧಾನಗಳಲ್ಲಿ ಒಂದು. |
| **ಪತಿ** | : | ದಂಪತಿಗಳಲ್ಲಿ ದಮ್ ಕಳೆದುಕೊಂಡವನು. |
| **ಆಸ್ತಿ** | : | ನಾವು ಕೊನೆಯಲ್ಲಿ ಬಿಟ್ಟು ಹೋಗಬೇಕಾದದ್ದು– ಲಾಯರ್‌ಗಳಿಗೆ. |
| **ಓಂ** | : | ಅನಾದಿ ಭಾರತೀಯನ ಆದ್ಯ 'ತೇಗು' |
| **ಕರಟಕ** | : | ಸಾಲದಲ್ಲಿ ಮುಳುಗಿ ದಾರಿ ಕಾಣದೆ ಕಂಡವರ ಮೇಲೆ ಪಿತೂರಿ ಕೂಡುವವ. |



# ವಾತಾಪಿ ಜೀರ್ಣೋಭವ

ಅಣ್ಣಾಸ್ವಾಮಿ ಮೊದಲಿಯಾರ್

**ಮ**ಹಾಭಾರತ ಮಹಾಕಾವ್ಯದಲ್ಲಿ ಅಗಸ್ಯ ಮಹರ್ಷಿ ವಾತಾಪಿ ಎಂಬ ದೈತ್ಯನು ಮೇಷರೂಪದಲ್ಲಿದ್ದಾಗ ಅಡಿಗೆ ಮಾಡಿಕೊಂಡು ತಿಂದು ವಾತಾಪಿ ಜೀರ್ಣೋಭವ' ಅಂತ ಹೇಳಿ ದೊಡ್ಡ ತೇಗು ಹಾಕಿ ಜೀರ್ಣ ಮಾಡಿಕೊಂಡ ಕಥೆ ನೀವೆಲ್ಲ ಕೇಳಿರಬಹುದು ಅಥವಾ ಓದಿರಬಹುದು. ಒಂದು ಕುರಿ ಮಾಂಸವನ್ನು ಅಗಸ್ಯರು ತಿಂದು ಜೀರ್ಣಮಾಡಿಕೊಂಡರು ಅಂದರೆ ಅವರ ಜೀರ್ಣಶಕ್ತಿ ಎಷ್ಟಿರಬೇಕು? ಅವರೇನು ಸಾಮಾನ್ಯರೇ ನಮ್ಮ ಹಾಗೆ, ಸಮುದ್ರರಾಜನ ಮೇಲೆ ಕೋಪಿಸಿಕೊಂಡು ಸಪ್ತ ಸಮುದ್ರಗಳ ನೀರನ್ನು ಕುಡಿದು ಏನೂ ಆಗದವರಂತೆ ಇದ್ದವರು. ತನ್ನ ಕಮಂಡಲದ ನೀರಿನಿಂದ ಕಾವೇರಿ ನದಿಯನ್ನು ಸೃಷ್ಟಿಸಿದವರು. ಗಗನದೆತ್ತರಕ್ಕೆ ಬೆಳೆಯುತ್ತಿದ್ದ ವಿಂಧ್ಯ ಪರ್ವತವನ್ನು ತಲೆಬಾಗಿಸಿ ಬೆಳೆಯದಂತೆ ಮಾಡಿದವರು. ನಾನು ಇಲ್ಲಿ ಅಗಸ್ತ್ಯರ ಬಗ್ಗೆ ಬರೆಯಲು ಹೊರಟಿಲ್ಲ. ಜೀರ್ಣಶಕ್ತಿಯ ಬಗ್ಗೆ ಹೇಳ ಹೊರಟಿದ್ದೇನೆ. ಯಾಕೆಂದ್ರೆ! ನನ್ನ ಗೆಳೆಯ 'ಉಂಡಾಡಿ ಗುಂಡಣ್ಣ' ಇದ್ದಾನಲ್ಲ, ಅವನು ಸಹ ಹೀಗೇ ಅಗಸ್ತ್ಯರ ಹಾಗೆ ತುಂಬ ಜೀರ್ಣಶಕ್ತಿ ಉಳ್ಳವನು. ನಮ್ಮ ಕಾಲದಲ್ಲಿ ಈಗಿನ ಹಾಗೆ ತರಕಾರಿ ಕತ್ತರಿಸೋಕೆ ಗಿನ್ನೀಸ್ ರಿಕಾರ್ಡ್, ಎಲೆಕ್ಷನ್‌ನಲ್ಲಿ ಹೆಚ್ಚು ಸೋತಿದ್ದಕ್ಕೆ ಗಿನ್ನೀಸ್ ರಿಕಾರ್ಡ್, ಹೀಗೆ ಕೂತರೆ–ನಿಂತರ ವಿಶ್ವರೆಕಾರ್ಡ್ ಇರಲಿಲ್ಲ. ಈಗಿನ ಕಾಲವಾಗಿದ್ದರೆ ಖಂಡಿತ ಉಂಡಾಡಿಗುಂಡ ತಿನ್ನುವುದರಲ್ಲಿ, ತಿಂದು ಜೀರ್ಣಿಸಿಕೊಳ್ಳುವುದರಲ್ಲಿ ಗಿನ್ನೀಸ್ ರೆಕಾರ್ಡ್ ವಿಶ್ವದಾಖಲೆ ಮಾಡ್ತಿದ್ದ ಅಂತ ಕಾಣತ್ತೆ.

ಯಾವುದು ಹೇಗೆ ಇರಲಿ, ನಂಬಿದರೆ ನಂಬಿ ಬಿಟ್ಟರೆ ಬಿಡಿ, ತಿನ್ನುವುದು – ತಿಂದು ಜೀರ್ಣಿಸಿಕೊಂಡು ಏನೂ ಆಗದವರಂತೆ ಇರುವುದು ಎಲ್ಲರಿಗೂ ಸಾಧ್ಯವಿಲ್ಲ ಅದೊಂದು ವಿಶಿಷ್ಟವಾದ ಕಲೆ, ಬೋಫೋರ್ಸ್ ಪ್ರಕರಣ, ಹರ್ಷದ್ ಮೆಹ್ತಾ ಪ್ರಕರಣ, ಬೂಸಾ ಪ್ರಕರಣ ಹೀಗೆ ಹತ್ತು ಹಲವಾರು ಪ್ರಕರಣಗಳಲ್ಲಿ ಕೋಟಿಗಟ್ಟಲೆ ಹಣವನ್ನು ನುಂಗಿ ನೀರು ಕುಡಿದು ಏನೂ ಆಗದವರಂತೆ ಇನ್ನೂ ಹೊರಗೆ, ಅದೂ ರಾಜಕೀಯ ರಂಗದಲ್ಲಿ ಇರುವವರನ್ನು ನೋಡಿದರೆ, ಇವರೆಲ್ಲಾ ಬಕಾಸುರರನ್ನು ಕೊಂದು ಮೂರು ಬಂಡಿ ಆಹಾರವನ್ನು ತಿಂದು ತೇಗಿ ನೀರುಕುಡಿದ ಮಹಾಬಲ ಭೀಮನ ವಂಶಕ್ಕೆ ಸೇರಿದವರಿರಬಹುದೇ? ಎಂಬ ಸಂಶಯ ಬರುತ್ತೆ.


* * *

ನನ್ನ ಗೆಳೆಯ ಪಾಂಡುರಂಗಿ ಮದುವೆಗೆ ಹುಬ್ಬಳ್ಳಿಗೆ ಹೋಗಿದ್ದೆ. ನನ್ನ ಜೊತೆ ಉಂಡಾಡಿಗುಂಡನೂ ಬಂದಿದ್ದ. ನಾವಿಬ್ಬರೂ ಬಾಲ್ಯಗೆಳೆಯರು, ಪಾಂಡುರಂಗಿ ನಮ್ಮಿಬ್ಬರಿಗೂ ಸ್ನೇಹಿತ. ಹೀಗಾಗಿ ನಾವಿಬ್ಬರೂ ಹುಬ್ಬಳ್ಳಿಗೆ ಹೋಗಿದ್ದೆವು. ವರಪೂಜೆಯ ದಿನ ವರನಿಗಿಂತ, ವರನ ಗೆಳೆಯರಿಗೇ ಹೆಚ್ಚು ಮರ್ಯಾದೆ ನಡೆಯಿತು. ಬೆಂಗಳೂರಿನಿಂದ ಹೈಟೆಕ್ ಬಸ್ಸಿನಲ್ಲಿ ಹೊರಟು ಹುಬ್ಬಳ್ಳಿ ಸೇರಿದಾಗ ಸಂಜೆಯಾಗಿತ್ತು. ಮದುವೆ ಛತ್ರದ ಮುಂದೆ ಬಸ್ಸು ನಿಂತು, ಬಸ್ಸಿನಿಂದು ಇಳಿದು ಕೈಕಾಲುಗಳನ್ನು



ಆಡಿಸಿದಾಗ, ಏರ್ ಕಂಡೀಷನ್ಡ್ ಬಸ್ ಪ್ರಯಾಣಕ್ಕಿಂತ ಹಿತಕರವಾಗಿತ್ತು. ನಾಲ್ಕು ಜನ ಛತ್ರದ ಮುಂದೆ ಕುರ್ಚಿಗಳನ್ನು ಹಾಕಿ ಕುಳ್ಳಿರಿಸಿದರು. ಎಳನೀರು–ನಿಂಬೆಹಣ್ಣು ಪಾನಕ ಸರಬರಾಜಾಯಿತು. ನಂತರ ಘಮ–ಘಮ ಎಂದು ವಾಸನೆ ಕೂಡಿದ ಅಸಲಿ ಮಂಡ್ಯ ತುಪ್ಪದಲ್ಲಿ ಮಾಡಿದ ಸಿರಾ (ಕೇಸರಿಬಾತ್) ಬಟಾಣಿ, ಗೋಡಂಬಿ, ಹುರುಳಿಕಾಯಿ ಚೂರುಗಳನ್ನು ಹಾಕಿದ ಬಿಸಿ ಬಿಸಿ ಬಾತ್ ಬಂತು. ಬಾದಾಮಿ ಅರೆದು, ಅದರ ಹಾಲಿಗೆ ಯಾಲಕ್ಕಿ, ಜೀರಿಗೆ, ಬಿಸಿ ಬಿಸಿ ಕಾಸಿದ ನೀರು ಬೆರೆಸದ ಅಪ್ಪಟ ಹಾಲು ಸೇರಿಸಿ ಕುಡಿಯಲು ಕೊಟ್ಟರು. ಛತ್ರದ ಮಹಡಿ ಮೇಲಿದ್ದ ಎರಡು ರೂಂಗಳನ್ನು ನಮ್ಮ ಬಿಡದಿಗೆಂದು ಬಿಟ್ಟುಕೊಟ್ಟರು.

ವರಪೂಜೆ ಮುಗಿದು, ಶಾಸ್ತ್ರಗಳೆಲ್ಲ ಆದಮೇಲೆ ಭರ್ಜರಿ ಊಟ ಆಯಿತು. ಕೆಲವರು ಹೊಟ್ಟೆ ಭಾರಕ್ಕೆ ಮಲಗಿ ನಿದ್ದೆಗೆ ವಶರಾದರು. ಕೆಲವರು ಹೊಟ್ಟೆ ಭಾರಕ್ಕೆ ನಿದ್ದೆ ಬಾರದೆ ಛತ್ರದ ಹೊರಗಡೆ ಇದ್ದ ಹುಲ್ಲಿನ ಹಾಸಿನ ಮೇಲೆ ತಂಗಾಳಿಗೆ ಕೂತು ಹರಟೆ ಹೊಡೆಯತೊಡಗಿದರು. ಇನ್ನು ಕೆಲವರು ಬಿಡದಿ ರೂಂನಲ್ಲಿ ಇಸ್ಪೀಟು ಆಟದಲ್ಲಿ ತೊಡಗಿದರು. ನಾನು ಪ್ರೇಕ್ಷಕನಾಗಿ ಕುಳಿತಿದ್ದೆ, ಗುಂಡಣ್ಣ ಇಸ್ಪೀಟು ಆಟದಲ್ಲಿ ಜೇಬಿನಲ್ಲಿದ್ದ ಹಣವೆಲ್ಲಾ ಕಳೆದುಕೊಂಡ. ಮಾರನೆ ದಿನಪಾಂಡುರಂಗಿಗೆ ಮುಯ್ಯಿ ಹಾಕಲು ಹಣವಿಲ್ಲ. ಬಸ್ ಉಚಿತವಾದ್ದರಿಂದ ಊರು ಸೇರುವುದು ಕಷ್ಟವಿರಲಿಲ್ಲ. ಪಾಕೆಟ್ ಮನಿಗೆ ನನ್ನ ಕಡೆ ಕೈಚಾಚಿದ. ನಾನು ಅವನನ್ನು ಅಲ್ಲಿಂದ ಎಬ್ಬಿಸಿ ಹೊರಗೆ ಕರೆತಂದೆ. ಹರಟೆ ಗುಂಪಿಗೆ ನಾವು ಸೇರಿದೆವು. ಪೈಲ್ವಾನ್ ವರದಪ್ಪ ತನ್ನ ಸಾಹಸಗಳನ್ನು ಹೇಳುತ್ತಿದ್ದ. ಯಾವ ಯಾವ ಊರಿನಲ್ಲಿ ಎಂಥೆಂಥ ಜಟ್ಟಿಗಳನ್ನು ನಾನು ಕುಸ್ತಿಯಲ್ಲಿ ಸೋಲಿಸಿದೆ, ಅದಕ್ಕೆ ಹೇಗೆಲ್ಲಾ ತಯಾರಿ ನಡೆಸಿದೆ ಎಂದೆಲ್ಲಾ ಹೇಳುತ್ತಿದ್ದ. ಮಾತಿನ ನಡುವೆ ಅವನು ಹತ್ತು ಹೋಳಿಗೆಗಳನ್ನು ತಿಂದ ವಿಷಯ ಬಂತು. ಇದೇನು ಮಹಾ! ನಾನು ಇಪ್ಪತ್ತು ಹೋಳಿಗೆ ತಿಂತೀನಿ!" ಎಂದ ಗುಂಡಣ್ಣ. ಪೈಲ್ವಾನ್ ವರದಪ್ಪನಿಗೆ ಕೋಪಬಂತು




"ನೀನು ಇಪ್ಪತ್ತು ಹೋಳಿಗೆ ತಿಂದರೆ ನೂರು ರೂಪಾಯಿ ಕೊಡ್ತೀನಿ" ಎಂದ.

"ಜುಜುಬಿನೂರು ಯಾರಿಗೆ ಬೇಕು, ಐನೂರು ಕೊಡ್ತೀಯ ಬೇಕಾದ್ರೆ ಮೂವತ್ತು ಹೋಳಿಗೆ ತಿಂತೀನಿ" ಎಂದ ಗುಂಡಣ್ಣ ವರದಪ್ಪನಿಗೆ ರೇಗಿ ಹೋಯಿತು.

"ನೀನು ಮೂವತ್ತು ಹೋಳಿಗೆ ತಿಂದರೆ ಐನೂರು ಕೊಡ್ತೀನಿ"



"ಅಷ್ಟೇ ಅಲ್ಲ ಅದನ್ನು ತಯಾರಿಸಲು ಆಗುವ ಖರ್ಚು ಕೊಡಬೇಕು"

"ಸೋತರೆ ನೀನು ಕೊಡಬೇಕು"

"ಸರಿ"

"ಸರಿ"

ವರದಪ್ಪನ ಚೇಲಾಗಳು ಅಡಿಗೆ ಮನೆಗೆ ಹೋಗಿ ಅಡಿಗೆ ಭಟ್ಟರನ್ನು ಕರೆತಂದರು ಅಲ್ಲೇ ಮಾತುಕತೆಯಾಗಿ ಅಡಿಗೆ ಭಟ್ಟರು ಮದುವೆ ಖರ್ಚಿಗೆ ಸೇರಿಸದೆ ಐವತ್ತು ಹೋಳಿಗೆಗಳನ್ನು ಮಾಡುವ ಏರ್ಪಾಡಾಯಿತು.

ಬೆಳಿಗ್ಗೆ ನಮಗೆಲ್ಲಾ ಕುತೂಹಲ. ನಾವೆಲ್ಲಾ ಟಿಫನ್ನಿಗೆ ಕುಳಿತೆವು 'ಇಡ್ಲಿವಡೆ ಸಾಂಬಾರ್' 'ಪೊಂಗಲ್' ಸೇವೆ ನಡೆಯಿತು. ಗುಂಡಣ್ಣ ನನ್ನ ಪಕ್ಕ ಕುಳಿತಿದ್ದ. ನಮ್ಮ ಎದುರು ಸಾಲಿನಲ್ಲಿ ಕಳಿತಿದ್ದ ವರದಪ್ಪ "ಭಟ್ಟರೇ ಹೋಳಿಗೆ ಬರಲಿ ಎಂದ" ಭಟ್ಟರು ತಟ್ಟೆತುಂಬ ಹೋಳಿಗೆ ತಂದರು. ನಮ್ಮ ತಟ್ಟೆಗಳಿಗೂ ಎರಡೆರಡು ಹೋಳಿಗೆಗಳು ಬಂದವು. ಭಟ್ಟರ ಶಿಷ್ಯ ಬಟ್ಟಲಿನಲ್ಲಿ ಬಿಸಿ ಬಿಸಿ ಕಾಯಿಸಿದ ತುಪ್ಪ ಹಿಡಿದು ಬಂದ. ನಾವು ಎರಡು ಹೋಳಿಗೆ ತಿನ್ನುವ ವೇಳೆಗೆ ಸುಸ್ತಾದೆವು. ಗುಂಡಣ್ಣನ ತಟ್ಟೆಗೆ ಒಂದರಮೇಲೊಂದು ಹೋಳಿಗೆಗಳು ಬೀಳತೊಡಗಿದವು, ಹಿಂದೆಯೇ ತುಪ್ಪದ ಸರಬರಾಜು. ಒಂದು–ಎರಡು–ಮೂರು.... ಮೂವತ್ತು ಹೋಳಿಗೆಗಳನ್ನು ತಿಂದು, ಒಂದು ತಂಬಿಗೆ ನೀರು ಕುಡಿದು. 'ಸಾಕು ಭಟ್ಟರೇ... ಮಧ್ಯಾಹ್ನ ಮದುವೆ ಊಟ ಮಾಡಬೇಕು" ಎಂದು ನಿಲ್ಲಿಸಿದ. ಭಟ್ಟರು ಗುಂಡಣ್ಣನಿಗೆ ಕೈಮುಗಿದು "ನೀನು ನೂರುವರ್ಷ ಬದುಕಪ್ಪ. ನನಗೆ ಈ ದಿನ ವಾಯುಪುತ್ರ ಭೀಮಸೇನರ ದರ್ಶನವಾಯ್ತು" ಎಂದು ಕಣ್ಣೀರಿಟ್ಟರು. ವರದಪ್ಪ ಐದು ಹಸಿರು ನೋಟುಗಳನ್ನು ಗುಂಡಣ್ಣನ ಮುಂದೆ ಹಾಕಿ, ದುರ್ದಾನ ಪಡೆದವನಂತೆ ತಲೆಮೇಲೆ ಟವಲು ಹಾಕಿಕೊಂಡು ಮದುವೆಮನೆ ಜನಜಂಗುಳಿ ಮಧ್ಯೆಸೇರಿಕೊಂಡ.

* * *

ನಾನು ಗುಂಡಣ್ಣ ಒಂದೇ ಫ್ಯಾಕ್ಟರಿಯಲ್ಲಿ ಕೆಲಸ ಮಾಡ್ತಿದ್ದೆವು. ಅವನು ಡಿಸ್ಪಾಚ್‌ಸೆಕ್ಷನ್‌ನಲ್ಲಿ ಕೆಲಸಮಾಡ್ತಿದ್ದ. ನಾನು ಗುಣಮಟ್ಟ ವಿಭಾಗದಲ್ಲಿ ಕೆಲಸಮಾಡ್ತಿದ್ದೆ. ಮಧ್ಯಾಹ್ನ ಊಟವಾದ ಮೇಲೆ ಸ್ವಲ್ಪ ಹೊತ್ತು ಹೊರಗೆ ವಾಕಿಂಗ್ ಹೋಗುತ್ತಿದ್ದೆವು ನಾನು ಮತ್ತು ನನ್ನ ಗೆಳೆಯರು, ಗುಂಡಣ್ಣನೂ ಒಂದೊಂದು ದಿನ ನಮ್ಮ ಜೊತೆ ಸೇರಿಕೊಳ್ಳುತ್ತಿದ್ದನು.

ಚಂದ್ರಗ್ರಹಣದ ದಿನ. ಮಧ್ಯಾಹ್ನ ಏನೂ ತಿನ್ನಬಾರದು, ಬರೀ ಹೊಟ್ಟೆಯಲ್ಲಿ ಇರಬೇಕು ಅಂತ ಶಾಸ್ತ್ರ. ಆಚಾರವಂತರ ಮನೆತನಕ್ಕೆ ಸೇರಿದವರಾದ ನಾವು ಊಟ ಮಾಡಲು ಸಾಧ್ಯವೇ? ಅಂದು ಊಟಮಾಡಲಿಲ್ಲ. ಎಂದಿನಂತೆ ಹೊರಗೆ ವಾಕಿಂಗ್ ಹೊರಟೆವು. ಆದಿನ ಗುಂಡಣ್ಣ ನಮ್ಮ ಜೊತೆ ಸೇರಿಕೊಂಡ. ಅಂಗಡಿ ಬೀದೀಲಿ ಹೋಗುವಾಗ ಹೊಸದಾಗಿ ತಂದಿಟ್ಟಿದ್ದ ಬಾಳೆಹಣ್ಣಿನ ಗೊನೆ ಅಂಗಡೀಲಿ ನೇತಾಡುತ್ತಿತ್ತು. ನಂಜನಗೂಡು ರಸಬಾಳೆ ಸುವರ್ಣ ಬಣ್ಣದಿಂದ ಸೂರ್ಯನ ಬೆಳಕಿಗೆ ಹೊಳೆಯುತ್ತಿತ್ತು. ಯಾಕೋ ಏನೋ ನಮಗೇ ತಿಳಿಯದೆ ಬಾಯಲ್ಲಿ ನೀರೂರಿತು. ಚಿಟ್ ಫಂಡ್ ದಂದೆಯಲ್ಲಿ ಹಣದ ಹೊಳೆ ನೋಡಿ ಮನಸ್ಸು ಕರಗಿ, ಕೈ ಮಾಡಬಾರದ ಕೆಲಸ ಮಾಡುವಂತೆ, ಆಚಾರ ಗಾಳಿ ಪಾಲಾಗುವುದಲ್ಲ ವ್ಯಥೆ!



ನಮ್ಮ ಗುಂಪಿನಲ್ಲಿ ಸುಬ್ಬಣ್ಣ ಹೆಚ್ಚು ಸಂಪ್ರದಾಯಸ್ತ. ಅವನ ದೊಡ್ಡಪ್ಪನ ಮಗ ಯಾವುದೋ ಮಠದಲ್ಲಿ ದೊಡ್ಡ ಗುರು ಆಗಿದ್ದ. ಮಠದ ಶಾಖೆ ಬೆಂಗಳೂರಿನಲ್ಲಿತ್ತು. ಪ್ರತಿ ಏಕಾದಶಿ, ದ್ವಾದಶಿ, ಹರಿದಿನ, ಹಬ್ಬದ ದಿನಗಳು, ಗ್ರಹಣದ ಮಾರನೆ ದಿನ, ಹೀಗೆ ವಿಶೇಷ ದಿನಗಳಲ್ಲಿ ಅವನು ಸಂಸಾರ ಸಮೇತ ಮಠಕ್ಕೆ ಹೋಗಿದ್ದ ಅಲ್ಲೇ ಊಟ–ಪ್ರಸಾದ ನಡೀತಿತ್ತು. ತಿಂಗಳಲ್ಲಿ ಅರ್ಧ ಸಂಬಳ ಉಳಿತಾಯ ಆಗಿತ್ತು. ಮಡಿ–ಆಚಾರ–ವಿಚಾರಗಳಲ್ಲಿ ಅವನ ಮಾತೇ ನಮಗೆ ವೇದವಾಕ್ಯ.

ಸುಬ್ಬಣ್ಣ ವೇದಘೋಷದಂತೆ ಹೇಳಿದ

"ಬಾಳೆಹಣ್ಣು ತಿಂದರೆ ದೋಷವಿಲ್ಲ!" ಅವನ ಮಾತು ಮುಗಿಯುವುದರೊಳಗೆ ನಾವು ಬಾಳೆಹಣ್ಣು ಅಂಗಡಿಗೆ ಧಾಳಿಯಿಟ್ಟೆವು. ಅವರವರ ಚೈತನ್ಯ. ಎರಡು ಮೂರು ಹಣ್ಣು ತಿಂದೆವು. ಎಳನೀರು ದೋಷವಿಲ್ಲ ಸುಬ್ಬಣ್ಣ ಹೇಳಿದ. ಒಂದು ಗೊನೆ ಎಳನೀರು ಅಂಗಡಿಯಲ್ಲಿ ಖಾಲಿಯಾಯಿತು.

"ನಾನು ಮಠದ ಊಟ ಮಾಡೋನು. ಅದಕ್ಕೇ ನಾನು ನಾಲ್ಕು ರಸಬಾಳೆ ಹಣ್ಣು ತಿಂದೆ ನೀವೆಲ್ಲಾ ಒಂದು–ಎರಡಕ್ಕೇ ಸುಸ್ತು! ಗಹಗಹಿಸಿ ನಕ್ಕ ಸುಬ್ಬಣ್ಣ.

"ನಾಲ್ಕು ಹಣ್ಣುಗಳೇನು ಮಹಾ! ನಲವತ್ತು ಹಣ್ಣುಗಳನ್ನು ತಿನ್ನಬಹುದು!" ಎಂದ ಗುಂಡಣ್ಣ ಗಂಭೀರವಾಗಿ, ಸುಬ್ಬಣ್ಣನಿಗೆ ರೇಗಿತು.

"ಇದು ಗುಂಡಾಪಂತ್ ಬೀದಿ ಹೋಟೆಲಿನ ಇಡ್ಲಿಸಾಂಬಾರ್ ಅಲ್ಲ ತಿನ್ನೋಕೆ, ಇದು ನಂಜನಗೂಡು ರಸಬಾಳೆ"

"ಕಾಣ್ತಿದೆಯಲ್ಲ – ಐನೂರು ಕೊಡ್ತೀಯ ಐವತ್ತು ಹಣ್ಣು ತಿಂತೀನಿ...."

ಜೇಬಿನಲ್ಲಿ ಬೋನಸ್ ಹಣವಿತ್ತು. ಇಬ್ಬರೂ ಐನೂರು ರೂಪಾಯಿ ತೆಗೆದು ನನ್ನ ಕೈಗೆ ಕೊಟ್ಟರು. ಗೊನೆಯಿಂದ ಒಂದೊಂದು ಹಣ್ಣು ಕಿತ್ತುಕೊಂಡು ತಿಂದು ಸಿಪ್ಪೆಯನ್ನು ಸುಬ್ಬಣ್ಣನ ಮುಂದೆ ಹಾಕತೊಡಗಿದ ಗುಂಡಣ್ಣ. ನಮ್ಮ ಗುಂಪಿನಲ್ಲೆಲ್ಲಾ ಜೂನಿಯರ್ ಹನುಮಂತರಾಯ ಸಿಪ್ಪೆಗಳನ್ನು ಎಣಿಸತೊಡಗಿದ, ಒಂದು – ಎರಡು – ಮೂರು ಎಣಿಸತೊಡಗಿದ. ಐವತ್ತು ದಾಟಿ ಗೊನೆ ಖಾಲಿಯಾಯಿತು. ಈಗಾಗಲೇ ನಾವು ಬೇರೆ ಒಂದಷ್ಟು ಹಣ್ಣುಗಳನ್ನು ಮುಗಿಸಿದ್ದೆವು. ಬೇರೆ ದಾರಿಯಿಲ್ಲದೆ ಗುಂಡಣ್ಣನ ಜೇಬಿಗೆ ತುರುಕಿದೆ. ಬೇಲಿನ ಮೇಲೆ ಬಿಡುಗಡೆಯಾದಲಲ್ಲೂ ಪ್ರಸಾದ್ ಯಾದವ್‌ನಂತೆ, ಷೀಟಿ ಹಾಕುತ್ತಾ ಬೀಡಾ ಅಂಗಡೀಲಿ ನಾಲ್ಕು ಬೀಡ ಕೊಂಡು ಹೊರಟ. ಒಂದು ತಿಂಗಳು ಮಠದ ಊಟ ಕಳೆದುಕೊಂಡವನಂತೆ ಸುಬ್ಬಣ್ಣ, ಕಾಂಗ್ರೆಸ್ ಬೆಂಬಲ ಕಳೆದುಕೊಂಡು ಪದವಿ ಕಳೆದುಕೊಂಡ ಗುಜ್ರಾಲ್ ರಂತೆ ಸೋತ ಮುಖದೊಡನೆ ಹೊರಟ.

'ಬಾಳೆ ಹಣ್ಣು ದುಡ್ಡು ಕೊಡಿ' ಅಂಗಡಿಯವನು ನನ್ನನ್ನು ಹಿಡಿದುಕೊಂಡ. ನಾನು ಹಣತೆತ್ತು, ಲೈಟಿಲ್ಲದ ಸೈಕಲ್ ಸವಾರ ಪೇಲಿಸ್ ಪೇದೆಗೆ ಹಣತೆತ್ತು ಹೊರಟಂತೆ, ಫ್ಯಾಕ್ಟರಿ ಕಡೆ ಹೊರಟೆ.

* * *

ನಮ್ಮ ಕಂಪೆನಿಯ ಕಲಾಸಂಘದಿಂದ ಆಗಾಗ್ಯೆ ಒಳ್ಳೆಯ ನಾಟಕಗಳನ್ನ ಆಡಿ, ಜನರ ಮೆಚ್ಚುಗೆಗೆ ಪಾತ್ರರಾಗಿದ್ದೇವೆ. ನಮ್ಮ ಕಲಾ ತಂಡಕ್ಕೆ ಬೆಂಗಳೂರಿನಲ್ಲಿ ಮಾತ್ರವಲ್ಲ ಇಡೀ ಕರ್ನಾಟಕದಲ್ಲಿ ಒಳ್ಳೆಯ ಹೆಸರು. ನಮ್ಮ ತಂಡದ ಕಲಾವಿದರೂ ಅಷ್ಟೇ



ಶಿಸ್ತಿನ ಸಿಪಾಯಿಗಳು, ರಿಹರ್ಸಲ್ ಗೆ ತಪ್ಪದೆ ಬರುತ್ತಿದ್ದರು ತಮ್ಮ ಪಾತ್ರ ಸರಿಯಾಗಿ ಬರುವವರೆಗೆ ಮೇಲಿಂದ ಮೇಲೆ ಅಭ್ಯಾಸ ನಡೆಸಿ ನಂತರ ಮನೆಗೆ ಹೋಗುತ್ತಿದ್ದರು. ಒಮ್ಮೊಮ್ಮೆ ರಾತ್ರಿ ಹನ್ನೆರಡಾಗುತ್ತಿತ್ತು ಪ್ರತಿಯೊಬ್ಬರೂ ನುರಿತ ಕಲಾವಿದರು. ನಮ್ಮ ತಂಡಕ್ಕೆ ಸೇರುವ ಮೊದಲು ಬಿ.ವಿ. ಕಾರಂತ, ಟಿ.ಎಸ್. ನಾಗಾಭರಣ, ಚಂದ್ರಶೇಖರ್, ಪ್ರಸನ್ನ, ಶ್ರೀರಂಗ ಪರ್ವತವಾಣಿ, ಮೊದಲಾದ ನಾಟಕರಂಗದ ಧೀಮಂತ ಧುರೀಣರ ತಂಡಗಳಲ್ಲಿ ಪಾತ್ರವಹಿಸಿದವರು. ಹೀಗಾಗಿ ನಾವು ಪ್ರದರ್ಶಿಸುವ ನಾಟಕಗಳು ತುಂಬ ಜನಪ್ರಿಯವಾಗಿದ್ದವು. ಜೋಗ್‌ಫಾಲ್ಸ್ ಮಿತ್ರಮಂಡಳಿ ಭದ್ರಾವತಿ ಕರ್ನಾಟಕ ನಾಟಕ ಮಂಡಳಿ, ತುಮಕೂರು ಕನ್ನಡ ಮಿತ್ರಸಂಘ ಹುಬ್ಬಳ್ಳಿ ಕನ್ನಡ ಬಳಗ, ಹೀಗೆ ಹಲವು ಹತ್ತಾರು ಕಡೆ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಲು ಪ್ರಥಮ ಪಾರಿತೋಷಕಗಳನ್ನು ಗಳಿಸಿದ್ದೆವು. ಉತ್ತಮ ನಿರ್ದೇಶನ, ಉತ್ತಮ ನಟ, ಉತ್ತಮ ರಂಗಸಜ್ಜಿಕೆ, ಉತ್ತಮ ಬೆಳಕು ವಿನ್ಯಾಸ ಹೀಗೆ ಪ್ರಶಸ್ತಿಗಳ ಸರಮಾಲೆ ನಮ್ಮದಾಗಿತ್ತು. ನಾನೇ ತಂಡದ ನಾಯಕ ಮತ್ತು ನಿರ್ದೇಶಕ, ಗುಂಡಣ್ಣ ಯಾವುದೇ ನಾಟಕದ ಮುಖ್ಯ ಪಾತ್ರಧಾರಿ ಅಥವಾ ಹೀರೋ.

ನಮ್ಮ ತಂಡ ಜೋಗ್ ಫಾಲ್ಸ್ ಗೆ ಹೋಗಿತ್ತು. ದಾರಿಯಲ್ಲಿ ಶಿರಸಿ ಸಿಕ್ಕಿದಾಗಸೋದೆ ವಾದಿರಾಜರ ಮಠಕ್ಕೆ ಹೋಗಿ ಸ್ವಾಮಿಗಳ ದರ್ಶನ ಮಾಡಿಕೊಂಡು ಜೋಗ್ ಫಾಲ್ಸ್‌ಗೆ ಹೋದೆವು. ನಮ್ಮ ನಾಟಕ ಮಾರನೆಯ ದಿನ ಇತ್ತು. ನಾವು ಒಂದುದಿನ ಮುಂಚಿತವಾಗಿ ಹೊರಟಿದ್ದೆವು. ಸ್ಥಳ ಪರಿಚಯ, ರಂಗ ವೇದಿಕೆಯಲ್ಲಿ ದೊರಕುವ ಅನುಕೂಲಗಳು ನಾವು ಮಾಡಿಕೊಳ್ಳಬೇಕಾದ ಏರ್ಪಾಡುಗಳು, ಪ್ರೇಕ್ಷಕರ ರುಚಿ, ಉಳಿದ ತಂಡದವರು ಯಾವ ಮಟ್ಟದಲ್ಲಿದ್ದಾರೆ. ತೀರ್ಪುಗಾರರು ಹೇಗೆ – ಇಲ್ಲೇನಾದರೂ ರಾಜಕೀಯ ಇದೆಯೇ? ಹೀಗೆ ಹತ್ತು ಹಲವಾರು ವಿಷಯ ಸಂಗ್ರಹಣೆಗಾಗಿ ನಾವು ಯಾವಾಗಲೂ ಒಂದೆರಡು ದಿನ ಮುಂಚಿತವಾಗಿ ನಾವು ನಾಟಕವಾಡುವ ಸ್ಥಳಕ್ಕೆ ಹೋಗುತ್ತಿದ್ದೆವು. ನಾಟಕದ ಹಿಂದಿನ ರಾತ್ರಿ ಮತ್ತು ನಾಟಕದ ದಿನ ಸಂಸ್ಥೆಯವರು ಉಚಿತ ಊಟ ವಸತಿ ವ್ಯವಸ್ಥೆ ಮಾಡುತ್ತಿದ್ದರು. ನಾವು ಮುಂಚಿತವಾಗಿ ಹೋಗಿದ್ದ ಕಾರಣ ಮತ್ತು ನಮ್ಮ ನಾಟಕದ ಅಭ್ಯಾಸ ಇತರರಿಗೆ ತಿಳಿಯಬಾರದೆಂದು ಒಂದು ಮನೆ ನಾಲ್ಕು ದಿನ ಬಾಡಿಗೆಗೆ ಹಿಡಿದೆವು. ಒಬ್ಬ ಬ್ರಹ್ಮಚಾರಿ ಇಂಜಿನಿಯರ್ ನಮಗೆ ಅವರ ಮನೆಬಿಟ್ಟುಕೊಟ್ಟು ಅವರು ನಾಲ್ಕು ದಿನ ಬೆಂಗಳೂರಿಗೆ ಹೋದರು. ಮಧ್ಯಾಹ್ನ ಎರಡು ಗಂಟೆಯಾಯಿತು. ಎಲ್ಲರಿಗೂ ಹಸಿವು ಊಟದ ಹೋಟೆಲ್ ಹುಡುಕಿಕೊಂಡು ಹೊರಟೆವು ಆ ಊರಿಗೆಲ್ಲ ಇದ್ದದ್ದು ಒಂದೇ ಹೋಟೆಲ್, ಸಣ್ಣ ಹೋಟೆಲ್ ಮಂಗಳೂರು ಬ್ರಾಹ್ಮಣರ ಖಾನಾವಳಿ ಹೊರಗೆ ದೊಡ್ಡದಾಗಿ ಪೂರ್ತಿ ಊಟ' 'ಭೋಜನ ರೆಡಿಯಾಗಿದೆ' ಬೋರ್ಡುಗಳು ಕಾಣಿಸಿದವು. ನಾನು ತಂಡದ ಮ್ಯಾನೇಜರ್ ಆದ ಕಾರಣ ಕೌಂಟರಿಗೆ ಹೋಗಿ ಎಲ್ಲರಿಗೂ ಊಟದ ಟಿಕೆಟ್ ತೆಗೆದುಕೊಂಡೆ. ನಾವು ಕ್ರಿಕೆಟ್ ಟೀಮಿನಂತೆ ಹನ್ನೊಂದು ಜನ ಇದ್ದೆವು. ಹೋಟೆಲ್ ಯಜಮಾನ ನಮ್ಮನ್ನು ಅಡಿಗೆ ಮನೆ ಪಕ್ಕದಲ್ಲಿದ್ದ ತರಕಾರಿ ಹಚ್ಚುವ ಕೊಠಡಿಯಲ್ಲಿ ಸ್ಥಳಮಾಡಿ, ಚಾಪೆಹಾಸಿ; ಬಾಳೆ ಎಲೆ ಹಾಕಿ ಕೂರಿಸಿದ. ಚೆನ್ನಾಗಿ ಹಸಿದಿದ್ದ ನಾವು ರುಚಿಯಾಗಿದ್ದ ಊಟದ ಮೇಲೆ ಧಾಳಿ ಆರಂಭಿಸಿದೆವು.



ಸಪ್ಲೈಯರ್ ಪಂಕ್ತಿಯ ಮೊದಲಲ್ಲಿದ್ದ ಗುಂಡಣ್ಣನಿಗೆ ಬಡಿಸಿ ಸಾಲಾಗಿ ಕುಳಿತಿದ್ದ ನಮಗೆಲ್ಲಾ ಬಡಿಸಿ ಮುಗಿಸುವುದರೊಳಗೆ ಗುಂಡಣ್ಣನ ಎಲೆ ಖಾಲಿಯಿರುತ್ತಿತ್ತು

ಮತ್ತೆ ಅನ್ನ–ಹುಳಿ ಕೇಳುತ್ತಿದ್ದ. ಜೊತೆಗೆ ಮೇಲೋಗರ ಉಪ್ಪಿನಕಾಯಿ, ಚಟ್ನಿ ಹಪ್ಪಳ, ಪಲ್ಯ, ಕೂಟು ಕೇಳುತ್ತಿದ್ದ. ನಮ್ಮ ಊಟಮುಗಿವ ಹಂತಕ್ಕೆ ಬಂದು ಮಜ್ಜಿಗೆ ಬಡಿಸಿದ ಸಪ್ಲೈಯರ್ ಆದರೆ ಗುಂಡಣ್ಣ ಇನ್ನೂ ಅನ್ನ– ಹುಳಿ ಹಾಕಿಸಿಕೊಳ್ಳುತ್ತಿದ್ದ. ನಾವು ಊಟ ಮುಗಿಸಿ ಕೈ ತೊಳೆದು ಫ್ಯಾನ್ ಕೆಳಗೆ ಕುಳಿತು ಸುಧಾರಿಸಿಕೊಳ್ಳುತ್ತಿದ್ದೆವು. ಗುಂಡಣ್ಣನ ಊಟ ಮುಗೀಲಿಲ್ಲ. 'ಅನ್ನ–ಹುಳಿ' ಸಪ್ಲೆ ಆಗುತ್ತಲೇ ಇತ್ತು. ಕೊನೆಗೊಮ್ಮೆ ಸಪ್ಲೆಯರ್ ಗಲ್ಲಮೇಲೆ ಕುಳಿತಿದ್ದ ಯಜಮಾನನ ಬಳಿಗೆ ಹೋಗಿ ಕಿವಿಯಲ್ಲಿ ಏನೋ ಪಿಸುಗುಟ್ಟಿದ. ಯಜಮಾನ ಓಡಿಬಂದ. ಗುಂಡಣ್ಣನ ಪಕ್ಕ ಕುಳಿತು ಬೀಸಣಿಗೆಯಿಂದ ಗಾಳಿ ಹಾಕತೊಡಗಿದ "ಸಾವಕಾಶವಾಗಿ ಊಟಮಾಡಲಿ" ಎಂದ ಹೋಟೆಲ್ ಮಾಲೀಕ "ಫುಲ್‌ಮೀಲ್ಸ್" ಅಂತ ಊಟದ ಚೀಟಿ ತೋರಿಸಿದ ಗುಂಡಣ್ಣ.

"ಲೋ ಮಾಣಿ ಅಡಿಗೆ ಭಟ್ಟರಿಗೆ ಹೇಳಿ ಇನ್ನೊಂದು ಸೇರು ಅಕ್ಕಿ ಬೇಯಿಸಲು ಹೇಳು, ಹೊರಗಡೆ 'ಊಟ ಮುಗಿದಿದೆ' ಬೋರ್ಡು ಹಾಕು" ಎಂದು ಆಜ್ಞಾಪಿಸಿದ ಮಾಲೀಕ.

ಮತ್ತೆ ಬಿಸಿಬಿಸಿ ಊಟ ಗುಂಡಣ್ಣನಿಗೆ ಬಡಿಸಲಾಯಿತು. ಕೊನೆಗೂ ಗುಂಡಣ್ಣ ಊಟ ಮುಗಿಸಿದ. ಅವನು ಕೈತೊಳೆದು ಬರುತ್ತಿದ್ದಂತೆ ಹೋಟೆಲ್ ಮಾಲೀಕ ಮತ್ತು ಮಾಣಿ, ಅಡಿಗೆ ಭಟ್ಟರು ಗುಂಡಣ್ಣನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಮತ್ತೆ ಎದ್ದು ಕೈಕಟ್ಟಿಕೊಂಡು ನಾವು ಯಾರು? ಎಲ್ಲಿಂದ ಬಂದಿದ್ದೇವೆ? ಯಾತಕ್ಕಾಗಿ ಬಂದಿದ್ದೇವೆ? ಎಲ್ಲ ತಿಳಿದುಕೊಂಡರು ತಾವು ನಮ್ಮ ನಾಟಕ ನೋಡಲು ಬರುವುದಾಗಿ ತಿಳಿಸಿದರು. ನಾನು ಮಾಲೀಕರ ಬಳಿ ಹೋಗಿ" ಎಷ್ಟು ಎಸ್ರಾ ಬಿಲ್ ಆಯಿತು? ಹೇಳಿ ಕೊಡ್ತೀನಿ" ಅಂದೆ.

"ಎಲ್ಲಾದರೂ ಉಂಟೆ ನಾನು ನಲವತ್ತು ವರ್ಷದಿಂದ ಖಾನಾವಳಿ ನಡೆಸ್ತಿದ್ದೀನಿ ಈ ರಾಯರ ಹಾಗೆನೋಡಲಿಲ್ಲ. ನಮಗೆ ತುಂಬ ಸಂತೋಷವಾಗಿದೆ. ದೇವರು ಇವರನ್ನ ಸುಭಿಕ್ಷವಾಗಿಟ್ಟಿರಲಿ" ಎಂದು ಕೈ ಎತ್ತಿ ಹಾರೈಸಿದರು.

ಮಾರನೆ ದಿನ ಹೋಟೆಲಿನ ಮುಂದೆ 'ಪೂರ್ತಿ ಊಟ' ಬೋರ್ಡ್‌ನ್ನು ತೆಗೆಯಲಾಗಿತ್ತು. 'ಪ್ಲೇಟ್‌ಮೀಲ್ಸ್' ಬೋರ್ಡ್ ಹಾಕಲಾಗಿತ್ತು ದೂರದಿಂದ ನಮ್ಮನ್ನು ನೋಡಿದ ಮಾಲೀಕ ಹೋಟೆಲ್ ಬಾಗಿಲು ಮುಚ್ಚಿಸಿ 'ಈ ದಿನ ರಜೆ' ಬೋರ್ಡ್ ಹಾಕಿಸಿದ.

ಪಾತ್ರೆ–ಅಕ್ಕಿ, ಬೇಳೆ, ಸಾಮಾನುಗಳನ್ನು ಕೊಂಡುಕೊಂಡು ನಾವೇ ಅಡಿಗೆ ಮಾಡಿಕೊಳ್ಳತೊಡಗಿದೆವು. ಗುಂಡಣ್ಣನೇ ಅಡಿಗೆ ಭಟ್ಟ.

ನಾಟಕದ ದಿನ ವೇದಿಕೆಯ ಮುಂದಿನ ಸಾಲಿನಲ್ಲಿ ಹೋಟೆಲ್ ಮಾಲೀಕ ಅವನ ಪರಿವಾರ ಕುಳಿತಿತ್ತು. ಗುಂಡಣ್ಣ ವೇದಿಯ ಮೇಲೆ ಬಂದಾಗ, ಹೋಟೆಲ್ ಮಾಲೀಕ ದೊಡ್ಡ ಹೂವಿನ ಹಾರ ತಂದು ಹಾಕಿದ.

* * *

ನಾವು ಕಾಲೇಜಿನಲ್ಲಿ ಓದುತ್ತಿದ್ದ ಕಾಲ. ಜಿ.ಪಿ. ರಾಜರತ್ನಂ ನಮ್ಮ ಗುರುಗಳು ನಾವು ಅವರ ಖಾಸಾ ಶಿಷ್ಯರಾಗಿದ್ದೆವು. ಒಂದು ದಿನ ಸಂಜೆ ಏಳು ಘಂಟೆಗೆ ಮಲ್ಲೇಶ್ವರದ ಗಾಂಧಿಭವನದಲ್ಲಿ ಅವರ ಉಪನ್ಯಾಸ ಕಾರ್ಯಕ್ರಮವಿತ್ತು 'ಭರತ–ಬಾಹುಬಲಿ' ವಿಷಯ ನಮಗೆ ಭರತೇಶ ವೈಭವ ಪಾಠವಿತ್ತು ಇವರ ಉಪನ್ಯಾಸ



ಕೇಳಿದರೆ ಪಾಠ ಚೆನ್ನಾಗಿ ಅರ್ಥವಾಗಬಹುದು ಎಂದು ತೀರ್ಮಾನಿಸಿದೆವು. ಆ ಸಂಜೆ ಅವರು ಸೆಂಟ್ರಲ್ ಕಾಲೇಜಿನಿಂದ ಹೊರಟಾಗ ನಾವು ಅವರನ್ನು ಹಿಂಬಾಲಿಸಿದೆವು. ಅವರಿಗೆ ತಿಳಿಯದಂತೆ ಸ್ವಲ್ಪ ದೂರದಲ್ಲಿದ್ದೆವು.

ಕಾಲೇಜಿನಿಂದ ನಡೆದುಕೊಂಡು ಹೊರಟವರು ವಸಂತ್ ವಿಹಾರ್‌ನಲ್ಲಿ ಒಂದು ಮಸಾಲೆ ತಿಂದರು. ನಾವು ಬರೇ ಟೇಬಲಿನಲ್ಲಿ ಕುಳಿತು ಕಾಫಿ ಕುಡಿದೆವು. ಅಲ್ಲಿಂದ ಹೊರಟವರು ಬಳೇಪೇಟೆಗೆ ಬಂದರು. ಸೆಕೆಂಟ್ ಹ್ಯಾಂಡ್ ಬುಕ್ ಸ್ಟಾಲ್‌ಗಳಲ್ಲಿ ಪುಸ್ತಕಗಳನ್ನು ನೋಡಿದರು. ಒಂದೆರಡು ಪುಸ್ತಕಕೊಂಡರು. ಅಲ್ಲಿಂದ ಮಲಬಾರ್ ಲಾಡ್ಜ್ ಹೋಟೆಲಿಗೆ ಹೋಗಿ ಮಸಾಲೆ ದೋಸೆ ತಿಂದರು. ನಾವೂ ಮಸಾಲೆ ದೋಸೆ ತಿಂದೆವು. ದೋಸೆತಿಂದಾದ ಮೇಲೆ ಸಿಟಿಸರ್ಕುಲೇಟಿಂಗ್ ಲೈಬ್ರರಿಗೆ ಹೋಗಿ, ಅಲ್ಲಿಂದ ಗೀತ ಏಜೆನ್ಸಿಸ್ ಹೋಗಿ ಬಂದರು. ಬರುವಾಗ ಉಡುಪಿ ಕೃಷ್ಣಭವನ್‌ನಲ್ಲಿ ಮಸಾಲೆ ದೋಸೆ ತಿಂದರು ನೇರವಾಗಿ ಮಲ್ಲೇಶ್ವಕ್ಕೆ ಬಂದರು. ಅವರ ಮನೆಗೆ ಹೋಗಿ ಸ್ವಲ್ಪ ಹೊತ್ತಾದ ನಂತರ ಬರುವಾಗ ಮಿಲ್‌ಕಾರ್ನರ್ 'ಕೃಷ್ಣಭವನ್'ನಲ್ಲಿ ಮಸಾಲೆ ದೋಸೆ ತಿಂದು, ಗಾಂಧಿಭವನಕ್ಕೆ ಬಂದರು. ಉಪನ್ಯಾಸ ಅಮೋಘವಾಗಿತ್ತು.

ಮಾರನೇದಿನ ಕಾಲೇಜಿನಲ್ಲಿ ನಮ್ಮನ್ನು ಕರೆದರು.

"ಅಲ್ರಯ್ಯ ನಿನ್ನೆ ನನ್ನ ಹಿಂದ್ಯಾಕೆ ಬಿದ್ರಿ" ಎಂದು ಕೇಳಿದರು. ನಾವು ತಪ್ಪೊಪ್ಪಿಕೊಂಡು ಕ್ಷಮೆ ಕೇಳಿದೆವು.

"ಅಯ್ಯೋ ಮುಂಡೇವ ನಾನು ಈ ವಯಸ್ಸಿನಲ್ಲಿ ತಿಂತೀನಿ ತಿಂದು ಜೀರ್ಣಮಾಡ್ಕೊತೀನಿ. ನನಗೆ ಜೀರ್ಣಶಕ್ತಿ ಮಾತ್ರವಲ್ಲ ಬುದ್ಧಿಶಕ್ತಿನೂ ಇದೆ. ನಿಮಗೆ ಎರಡೂ ಇಲ್ವಲ್ಲ. ನಿನ್ನೆ ನೋಡಿದ್ನಲ್ಲ. ಮಲಬಾರ್ ಲಾಡ್ಜ್‌ನಲ್ಲಿ ಒಂದೊಂದು ದೋಸೆ ತಿಂದ್ರಿ ಅಷ್ಟೇ ಅಲ್ಲಿಗೆ ಮುಗೀತಲ್ಲ. ಉಪನ್ಯಾಸ ಕೇಳಿದ್ರಲ್ಲ. ವಿಷಯ ಏನಾದ್ರೂ ತಲೇಗೆ ಹೋಯ್ತೋ?" ಎಂದು ಗದರಿಸಿದರು ನಾವು ಪಲಾಯನ ಮಾಡಿದೆವು.

* * *

ನಾನು ಗುಂಡಣ್ಣನ ಒಂದು ದಿನ ಕೇಳಿದೆ. ಅವನು ಒಳ್ಳೆಯ ಮೂಡಿನಲ್ಲಿದ್ದ.

"ಒಂದೊಂದ್ಸಲ ಅಷ್ಟೊಂದು ತಿಂತೀಯಲ್ಲ ಅದು ಹ್ಯಾಗೆ ಜೀರ್ಣ ಮಾಡಿಕೊಳ್ತೀಯ?" ಎಂದೆ ಆಶ್ಚರ್ಯ ಸೂಚಿಸುತ್ತಾ.

ಅವನು ನನ್ನನ್ನ ಅವನ ಮನೆಗೆ ಕರೆದೊಯ್ದ. ಅವನ ಮನೆ ಮುಂದೆ ಜನ ನಿಂತಿದ್ದರು. ದೊಡ್ಡದಾದ ಬೋರ್ಡು ಕಾಣಿಸ್ತು 'ಆಯುರ್ವೇದ ಸದ್ವೈದ ಶಾಲಾ'

ವಿಷಯ ತಿಳಿದದ್ದೇನಪ್ಪಾ ಅಂದ್ರೆ, ಗುಂಡಣ್ಣನ ತಂದೆ ಶಾಮಾಶಾಸ್ತ್ರಿಗಳು ಘನ ಆಯುರ್ವೇದ ಪಂಡಿತರು. ಜೊತೆಗೆ ವೈದೀಕ ಬ್ರಾಹ್ಮಣರು. ಮದುವೆ, ಮುಂಜಿ, ವೈದೀಕ ನಡೆಸುತ್ತಿದ್ದರು. ಅವರ ಕೊಠಡಿಯಲ್ಲಿ ತಾಳೆಗರಿ ಗ್ರಂಥಗಳ ರಾಶಿಯಿತ್ತು. ಅವರು ತಾಮ್ರವನ್ನು ಚಿನ್ನ ಮಾಡುವ ಪ್ರಯೋಗಗಳನ್ನು ನಡೆಸುತ್ತಿದ್ದರು. ಇನ್ನೂ ರಸ ವಿದ್ಯೆ ಸಿದ್ಧಿಸಿರಲಿಲ್ಲ.



ಅವರ ಕೈಗುಣ ಚೆನ್ನಾಗಿದ್ದು ತಮ್ಮೆಲ್ಲ ಖಾಯಿಲೆಗಳಿಗೂ ಇವರ ಬಳಿಗೆ ಜನ ಬರುತ್ತಿದ್ದರು. ಶಾಮಾ ಶಾಸ್ತ್ರಿಗಳು ಒಂದು ಲೇಹ್ಯ ತಯಾರಿಸಿ, ಅದನ್ನು ಕಾಯಿಸಿ–

ಆರಿಸಿ, ಸಣ್ಣ ಸಣ್ಣ ಉಂಡೆಗಳಂತೆ ಮಾಡಿಟ್ಟಿದ್ದರು. "ಸರ್ವಜೀರ್ಣಕಾರಿ ಲೇಹ್ಯ" ಎಂದು ಹೆಸರಿಟ್ಟಿದ್ದರು. ಒಂದು ಉಂಡೆ ತಿಂದರೆ ಸಾಕು. ಹೊಟ್ಟೆ ಬಕಾಸುರನ ಹೊಟ್ಟೆ ಆಗುತ್ತಿತ್ತು.

ಗುಂಡಣ್ಣನ ಮಾತುಗಳನ್ನು ನಂಬದೆ ನಾನು ಒಂದು ಉಂಡೆ ತಿಂದೆ ರುಚಿಯಾಗಿತ್ತು. ಖಾರ–ಸಿಹಿ–ಉಪ್ಪು–ಹುಳಿ ಬೆರೆತರುಚಿ, ಸ್ವಲ್ಪ ಹೊತ್ತಿಗೆಲ್ಲಾ ಹೊಟ್ಟೆಯಲ್ಲಿ ಉರಿ–ಹಸಿವು ಹೊಟ್ಟೆಯಲ್ಲಿ ಬೆಂಕಿಬಿದ್ದ ಹಾಗೆ ಅನುಭವ ನಾನು ಓಡಿಹೋಗಿ ಕೆರೆಯ ನೀರಿಗೆ ಬಿದ್ದೆ. ಒಂದು ಘಂಟೆ ತಣ್ಣೀರಿನಲ್ಲಿದ್ದರೂ, ಹೊಟ್ಟೆಯುರಿ ನಿಲ್ಲಲಿಲ್ಲ. ಎಳನೀರು–ಬಿಂದಿಗೆ ನೀರು ಕುಡಿದರೂ ಉಹುಂ.

ಗುಂಡಣ್ಣ ಇನ್ನೊಂದು ಲೇಹ್ಯ ತಿನ್ನಿಸಿದ. ಅರ್ಧಘಂಟೆಯಲ್ಲಿ ಹೊಟ್ಟೆ ತಣ್ಣಗಾಯಿತು. ಸಾಕಪ್ಪಾ ಇವನ ಸಹವಾಸ ಅಂತ ಮನೆಗೆ ಓಡಿದೆ.

ಅನಂತರ ತಿಳಿದು ಬಂದದ್ದೇನೆಂದರೆ, ಕೆಸವಿನದಂಟು, ಬಾಳೆದಿಂಡು, ಹಸಿಶುಂಠಿ, ಮೆಣಸು, ಲವಂಗ, ಜೇನುತುಪ್ಪ, ಯಾಲಕ್ಕಿ, ಕಲ್ಲುಸಕ್ಕರೆ, ತಾಟಿಬೆಲ್ಲ, ಪಚ್ಚಕರ್ಪೂರ ಇವೆಲ್ಲ ಹಾಕಿ ಬೇಯಿಸಿ, ಕುದಿಸಿ, ಏನೇನೋ ಮಾಡಿ ಲೇಹ್ಯ ತಯಾರು ಮಾಡ್ತಾರಂತೆ, ಅದನ್ನ ತಕ್ಕ ಪ್ರಮಾಣದಲ್ಲಿ ತಿಂದರೆ ಬಕಾಸುರನ ಹೊಟ್ಟೆ ಹಸಿವು ಉಂಟಾಗುತ್ತದಂತೆ.

ದಯವಿಟ್ಟು ನೀವು ಯಾರೂ ಈ ಲೇಹ್ಯ ಮಾಡುವ ಪ್ರಯತ್ನ ಮಾಡಬೇಡಿ. ನೀವು ಪ್ರಯತ್ನ ಮಾಡಿ, ತಿಂದು ಏನಾದರೂ ಹೆಚ್ಚು ಕಮ್ಮಿ ಆದರೆ ನಾನು ಜವಾಬ್ದಾರನಲ್ಲ. ತಿನ್ನುವುದು–ತಿಂದು ಜೀರ್ಣಿಸಿಕೊಳ್ಳುವುದು ಒಂದು ಕಲೆ. ವಸಂತ ಬಂದಾಗ ಚಿಗುರಿನ ನಡುವೆ ಕೋಗಿಲೆ ಹಾಡುವ ಹಾಗೆ ಜಲಪಾತದಿಂದ ಮೀನು ಚಿಮ್ಮುವ ಹಾಗೆ, ಹೂವರಳಿದಾಗ ದುಂಬಿ ಹಾಡಿದ ಹಾಗೆ, ರೂಪಸಿಯ ಕಂಡು ಕವಿ ಹೃದಯ ಅರಳುವ ಹಾಗೆ ಹರಿವ ನದಿಯ ನಿನಾದಕ್ಕೆ ಮಯೂರ ನರ್ತಿಸುವ ಹಾಗೆ.

ನಮಗೆ–ನಿಮಗೆ ದೇವರು ಕೊಟ್ಟ ಹೊಟ್ಟೆನೇ ಸಾಕು ಏನಂತೀರಿ?

**ಅಕ್ಕಿ**

ಹೆಸರುಬೇಳೆ ಜೊತೆ ಸೇರಿದರೆ **ಪೊಂಗಲ್**

ಉದ್ದಿನಬೇಳೆ ಜೊತೆ ಸೇರಿದರೆ **ದೋಸೆ, ಇಡ್ಲಿ**

ತೊಗರಿಬೇಳೆ ಜೊತೆ ಸೇರಿದರೆ **ಬಿಸಿಬೇಳೆ ಬಾತ್**

ಕಡ್ಲೆಬೇಳೆ ಜೊತೆ ಸೇರಿದರೆ **ಪಾಯಸ**

ಅರಿಶಿನ, ಕುಂಕುಮ ಜೊತೆ ಸೇರಿದರೆ **ಅಕ್ಷತೆ**

ಎಳ್ಳಿನ ಜೊತೆ ಸೇರಿದರೆ **ಪಿಂಡ**

ನೀತಿಪಾಠ : ಮೊದಲು ಏನಾಗಬೇಕು ಅಂತ ಡಿಸೈಡ್ ಮಾಡಿಕೊಂಡು ಆಮೇಲೆ ಯಾರ ಜೊತೆ ಸೇರಬೇಕು ಅಂತ ನಿರ್ಧರಿಸಬೇಕು.



# ಅಜ್ಜಿಯ ಅವಾಂತರ

**ಪ್ರಭಾಮಣಿ ನಾಗರಾಜು, ಹಾಸನ**

**'ಭಾ**ರತ ಹಳ್ಳಿಗಳ ದೇಶ, ಹಳ್ಳಿಗಳು ಭಾರತದ ಬೆನ್ನೆಲಬು' ಎನ್ನುವುದನ್ನು ನಾನು ಚಿಕ್ಕವಳಿದ್ದಾಗಲೇ ಓದಿದ್ದೆ. ಅಂಥಾ ಒಂದು ಹಳ್ಳಿಯಲ್ಲೇ ನಾನು ಭಾರತದ ಜನಸಂಖ್ಯೆಗೆ +1 ಆಗಿದ್ದು! ನಮ್ಮದು ಅಂತಿಂಥಾ ಹಳ್ಳಿಯಲ್ಲ. ಆ ಕಾಲಕ್ಕೆ ಭಾರತದ ಮಾದರಿ ಹಳ್ಳಿ! ಸುತ್ತಮುತ್ತ ಯಾವುದೇ ಪ್ರಾಥಮಿಕ ಶಾಲೆಯೂ ಇರಲಿಲ್ಲ. ನಮಗೆಲ್ಲಾ ಮನೆಯೇ ಮೊದಲ ಪಾಠಶಾಲೆ. ನಮ್ಮ ಅವಿಭಕ್ತ ಕುಟುಂಬದ ಹಿರಿ ದಿಕ್ಕಾದ ಅಜ್ಜಿಯೇ ಮೊದಲ ಗುರು! ಅಕ್ಷರ ಕಲಿಸಲಲ್ಲ. ಮಡಿ ಮೈಲಿಗೆ, ವ್ರತ ನೇಮ... ಇನ್ನು ಬಸ್ಸು ಬರಲು ರಸ್ತೆಯೇ ಇರಲಿಲ್ಲ. ಇದ್ದದ್ದು ಕಾಲು ದಾರಿ, ಬಂಡಿಜಾಡು, ಇಂಥಾ ಅಗತ್ಯ ನಿರ್ಮಿತ ಸ್ವಾಭಾವಿಕ ದಾರಿಗಳು. ಸೈಕಲ್ ಬೆಲ್ ಕೇಳಿದರೆ ಬೆಚ್ಚಿಬೀಳುವ ಹಸುಗಳು! ಇನ್ನು ದೂರವಾಣಿಯ ಮಾತಂತೂ ದೂರವೇ ಉಳಿಯಿತು. ಅಂಚೆಯ ಅರಿವೇ ಇಲ್ಲ. ಬುಡ್ಡಿಯ ದೀಪದ್ದೇ ವಿದ್ಯುತ್ಪ್ರಭೆ!

ಆಗಿನ ಸಂಪರ್ಕ ಮಾಧ್ಯಮವೆಂದರೆ ವರ್ಷಕ್ಕೆ ಎರಡೋ ಮೂರೋ (ಕಾಲನ ಕರೆಯ ಅನುಸಾರ) ಸಾರಿ ಬರುತ್ತಿದ್ದ ಟೆಲಿಗ್ರಾಮ್‌ಗಳದ್ದೇ! ಅದೂ ಕಂಡು ಕೇಳರಿಯದ ದೂರದ ಯಾರೋ ಸಂಬಂಧಿಗಳು ಎಲ್ಲೋ ಪರಲೋಕ ಸೇರಿದ ವಾರ್ತೆಯನ್ನು ಹೊತ್ತು ತರುತ್ತಿದ್ದವು. ಅಜ್ಜಿಗೆ ನಮ್ಮ ವಂಶವೃಕ್ಷವೆಲ್ಲಾ ಬಾಯಲ್ಲೇ ಇದ್ದುದರಿಂದ ಯಾವುದೇ ಬಾದರಾಯಣ ಸಂಬಂಧವಾದರೂ ಯಾವುದೋ ಕಡೆಯಿಂದ ದಾಯಾದಿಗಳಾಗುತ್ತಾರೆಂದು ಹೇಳಿ ಹನ್ನೊಂದು ದಿನ ಸೂತಕ ಆಚರಿಸುವಂತೆ ಮಾಡುತ್ತಿದ್ದರೇನೋ! ಆದರೆ ದಯಾಳು ತಂತಿಗಳು ನಮ್ಮನ್ನು ತಲುಪುವ ವೇಳೆಗೆ ನಿಧನರಾದವರ ಮಾಸಿಕವೋ, ವರ್ಷಾಬ್ದಿಕವೋ ಆಗುವ ಕಾಲ ಸಮೀಪಿಸುತ್ತಿ-ದ್ದುದರಿಂದ ಶಿರಸ್ನಾನಕ್ಕೆ ಸಮಾಪ್ತಿಯಾಗುತ್ತಿತ್ತು. ಆದರೂ 'ಟೆಲಿಗ್ರಾಂ ಬಂದಿದೆ' ಎಂದು ತಿಳಿದ ತಕ್ಷಣವೇ ಅದನ್ನು ಒಡೆಯಲೇಬಾರದೆಂದು ನಮ್ಮ ತಂದೆಗೆ ಕಟ್ಟಪ್ಪಣೆ ಮಾಡಿ ತಾವು ದೇವರ ಗೂಡಿನ ಬಳಿ ಹೋಗಿ (ಆಗಿನ್ನೂ ದೇವರಿಗೆ 4'/3' ಮನೆ ಕಟ್ಟುವಷ್ಟು ವಿಶಾಲ ಮನೋಭಾವ ಬಂದಿರಲಿಲ್ಲ) ದೀಪ ಹಚ್ಚಿಟ್ಟು, 'ಕಾಶಿ ವಿಶ್ವನಾಥ, ತಿರುಪತಿ ತಿಮ್ಮಪ್ಪ, ಧರ್ಮಸ್ಥಳದ ಮಂಜುನಾಥ... (ಇತ್ಯಾದಿ ಎಲ್ಲ ದೇವರಿಗೂ) ಕೆಟ್ಟ ಸುದ್ದಿ ಕೇಳದಂತೆ ಮಾಡು,' ಎಂದು ಹರಕೆ ಕಟ್ಟಿ ಬಂದು ಕವರ್ ಒಡೆಯಲು ಹುಕುಂ ಕೊಡುತ್ತಿದ್ದರು! ಇದೆಲ್ಲಾ ನೋಡುವುದೆಂದರೆ ನಮಗೆ ಭಯಾಶ್ಚರ್ಯಕುತೂಹಲ ಮಿಶ್ರಿತ ಮಜಾ!

ಆಗಂತೂ ನಮ್ಮೂರಿನಲ್ಲಿ ಯಾವುದೇ ವಾಹನಗಳ ಅಬ್ಬರ, ಧೂಮ್ರಾಟ್ಟ ಹಾಸಗಳಿರಲಿಲ್ಲ. ಅಡುಗೆಮನೆ, ಬಚ್ಚಲುಮನೆಯ ಹೊಗೆನಿರ್ಗಮನಗಳನ್ನು (ಹೆಂಚಿನ ಸಂದಿ) ಬಿಟ್ಟರೆ ಹೊಗೆ ಕಾರುವ ಕಾರ್ಖಾನೆಗಳಿರಲಿಲ್ಲ. ಹೀಗಾಗಿ ನಮ್ಮ ಹಳ್ಳಿಯಲ್ಲಿ ವಾಯುಮಾಲಿನ್ಯದ ಸಮಸ್ಯೆಯೇ ಇರಲಿಲ್ಲ. ಕಾಲ ಕಳೆದಂತೆ ನಮ್ಮೂರಿನ ಸಮೀಪದಲ್ಲೇ ಒಂದು ಕಾರ್ಖಾನೆ ತಲೆ ಎತ್ತಿತು. ಜೊತೆಗೆ ವಿವಿಧ ರೀತಿರಿವಾಜಿನ ಜನರು 'ಶರಣಂ ಅಯ್ಯಪ್ಪಾ' ಎನ್ನುತ್ತಲೇ ಪುರಪ್ರವೇಶ ಮಾಡಿದರು! ಊರಿಗೊಂದು ಪಟ್ಟಣ ಸಂಪರ್ಕ ರಸ್ತೆಯಾಗಿ ನಾಗರಿಕ ಸಂಪರ್ಕಕ್ಕೆ ನಾಂದಿ ಹಾಡಿತು. ಅಂಚೆ, ವಿದ್ಯುತ್, ದೂರವಾಣಿ... ಒಂದರ ಹಿಂದೊಂದು ಹಳ್ಳಿಯೊಳಹೊಕ್ಕು ಹೊಸ ಕಳೆ ನೀಡಿದವು. ಕಾರ್ಖಾನೆ



ಕಾರುವ ರಾಶಿ–ರಾಶಿ ಹೊಗೆ ಊರ ಮೇಲೆ ಕಾರ್ಮೋಡವನ್ನೇ ನಿರ್ಮಿಸಿತು. ಏನೇ ಬದಲಾವಣೆಯಾದರೂ, ಅಜ್ಜಿ ಮಾತ್ರ ಅಚಲರಾದರು. ಈಗ ಸತ್ತದ್ದಕ್ಕೆ ಮಾತ್ರ ಟೆಲಿಗ್ರಾಂ ಬರುವುದಲ್ಲ. ಸಂತಸದ ಸುದ್ದಿಗೂ ಕೊಡ್ತಾರೆ. ಎಂದರೆ ಕಿವಿಗೇ ಹಾಕಿಕೊಳ್ಳಲಿಲ್ಲ.

ಅಕ್ಕನ ಮದುವೆಯನ್ನು ಪಟ್ಟಣದ ಛತ್ರವೊಂದರಲ್ಲಿ ಮಾಡಿದಾಗ ಅಜ್ಜಿ ಛತ್ರದ ಹೊರಬಾಗಿಲಲ್ಲೇ ನಿಂತು ಬರುವ ಹೋಗುವವರನ್ನು ವಿಚಾರಿಸಿಕೊಳ್ಳುತ್ತಿದ್ದರು. 'ನಿಮ್ಮದು ಸ್ವಾಗತ ಸಮಿತೀನಾ ಅಜ್ಜಿ', ಎಂದಾಗ, 'ಯಾರು, ಏನು, ಯಾವ ಸಂಬಂಧ ಎನ್ನುವುದು ನನಗಲ್ಲದೇ ಈಗಿನ ಹುಡುಗುಮುಂಡೇವು ನಿಮಗೆ ತಿಳಿಯುತ್ತಾ,' ಎಂದು ದಬಾಯಿಸಿಬಿಟ್ಟರು! ಆಗ ಛತ್ರಕ್ಕೆ ಬಂದ 5–6 ಟೆಲಿಗ್ರಾಂಗಳನ್ನ ಅಜ್ಜಿಯೇ ಸ್ವೀಕರಿಸಿದ್ದು.(ಸಹಿ ಬೇರೆಯವರದ್ದು!) ಅವರು ಕಾಯ್ತಾ ಇದ್ದದ್ದು ಏನನ್ನು ಎಂದು ಆಗ ತಿಳಿಯಿತು.



'ಇದು ಶುಭಾಶಯಕ್ಕೆ ಅಜ್ಜಿ', ಎಂದರೂ ಕೇಳದೇ, 'ಇಂಥಾ ಸಮಯದಲ್ಲಿ ಯಾವುದೇ ಕೆಟ್ಟ ಸುದ್ದಿಯೂ ಬರದಿರಲಿ ಪರಮಾತ್ಮ,' ಎನ್ನುತ್ತಾ ತಮ್ಮ ಹಿಂದಿನ ದೇವರುಗಳ ಲಿಸ್ಟ್ ಜೊತೆಗೆ (ವ್ರತವನ್ನು ಅತಿಕ್ರಮಿಸಿ) ಮಂತ್ರಾಲಯದ ರಾಘವೇಂದ್ರ, ಶಬರಿಗಿರಿಯ ಅಯ್ಯಪ್ಪ, ಎಲ್ಲರಿಗೂ ತಲಾ ನೂರರಂತೆ ಹರಕೆ ಹೊತ್ತರು. ನಂತರ ಟೆಲಿಗ್ರಾಂ ಓದಿಸಿ ದೇವರ ದಯೆ ಕೊಂಡಾಡಿದರು!

ಈ ಅಜ್ಜಿಯ ತುಡುಮುಡಿಕೆಯ ಜೀವ, (ತುಪ್ಪದ ಕುಡಿಕೇಲೂ ನಿಲ್ಲದು ಅಂತಾರೆ!) ಸದಾ ಎಲ್ಲೆಲ್ಲಿ ಏನೇನು ನಡೆಯುತ್ತೆ ಅಂತ ಗೂಢಚರ್ಯೆ ನಡೆಸುತ್ತಲೇ ಇರುತ್ತದೆ. ಹೀಗಾಗಿ ಅವರ ಕಣ್ಣು ತಪ್ಪಿಸಿ ಏನನ್ನೂ ಮಾಡಲು ಆಗುತ್ತಿರಲಿಲ್ಲ. ಮಡಿಮೈಲಿಗೆ ವಿಷಯದಲ್ಲಂತೂ ಬಹಳ ಕಟ್ಟುನಿಟ್ಟು. ಅಜ್ಜಿಯ ಈ ವಿಪರೀತ ಚಟುವಟಿಕೆಗಳನ್ನು ಮಕ್ಕಳು ಹೇಗೋ ತಡೆದುಕೊಂಡರು. ಆದರೆ ಮೊಮ್ಮಕ್ಕಳ ಕಾಲಕ್ಕೆ ಸರಿ ಬರಲಿಲ್ಲ. ಅಲ್ಲದೆ ಇದ್ದಬದ್ದ ಜಮೀನೆಲ್ಲಾ ಉಳುವವರ ಪಾಲಾದ ಮೇಲೆ (ಉಳುವವನೇ ಹೊಲದೊಡೆಯ) ಮಕ್ಕಳು ಹಳ್ಳಿ ಬಿಟ್ಟು ಪಟ್ಟಣಗಳಲ್ಲಿ ವಾಸವಿದ್ದ ತಮ್ಮ ಮಕ್ಕಳ ಮನೆ ಸೇರಿಕೊಂಡರು. ಅಜ್ಜಿ ಮಾತ್ರ 'ಈ ವಯಸ್ಸಿನಲ್ಲಿ ನಾನು ಯಾರ ಹಲ್ಲುಸಂದಿಗೂ ಸೇರಿಕೊಂಡು ಕಷ್ಟ ಕೊಡಲ್ಲ. ನನ್ನ ವ್ರತನೇಮಕ್ಕೆ ಭಂಗಾನೂ ತಂದುಕೊಳ್ಳಲ್ಲ. ಇರೋವರೆಗೂ ನಮ್ಮ ತಾತಮುತ್ತಾತಂದಿರು ಬಾಳಿ ಬದುಕಿರೋ ಮನೇಲಿ ಇರ್ತೀನಿ,' ಎಂದು ಘೋಷಿಸಿ ಹಳ್ಳಿಯಲ್ಲಿಯೇ ಉಳಿದುಬಿಟ್ಟರು. ಯಾರು ಎಷ್ಟೇ ಕರೆದರೂ ಹೋಗಲಿಲ್ಲ. ನಮಗೂ ರಜಗಳಲ್ಲಿ ಮಕ್ಕಳಿಗೆ ಭಾರತ ದೇಶದ ಬೆನ್ನೆಲುಬಿನ ಪರಿಚಯ ಮಾಡಿಸಲು ಅನುಕೂಲವಾಯ್ತು. ನನಗೆ ಅಜ್ಜಿ

ಎಂದರೆ ವಿಶೇಷ ಪ್ರೀತಿ (ಮೊದಲಿದ್ದ ಹೆದರಿಕೆಯೆಲ್ಲಾ ಪ್ರೀತಿಯಾಗಿ ಪರಿವರ್ತನೆಯಾಗಿ!) ರಜ ಬಂದಾಗ ಮಕ್ಕಳೊಂದಿಗೆ ಹೋಗಿ ನಾಲ್ಕಾರು ದಿನ ಹಾಯಾಗಿ ಇದ್ದು ಅವರು ಮಾಡಿಕೊಡುತ್ತಿದ್ದ ನುಚ್ಚಿನುಂಡೆ, ಕಜ್ಜಾಯ, ಮುಚ್ಚೋರೆ ಎಲ್ಲಾ ಸವಿದು ಬರುತ್ತಿದ್ದೆವು. ಒಂದು ಸಾರಿ ನನ್ನ ಸ್ವರಚಿತ, ಪ್ರಕಟಿತ ಪುಸ್ತಕವೊಂದನ್ನು ಕೊಡಲು ಹೋದಾಗ, 'ಇದೇನು ರಾಮಾಯಣವೋ, ಭಗವದ್ಗೀತೆಯೋ ಇಟ್ಟು ಪೂಜೆ ಮಾಡೋಕ್ಕೆ, ನೀನೇ ಇಟ್ಕೊ' ಎಂದು ನನ್ನ ಮುಖಕ್ಕೆ ತಣ್ಣೀರೆರಚಿದಂತೆ ಹೇಳಿಬಿಟ್ಟರು ಅಕ್ಷರದ್ವೇಷಿ ಅಜ್ಜಿ! ಇಷ್ಟರಲ್ಲೇ ನಾನು ಅನೇಕ ಬಾರಿ ಅಜ್ಜಿಗೆ ಅಕ್ಷರ ಕಲಿಸಲು ಹೋಗಿ ಸೋತಿದ್ದೆ. ನಾನು ತರಬೇತಿ ನೀಡುವ ಸಂಪನ್ಮೂಲ ವ್ಯಕ್ತಿಯಾಗಿದ್ದರಿಂದ ಇನ್ನೊಂದು ಪ್ರಯತ್ನ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 'ಚೈತನ್ಯ'(ಮರಳಿ ಯತ್ನವ ಮಾಡು) ಎಂದುಕೊಂಡು 'ಈಗ 'ಚೈತನ್ಯ'ದ ಮೂಲಕ ಹೇಳಿಕೊಡ್ತೀನಿ ಅಜ್ಜಿ. ತುಂಬಾ ಸುಲಭ. ರ, ಗ, ಸ, ದ, ಅದಿಂದ ಪ್ರಾರಂಭಿಸಿ ಕಲಿಸೋದು' ಎಂದೆ, ('ನಲಿ-ಕಲಿ' ಆಗಿನ್ನೂ ಅಸ್ತಿತ್ವಕ್ಕೆ ಬಂದಿರಲಿಲ್ಲ!) ಪಟ್ಟುಬಿಡದ ಉತ್ಸಾಹದಲ್ಲಿ. ಅಜ್ಜಿ ಜೋರಾಗಿ ಬೊಚ್ಚುಬಾಯಗಲಿಸಿ ನಕ್ಕುಬಿಟ್ಟರು. 'ನಿನ್ನ ರಾಗಾನೂ ಬೇಡ, ಸಾದಾನೂ ಬೇಡ. ಎಲ್ಲಾ ನೀನೇ ಇಟ್ಕೊ. ಎರಡು ಮಕ್ಕಳ ತಾಯಾದ್ರೂ ಇನ್ನೂ ನಿನ್ನ ಹುಡುಗಾಟಾ ಬಿಟ್ಟಿಲ್ಲವಲ್ಲೇ. ನನಗೇಕೇ ಅಕ್ಷರ? ಶಂಕರಾಚಾರ್ಯರೇ ಹೇಳಿಲ್ವ, 'ಭಜಗೋವಿಂದಂ, ಭಜಗೋವಿಂದಂ, ಗೋವಿಂದಂ ಭಜ ಮೂಢಮತೇ, ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿನಹಿ ರಕ್ಷತಿ ಡುಕರಿಂ ಕರಣೇ...' ಅಂತ' ಎಂದರು. ಅಜ್ಜಿ ಒಂದು ರೀತಿ 'ಕುರಿತೋದದೆಯುಂ ಕಾವ್ಯಪ್ರಯೋಗಮತಿಗಳ್' ಎಂಬಂತಿದ್ದವರು. ಅವರಿಗೆ ಸುಪ್ರಭಾತ, ನಳಚರಿತ್ರೆ, ಭಗವದ್ಗೀತೆ, ಸಾಂಪ್ರದಾಯಿಕ ಹಾಡುಗಳು ಎಲ್ಲಾ ಬಾಯಲ್ಲೇ ಇದ್ದವು. ಇದರಿಂದ ನಾನಂತೂ ಅಧೀರಳಾಗಲಿಲ್ಲ. ಈ ಮೂಲಕ ಅಜ್ಜಿಗೆ ನನ್ನ ಸಾಹಿತ್ಯದಲ್ಲಿ ಒಲವು ಮೂಡಿಸಲು ಆಗದಿದ್ದರೂ, ಕೃಷಿಕರ ಮಗಳಾದ ನಾನು ಸಾಹಿತ್ಯಕೃಷಿಯಲ್ಲಿ ತೊಡಗಿ ಅದನ್ನು ಕಲುಷಿತಗೊಳಿಸುವುದನ್ನು ಮುಂದುವರಿಸೇಬಿಟ್ಟೆ!

ಅಂದಹಾಗೇ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಾಯುಮಾಲಿನ್ಯ, ಜಲಮಾಲಿನ್ಯ, ಭೂಮಾಲಿನ್ಯ... ಅಂತ ಅನೇಕ ರೀತಿಯ ಮಾಲಿನ್ಯಗಳನ್ನು ಪಟ್ಟಿ ಮಾಡಿದ್ದಾರೆ. ಆದರೆ ಏಕೋ ಸಾಹಿತ್ಯಮಾಲಿನ್ಯವನ್ನು ಮಾತ್ರ ಸೇರಿಸಿಲ್ಲ! ಈ ಸಾಹಿತ್ಯಮಾಲಿನ್ಯ ಆಂತರಿಕ ಮತ್ತು ಬಾಹ್ಯವಾಗಿ ಎರಡು ರೀತಿ ಮಾಲಿನ್ಯವನ್ನು ಉಂಟುಮಾಡುತ್ತದೆ. ಆಂತರಿಕವು ಸಾಹಿತ್ಯದ ಗುಣಾತ್ಮಕತೆಗೆ ಸಂಬಂಧಿಸಿದ್ದು. ಆದರೆ ಬಾಹ್ಯ ನೇರವಾಗಿ ಪರಿಸರದ ಮೇಲೇ ಪ್ರಭಾವ ಬೀರುತ್ತೆ. ಇದು ಒಂದು ರೀತಿ ರಕ್ತಬೀಜಾಸುರನಂತೆ! ನಿಧಾನವಾಗೇ ಪರಿಸರವನ್ನು ಹಾಳುಮಾಡಲಾರಂಭಿಸಿ ಕ್ಷಿಪ್ರಗತಿಯಲ್ಲಿ ಮುಂದುವರಿಸಿಬಿಡುತ್ತದೆ. ನನ್ನಂಥಾ ಮರಿಸಾಹಿತಿಗಳು ಮೊದಮೊದಲು ಪತ್ರಿಕೆಗಳಿಗೆಕಳಿಸಿ (ಪಾದಪೂರಿ!) ಇದ್ದಕ್ಕಿದ್ದಂತೆಯೇ ವರ್ಷಕ್ಕೆ ಸಾವಿರಾರು ಪುಸ್ತಕಗಳನ್ನು (ಪ್ರತಿಗಳನ್ನು) ಪ್ರಕಟಿಸಿಬಿಟ್ಟರೆ ಎಷ್ಟೊಂದು ಕಾಗದ ಬೇಕಾಗುತ್ತದೆ! ಕಾಗದಕ್ಕಾಗಿ ಮರದ ತಿರುಳಿನ ಬೇಡಿಕೆ ಹೆಚ್ಚಾಗುತ್ತದೆ. ಇದು ಅರಣ್ಯನಾಶಕ್ಕೆ ಕಾರಣವಾಗುತ್ತದೆ. ತತ್ಫಲವಾಗಿ ಜಲಚಕ್ರದ ಮೇಲೆ ಪರಿಣಾಮ ನೇರ. ಒಬ್ಬರನ್ನು ನೋಡಿ ಮತ್ತೊಬ್ಬರು ಹೀಗೆ ಸರಪಳಿಕ್ರಿಯೆ (ಬೀಜವಿದಳನ ಕ್ರಿಯೆಯಂತೆ) ಮುಂದುವರಿಯುವುದರಿಂದ ಪರಿಣಾಮ ಘೋರ!



ನನ್ನ ಸಾಹಿತ್ಯದ ಬಗ್ಗೆ ಅಜ್ಜಿಯ ಜೊತೆ ಮತ್ತೆ ಯಾವತ್ತೂ ಮಾತನಾಡಲಿಲ್ಲ.

ಆದರೆ ಪ್ರಭಾವಶಾಲಿಯಾಗಿ ನನ್ನ ಸಾಹಿತ್ಯವೇ ಅಜ್ಜಿಯನ್ನು ಬಿಡದೇ ನನ್ನ ಬಳಿಗೆ ಸೆಳೆದು ತಂದಿತು!

ಆ ದಿನ ರಾತ್ರಿ ಮಲಗಿ ಇನ್ನೇನು ನಿದ್ದೆಯ ಆಳಕ್ಕೆ ಜಾರುತ್ತಿದ್ದೆ. ಯಾರೋ ದಬದಬ ಬಾಗಿಲು ಬಡೀತಿದಾರೆ! ಇದ್ಯಾರಪ್ಪ ಇಷ್ಟು ಹೊತ್ತಿನಲ್ಲಿ ಕಾಲಿಂಗ್ ಬೆಲ್ ಇದ್ದರೂ ಬಾಗಿಲು ಬಡೀತಿರೋದು ಎನಿಸಿತು. ಆದರೆ ಹೊಲಿದಂತಿದ್ದ ಕಣ್ಣುಗಳನ್ನು ಬಿಡಿಸಲು ಆಗದೇ, ಯಥಾಪ್ರಕಾರ ಕಿವಿಯನ್ನು ಚುರುಕುಗೊಳಿಸಿದೆ. ನನ್ನವರು ಬಾಗಿಲು ತೆರೆದಾಕ್ಷಣ 'ಹೋ...' ಎಂದು ಗೃಹಪ್ರವೇಶ ಮಾಡಿದ ಅಜ್ಜಿಯ ಧ್ವನಿ! 'ಏನಾಯ್ತಜ್ಜಿ' ಎಂದು ಇವರು ಕೇಳುತ್ತಿದ್ದರೂ, 'ಹೀಗಾಗಬಾರದಿತ್ತು ಕಣೋ ರಂಗಾ!' ಎಂದು ಗೋಳಾಡಿದರು. ಇವರು ಎತ್ತಲಿಂದಲೋ ಸಂಬಂಧವೇ ಆಗಬೇಕೆಂದು (ಬಾದರಾಯಣ...) ಕಂಡುಹಿಡಿದು ಮದುವೆಯ ದಿನವೇ ಏಕವಚನ ಪ್ರಯೋಗಕ್ಕಿಳಿದಿದ್ದರು ಅಜ್ಜಿ. (ನಮ್ಮ ಕಡೆ ಅಳಿಯ ಎಷ್ಟೇ ಚಿಕ್ಕವನಾದರೂ ಬಹುವಚನ ಪ್ರಯೋಗ ಮಾಡುವುದು ಸಂಪ್ರದಾಯ!)

'ಗೃಹಲಕ್ಷ್ಮಿ ಇದ್ದಿದ್ದರೆ ಮನೆ ಹೀಗಿರ್ತಿತ್ತೇನೋ, (ನನ್ನ ಮನಸ್ಸಿನಂತೆಯೇ ನನ್ನ ಮನೆಯೂ ಅಸ್ತವ್ಯಸ್ತ!) ಏನಾಗಿತ್ತೋ ನನ್ನ ಕಂದಮ್ಮಂಗೆ, ಮುತ್ತಿನಂಥಾ ಮಕ್ಕಳನ್ನು ಬಿಟ್ಟು ಹೋದಳಲ್ಲೋ...' ಅಜ್ಜಿ ಪ್ರಲಾಪಿಸುತ್ತಾ ಗಳಗಳನೆ ಅಳುತ್ತಿದ್ದಾರೆ. ನನ್ನ ಮಕ್ಕಳೂ ಆಗಲೇ ಅವರ ಮುಂದೆ ಹೋಗಿ ನಿಂತಿವೆ ಎನ್ನುವುದೂ ಖಚಿತವಾಯ್ತು. ಇವರಿಗಂತೂ ತಲೆಬುಡ ತಿಳಿಯದೇ ಒಳಗೆ ಬಂದು ನನ್ನ ಮುಸುಕೆಳೆದು, 'ಅಜ್ಜಿ ಬಂದು ಅಷ್ಟೊಂದು ಅಳ್ತಿದಾರೆ, ಮಕ್ಕಳೂ ಎದ್ದಿವೆ, ನಿಂಗೆ ಏಳಕ್ಕೆ ಆಗಲ್ವಾ ಇನ್ನೂ,' ಎಂದು ನನ್ನನ್ನು ಎಳೆದುಕೊಂಡುಹೋಗಿ ಅವರ ಮುಂದೆ ನಿಲ್ಲಿಸಿದರು.

'ಅಯ್ಯೋ ಇದೇನೇ ಅವಲಕ್ಷಣಾ!'(ಅಜ್ಜಿಯ ದುಃಖವೆಲ್ಲಾ ಈಗ ಆಶ್ಚರ್ಯವಾಗಿತ್ತು.) ಎಂದು ನನ್ನ ಮುಂದೆ ಒಂದು ಕಾರ್ಡ್ ಹಿಡಿದರು. ಹೌದು, ನನ್ನದೇ ಭಾವಚಿತ್ರವಿರುವ ಆಹ್ವಾನಪತ್ರಿಕೆ! ನನ್ನ ಒಂದು ಪುಸ್ತಕ ಸಾಹಿತ್ಯಕ್ಷೇತ್ರವನ್ನು ಕಡಿಮೆ ಕಲುಷಿತಗೊಳಿಸಿದ್ದಕ್ಕಾಗಿ ಅಕಸ್ಮಾತ್ ಪ್ರಶಸ್ತಿ ಪಡೆದುಕೊಂಡಿತ್ತು. ಅದಕ್ಕಾಗಿ ಸ್ಥಳೀಯ ಸಾಹಿತ್ಯಾಭಿಮಾನಿಗಳು ಒಂದು ಸನ್ಮಾನ ಸಮಾರಂಭ ಇಟ್ಟುಕೊಂಡಿದ್ದರು. ಅದರ ಆಹ್ವಾನಪತ್ರಿಕೆಯಲ್ಲಿ ನನ್ನ ಪರಿಚಯದೊಡನೆ ಭಾವಚಿತ್ರವನ್ನೂ ಹಾಕಿಸಿದ್ದರು. ನನ್ನವರು ಅವರಿಗೆ ನಮ್ಮ ಬಂಧುಗಳ ವಿಳಾಸ ಕೊಡುವ ಸಂಭ್ರಮದಲ್ಲಿ ಅಜ್ಜಿಯ ವಿಳಾಸವನ್ನೂ ಕೊಟ್ಟಿದ್ದರು. ಅಜ್ಜಿ ಅದನ್ನು ನೋಡಿ ನನ್ನ ಉ...ತ್ತ...ರ...ಕ್ರಿ...ಯಾ...ದಿ... ಆ...ಹ್ವಾ...ನ ಪತ್ರಿಕೆ ಎಂದು ಭಾವಿಸಿ... 'ನನ್ನ ಕಂದಾ ನೂರು ವರ್ಷ ಸುಖವಾಗಿ ಬಾಳು' ಅಜ್ಜಿಯ ಸುಕ್ಕು ಕೈಗಳು ನನ್ನ ಕೆನ್ನೆ ನೇವರಿಸಿದವು.

ಅಜ್ಞಾನಿಗಳ ಕೂಡ ಡಿಗ್ರಿ ಪಡೆವುದಕ್ಕಿಂತ
ಸುಜ್ಞಾನಿಗಳ ಕೂಡ ಸೋಲುವುದು ಲೇಸು
ಒಡನೆ ಹಂಗಿಸುವ ಮಡದಿ ಮಾವನಿಗಿಂತ
ಬಡತನದ ಬ್ರಹ್ಮಚರ್ಯಾಶ್ರಮವೆ ಲೇಸು
ಕೊಡದೆ ಲಂಚವನು, ಕ್ಲೇಶ ಪಡುವುದಕ್ಕಿಂತ
ಕಡತಂದು, ಕೈ ಬೆಚ್ಚ ಮಾಡುವುದೆಲೇಸು

**ನಾ. ಕಸ್ತೂರಿ**



# ಪ್ರಹಸನ : ಆನಂದ – ಪರಮಾನಂದ

ಜಿ. ವಿ. ಅರುಣ

(ರಂಗಸ್ಥಳದ ಎಡ ಭಾಗದಲ್ಲಿ ಆನಂದನ ಮನೆಯ ಕೋಣೆ; ಅಲ್ಲಿ ಒಂದೆರಡು ಕುರ್ಚಿ, ಒಂದು ಮೇಜು, ಅದರ ಮೇಲೆ ಒಂದು ಹಳೆಯ ಕಾಲದ ಫೋನ್ ಜೊತೆಗೆ ಒಂದಷ್ಟು ಕನ್ನಡದ ವೃತ್ತಪತ್ರಿಕೆಗಳು. ರಂಗಸ್ಥಳದ ಬಲ ಭಾಗದಲ್ಲಿ ಪರಮಾನಂದನ ಮನೆಯ ಕೋಣೆ; ಅಲ್ಲಿ ಒಂದೆರಡು ಕುರ್ಚಿ, ಒಂದು ಮೇಜು, ಅದರ ಮೇಲೆ ಒಂದು ಹಳೆಯ ಕಾಲದ ಫೋನ್ ಜೊತೆಗೆ ಒಂದಷ್ಟು ಕನ್ನಡದ ವೃತ್ತಪತ್ರಿಕೆಗಳು)

ಪಾತ್ರಗಳು : ಸೂತ್ರಧಾರ (ಜೊತೆಗೆ ಹಾಡು ಹೇಳಲು ಮೇಳದವರು)

ಗಣೇಶ ವೇಷಧಾರಿ

ಆನಂದ : ಮಧ್ಯವಯಸ್ಸಿನ, ಮಧ್ಯಮ ವರ್ಗದ ಗೃಹಸ್ಥ.

ಪರಮಾನಂದ : ಆನಂದನ ಸ್ನೇಹಿತ, ಅವನೂ ಮಧ್ಯವಯಸ್ಸಿನ, ಮಧ್ಯಮ ವರ್ಗದ ಗೃಹಸ್ಥ.

***

ಸೂತ್ರಧಾರ: ಈಗ ಪ್ರಹಸನ, ಆನಂದ – ಪರಮಾನಂದ, ಲೇಖಕರು : ಶ್ರೀ ಜಿ. ವಿ. ಅರುಣ

ಸೂತ್ರಧಾರ (ತನ್ನ ಮೇಳದವರ ಜೊತೆ ಹಾಡುವನು. ಗಣೇಶ ವೇಷಧಾರಿಯು ನೃತ್ಯ ಮಾಡುವನು. ಗಣೇಶನ ಕೊರಳಲ್ಲಿ ಸ್ಟೆಥಾಸ್ಕೋಪು, ಕೈಗಳಲ್ಲಿ ಔಷಧಿಯ ಬಾಟಲ್ಲು, ಮಾತ್ರೆಗಳಿವೆ. ಬಿಳಿಯ ಕೋಟನ್ನು ಧರಿಸಿದ್ದಾನೆ):



ಗಜವದನ ಗೌರಿಸುತನೆ

ನಿಜವಚನ ಸಂರಕ್ಷಕನೆ

ನೇರನುಡಿಯ ಮುಗ್ಧರು ನಾವೋ

ನಮ್ಮೆಲ್ಲರ ಗಣಪನೆ ಕಾಯೋ ॥

ನೆಮ್ಮದಿ ಸೌಖ್ಯ ನಮಗಿರುವಂತೆ,

ಕೆಮ್ಮು ನೆಗಡಿಯು ಬರದಿರುವಂತೆ ॥



ಚೈನಾ ರೋಗವು ಸೀಮೆಯ ದಾಟಿ

ಇನಿತು ಒಳಗೆ ನುಸುಳಾದಂತೆ॥

ಓ ಆದಿ ವೈದ್ಯೇಶ್ವರನೇ,

ಔಷಧಗಳ ಮಾಲೀಕನೇ ॥

ನಿತ್ಯದಿ ಕಾಯೋ ಓ ಗಣಪ

ಸತ್ಯದಿ ಕಾಯೋ ಓ ಗಣಪ ॥

ಗಜವದನ ಗೌರಿಸುತನೆ

ನಿಜವಚನ ಸಂರಕ್ಷಕನೆ

ನೇರನುಡಿಯ ಮುಗ್ಧರು ನಾವೋ

ನಮ್ಮೆಲ್ಲರ ಗಣಪನೆ ಕಾಯೋ ??

***

(ಆನಂದನ ಮನೆಯಲ್ಲಿ ಫೋನ್ ರಿಂಗಣಿಸುತ್ತದೆ. ಮಾತನಾಡಲು ಬಹಳ ಕಾತರದಿಂದ ಇರುವ, ಕರೆಯನ್ನು ಮಾಡಿದ ಪರಮಾನಂದನೇ ಸಂಭಾಷಣೆಯನ್ನು ಪ್ರಾರಂಭಿಸುತ್ತಾನೆ.)

ಪರಮಾನಂದ:(ಗೊಗ್ಗರು ಧ್ವನಿಯಲ್ಲಿ) "ಹಲೋ..."

ಆನಂದ :(ಗಂಟಲು ಕಟ್ಟಿದ ಧ್ವನಿಯಲ್ಲಿ) 'ಹಲೋ...'

ಪರ: ನಮಸ್ಕಾರ.

ಆನಂ: ನಮಸ್ಕಾರ...?

ಪರ: ಸ್ವಲ್ಪ ಆನಂದಂಗೆ ಫೋನ್ ಕೊಡಿ.

ಆನಂ: ನೀವು ಯಾರು ಮಾತಾಡ್ತಾ ಇರೋದು?

ಪರ: ಅವನಿಗೆ ಕೊಡಿಪ್ಪಾ... ನನ್ನ ಧ್ವನಿ ಕೇಳಿದ ತಕ್ಷಣ ಅವನಿಗೆ ಗೊತ್ತಾಗಿಹೋಗುತ್ತೆ!

ಆನಂ: 'ಹೌದಾ...?'

ಪರ: ಖಂಡಿತವಾಗಿ ಹೌದು...

ಆನಂ: ನನಗೆ ಗೊತ್ತಾಗ್ತಿಲ್ವಲ್ಲ!?

ಪರ: ನಿಮಗೆ ಹೇಗೆ ಗೊತ್ತಾಗುತ್ತೆ ಸರ್? ಆನಂದನಿಗಾದರೆ ಗೊತ್ತಾಗುತ್ತೆ!

ಆನಂ: ನಾನೇ ಆನಂದ ಸ್ವಾಮಿ! ತಾವು ಯಾರು ಅಂತ ಈಗಲಾದರೂ ಹೇಳ್ತೀರಾ?

ಪರ: ಹೇ ತಮಾಷೆ ಮಾಡಬೇಡಿ ಸರ್. ಆನಂದನ ಧ್ವನಿ ನನಗೆ ಗೊತ್ತಾಗಲ್ವಾ!?

ಆನಂ: ಖಂಡಿತವಾಗಿ ನಾನೇ ಆನಂದ ಯಾರ ಮೇಲೆ ಆಣೆ ಮಾಡಲಿ ಹೇಳಿ ಸ್ವಾಮಿ?

ಪರ: ಆಣೆಗೀಣೆ ಎಲ್ಲ ಏನು ಬೇಡ. (ಆಶ್ಚರ್ಯದಿಂದ) ನೀನೇ ಆನಂದ ಏನೋ?

ಆನಂ: ಹೌದು. ನೀವು...?



ಪರ: ನಿನ್ನ ಧ್ವನಿಗೆ ಏನಾಗಿದೆಯೋ? ನಾನು ಪರಮಾನಂದ ಕಣೋ!

ಆನಂ: (ಆಶ್ಚರ್ಯದಿಂದ) ಹೌದೇನೋ! ನಿನ್ನ ಧ್ವನಿಗೆ ಏನಾಗಿದೆಯೋ? ಒಳ್ಳೆ ಗೊಗ್ಗರು ಧ್ವನಿ ಬರ್ತಾ ಇದೆ.

ಪರ: ನಿಂಗೂ ಹಾಗೆ ಕೇಳಿಸ್ತಾ ಇದೆಯೇನೋ? (ಸಪ್ಪೆ ಧ್ವನಿಯಲ್ಲಿ) ನನ್ನ ಹೆಂಡತಿ ನಿನ್ನೆಯಿಂದ ಹಾಗೇ ಹೇಳ್ತಾ ಇದಾಳೆ!

ಆನಂ: (ದೃಢವಾದ ಧ್ವನಿಯಲ್ಲಿ) ಅವರು ನಿನ್ನ ವಿಚಾರದಲ್ಲಿ ಯಾವತ್ತೂ ಸರಿಯಾಗೇ ಹೇಳ್ತಾರಪ್ಪ.

ಪರ: ಅದೇನೋ, ಸಮಯ ಸಿಕ್ಕಿದಾಗಲೆಲ್ಲ ನೀನು ಹೀಗೆ ನನ್ನ ಆಡಿಕೊಳ್ಳುವುದು ಇದ್ದೇ ಇದೆ. ಇರಲಿ ಬಿಡು. ನಿನ್ನ ಗಂಟಲಿಗೆ ಏನಾಯ್ತು ಮೊದಲು ಹೇಳು.

ಆನಂ: ಅಯ್ಯೋ ಅದೇನ್ ಕೇಳ್ತಿ! ಸ್ವಯಂ ಕೃತ ಅಪರಾಧ. ಮಂಗಳವಾರ ಚಿಕ್ಕ ಕಡಲೇಕಾಯಿ ಪರಿಷೆಗೆ ಹೋಗಿದ್ದೆ. ನಮ್ಮ ಶಾಲಾದಿನಗಳು ನೆನಪಿಗೆ ಬಂತು. ಐಸ್ ತುರಿದು, ಕಡ್ಡಿಮೇಲೆ ಒತ್ತಿಹಿಡಿದು, ಬಣ್ಣಬಣ್ಣದ ಸಕ್ಕರೆನೀರು ಹಾಕಿ ಕೊಡ್ತಾರಲ್ಲ, ಐಸ್ ಕ್ಯಾಂಡಿ, ಅದನ್ನ ಎರಡು ತಿಂದೆ. ಆಮೇಲೆ ನಾಲ್ಕುನಾಲ್ಕು ಬೋಂಡ, ಮೆಣಸಿನಕಾಯಿ ಬಜ್ಜಿ ತಿಂದೆ. ಹಿಟ್ಟೇನೋ ಆಗತಾನೆ ಕಲಿಸಿದ್ದರು. ಆದರೆ ಕರಿಯುತ್ತಿದ್ದ ಎಣ್ಣೆ ಎರಡು ಮೂರು ದಿನ ಹಳೆಯದು. ಬೇರೆಬೇರೆ ಕಡಲೆಕಾಯಿಗಳನ್ನು ಕೊಂಡು ಮನೆಗೆ ಬರುವ ಹೊತ್ತಿಗೆ ಗಂಟಲು ಕೆರೆತ ಪ್ರಾರಂಭವಾಗಿತ್ತು. ಇನ್ನು ನಿನ್ನ ಸಮಾಚಾರ ಏನು? ಪೂರ್ತಿ ಕಥೆ ಹೇಳಬೇಡ. ನಾಲ್ಕೈದು ವಾಕ್ಯಗಳಲ್ಲಿ ಮುಗಿಸಪ್ಪ.

ಪರ: ಯಾಕೋ ಹೀಗೆ ಹೇಳ್ತಾ ಇದಿಯಾ? ಮೊದಲೆಲ್ಲ ನನ್ನ ಎಲ್ಲಾ ಮಾತನ್ನು ಕೇಳಿಸಿಕೊಳ್ಳುತ್ತಿದ್ದೆ. ಈಗ ನನ್ನ ಮಾತು ನಿನಗೂ ಬೋರ್ ಅನ್ನಿಸ್ತಾ ಇದೆಯಾ?

ಆನಂ: ಖಂಡಿತ ಇಲ್ಲಪ್ಪ! ನಿನ್ನ ಗಂಟಲಿಗೆ ಹೆಚ್ಚು ಆಯಾಸ ಆಗದೆ ಇರಲಿ ಅಂತ ನಿನ್ನ ಮೇಲೆ ಕಾಳಜಿ ಅಷ್ಟೇ ಕಣಪ್ಪ. ಬೇಜಾರು ಮಾಡ್ಕೋಬೇಡ.

ಪರ: ಓ ಹಾಗಾ? ಥ್ಯಾಂಕ್ಸ್. ಮೊನ್ನೆ ನನ್ನ ಮೊಬೈಲ್ ಮುಷ್ಕರ ಹೂಡಿಬಿಡ್ತು. ಸಿಮ್ ಬದಲಾಯಿಸಲು ಮನೆ ಹತ್ತಿರಾನೇ ಇರೋ ಹೊಸ ಮೊಬೈಲ್ ಕಂಪನಿಯ ಮಾರಾಟ ಕೇಂದ್ರಕ್ಕೆ ನಾನು, ನನ್ನ ಹೆಂಡ್ತಿ ಹೋದೆವು. ಒಳಗೆ ವಾತಾನುಕೂಲದ ದೆಸೆಯಿಂದ ತಣ್ಣಗಿತ್ತು. ಕೈಕೊಟ್ಟ ಸಿಮ್ ಮೇಲಿನ ಕೋಪ ಕೂಡ ಒಳಗೆ ಹೋದ ತಕ್ಷಣ ತಣ್ಣಗಾಗಿಹೋಗಿತ್ತು. ಅಲ್ಲಿ ಕೃತಕನಗೆ ಬೀರುತ್ತಾ ಕಂಪನಿಯ ಸಮವಸ್ತ್ರ ತೊಟ್ಟ ಸ್ವಾಗತಕಾರಿಣಿ ನಮಗೆ ಕುಳಿತುಕೊಳ್ಳಲು ಹೇಳಿದಳು.

ಆನಂ: ಅವಳು ನಿಮಗೆ ಕುಡಿಯಲು ಏನು ಬೇಕು ಸಾರ್... ಅವನ್ನೆಲ್ಲ ಕತ್ತರಿಸಿ, ಮುಖ್ಯ ವಿಚಾರಕ್ಕೆ ಬಾ.

ಪರ: ಓ! ಸರಿಸರಿ. ನನ್ನ ಸಿಮ್ ವಿಚಾರ ತಿಳಿಸಿದಾಗ, ಮೊಬೈಲ್ ಸಂಖ್ಯೆ ಕೇಳಿದಳು. ಕಂಪ್ಯೂಟರ್ ನೋಡುತ್ತಾ ನನ್ನ ಹೆಸರನ್ನು ಖಾತರಿ ಪಡಿಸಿಕೊಂಡು ಆಧಾರ್ ಸಂಖ್ಯೆ ಹೋಲಿಸಿದಳು.



ಆನಂ: ಹೊಸ ಸಿಮ್ ಕೊಡಬೇಕಾದರೆ ಅದೆಲ್ಲ ಆಗಬೇಕಾದ್ದೆ. ನಿನ್ನ ಭಾವಚಿತ್ರ ತೆಗೆದುಕೊಳ್ಳಿಲ್ವಾ?

ಪರ: ಹೂಂ,  ಅದನ್ನೇ ಹೇಳ್ತಿದ್ದೆ. 'ಸರ್ ನನ್ನ ಮೊಬೈಲಿನಲ್ಲಿ ನಿಮ್ಮ ಮುಖದ ಭಾವಚಿತ್ರ ತಗೊಳ್ತೀನಿ. ಈ ಕಡೆ ಬನ್ನಿ' ಅಂತ ಹೇಳಿ ನನ್ನ ಹೆಂಡತಿಯನ್ನು ಪಕ್ಕದಿಂದ ಎಬ್ಬಿಸಿ ಆ ಕಡೆ ನಿಲ್ಲಿಸಿದಳು. ನನಗೆ ಖುಷಿಯೋ ಖುಷಿ. 'ಹೊಸ ಸಿಮ್‌ಗೆ ನಿಮ್ಮ ಭಾವಚಿತ್ರನೂ ಕಳಿಸಿಬಿಡಿ. ಅದೇ ಮೊದಲ ಫೋಟೋ ಆಗಿರ್ಲಿ' ಎಂದೆ.

ಆನಂ: ಆಹಾ! ಬುದ್ಧಿವಂತ ಅಂದ್ರೆ ನೀನೆ ಕಣೋ! ಅವಳು ಗುರಾಯಿಸಿ ಬಯ್ಯಲಿಲ್ವ?'

ಪರ: ಇಲ್ಲ. ಅವಳು ಬೈಲಿಲ್ಲ. ಆದರೆ ನನ್ನ ಹೆಂಡ್ತಿ 'ಅವಳು ಈ ಮೂತಿಯವರಿಗೆ ಹೊಸ ಸಿಮ್ ಕೊಟ್ಟಿದ್ದು ಅಂತ ದಾಖಲು ಮಾಡಲು ತಗೊಂಡು ಭಾವಚಿತ್ರ ಅದು. ಅವಳ ಫೋಟೋ ಬೇಕಂತೆ. ನಂಗೆ ಗೊತ್ತಿಲ್ವ, ಅವಳ ಫೋಟೋ ಜೊತೆ ಅವಳ ಮೊಬೈಲ್ ಸಂಖ್ಯೆನೂ ಸಿಗುತ್ತೆ ಅಂತ ನಿಮ್ಮ ದುರಾಲೋಚನೆ' ಅಂತ ಬೈದ್ಲು.

ಆನಂ: ನಾನು ಆಗಲೇ ಹೇಳಲಿಲ್ವಾ? ನಿನ್ನ ವಿಚಾರದಲ್ಲಿ ಅವರು ಯಾವತ್ತೂ ಸರಿಯಾಗೇ  ಹೇಳ್ತಾರೆ.

ಪರ: ಏನೋಪ್ಪ, ಆದರೆ ನಮ್ಮ ಜೊತೆ ಮಾತಾಡ್ತಾನೆ, ಆ ಸ್ವಾಗತಕಾರಿಣಿ ನಮ್ಮ ಹಿಂದೆ ನಿಂತವರನ್ನು ನೋಡುತ್ತಾ, ನಮ್ಮನ್ನು ನೋಡಿ ನಕ್ಕಿದ್ದಕ್ಕಿಂತ ಎರಡು ಪಟ್ಟು ಹೆಚ್ಚು ಹಲ್ಲು ತೋರಿಸಿ ನಗುತ್ತಾ 'ಒಂದು ನಿಮಿಷ ಇವರದ್ದು ಆಗಿಹೋಯಿತು' ಎಂದು ಹೇಳ್ತಾ ಇದ್ಲು.

ಆನಂ: ಬಹುಶಃ ಅವಳ ಪರಿಚಯದವರು ಯಾರೋ ಇರಬೇಕು.

ಪರ: ನಮಗೂ ಮೊದಲು ಹಾಗೆ ಅನ್ನಿಸಿತು. ನನ್ನ ಹೆಂಡ್ತಿ 'ಹಿಂದೆ ತಿರುಗಬೇಡಿ; ಮೊದಲು ನಮ್ಮ ಕೆಲಸ ಆಗಿಹೋಗ್ಲಿ' ಎಂದಳು. ಅವಳು ಮೂರನೇ ಸಲ 'ಇನ್ನೊಂದು ಅರ್ಧ ನಿಮಿಷ. ಇವರನ್ನು ಮುಗಿಸಿಬಿಟ್ಟು, ನಿಮ್ಮ ಕಡೆ ಗಮನ ಕೊಡುತ್ತೇನೆ' ಎಂದು ಹಲ್ಲುಗಿಂಜುತ್ತ ಹೇಳಿದಾಗ ನಾನು ಹಿಂದಿರುಗಿ ನೋಡಿದೆ. ಆಗ ನನ್ನ ಹಿಂದೆ ನಿಂತಿದ್ದ ಗಿಡ್ಡ ದೇಹದ, ಪುಟ್ಟ ಕಣ್ಣಿನ, ತೆಳುಹಳದಿ ಬಣ್ಣದ ವ್ಯಕ್ತಿ ಮತ್ತು ಅದೇ ರೀತಿ ಇತರ ಮೂವರು ಕಣ್ಣಿಗೆ ಬಿದ್ದರು. ಅವರನ್ನು ಬಾಯಿಬಿಟ್ಟುಕೊಂಡು ನಾನು ನೋಡುತ್ತಿದ್ದಾಗ, ಅವರೆಲ್ಲ ಕೃತಕ ನಗೆ ಬಿರುತ್ತಾ, ತಲೆಯನ್ನು ಮೇಲೆ ಕೆಳಗೆ ಆಡಿಸಿದರು. ನಾನು ತಲೆ ಆಡಿಸುವುದಕ್ಕೂ ಅವರಲ್ಲಿ ಒಬ್ಬ ಸೀನುವುದಕ್ಕೂ ಸರಿಹೋಯಿತು. ಅವನೇನೋ ಅತ್ತಕಡೆ ತಿರುಗಿ, ತನ್ನ ತೋಳನ್ನು ಅಡ್ಡ ಹಿಡಿದಿದ್ದ. ಅನಂತರ ಅವರೆಲ್ಲ ಕ್ಷಮೆ ಯಾಚಿಸಿ, ಒಂದು ಹೆಜ್ಜೆ ಹಿಂದೆ ಸರಿದರು. ತಮ್ಮ ಜೇಬಿನಿಂದ ಮಾಸ್ಕ್ ತೆಗೆದು ಮುಖ ಮುಚ್ಚಿಕೊಂಡರು. ಆಮೇಲೆ ಅದೇ ದಿನ ರಾತ್ರಿಯಿಂದ ನನಗೆ ಗಂಟಲು ಕೆರೆತ ಪ್ರಾರಂಭವಾಯಿತು.

ಆನಂ: ಪರಮಾನಂದ, ಈಗ ನನಗೆ ಆತಂಕ ಆಗ್ತಾ ಇದೆ ಕಣೋ.  ಅವರು ಚೀನಿಯರೇನೋ?

ಪರ: "ನಂಗೆ ತಿಳೀಲಿಲ್ಲಪ್ಪ. ಜಪಾನಿಗಳು, ಕೊರಿಯಾದವರು, ಚೀನಿಯರು, ಯಾಕೆ ನಮ್ಮ ಈಶಾನ್ಯ ಪ್ರದೇಶದವರೆಲ್ಲ ನನಗೆ ಒಂದೇ ತರಹ ಕಾಣ್ತಾರೆ. ನನ್ನ ಗಂಟಲು ಕೆರೆತ ಪ್ರಾರಂಭವಾದ ಮೇಲೆ ನನ್ನ ಹೆಂಡತಿಗೆ ಅವರು ಚೀನಿಯರೇ



ಅಂತ ಮನದಟ್ಟಾಗಿಹೋಗಿದೆ. 'ಚೀನಾದಲ್ಲಿ ಅದೆಂತದೋ ಹೊಸ ರೋಗ ಪ್ರಾರಂಭವಾಗಿ ಬೇಗ ಹರಡುತ್ತಿದೆ. ನಮ್ಮ ದೇಶದಲ್ಲಿ ಆ ರೋಗ ಬಂದ ಮೊದಲನೆಯವರು ನೀವೇ ಆಗಿಹೋದರಲ್ರಿ' ಅಂತ ಅಳುವುದಕ್ಕೆ ಪ್ರಾರಂಭ ಮಾಡಿದಳು. ಮನೆಯವರೆಲ್ಲರೂ ನನ್ನನ್ನು ಕೋಣೆಯಲ್ಲಿ ಕೂಡಿಹಾಕಿಬಿಟ್ಟಿದ್ದಾರೆ ಕಣಯ್ಯ. ಈಗ 'ಆಂಬುಲೆನ್ಸ್ ತರಿಸ್ತೀವಿ ಆಸ್ಪತ್ರೆಗೆ ಸೇರಿಕೊಳ್ಳಿ' ಅನ್ನೋಕೆ ಪ್ರಾರಂಭ ಮಾಡಿದಾರೆ.  ಹೇಗಾದರೂ ಮಾಡಿ ಕಾಪಾಡಯ್ಯ!

ಆನಂ: ನೋಡು, ನಮ್ಮ ಡಾಕ್ಟ್ರು ನನಗೆ ಐದು ದಿನಕ್ಕೆ ಆಂಟಿಬಯಾಟಿಕ್ ಕೊಟ್ಟಿದ್ದಾರೆ. ಅವರ ಅಡ್ರೆಸ್ ಕಳಿಸ್ತೀನಿ. ಒಮ್ಮೆ ಭೇಟಿ ಮಾಡು. ಅವರು ಏನು ಹೇಳಿದರೆ ಹಾಗೆ ಮಾಡು.

ಪರ: ಆದರೆ ನಾನು ಮನೆಯಿಂದ ಆಚೆ ಕಾಲಿಟ್ಟ ಮೇಲೆ, 'ಪೂರ್ತಿ ಆರೋಗ್ಯವಾಗಿದ್ದೀನಿ' ಅಂತ ಡಾಕ್ಟರ್ ಸರ್ಟಿಫಿಕೇಟ್ ಇಲ್ಲದೆ ಮನೆಯೊಳಗೆ ಬಿಡುವುದಿಲ್ಲ ಅಂತಿದ್ದಾರಪ್ಪ ಮನೆಯವರು. ವಾಲ್ಮೀಕಿಗೆ 'ನಿಮ್ಮ ಪಾಪ ನಾವು ಹಂಚಿಕೊಳ್ಳಲ್ಲ' ಅಂತ ಅವನ ಮನೆಯವರು ಹೇಳಿದಾಗ ಹೇಗಾಗಿರಬಹುದು ಅನ್ನುವ ಅನುಭವ ನನಗೆ ಆಗಿಹೋಯ್ತಪ್ಪ.

ಆನಂ: ಹಾಗಾದ್ರೆ ಇರೋದು ಒಂದೇ ದಾರಿ. ಆಸ್ಪತ್ರೆಗೆ ಸೇರಿಬಿಡು.

ಪರ: (ಸ್ವಲ್ಪ ದುಃಖದ ಧ್ವನಿಯಲ್ಲಿ)ಇನ್ನೊಂದು ದಾರೀನೂ ಇದೆ ಕಣಪ್ಪ...

ಆನಂ: ಏನೇನೋ ಕೆಟ್ಟ ಯೋಚನೆ ಮಾಡಬೇಡ...

ಪರ: ನೀನಿರುವಾಗ ನಾನು 'ಆ ಯೋಚನೆಯೆಲ್ಲ' ಯಾಕೆ ಮಾಡಲಿ ಹೇಳು?"

ಆನಂ: ಹಾಗಾದ್ರೆ ಬೇರೆ ಯಾವ ದಾರಿ?

ಪರ: ನೇರವಾಗಿ ನಿಮ್ಮ ಮನೆಗೆ ಬಂದು, ನಾಲ್ಕೈದು ದಿನ ಸುಧಾರಿಸ್ಕೊಂಡು, ಆಮೇಲೆ ನಮ್ಮ ಮನೆಗೆ ಹಿಂದಿರುಗುವುದು!

ಆನಂ: ಅದು... ಅದು... ನನ್ನ ಹೆಂಡ್ತಿ ಮನೆಯಲ್ಲಿ ಇಲ್ಲ. ಅವಳು ಬಂದ ಅನಂತರ, ಅವಳನ್ನ ಒಂದು ಮಾತು ಕೇಳಿ, ಆಮೇಲೆ ಫೋನ್ ಮಾಡ್ಲಾ?

ಪರ: (ಸಂತೋಷದಿಂದ, ದಬಾಯಿಸುವ ಧ್ವನಿಯಲ್ಲಿ) ಯಾಕಪ್ಪ? ನನ್ನ ಯಾವಾಗಲೂ ಆಡಿಕೊಂಡು, 'ನಮ್ಮನೆಗೆ ನಾನೇ ಯಜಮಾನ' ಅಂತಿದ್ದೆ! ಆಹಾ, ಈಗ ಎಲ್ಲಿಗೆ ಹೋಯ್ತು ನಿನ್ನ ಯಜಮಾನಿಕೆ? ಈಗಲಾದರೂ ಒಪ್ಪಿಕೊಳ್ತಿಯಾ? ಎಲ್ಲರ ಮನೇಲೂ ಯಜಮಾನ್ತಿಯದೇ ಯಜಮಾನಿಕೆ ಅಂತ!

(ಆನಂದ ಪೆಚ್ಚುಮೋರೆ ಹಾಕಿಕೊಂಡು ತನ್ನ ತಲೆ ಕೆರೆದುಕೊಂಡ)

ಸೂತ್ರಧಾರ:(ಫಲಿತಾಂಶವನ್ನು ಘೋಷಣೆ ಮಾಡುವವರಂತೆ)ಆನಂದನ ಹುಸಿಹಿರಿಮೆಯ ಉಬ್ಬಿದ ಬೆಲೂನಿಗೆ ಪರಮಾನಂದನ ಈ ಒಂದು ಪ್ರಶ್ನೆಯ ಮುಳ್ಳು ಸರಿಯಾಗಿ ಚುಚ್ಚಿತ್ತು. ಆನಂದನ ಪರಿಸ್ಥಿತಿ ಕಂಡು ಪರಮಾನಂದನಿಗೆ ಪರಮಾನಂದವಾಗಿತ್ತು!



***

## ಬಿಟ್ಟಿ ಸಲಹೆ ಕೊಟ್ಟೀರಿ ಜೋಕೆ !

ಲತಾ ಹೆಗಡೆ, ಹುಬ್ಬಳ್ಳಿ

**ನಾ**ನು ಅಸಹಾಯಕನಾಗಿದ್ದೆ. ರಜೆಯ ದಿನ ಪೂರ್ತಿ ಸುಖಾಸೀನದಲ್ಲಿ ಮೈಚೆಲ್ಲಿ ಮೂರ್ಖರ ಪೆಟ್ಟಿಗೆಯ ಕಾರ್ಯಕ್ರಮದಲ್ಲಿ ಹುರುಳಿದೆಯೋ ಇಲ್ಲವೋ ಒಟ್ಟಿನಲ್ಲಿ ವೀಕ್ಷಿಸುತ್ತಾ ಆಹ್ಲಾದವಾಗಿ ಕಾಲ ಕಳೆಯೋಣ ಎಂದುಕೊಂಡರೆ ಬಿಡಬೇಕಲ್ಲ ನನ್ನ ಸೋಕಾಲ್ಡ್ ಅರ್ಧಾಂಗಿ! ಅಡುಗೆ ಕಾರ್ಯಕ್ರಮ ಪ್ರಸಾರವಾಗುವ ಸಮಯದಲ್ಲಿ ಎಲ್ಲೇ ಇರಲಿ, ಹೇಗೇ ಇರಲಿ ಟೀವೀ ಮುಂದೆ ಉತ್ಸವಮೂರ್ತಿಯಂತೆ ಪ್ರತಿಷ್ಠಾಪನೆಯಾಗಿಬಿಡುತ್ತಿದ್ದಳು. ಆಗ ಆಕೆಯನ್ನು ಅಲ್ಲಿಂದ ಎಬ್ಬಿಸುವುದು ಅಸಾಧ್ಯ ಮತ್ತು ಅಸಂಭವವೇ ಆಗಿ ಹ್ಯಾಪ್‌ಮೋರೆಯಲ್ಲಿ ಕುಳಿತಿರುತ್ತಿದ್ದೆ. ಆಸಕ್ತಿಯಿರದ ಅದೇ ಚರ್ವಿತಚರ್ವಣ ಅಡುಗೆ ಕಾರ್ಯಕ್ರಮ ನೋಡುವುದಕ್ಕಿಂತಲೂ ಕಲಾವತಿಯಾಡುವ ಕಸರತ್ತೇ ಆಸಕ್ತಿಕರವಾಗಿದ್ದು ದಂಗುಬಡಿಸುವಂತಿತ್ತು. ಇದಂತೂ ಪೈಪೋಟಿ ಕಾಲ ಎಂದಮೇಲೆ ಚಾನಲ್ಲಿನವರಲ್ಲೂ ಪೈಪೋಟಿ ಇದ್ದದ್ದೇ. ಒಂದೊಂದು ಭಾಷೆಯವರೂ ಕನಿಷ್ಠ ಎರಡೆರಡು ಚಾನಲ್ಲಿನಲ್ಲಿ ಏಕಕಾಲದಲ್ಲಿ ಅಡುಗೆ ಕಾರ್ಯಕ್ರಮ ಪ್ರಸರಿಸುತ್ತಿದ್ದರು. ಕಲ್ಲಿಯೋ ಕನಿಷ್ಠ ಮೂರ್ನಾಲ್ಕು ಭಾಷೆಯ ಅಡುಗೆ ಕಾರ್ಯಕ್ರಮವನ್ನು ಬಿಟ್ಟೂಬಿಡದೇ ನೋಡುತ್ತಿದ್ದಳು. ಕನ್ನಡ ಚಾನಲ್ಲಿನ ಅಡುಗೆ ಬರೆದುಕೊಳ್ಳುತ್ತಲೇ ಬೇರೇಬೇರೆ ಚಾನಲ್ಲುಗಳ ಬಟನ್ನು ಒತ್ತುವಳು. ಯಾವ ಹೊಸರುಚಿಯನ್ನೂ ಮಿಸ್ ಮಾಡಲು ಮನಸ್ಸಿರದ ಆ ನನ್ನ ಗ್ರೇಟ್ ಶ್ರೀಮತಿ, ನೆಲದ ಮೇಲೆ ಪುಸ್ತಕಗಳನ್ನು ಹರವಿಕೊಂಡು ಒಂದು ಕೈಯಲ್ಲಿ ಪೆನ್ನು, ಇನ್ನೊಂದರಲ್ಲಿ ರಿಮೋಟು ಹಿಡಿದು ನಿಮಿಷನಿಮಿಷಕ್ಕೂ ಬಟನ್ನು ಒತ್ತುತ್ತಾ ಬರೆದುಕೊಳ್ಳುವ ವೇಗಕ್ಕೆ ಮೂಕವಿಸ್ಮಿತನಾಗಿದ್ದೆ! ಆಹಾ! ಎಂತಹ ಚಾಕಚಕ್ಯತೆ! ಆ ಸಮಯದಲ್ಲಿ ಮನೆಯಲ್ಲಿರುವವರು ಮಾತಾಡುವುದಿರಲಿ, ಸೀನು, ಕೆಮ್ಮು... ಊಹೂಂ. ಸದ್ದೇ ವರ್ಜ್ಯವಾಗಿತ್ತು. ಪಿಎಚ್ಡಿ ಮಾಡುವಂತಹ ವಿದ್ಯಾರ್ಥಿಯ ತಲ್ಲೀನತೆ, ಏಕಾಗ್ರತೆ ಆಗ ಆಕೆಯನ್ನು ಅಮರಿಕೊಳ್ಳುತ್ತಿತ್ತೇನೋ; ನಾಲ್ಕು ಭಾಷೆಗಳ ಅಡುಗೆಗಳನ್ನು ಅರ್ಥೈಸಿಕೊಂಡು ಏಕಕಾಲಕ್ಕೆ ಗ್ರಹಿಸಿ, ಒಂದು ಕೈಯಿಂದಲೇ ವಿವಿಧ ಪುಸ್ತಕಗಳಲ್ಲಿ ಚಕಚಕನೆ ಬರೆದುಕೊಳ್ಳುವುದು ಅಸಾಮಾನ್ಯ ವಿದ್ಯೆಯಂತೆನ್ನಿಸಿತ್ತು. ಆ ಅದ್ಭುತ ವಿದ್ಯೆ ಆಕೆಯನ್ನು ಸೃಷ್ಟಿಸಿದ ಸೃಷ್ಟಿಕರ್ತನಿಂದಲೂ ಅಸಾಧ್ಯವೆಂಬ ನಿರ್ಣಯಕ್ಕೂ ಬಂದಿದ್ದೆ.

ನನ್ನಾಕೆ ಬರೀ ಬರೆದುಕೊಳ್ಳದೇ ಕೆಲವನ್ನು ತಯಾರಿಸಿ ಮನೆಮಂದಿಯ ಮೇಲೆ ನಿರಾತಂಕವಾಗಿ ಪ್ರಯೋಗಿಸುತ್ತಿದ್ದಳು. ಆತಂಕವೇನಿದ್ದರೂ ಪ್ರಯೋಗಕ್ಕೊಳಪಟ್ಟವರದ್ದಾಗಿ ತಿಂದವರ ಆರೋಗ್ಯ ಸ್ವಸ್ಥವಾಗಿದ್ದರೆ ಅದವರ ಪುಣ್ಯ. ಇನ್ನೊಂದು ವಿಶೇಷವೆಂದರೆ, ಹೊಸರುಚಿಯ ಪ್ರಯೋಗಕ್ಕೆ ಯಾವತ್ತಿದ್ದರೂ ಭಾನುವಾರವೇ ಪ್ರಶಸ್ತವೆಂದು ಆಯ್ದುಕೊಳ್ಳುತ್ತಿದ್ದಳು. ಹಾಗೊಂದು ಹೊಸರುಚಿ ಮೆಲ್ಲುವ ಸುದಿನವೋ, ದುರ್ದಿನವೋ, ಒಟ್ಟಿನಲ್ಲಿ ಅಂತಹದ್ದೊಂದು ದಿನ ಬಂದೊದಗಿತ್ತು. ಬೆಳ್ಬೆಳಗ್ಗೆಯೇ ಹೊಸರುಚಿಯ ಘೋಷಣೆಯೂ ಆಗಿ ಅಘೋಷಿತ ನಿರ್ಣಾಯಕನಾಗಿ ಬಡಪಾಯಿ ನಾನಂತೂ ಇದ್ದೆ. ಮೂರು ತಾಸಿನಿಂದಲೂ ಅಡುಗೆಮನೆಯಲ್ಲಿ ತುರುಸಿನ ಚಟುವಟಿಕೆ ನಡೆದಿತ್ತು. ಆಗಾಗ ಅವಳು ಆರ್ಡರಿಸಿದ ಸಾಮಾನುಗಳನ್ನು ಒಮ್ಮೆ ನಾನೋ ಮತ್ತೊಮ್ಮೆ ಜ್ಯೇಷ್ಠಪುತ್ರನೋ ಮಗದೊಮ್ಮೆ



ಕನಿಷ್ಟ ಪುತ್ರನೋ ಚಿಟಿಕೆ ಹೊಡೆಯುವಷ್ಟರಲ್ಲಿ ತಂದುಕೊಡುವುದು ನಡೆದೇ ಇತ್ತು. ಸ್ವಲ್ಪ ಸಮಯದಲ್ಲಿ ಮನೆಯೆಲ್ಲಾ ಹರಡಿಕೊಂಡ ವಿಲಕ್ಷಣ ವಾಸನೆಗೆ ಜಾಗೃತರಾದ ಮಕ್ಕಳಿಬ್ಬರೂ ಗೆಳೆಯರ ಮನೆಯಲ್ಲಿ ಬರ್ತಡೇ ಪಾರ್ಟಿ ಇದೆಯೆಂದು ಜಾಗ ಖಾಲಿ ಮಾಡಿದ್ದರು. ಕಿಲಾಡಿಗಳೇ ಸೈ! ನನಗೆಲ್ಲಿದೆ ಆ ಭಾಗ್ಯ?




ಪರೀಕ್ಷೆಯ ಸಮಯ ಒಕ್ಕರಿಸಿಯೇ ಬಿಟ್ಟಿತು. 'ರೀ! ಬನ್ನೀಪ್ಪಾ, ಕ್ಷಮಿಸಿ, ಹೊಸರುಚಿ ತಯಾರಿಸೋಕೆ ತಡ ಆಗೋಯ್ತು. ಪ್ರೋಸೆಸ್ಸು ಜಾಸ್ತೀನೇ ಇತ್ತು. ಇರಿ, ತಂದೇಬಿಟ್ಟೆ...' ತಟ್ಟೇ ಮುಂದೆ ಕೂರುತ್ತಿದ್ದಂತೇ ನನ್ನಾಕೆ ಸೌಟನ್ನ ತಿರುತಿರುವಿ ಕೊಡವಿದಷ್ಟೂ ಬೀಳಲಾರೆನೆಂದು ರಚ್ಚೆಹಿಡಿದದ್ದು ಕೊನೆಗೂ ಧೊಪ್ಪನೆ ತಟ್ಟೆಗೆ ಬಿದ್ದಾಗ ಅದರ ನೋಟಮಾತ್ರದಿಂದಲೇ ಹೊಟ್ಟೇಲಿ ಕಿವುಚಿದಂತಾದರೂ ಸಹಿಸಿಕೊಂಡೆ. ನಾಸ್ತಿಕನಾದರೂ 'ಕಾಪಾಡಪ್ಪ ತಂದೆ!' ಎಂದು ಭಯದಿಂದ ಪ್ರಾರ್ಥಿಸಿ ವಿಲಕ್ಷಣ ವಾಸನೆಯದ್ದನ್ನ ಬಾಯಿಗೆ ಹಾಕಿದ್ದೇ ತಡ, ಹೊಟ್ಟೇಲಿ ಕಿವುಚುತ್ತ ಕುಳಿತದ್ದು ರಾಕೆಟ್ಟಿನಂತೇ ಬಾಯಿಗೆ ಬಂತು! ಬಿಚ್ಚಿ ಬೀಳುತ್ತಿದ್ದ ಲುಂಗಿಯನ್ನೂ ಲೆಕ್ಕಿಸದೆ ಉದುರಿ ಬೀಳದಂತೇ ಹೇಗ್ಹೇಗೋ ಹಿಡಿದು ಬಚ್ಚಲುಮನೆ ಸೇರಿದ್ದೆ.

"ಲೇ, ಯಾಕೋ ಹೊಟ್ಟೇಲಿ ಸಂಕ್ಟ ಆಗ್ತಿದೆ ಕಣೆ. ಬೆಳಗ್ಗೇನೇ ಸಣ್ಣಗೆ ನೋವು ಶುರುವಾಗಿತ್ತು; ಸರಿಯಾಗ್ಬಹುದು ಅಂತ ಸುಮ್ನಿದ್ದೆ; ಈಗ್ನೋಡಿದ್ರೆ ಗುಡುಗುಡು ಅಂಬೋದ್ರ ಜೊತೆಗೆ ನೋವು ಇದ್ದಕ್ಕಿದ್ದಂಗೇ ಜಾಸ್ತಿಯಾಗ್ಬಿಟ್ಟಿದೆ ಕಣೇ. ಹೆಚ್ಚಾಗಿ ಅಪಚನವೇ ಇರ್ಬಹುದು. ಲಂಘಣಂ ಪರಮೌಷಧಂ ಅನ್ನೋ ಹಾಗೆ ಉಪವಾಸವೇ ಇದಕ್ಕೆ ತಕ್ಕ ಮದ್ದು. ಇವತ್ತು ಉಪವಾಸ ಮಾಡಿದ್ರೆ ನಾಳೆ ಅನ್ನೋಷ್ಟರಲ್ಲಿ ಸರೀ ಹೋಗುತ್ತೆ. ತಪ್ಪು ತಿಳೀಬೇಡ್ವೇ... ಅಷ್ಟೊಂದು ತ್ರಾಸು ತೊಗೊಂಡು ಹೊಸರುಚಿ ತಯಾರ್ಸಿದ್ದೀಯಲ್ಲಾ, ಏನೇ ಅದು?" ಕೇಳೇಬಿಟ್ಟೆ ದಿಟ್ಟನಾಗಿ. ಉಪವಾಸ ಘೋಷಿಸಿದ್ದಕ್ಕೆ ನೂರಾನೆ ಬಲ ಬಂದಂತಾಗಿತ್ತು.

"ಯಾಕ್ರೀ, ಹಂಗಿಸ್ತಿದ್ದೀರಾ? ನಾ ಬರೆದುಕೊಳ್ಳುವಾಗ ಮಿಸ್ಟೇಕು ಆಗಿರ್ಬೇಕು. ಗಡಿಬಿಡಿಯಲ್ಲಿ ಆ ಚಾನಲ್ಲಿನ ಅಡುಗೆ ವಿವರ ಈ ಚಾನಲ್ಲಿನ ಅಡುಗೆ ವಿವರದಲ್ಲಿ ಬರೆದುಕೊಂಡೆ ಅನ್ನಿಸುತ್ತೆ, ಹಂಗಾಗೇ ಕಲಸುಮೇಲೋಗರ ಆಗಿರೋದು. ಅಷ್ಟೆಲ್ಲಾ ಕಷ್ಟ ಪಟ್ಟು ತಯಾರ್ಸಿದ್ದೆ ಕಣ್ರೀ! ಇದೇ ಮೊದಲಲ್ಲ ಹೀಗಾಗ್ತಿರೋದು. ನಾ..." ಇನ್ನೂ ಏನೇನು ಪ್ರಲಾಪಿಸುತ್ತಿದ್ದಳೋ, ಕೊರಳಸೆರೆ ಉಬ್ಬಿ ಕಣ್ಣೆಂಬ ತೂಬಿಂದ ಗಂಗಾಭಾಗೀರಥಿ ಪ್ರವಹಿಸತೊಡಗಿತು. ಮದುವೆಯಾಗಿ ತವರುಮನೆಯಿಂದ ಶಾಶ್ವತವಾಗಿ ಹೊರಬರುವಾಗಲೂ ಇಷ್ಟು ದುಃಖಿಸಿದ್ದಳೋ ಇಲ್ಲವೋ! ಕನಿಕರ

ಮೂಡಿತು. ಸಹಧರ್ಮಿಣಿಗೆ ಹುರುಪು ತರಿಸಲು "ಅಲ್ವೇ ನೀನ್ಯಾಕೆ ಆ ಚಾನಲ್ಲಿನ 'ರುಚಿಯೆಂದರೆ ಇದು' ಕಾರ್ಯಕ್ರಮದಲ್ಲಿ ಅಡುಗೆ ಮಾಡಿ ತೋರಿಸ್ಬಾರ್ದು? ಎಷ್ಟೆಂದರೂ ಪಾಕಪ್ರವೀಣೆ..." ಸಲಹೆ (ನಂ. 1) ಕೊಟ್ಟಿದ್ದೇ ತಡ ಕಣ್ಣೀರ ಧಾರೆ ಮಂಗಮಾಯ!

ಸರಿ, ಆ ಚಾನಲ್ಲಿಗೆ ಅಡುಗೆ ಮಾಡಿ ತೋರಿಸಲು ಅಡುಗೆ ಬರೆದು ಸ್ಕ್ರೋಲಾದ ಸಂಖ್ಯೆಗೆ ವಾಟ್ಸಪ್ಪು ಮಾಡಿದ್ದೂ ಆಯಿತು. ತಿಂಗಳಲ್ಲೇ ಕಲ್ಲಿಗೆ ಅಡುಗೆ ಚಳಕ ತೋರುವಂತೆ ಆಹ್ವಾನವೂ ಬಂದಿತು. ಇವಳಿಗೋ ಇನ್ನಿಲ್ಲದ ಸಡಗರ, ಉದ್ವೇಗ. ನನಗೋ ಅವ್ಯಕ್ತ ಆತಂಕ.

"ಲೇ ಕಲ್ಲಮ್ಮಾ, ಆ ಅಲಂಕಾರದ ಗೊಂಬೆ ಎಂಕರಿಣಿ ಕೇಳೋ 'ಉಪ್ಪು ಎಷ್ಟು ಹಾಕಬೇಕು; ಖಾರ ಎಷ್ಟು?' ಮುಂತಾದ ಅಸಂಬದ್ಧ ಪ್ರಶ್ನೆಗಳಿಗೆಲ್ಲಾ ಕನ್‌ಫ್ಯೂಸ್ ಆಗ್ದೇ ಸಮಂಜಸವಾಗಿ ಉತ್ತರಿಸು. ಹಾಗೇನೇ ಅಳತೆಯೆಲ್ಲಾ ಸರಿಯಾಗಿ ನೋಡ್ಕೊ. ಗಾಬ್ರೀಲಿ ಮರೀಬೇಡ" ಪುಕ್ಕಟ್ಟೆ ಸಲಹೆ (ನಂ. 2) ದುಬಾರಿಯಾಗುತ್ತದೆ ಎಂದು ಸಲಹಿಸುವಾಗ ಗೊತ್ತಾಗಲೇ ಇಲ್ಲ.

ತಯಾರಿ ಜೋರಾಗಿಯೇ ನಡೆಯಿತು. ಪ್ರತಿ ದಿನವೂ ಆ ಎರಡು ರೆಸಿಪಿಯದ್ದೇ ತಯಾರಿಕೆ; ರುಚಿ ನೋಡುವಿಕೆ; ಎಲ್ಲರ ಅಭಿಪ್ರಾಯ ಕೇಳುವುದು ನಡೆದೇ ಇತ್ತು. ಸಾಲದ್ದಕ್ಕೆ ನೆರೆಹೊರೆಯವರು, ನೆಂಟರಿಷ್ಟರನ್ನು ಕರೆಕರೆದು ಮಾಡಿದ್ದನ್ನು ತೋರಿಸಿ, ತಿನ್ನಿಸಿ, ಅಭಿಪ್ರಾಯ ಕೇಳುವುದು ಅವಿರತವಾಗಿ ಸಾಗಿತ್ತು. ದಿನಂಪ್ರತಿ ಅದನ್ನೇ ತಿಂದೂ ತಿಂದೂ ಆ ತಿನಿಸುಗಳ ಹೆಸರುಮಾತ್ರದಿಂದಲೇ ವಾಕರಿಸುವಂತಾಗಿತ್ತು! ಸಾಲದ್ದಕ್ಕೆ ನನ್ನಿಂದ ಭಾರೀ ಮೊತ್ತದ ಹಣವನ್ನೂ ಪೀಕಿದ್ದಳು. ಕಾರಣ ಕೇಳಿದ್ದಕ್ಕೆ ತುಟಿ ವಕ್ರಿಸಿ ನಿಗೂಢ ನಗೆ ಬೀರಿದ್ದಳು. ಕೊನೆಗೂ ಆ ದಿನ ಬಂದೇಬಿಟ್ಟಿತ್ತು. ನಾನು ಕಛೇರಿಗೆ ರಜೆ ಹಾಕಿದ್ದೆ. ಇವಳನ್ನು ಗಮ್ಯ ತಲುಪಿಸುವ ಕೆಲಸ ಇತ್ತಲ್ಲ. ಕಾಟಾಚಾರಕ್ಕೆ ಏನೋ ಒಂದು ತಿಂಡಿ ಮಾಡಿಟ್ಟು ಜಂಭದ ಚೀಲ ಹೆಗಲಿಗೆ ಏರಿಸಿ ಬೆಳಗ್ಗೆ ಒಂಭತ್ತಕ್ಕೇ ಹೋದವಳು ಎರಡ್ಮೂರು ತಾಸಾದರೂ ಹಿಂದಿರುಗದಿದ್ದದ್ದು ಆತಂಕ ಮೂಡಿಸಿತ್ತು. ಅವಳ ಮೊಬೈಲಿಗೆ ಕರೆ ಮಾಡಿದರೆ ಅದು ತಾನು ಅಡುಗೆಮನೆಯಲ್ಲಿಯೇ ಬೇಯುತ್ತಿದ್ದೇನೆಂಬಂತೆ ಬೇಳೆಡಬ್ಬಿಯ ಮೇಲಿಂದಲೇ ಉಲಿಯುತ್ತಾ ಒಡತಿಯ ಮರೆಗುಳಿತನವನ್ನು ಎತ್ತಾಡಿತು. ನಾನೋ ತಳಮಳಿಸುತ್ತಲೇ ತಯಾರಾಗಿದ್ದೆ. ಮಕ್ಕಳಿಬ್ಬರೂ ಮಧ್ಯಾಹ್ನದ ಊಟವನ್ನು ಕ್ಯಾಂಟೀನಿನಲ್ಲೇ ಮಾಡುತ್ತೇವೆಂದು ಕಾಲೇಜಿಗೆ ಹೋಗಿದ್ದರು.

ಕಾಲಿಂಗ್ ಬೆಲ್ಲು ಟ್ರಿನ್ ಟ್ರಿನ್ನೆಂದು ಹೊಡೆದುಕೊಂಡಾಗ ಲಗುಬಗೆಯಲ್ಲಿ ಬಾಗಿಲು ತೆರೆದು ಮುಂದೆ ನಿಂತ ಆಕೃತಿಯನ್ನು ನೋಡಿ ಹಿಮ್ಮೆಟ್ಟಿ ಕ್ಷಣಕಾಲ ದಂಗಾಗಿದ್ದೆ! ಹೆಮ್ಮೆಯ ನಗೆ ಸೂಸುತ್ತಾ ಒನಪಿನಲ್ಲಿ ನಿಂತಿದ್ದಳು ಭಾರ್ಯಾಮಣಿ. ಚಕಪಕ ಹೊಳೆವ ಝರಿ, ಕುಂದನ್ ವರ್ಕು ಥಾಳಾಗಿರುವ, ಕಡುಗೆಂಪಿನ ಸೀರೆ, ಬ್ಲೌಸಿನಲ್ಲಿ ಕಣ್ಣಿಗೆ ರಾಚುತ್ತಿದ್ದಳು! ಇನ್ನವಳ ಬ್ಲೌಸೋ ಎಲ್ಲೆಲ್ಲೋ ಲೇಸುಗಳು, ಜೋತಾಡುವ ಕಸೆಗಳಿಂದ ವಿಚಿತ್ರ ಆಕಾರದಲ್ಲಿ ನನ್ನಾಕೆಯ ತುಂಬುಮೈಯನ್ನು ಬಿಗಿದು ಹಿಡಿದಿತ್ತು. ಇನ್ನು ತಲೆಗೂದಲಿಗೆ ಅದೇನು ಮಾಡಿಸಿದ್ದಳೋ ಎರಡು ರೂಪಾಯಿಯ ಕೊತ್ತಂಬರೀ ಸೊಪ್ಪಿನಂತಿದ್ದದ್ದು ಇಪ್ಪತ್ತು ರೂಪಾಯಿಯ ಸೂಡಾಗಿತ್ತು. ಸೀರೆಗೆ ತಕ್ಕ ಬಳೆ, ಸರ, ನೆಕ್ಲೇಸು, ಲೋಲಾಕು ಮುಂತಾದ ಮ್ಯಾಚಿಂಗ್ ಸೆಟ್ಟುಗಳಷ್ಟೇ



ಅಲ್ಲದೇ ಉಗುರು, ಅಧರ, ಗಲ್ಲ, ಕಣ್ಣರೆಪ್ಪೆಯ ಮೇಲೂ ಕೂಡ ಕೆಂಪೋ ಕೆಂಪು! 'ಕೆಂಪಾದವೋ ಎಲ್ಲಾ ಕೆಂಪಾದವೋ...' ಚಿತ್ರಗೀತೆ ನೆನಪಾಗಿ ನನ್ನರಿವಿಗೆ ಬಾರದೇ ಗುನುಗತೊಡಗಿದೆ ಆದರೆ ಖಂಡಿತವಾಗಿಯೂ ಲಹರಿಯಲ್ಲಂತೂ ಅಲ್ಲ. ಇನ್ನೇನಾದರೂ ಸೀರೆಯ ಬಣ್ಣ ಹಸಿರು, ನೀಲಿ, ಕಪ್ಪಾಗಿದ್ದರೆ ಮ್ಯಾಚಿಂಗಿನ ಗೆಟಪ್ಪು!?

"ಇದೇನೇ ನಿನ್ನವತಾರ? ಕೆಂಪು ಬೂಬು ಆಗಿದ್ಯಲ್ಲೇ! ನೀ ಹೋಗ್ತಿರೋದು ಅಡುಗೆ ಮಾಡಿ ತೋರ್ಸೋಕೆ, ಫ್ಯಾಷನ್ನು ಪರೇಡಿಗಲ್ಲ" ವಾರದ ಹಿಂದೆ ಹಣ ಪೀಕಿದ್ದರ ರಹಸ್ಯ ಬಯಲಾಗಿತ್ತು.

"ಸ್ವಲ್ಪ ಸುಮ್ನಿರ್ತೀರಾ? ಮೊದಲೇ ಲಕ್ಷಾಂತರ ಜನ ನೋಡೋ ಕಾರ್ಯಕ್ರಮ. ಮನೇಲಿರೋ ಹಾಗೆ ಕಲೆಗಳಿಂದ ಚಿತ್ತಾದ ನೈಟಿ, ಕೆದರಿದ ಕೂದಲು, ಎಣ್ಣೆಮುಖದಲ್ಲಿ ಅಡುಗೆ ತೋರ್ಸೋಕೆ ಆಗುತ್ಯೇ? ಮತ್ತೆ ಹಾಗೆಲ್ಲಾ ಹೇಗ್ಹೇಗೋ ಹೋಗಿ ನಿಮ್ಮ ಮರ್ಯಾದೆಗೆ ಕುಂದು ತರ್ತೀನ್ಯೇ?" ನುಲಿನುಲಿದು ಉಲಿದಳು ಕೆಂಪಿ. ಅಲ್ಲಲ್ಲಾ ಕಲ್ಲಿ. ಇದಪ್ಪಾ ವರಸೆ ಎಂದುಕೊಳ್ಳುತ್ತಲೇ 'ತಡ ಆಗಿದೆ. ಕ್ಯಾಬು ಬುಕ್ ಮಾಡುತ್ತೇನೆ' ಎಂಬ ನೆಪದಲ್ಲಿ ಜಾಗ ಖಾಲಿ ಮಾಡಿ ಅಂಗಳದಲ್ಲಿ ಕ್ಷಣಕಾಲ ನಿಂತು ಸುಧಾರಿಸಿಕೊಂಡೆ.

ಜೋಡಿಸಿಟ್ಟಿದ್ದ ಸಾಮಾನು ಹೊತ್ತು ಸ್ಟುಡಿಯೋ ತಲುಪಿದ್ದಾಗಿತ್ತು. ನನಗ್ಯಾರೂ ಕವಡೆ ಕಾಸಿನ ಕಿಮ್ಮತ್ತೂ ಕೊಡಲಿಲ್ಲ, ಇವಳ ಆಡಂಬರ, ಆರ್ಭಟದ ಮುಂದೆ ಮಾಸಿದ ಸಾದಾ ಬಟ್ಟೆಯ ನರಪೇತಲನನ್ನು ಏನೆಂದು ತಿಳಿದರೋ ಏನೋ; ಊಹಿಸಬೇಡಿ ಪ್ಲೀಸ್. ಒಂದೆಡೆ ಕೂತು ಕಾಯಲು ಹೇಳಿ ಅಂತರ್ಧಾನರಾದವರು ಪ್ರತ್ಯಕ್ಷರಾದದ್ದು ತಾಸಿನ ನಂತರವೇ. ಕಲ್ಲಿಯ ಮೂತಿಗೆ ಮತ್ತೊಂದಷ್ಟು ಟಚಪ್ ಮಾಡಿ ಕೆಲವೊಂದು ಆದೇಶ, ಟೇಕು, ರಿಟೇಕಿನೊಡನೆ ಶೂಟಿಂಗ್ ಮಾಡಿ ಮುಗಿಸಿದ್ದರು.

ಎಲ್ಲವೂ ಸಾಂಗವಾಗಿ ಸಾಗಿ ದೂರದರ್ಶನದಲ್ಲಿ ಪ್ರಸಾರಗೊಂಡ ಕಲ್ಲಿಯ ಅಡುಗೆ ಕಾರ್ಯಕ್ರಮವನ್ನು ನೋಡಿದ ಎಲ್ಲರೂ ಅವಳನ್ನು ಅಭಿನಂದಿಸುವವರೇ! ದೂರದೃಷ್ಟಿಯುಳ್ಳ ನನಗೋ ಕಲ್ಲಿಯ ಮುಂದಿನ ನಡೆ ಬೇಡವಾಗಿತ್ತು. ಅದನ್ನು ಊಹಿಸಿಯೇ ಎದೆ ನಗಾರಿಯಾಗಿ ದಿಗಿಲು ಹೆಚ್ಚಿತ್ತು. 'ಹಾಗಾಗದಿರಲಿ ದೇವರೇ...' ಕಾಣದ ದೇವರಲ್ಲಿ ದೀನನಾಗಿ ಬೇಡಿಕೊಳ್ಳುತ್ತಿದ್ದಾಗ ನನ್ನವಳು ಪ್ರತ್ಯಕ್ಷಳಾದಳು.

"ಏನೂಂದ್ರೆ, ಆ ಇನ್ನೊಂದು ಚಾನಲ್ಲಿನ 'ಕೈಬಳೆ ನಾದ, ಘಮಘಮ ಸ್ವಾದ' ಕಾರ್ಯಕ್ರಮದವರಿಗೂ ನನ್ನ ಬಯೋಡಾಟ, ರೆಸಿಪಿ ಟೈಪಿಸಿ ಕಳಿಸಿಬಿಟ್ಟೆ ಕಣ್ರೀ. ನೋಡಿದ್ರಾ, ಎಷ್ಟು ಚೆನ್ನಾಗಿ ತಯಾರಾಗಿ ನಿಮ್ಮ ಮಾನ ಉಳಿಸ್ದೆ ಅಂತ. ನಿಮಗಂತೂ ನನ್ನ ಬಗ್ಗೆ ಹೆಮ್ಮೆ ಇದ್ದೇ ಇದೆ ಅಂಬೋದು ಗೊತ್ತಿದ್ದದ್ದೇ. ಇನ್ನೂ ಚೆನ್ನಾಗಿ ರೆಡಿಯಾಗಿ ನಿಮ್ಮ ಘನತೇನ ಇನ್ನಷ್ಟು ಹೆಚ್ಚಿಸ್ತೀನಿ ಕಣ್ರೀ. ಚಿಂತೆ ಮಾಡ್ಬೇಡಿ" ಸಂತಸದಿಂದ ಬೀಗುತ್ತಿದ್ದವಳ ಪ್ರವರ ಅವಿರತವಾಗಿ ನಡೆದಿತ್ತು. ಚಿಂತೆ ಇನ್ನಷ್ಟು ಹೆಚ್ಚಿ ಹೆದರಿದ ನನ್ನ ಮುಷ್ಟಿಗಾತ್ರದ ಗುಂಡಿಗೆಗೆ ಹಾಗೂ ಠಣ್ ಠಣ್ ಗೋಪಾಲನಾಗುವ ಲಕ್ಷಣ ತೋರಿದ ಭಯಗೊಂಡ ಜೇಬಿಗೆ 'ಆಲ್ ಈಸ್ ವೆಲ್... ಆಲ್ ಈಸ್ ವೆಲ್' ಎನ್ನುತ್ತಾ ಸಂತೈಸುವ ವ್ಯರ್ಥ ಪ್ರಯತ್ನ ನಡೆಸಿದ್ದೆ, ಬಿಟ್ಟಿ ಸಲಹಿಸಿದ್ದು ದುಬಾರಿಯಾದದ್ದಕ್ಕೆ ನಿತ್ರಾಣನಾಗಿ ಕುಸಿದಿದ್ದೆ.




# ನಿಧಿ ಶೋಧ

**ಲೋಲಾಕ್ಷಿ ಹುಲ್ಕುಳಿ**

**ಬೆ**ಳಿಗ್ಗೆಯ ಎಲ್ಲಾ ಕೆಲಸ ಮುಗಿಸಿದ ಕಮಲಮ್ಮ ಸ್ವಲ್ಪ ಸಮಯ ಕಥೆಪುಸ್ತಕ ಓದಲು ಕುಳಿತುಕೊಂಡರು. ಅದರಲ್ಲಿ ಒಂದು ನಿಧಿಗೋಸ್ಕರ ಹುಡಕಾಟದ ಸನ್ನಿವೇಶವನ್ನು ಓದುತ್ತಿದ್ದ ಅವರ ಮನಸ್ಸು ಅವರ ಬಾಲ್ಯದಲ್ಲಿ ನಡೆದ ಘಟನೆಯ ಕಡೆಗೆ ಹೋಯಿತು.

ಆಗಿನ್ನೂ ನಾನು ತುಂಬಾ ಚಿಕ್ಕವಳು. ನಮ್ಮ ಮನೆ ಸೋಗೇ ಹೊಚ್ಚಿದ ಚಿಕ್ಕ ಮನೆ. ಮನೆಯ ಮುಂದೆ ತುಳಸಿಕಟ್ಟೆ. ಸುಮಾರು ಮೂರು ಅಡಿಯಷ್ಟು ಎತ್ತರದ ಕಲ್ಲಿನ ತುಳಸೀಕಟ್ಟೆ. ತುಂಬಾ ಸುಂದರವಾದ ತುಳಸೀಕಟ್ಟೆ.

ಒಮ್ಮೆ ಸೋಮವಾರ ಸಂತೆ ಅಮ್ಮನವರ ಪಲ್ಲಕ್ಕಿ ನಮ್ಮ ಮನೆಗೆ ಬಂದಿತ್ತು. ಬಂದಿದ್ದು ಸೀದಾ ತುಳಸೀ ಕಟ್ಟೆಯನ್ನು ತುಂಬಾ ಸಾರಿ ಸುತ್ತುವರಿದು ಪಲ್ಲಕ್ಕಿಯನ್ನು ತುಳಸೀಕಟ್ಟೆಗೆ ತಾಗಿಸಿ ನಿಂತುಕೊಂಡಿತು. ಯಾರ ಮನೆಯಲ್ಲೂ ಆ ರೀತಿ ಮಾಡಿರಲಿಲ್ಲ ಎಂದು ಜೊತೆಯಲ್ಲಿ ಬಂದ ಜನ ಮಾತನಾಡಿ ತುಳಸಿಕಟ್ಟೆ ಇದ್ದಲ್ಲಿ ನಿಧಿ ಇದೆ, ಅದನ್ನು ತೋರಿಸುತ್ತದೆ ಎಂದರು. ಆದರೆ ಮನೆಯಲ್ಲಿ ಯಾರೂ ಅದರ ಬಗ್ಗೆ ಏನೂ ಹೇಳಲಿಲ್ಲ. ಮನೆಗೆ ಬಂದ ಅಮ್ಮನಿಗೆ ಪೂಜೆ ಸಲ್ಲಿಸಿ ಕಳಿಸಿಕೊಟ್ಟರು.



ಆಮೇಲೆ ಒಂದು ವರ್ಷಕ್ಕೆ ನಮ್ಮ ತಂದೆಯವರು ಮುಚ್ಚಿಗೆ ಇರುವ ದೊಡ್ಡದಾದ ಹೆಂಚಿನ ಮನೆಯನ್ನು ಕಟ್ಟಿಸಿ ಗೃಹಪ್ರವೇಶ ಮಾಡಿದರು. ತುಳಸಿಕಟ್ಟೆಯೂ ಹೊಸ ಮನೆಗೆ ಶಿಫ್ಟ್ ಆಯಿತು. ಹಾಗೆಯೇ ಇರಬೇಕಾದರೆ ನನ್ನ ಅಣ್ಣಂದಿರಿಗೆ ಅಮ್ಮನವರ ಪಲ್ಲಕ್ಕಿ ಬಂದಿದ್ದು, ತುಳಸೀಕಟ್ಟೆ ಸುತ್ತುವರೆದಿದ್ದು, ಜನ ನಿಧಿ ತೋರಿಸುತ್ತದೆ ಎಂದಿದ್ದು ಎಲ್ಲಾ ಮನಸ್ಸಿನೊಳಗೆ ಇತ್ತು. ಅವರು ನಿಧಿಯ ಶೋಧಕ್ಕೆ ಹಾರೆ ಗುದ್ದಲಿ ಪಿಕಾಸಿ ಎಲ್ಲಾ ಹಿಡಿದು ಹಳೆ ಮನೆಯ ತುಳಸಿಕಟ್ಟೆ ಇದ್ದ ಜಾಗದಲ್ಲಿ ಅಗೆಯಲು ಪ್ರಾರಂಭಿಸಿದರು. ಸುಮಾರು ಒಂದೂವರೆ ಅಡಿಯಷ್ಟು ಅಗೆದಾಗ ಒಂದು ಚಿಕ್ಕದಾದ ತಾಮ್ರದ ಕರಡಿಗೆ ಸಿಕ್ಕಿತು. ಅಣ್ಣಂದಿರು 'ಅಮ್ಮನವರು ಹೇಳಿದ್ದು ನಿಜವಾಯಿತು. ಇದರಲ್ಲಿ ಏನು ಇದೆ ನೋಡೋಣ' ಎಂದು ಕರಡಿಗೆಯ ಮುಚ್ಚಳ ತೆಗೆಯಲು ಪ್ರಾರಂಭಿಸಿದರು. ತಾಮ್ರದ ಡಬ್ಬಿ ಕಿಲುಬು ಹಿಡಿದಿದ್ದರಿಂದ ಬೇಗ ತೆಗೆಯಲು

ಬರಲಿಲ್ಲ. ಅಂತೂ ಮುಚ್ಚಳವನ್ನು ಕಷ್ಟಪಟ್ಟು ತೆಗೆದಾಗ ಅದರಲ್ಲಿ ಒಂದೆರಡು ಬೆಳ್ಳಿ ಚೂರು, ಸಪೂರದ ಚಿಕ್ಕದಾದ ಚಿನ್ನದ ಸರಿಗೆ, ಒಂದಷ್ಟು ಹಳೇ ಕಾಲದ ನಾಣ್ಯಗಳು ಇದ್ದವು. 'ನಿಧಿಯಾದರೆ ತುಂಬಾ ಸಿಗಬೇಕಿತ್ತಲ್ವಾ! ಇಷ್ಟೇನಾ?' ಅಂತ ಅಣ್ಣಂದಿರು ಮಾತನಾಡಿಕೊಂಡು ಇನ್ನೂ ಆಳದಲ್ಲಿ ಇರಬಹುದೇನೋ ಅಂತ ಪುನಃ ಅಗೆಯಲು ಅಗೆಯಲು ಪ್ರಾರಂಭಿಸಿದರು. ಆದರೆ ನಾಲ್ಕು ಅಡಿ ಅಗೆದರೂ ಏನೂ ಸಿಗಲಿಲ್ಲ. ಅಷ್ಟು ಹೊತ್ತಿಗೆ ಅಮ್ಮ ಅಪ್ಪ ಇಬ್ಬರೂ ಮಕ್ಕಳು ಏನು ಮಾಡುತ್ತಿದ್ದಾರೆ ಎಂದು ನೋಡಲು ಬಂದರು. 'ಏನು ಮಾಡುತ್ತಿದ್ದೀರಿ? ಯಾಕೆ ಹೊಂಡ ತೋಡಿದ್ದು?' ಎಂದು ಕೇಳಿದಾಗ, 'ಅಮ್ಮನವರ ಪಲ್ಲಕ್ಕಿ ಇಲ್ಲಿ ನಿಧಿ ಇದೆ ಎಂದು ತೋರಿಸಿತ್ತಲ್ಲ, ಅದಕ್ಕಾಗಿ ಇಲ್ಲಿ ಅಗೆದದ್ದು' ಎಂದು ಹೇಳಿ ತಮಗೆ ಸಿಕ್ಕಿದ ತಾಮ್ರದ ಕರಡಿಗೆಯನ್ನು ಕೊಟ್ಟರು. ಅದನ್ನು ನೋಡಿದ ನಮ್ಮ ತಂದೆ, 'ಇದು ಆ ತುಳಸಿಕಟ್ಟೆಯನ್ನು ಪ್ರತಿಷ್ಠೆ ಮಾಡುವಾಗ ಅದರ ಕೆಳಗೆ ಚಿನ್ನ ಬೆಳ್ಳಿ ಮತ್ತು ನಾಣ್ಯಗಳನ್ನು ಹಾಕಿ ಪ್ರತಿಷ್ಠೆ ಮಾಡಿದ್ದಾರೆ. ಅದೇ ನಿಮಗೆ ಸಿಕ್ಕಿದ್ದು. ಯಾವ ನಿಧಿಯೂ ಇಲ್ಲ. ಹೊಂಡ ಮುಚ್ಚಿ ಕೈಕಾಲು ತೊಳೆದು ಸುಮ್ಮನೆ ಮನೆಗೆ ಬನ್ನಿ. ಊಟದ ಸಮಯ ಆಯಿತು' ಎಂದು ಹೇಳಿ ಆ ತಾಮ್ರದ ಕರಡಿಗೆಯನ್ನು ಹೊಸ ಮನೆಯಲ್ಲಿ ಪ್ರತಿಷ್ಠೆ ಮಾಡಿದ ತುಳಸೀಕಟ್ಟೆಯ ಬುಡದಲ್ಲಿ ಅಗೆದು ಅದನ್ನು ಅಲ್ಲಿ ಹೂತರು. ಇದು ನಡೆದು ತುಂಬಾ ವರ್ಷಗಳಾದರೂ ಆ ನೆನಪು ಮಾತ್ರ ನಾನು ಮರೆತಿಲ್ಲ.



# ಗೋರಿ ಗೀತೆಗಳು

**ಅಣಕು ರಾಮನಾಥ್**

**ಆ**ಂಗ್ಲದವರದು ಒಂದು ದೊಡ್ಡ ಗುಣವಿದೆ. ಅವರು ಹಾಸ್ಯವನ್ನು ಸತ್ತರೂ ಬಿಡಲ್ಲ ಎನ್ನುವುದಕ್ಕೆ ಅವರಲ್ಲಿರುವ ಎಪಿಟಾಫ್‌ಗಳೇ ಸಾಕ್ಷಿ. ಗೋರಿಯ ಮೇಲೆ ವ್ಯಕ್ತಿಯ ಬಗ್ಗೆ ಕೊರೆದ ಕೊನೆಯ ಸಾಲುಗಳಲ್ಲಿ ಅಪಾರವಾದ, ಮನಮುಟ್ಟುವಂತಹ, ಮನಮಿಡಿಯುವಂತಹ ಹಾಸ್ಯ, ವಿಡಂಬನೆಗಳಿರುತ್ತವೆ. ಕನ್ನಡದಲ್ಲಿ ಇವು ವಿರಳ. ಇದೋ ನಿಮಗಾಗಿ ಒಂದಷ್ಟು ಗೋರಿಗೀತೆಗಳು.

**ಅಬಾರ್ಷನ್ ವೈದ್ಯಳ ಗೋರಿಯ ಮೇಲೆ:**

ಹೆಣ್ಣಿನ ಭ್ರೂಣವ ಹೊಸಕುತ ದಿನವು
ಹೆಣ್ಣಿನ ಕುಲಕೇ ಕಂಟಕವಾದಳು
ಮಣ್ಣಲಿ ಮಲಗಿಹಳಬಾರ್ಶನಿ
ಸಲ್ಲಿಸದಿರಿ ನೀವ್ ಕಂಬನಿ

**ಆಟೋ ಚಾಲಕನ ಗೋರಿಯ ಮೇಲೆ:**

ಅಡ್ಡಂ ತಿಡ್ಡಂ ದುಡುದುಡು ಓಟಂ
ತಿಟ್ಟಂ ಕೊಳ್ಳಂ ಹಾರಿಸುವಾಟಂ
ಆಟೋ ಬಿಟ್ಟೂ ಅದೆ ಒಡ್ಡಾಟಂ
ದುಢುಂ ಗೋರಿಯ ಹಳ್ಳಕೆ ಸೇರ್ದಂ
ಆದೊಡೆ ಮನದೊಳ್ ಒಂದೇ ವ್ಯಸನಂ –
ಕಡೆ ಸವಾರಿಯೊಳ್ ಡಬಲ್ ಮೀಟ್ರ್ ಇಲ್ಲಂ!

**ಇಂಗ್ಲಿಷ್ ಟೀಚರ್ ಗೋರಿಯ ಮೇಲೆ:**

ಮಿಲ್ಟನ್ ಶೆಲ್ಲಿ ಮಿಲ್ಕ್‌ಶೇಕ್ ಮಾಡಿ
ಶೆಲ್ಡನ್ ಶೇಕ್ಸ್‌ಪಿಯರ್ ಶಾಂಪೇನ್ ಕುಡಿಸಿ
ಷಲ್ಲಲಿ ಡಬಲೆಲ್ ವಿಲ್ಲಲಿ ಡಬಲೆಲ್ ಎಂದವ
ರಿಲ್ಲವು; ಪ್ಯಾಸಿವ್ ವಾಯ್ಸೇ ಇವರದು ಇನ್ನೆಂದೂ

**ಗಾಯಕನ ಗೋರಿಯ ಮೇಲೆ:**

ಮೆಲ್ಲಮೆಲ್ಲಗೆ ಹೆಜ್ಜೆಯಿರಿಸಿರಿ
ಮಲಗಿಹನು ಗಾಯಕನು ಇಲ್ಲಿ
ಸಪ್ಪಳಕೆ ಎಚ್ಚರವು ಆದರೆ
ಅಪ್ಪಳಿಸುವ ದನಿಯಲಿ ಪಾಡ್ವನು
ಮಸಣದಲ್ಲಿಹ ಎಲ್ಲ ಶವಗಳು ಎದ್ದು ಕೂಡುವುವು



**ಛಂದೋಬದ್ಧ ಕವಿಯ ಗೋರಿಯ ಮೇಲೆ:**

ಚಂದದಿ ಕಂದವ ಸೀಸವ ಬೋಧಿಸಿ
ಛಂದದಿ ಲಘುಗುರು ಪ್ರಾಸವ ಜೋಡಿಪ
ಛಂದದ ಕವಿಯದು ಜೀವನ ಪಥದೊಳು
ಮಂದಾಕ್ರಾಂತದಿ ಶಾರ್ದೂಲದ ಮುಂದಿನ ರಗಳೆ

**ವ್ಯಾಕರಣ ಮೇಷ್ಟ್ರ ಗೋರಿಯ ಮೇಲೆ:**


ಅಕ್ಕರೆ ಇಲ್ಲದ ಕನ್ನಡ ಜನತೆಗೆ
ಅಕ್ಕರ ಕಲಿಸುವ ಹುಚ್ಚಿಗೆ ಸಿಲುಕಿ
ಕುಕ್ಕರುಬಡಿದರು ಬಸವಳಿದು
ಸವರ್ಣ ದೀರ್ಘದ ಗುಂಗಿನೊಳಿದ್ದು
ಸುವರ್ಣ ಹೊಂದುವ ಗುಣವನೆ ಮರೆತು
ನಾರಾ ಯಣ್ ಎನುತ ಕಂತೆಯ ಒಗೆದರು

**ಸಾಫ್ಟ್‌ವೇರ್ ಇಂಜಿನಿಯರ್‌ನ ಗೋರಿಯ ಮೇಲೆ:**

ಲ್ಯಾಪ್ ಟಾಪೇ ನನ್ನ ತಾಯಿತಂದೆ
ಲ್ಯಾಪ್ ಟಾಪೇ ನನ್ನ ಬಂಧುಬಳಗ
ಲ್ಯಾಪುಟಾಪನು ತಪ್ಪಿ ಮರೆತರೆ ಮೆಚ್ಚನಾ ಟೀಂ ಹೆಡ್ಡನು
ಲ್ಯಾಪ್ ಟಾಪೇ ಪರಮಾತ್ಮನೆಂಬ ಸಾ.ವೇ.ಇಂ.ನ ಕಥೆಯಿದು
ಲ್ಯಾಪು ಆಯಿತು ಧರೆಯು ಇವನಿಗೆ
ಟಾಪು ಆಯಿತು ಕಲ್ಲು ಚಪ್ಪಡಿ
ಪ್ರಾಪರ್ ಪ್ಲೆಷರಿನ ಫೈಲು ತೆಗೆಯದೆ
ಲೈಫು ಕ್ಲೋಸ್ ಆಗ್ಹೋಯಿತು
ಲೈಫೆಲ್ಲ ಫೈಲಲ್ಲೆ ಕಳೆದ ಸಾ.ವೇ.ಇಂ.ನ ಗೋರಿಯಿದು

**ಟ್ರಕ್ ಡ್ರೈವರ್‌ನ ಗೋರಿಯ ಮೇಲೆ:**

ಸಾಗುತ ದೂರ ದೂರ ನೀ
ಹಾಕಿದೆ ಗುಂಡನು ಪೂರಾ
ಟ್ರಕ್ ಚಲಿಸಿತು ಹಾವಿನ ವಕ್ರ
ಢಕ್ಕನೆ ಸಾವಿನ ದ್ವಾರ



**ಸಾಮಾನ್ಯ ವೈದ್ಯನ ಗೋರಿಯ ಮೇಲೆ:**

ಬಂದ ರೋಗಿಗಳೆಲ್ಲ ರೋಗವ
ಅಂದೆ ಗುಣಪಡಿಸುವೆನೆಂದ ವೈದ್ಯನು

ಸಂದ ವಿವಿಧಿಂಫೆಕ್ಷನಿಗೆ ಬಲಿಯಾಗಿ ಸೇರಿಹನಿಲ್ಲಿಗೆ.
ಉಳಿದುಹೋದರೈ ಊರ ಜನಗಳು
ಗುಳಿಗೆಗೊಂದು ಗಂಡಾಂತರ ತಪ್ಪಿ
ಸುಳಿಯದಿನ್ನು ಸಾವು ಸನಿಹ ವಾರವಾರವು ಊರಿಗೆ

**ನೇತ್ರವೈದ್ಯನ ಗೋರಿಯ ಮೇಲೆ:**

ಎಲ್ಲರದು ಕಣ್ತೆರೆಸಿ ತೊಟ್ಟುಗಳ ಸುರಿದವನು
ಇಲ್ಲಿ ತಾ ಕಣ್ಮುಚ್ಚಿ ಪವಡಿಸಿಹನು
ಇಲ್ಲ ಲೆನ್ಸ್ ಹುಡುಕಾಟ, ಕನ್ನಡಕದೊಡನಾಟ
ಇಲ್ಲಿಹುದೊಂದೇ ಲೆನ್ಸು; ಅದುವೇ ಸೈಲೆನ್ಸು.

**ಸರ್ಜನ್‌ನ ಗೋರಿಯ ಮೇಲೆ:**

ಆಪರೇಷನಿನ ಗಂಧವೆ ಇಲ್ಲದೆ
ಪಾಪದ ರೋಗಿಯ ಕೊಯ್ಯುತಲಿದ್ದನೊ
ಕೂಪದಿನೇಳದ ರೀತಿಯು ಸುತ್ತಲು
ಜಪ್ಪಿಸಿ ಗೋರಿಗೆ ಹೊಲಿಗೆಯ ಹಾಕಿಹೆವು

**ಕಾರ್ಪೆಂಟರ್‌ನ ಗೋರಿಯ ಮೇಲೆ:**

ಯೋಗದಿ ಪ್ರಾಣಾಯಾಮವ ಮಾಡಲು
ಮೂಗನು ಪಿಡಿದನು ಬೆರಳುಗಳೊಳ್
ಬೆರಳುಗಳವುವೋ ಫೆವಿಕಾಲ್ ಮಯವು
ಬೆರಳಿನ ಹಿಡಿತದಿ ನಾಸಿಕ ಸಿಲುಕಿ
ಹೊರಟು ಹೋದ ಬಡಪಾಯಿ ಬಡಗಿ

**ಲಂಚಗುಳಿ ನೌಕರನ ಗೋರಿಯ ಮೇಲೆ:**

ಎಷ್ಟು ಯತ್ನವನು ಮಾಡಿದರೇನು
ಹುಟ್ಟುಗುಣವದು ಹೋಗುವುದೇನು
ಇಟ್ಟರು ದೇಹವ ಗೋರಿಯ ಒಳಗಡೆ
ನೆಟ್ಟನೆ ಚಾಚಿಹುದೈ ಕೈ ಹೊರಗೇ
ಸುಟ್ಟರು ಹೋಗದು ಲಂಚದ ಗುಣವು.

**ರಾಜಕಾರಣಿಯ ಗೋರಿಯ ಮೇಲೆ:**

ಡ್ರಮ್ಮಾಗಿಹ ದೇಹ ಹೊತ್ತು
ಸ್ಲಿಮ್ಮಾಗುವ ಆಶೆ ಬಿಟ್ಟು
ಸ್ಲಮ್ಮಲ್ಲಿನ ಜನರ ಪಿಡಿದು
ಸುಮ್ಮಾನದಿ ಮೆರೆದನೋ/ಳೋ






ಹಮ್ಮು ಬಿಮ್ಮು ಇದ್ದರೇನು
ಸೊಮ್ಮು ಎಮ್ಮ ಕಾವುದೇನು
ಘುಮ್ಮೆಂದು ಬಿದ್ದನೊ/ಳೊಮ್ಮೆ
ಡ್ರಮ್ಮು ಢಂ ಢಮಾರ್

**ಶ್ರೀಸಾಮಾನ್ಯನ ಗೋರಿಯ ಮೇಲೆ:**

ತೆರಿಗೆಯ ತೇರಿನ ಚಕ್ರಕೆ ಸಿಲುಕಿ
ತರತರ ಆಶ್ವಾಸನೆಯಿಂ ನಲುಗಿ
ಬರ ನೆರೆ ನೆರೆಹೊರೆ ಲಂಚಕೆ ಕರಗಿ
ಮರಣಿಸಿ ಪಡೆದನು ನೆಮ್ಮದಿ ಮನದಿ

**ಕೆಮಿಸ್ಟ್ರಿ ಟೀಚರ್ ಗೋರಿಯ ಮೇಲೆ:**

ಎನಿತೆನಿತೊ ಕೆಮಿಕಲ್ಸ ಸೇರಿಸುತ ಲ್ಯಾಬಿನಲಿ
ಅನಿತನಿತು ಹೊಸ ಸಮೀಕರಣಗಳ ಅರಿತವಗೆ
ಮನೆಯಲ್ಲಿ ಸತಿಯೊಡನೆ ಸ್ಫೋಟವೋ ಸ್ಫೋಟವೈ
ಕೊನೆಗೆ ಮಿಕ್ಸ್‌ಚರಿಂ ಬೇರ್ಪಟ್ಟ ಕೆಮಿಕಲಾದನ್

**ಕಂಟ್ರಾಕ್ಟರನ ಗೋರಿಯ ಮೇಲಲ್ಲ, ಗೋರಿಯ ಬಳಿ:**

ಎಚ್ಚರ! ದೊಡ್ಡವರಿರಲಿ, ಮಕ್ಕಳ ಕೈಯಿಂದಲೂ ಮುಟ್ಟಿಸಬೇಡಿರಿ. ದೂರ ನಿಲ್ಲಿರಿ. ಈ ಗೋರಿ ಇದೇ ಕಂಟ್ರಾಕ್ಟರನ ಮೇಸ್ತ್ರಿ ಕಟ್ಟಿದುದಾದ್ದರಿಂದ ಯಾವುದೇ ಕ್ಷಣದಲ್ಲಿ ಕುಸಿಯಬಹುದು.

**ವಕೀಲನ ಗೋರಿಯ ಮೇಲೆ:**

ಏನೇ ಯತ್ನಿಸಿದರೂ ಸಾವಿನ ದಿನಕ್ಕೆ
ಅಡ್ಜರ್ನ್‌ಮೆಂಟ್ ಪಡೆಯಲಾಗಲಿಲ್ಲ.
ಕೇಸ್ ಕ್ಲೋಸ್

**ಚುಟುಕು ಕವಿಯ ಗೋರಿಯ ಮೇಲೆ:**

ಇದ್ದೆ
ಸತ್ತಿದ್ದೆ
ಹೋದೆ
ಗೆದ್ದೆ

**ದಂತವೈದ್ಯನ ಗೋರಿಯ ಮೇಲೆ:**

ಆತ ತುಂಬಿದ ಕಟ್ಟಕಡೆಯ ಕುಳಿ ಇದು.

**ಮಾಜಿ ಪ್ರಧಾನಿಯ ಗೋರಿಯ ಮೇಲೆ:**

ಮಲಗಿಹರಿಲ್ಲಿ ಮಾಜಿ ಪ್ರಧಾನಿ – ಎಂದಿನಂತೆಯೇ.

# ಇನ್ನು ಒಂದೇ ವಾರ

ಬೇಲೂರು ರಾಮಮೂರ್ತಿ

**ಒ**ಂದೊಂದ್ಸಾರಿ ಸೋಮಿ ಆಫೀಸಿನಲ್ಲಿರೋ ಸೋಮುಗೆ ಫೋನ್ ಮಾಡಿದಾಗ ಅವನು ಅಕಸ್ಮಾತ್ ಸಾಹೇಬರ ಕೋಣೆಲಿ ಇದ್ದರೆ ನಾನು ಆಮೇಲೆ ಮಾತಾಡ್ತೀನಿ ಅಂದು ಬಿಡ್ತಾನೆ. ಆದರೆ ಕರೆಕಟ್ ಮಾಡಿರಲ್ಲ. ಹೀಗಾಗಿ ಸಾಹೇಬರಿಗೂ ಸೋಮುಗೂ ನಡೆಯುವ ಸಂಭಾಷಣೆಗಳು ಅವಳಿಗೆ ಕೇಳಿಸುತ್ತಿರುತ್ತದೆ. ಏನಾದರೂ ಸ್ವಾರಸ್ಯಇದ್ದರೆ ಸೋಮು ಮನೆಗೆ ಬಂದ ಮೇಲೆ ಇವತ್ತೇನು ತಾವು ಸಾಹೇಬರ ಹತ್ರ ಬೆಂಡೆತ್ತಿಸಿಕೊಂಡ ಹಾಗಿದೆ ಅಂದು ಅವನನ್ನು ರೇಗಿಸುತ್ತಾಳೆ. ಹೀಗೊಂದು ದಿನ ಸೋಮಿ ಫೋನ್ ಮಾಡಿದಳು. ಸೋಮು ರಿಸೀವ್ ಮಾಡಿದಆದರೆ ಮಾತೂ ಆಡಲಿಲ್ಲ ಕರೆನೂಕಟ್ ಮಾಡಲಿಲ್ಲ. ಅವತ್ತೂ ಸೋಮಿ ಅವರಿಬ್ಬರ ಸಂಭಾಷಣೆ ಕೇಳಿಸಿಕೊಂಡಳು. ಸಾಹೇಬರು ಹೇಳ್ತಿದ್ರು ನೀವು ಇರೋದು ಇನ್ನು ಒಂದೇ ವಾರ ಅಂತ ನಿಮಗೆ ಗೊತ್ತಿದೆಯೇನ್ರೀ. ಅಷ್ಟರೊಳಗೆ ಎಲ್ಲ ಕೆಲಸ ಮುಗಿದಿರಬೇಕು. ಅದ್ಸರಿ ನೀವು ಇನ್ನು ಒಂದೇ ವಾರ ಇರೋದು ಅಂತ ಸೋಮಿಗೆ ಹೇಳಿದೀರ ಅಂತ ಕೇಳಿದರು. ಅದಕ್ಕೆ ಸೋಮು ಇನ್ನೂಇಲ್ಲ ಸರ್, ಹೇಳಿದರೆ ಅವಳಿಗೆ ವಿಪರೀತ ಗಾಬರಿಯಾಗುತ್ತೆ ಅಂದ. ಆದರೂ ಇವತ್ತಲ್ಲ ನಾಳೆ ಅವಳಿಗೆ ಗೊತ್ತಾಗಲೇ ಬೇಕಲ್ವೇನ್ರೀ. ಇವತ್ತು ಮನೆಗೆ ಹೋದ ತಕ್ಷಣ ಹೇಳಿಬಿಡಿ. ಪಾಪ ಅವರೂ ಸಿದ್ಧವಾಗಿರ್ತಾರೆ. ಇಲ್ಲದಿದ್ದರೆ ಕಡೇ ಕ್ಷಣದಲ್ಲಿ ಅವರಿಗೆ ವಿಚಾರ ತಿಳಿದರೆ ತುಂಬಾ ಗಾಬರಿಯಾಗಬಹುದು. ನಿಮ್ಮನೆ ಕಡೆಯವರಿಗೋ ಇಲ್ಲಾ ಅವರ ಮನೆ ಕಡೆಯವರಿಗೋ ಹೇಳಬೇಕಾದರೆ ಮೊದಲೇವಿಚಾರ ತಿಳಿದಿರಬೇಕಲ್ವಾ ಅಂದರು ಸಾಹೇಬರು.ಸೋಮು ಮಾತಿಲ್ಲ. ಕಿವಿಗೆ ಮೊಬೈಲ್ ಇಟ್ಟುಕೊಂಡಿದ್ದ ಸೋಮಿ ಮೊಬೈಲ್ ಸಮೇತ ನೆಲದ ಮೇಲೆ ಉರುಳಿದಳು. ಏನೂ ಇವರು ಇರೋದು ಇನ್ನು ಒಂದೇ ವಾರನಾ, ಅಂಥಾ ಕಾಹಿಲೆ ಇವರಿಗೆ ಏನು ಬಂದಿದೆ. ಯಾಕೆ ನನ್ನತ್ರ ಎಲ್ಲಾನೂ ಮುಚ್ಚಿಟ್ಟಿದ್ದಾರೆ. ಮುಂದೆ ನನ್ನ ಗತಿ ಏನಪ್ಪಾ ಅನಿಸಿ ಅಳು ಬಂತು. ಮನೇಲಿ ಒಬ್ಬಳೇ ಇರೋದು. ಚನ್ನಾಗಿ ಅತ್ತಳು. ನಂತರ ಇರೋದು ಒಂದೇ ದಾರಿ ಅಂತ ಅಮ್ಮನಿಗೆ ಫೋನ್ ಮಾಡಿದಳು. ಮಾತಿಗೆ ಮುಂಚೆ ಅಳು ಬಂದಿದ್ದರಿಂದ ಅಮ್ಮ ಗಾಬರಿಯಾದರು. ಏನಾಯ್ತೇ ಸೋಮಿ ಯಾಕೆ ಗಾಬರಿಯಾಗಿದೀಯ, ಅಳ್ತಾನೂ ಇರೋ ಹಾಗಿದೆ.ಅಳಿಯಂದಿರು ಹುಷಾರಾಗಿದಾರೆ ತಾನೇ ಅಂತ ಆತಂಕದಿಂದ ಕೇಳಿದರು. ಅಮ್ಮಾ ನಿನ್ನ ಮಗಳ ಜೀವನ ಮುಗಿದು ಹೋಯ್ತುಮ್ಮಾ, ನಿಮ್ಮ ಮಗಳನ್ನೇ ನೀನು ಹಾಗೆ ನೋಡೋ ದಿನ ಬರುತ್ತಾ ಇದೆ ಅಂದು ತಾನು ಕೇಳಿಸಿಕೊಂಡ ಸಂಭಾಷಣೆಯನ್ನು ಅಮ್ಮನಿಗೆ ತಿಳಿಸಿದಳು. ಅಮ್ಮನೂ ಗಾಬರಿಯಿಂದ ಅಯ್ಯೋ ಹೌದೇನೇ, ಇದೇನಾಗೋಯ್ತೇ, ನಾನೂ ನಿನ್ನಪ್ಪನೂ ಈಗಿಂದೀಗಲೇ ಹೊರಟು ಬರ್ತೀವಿ, ಹುಷಾರು. ಇನ್ನೂ ಒಂದು ವಾರ ಇದೆಯಲ್ಲ, ಅಷ್ಟರಲ್ಲಿ ಏನು ಬೇಕಾದರೂ ಆಗಬಹುದು. ನೀನು ಗಾಬರಿಯಾಗಬೇಡ. ಅಳಿಯಂದಿರು ನಿನ್ನಿಂದ ಮುಚ್ಚಿಟ್ಟ ವಿಚಾರ ನಿನಗೆ ಹೇಗೋ ಗೊತ್ತಾಗಿದೆ ಅನ್ನೋ ವಿಚಾರ ಅಳಿಯಂದಿರಿಗೆ ಗೊತ್ತಾಗೋದು ಬೇಡ. ನಮಗೆ ಏನೂ ಗೊತ್ತಿಲ್ಲ ಅನ್ನುವಂತೆಯೇ ಇರೋಣ. ನೀನು ಒಂದ್ಕೆಲಸ ಮಾಡು ಮನೆಯಲ್ಲಿ ಯಾವುದಾದರೂ ಲ್ಯಾಬ್ ರಿಪೋರ್ಟ್ ಇದೆಯಾ ನೋಡು. ನಿಮ್ಮ ಫ್ಯಾಮಿಲಿ ಡಾಕ್ಟರ ಹತ್ರ ಹೋಗಿ ವಿಚಾರಿಸು ಅಂದು ಸಲಹೆ ನೀಡಿದರು.



ಸೋಮಿ ತಕ್ಷಣ ತನ್ನನ್ನು ತಾನು ಸುಧಾರಿಸಿಕೊಂಡು ಡಾಕ್ಟರ್ ವಿಕ್ರಮ್ ಕ್ಲಿನಿಕ್‌ಗೆ ಹೋದಳು. ಡಾಕ್ಟ್ರೇ ನಮ್ಮೆಜಮಾನರು ನಿಮ್ಮತ್ರ ಪರೀಕ್ಷೆಗೆ ಬಂದಿದ್ರಾ ನೀವು ಅವರನ್ನು ಎಲ್ಲಿಗಾದರೂ ರೆಫರ್ ಮಾಡಿದ್ರಾ ಅಂತ ಕೇಳಿದಳು. ಇಲ್ವಲ್ಲಮ್ಮ, ಸೋಮು ಹುಷಾರಾಗಿದಾರಲ್ಲ. ಈಗೊಂದು ಆರು ತಿಂಗಳ ಹಿಂದೆ ನೀವಿಬ್ಬರೂ ಬಂದಿದ್ದು ಅಷ್ಟೆ. ಆಮೇಲೆ ನೀವಿಬ್ಬರೂ ನನ್ನ ಕ್ಲಿನಿಕ್ ಕಡೆತಲೆ ಹಾಕಿಲ್ಲ. ಹೀಗೆ ಮಾಡಿದರೆ ನಾವು ಬದುಕೋದಾದರೂ ಹೇಗೆ. ನಾನೇ ಸೋಮುಗೆ ತಿಂಗಳಿಗೊಂದು ಸಾರಿ ಬಂದು ಕಾಹಿಲೆ ಇದೆಂಯೋ ಇಲ್ಲವೋ ಪರೀಕ್ಷೆ ಮಾಡಿಸಿಕೊಂಡು ಫೀಸ್‌ಕೊಟ್ಟು ಹೋಗಿ ಅಂತ ಹೇಳಿದ್ದೆ ಅಂದರು. ಅಜ್ಜಿಗೆ ಅರಿವೆಚಿಂತೆ ಆದರೆ ಮೊಮ್ಮಗಳಿಗೆ ಮಿಂಡನ ಚಿಂತೆ ಅಂತೆ. ನಂತರ ಸೋಮಿ ನೀವು ಅವರನ್ನು ಯಾವುದಾದರೂ ಲ್ಯಾಬ್‌ಗೆರೆಫರ್ ಮಾಡಿದ್ರಾ ಅಂತ ಕೇಳಿದಳು. ಅಲ್ಲಮ್ಮಾ ಸಮಸ್ಯೆನೇ ಏನೂ ಇಲ್ಲ ಅಂದ ಮೇಲೆ ಎಲ್ಲಿಗೇಂತ ರೆಫರ್ ಮಾಡೋದು. ಯಾಕೋ ನೀವು ಇವತ್ತು ಬಹಳ ಗಾಬರಿಯಾಗಿದೀರ. ಏನು ವಿಷಯ ಸರಿಯಾಗಿ ಹೇಳಿ ಅಂದು ಕೇಳಿದರು. ಈಯಪ್ಪನ ಹತ್ರ ಮಾತೇನು ಅಂತ ಸೋಮಿ ಮನೆಗೆ ಬರೋದಾರಿಯಲ್ಲಿ ಮೆಡಿಕಲ್ ಷಾಪ್‌ಗೆ ಹೋಗಿ ನಮ್ಮೆಜಮಾನರು ಈಚೆಗೆ ಯಾವುದಾದರೂ ಔಷಧಿತಗೊಂಡ್ರಾ ಅಂತ ಕೇಳಿದಳು. ಇಲ್ಲಮ್ಮಾ ಅವರು ಬಂದೇ ಇಲ್ಲ ಅಂದರು.




ಸೋಮು ಎಂದಿನಂತೆ ಮನೆಗೆ ಬಂದ. ಖುಷಿಖುಷಿಯಾಗಿದ್ದ. ಸೋಮಿನ ಚುಡಾಯಿಸಿದ. ಕೆನ್ನೆ ಹಿಂಡಿದ. ಸೊಂಟಚಿವುಟಿದ, ನಕ್ಕ. ಇವತ್ತು ಎಲ್ಲಾದರೂ ಹೊರಗಡೆ ಹೋಗಿ ಊಟ ಮಾಡಿಕೊಂಡು ಬರೋಣ್ವಾ ಅಂತ ಕೇಳಿದ. ಸೋಮಿಗೆ ಯಾವುದರಲ್ಲೂ ಆಸಕ್ತಿ ಇರಲೇಇಲ್ಲ. ಈ ನನ್ನ ಗುಲಾಬಿ ಯಾಕೆ ಇವತ್ತು ಬಾಡಿದಂತಿದೆ ಅಂದ. ಸೋಮಿಗೆ ಆಗ ದೀಪ ಇನ್ನೇನು ಆರಿ ಹೋಗುತ್ತೆ ಅನ್ನುವಾಗ ಜೋರಾಗಿ ಉರಿಯುತ್ತಂತೆ ಅನಿಸಿ ಅಳುವೇ ಬಂತು. ಸೋಮು ಎದೆಗೆ ಮೃದುವಾಗಿ ಗುದ್ದಿ ರೀ ನೀವು ನನ್ನಿಂದ ಏನೋ ಮುಚ್ಚಿಟ್ಟಿದ್ದೀರ ಅದೇನೂಂತ ಹೇಳಿ ಅಂದಳು. ಸೋಮು ನಕ್ಕು ಅಲ್ವೇ ನಾನು ಎಷ್ಟೇ ಬುದ್ಧಿವಂತಿಕೆಯಿಂದ ಮುಚ್ಚಿಟ್ರೂ ನೀನು ಅದನ್ನು ಪತ್ತೆ ಮಾಡ್ತೀಯ. ಅಂದ್ಮೇಲೆ ನಾನು ಮುಚ್ಚಿಡೋದೇನು ಅಂದ. ರೀತಮಾಷೆ ಮಾತು ಬೇಡ. ನಿಜ ಹೇಳಿ ನನ್ನಿಂದ ಏನು ಮುಚ್ಚಿಟ್ಟಿದೀರ ಅಂತ. ನೀವು ಹೇಳ್ತೀರೋ ಇಲ್ಲಾ ನಾನೇ ಹೇಳ್ಲೋ ಅಂದಳು. ಸೋಮು ತುಸು ಗಾಬರಿಯಾಗಿ ಅದೇನು ಹೇಳೋಂಥದ್ದೇನೆ. ಒಂದು ವಾರದಲ್ಲಿ ಅದು ಸರಿಹೋಗುತ್ತೆ ಅಂದ.

ಯಾವುದು ಒಂದು ವಾರದಲ್ಲಿ ಸರಿಹೋಗೋದು ಅಂತ ಕೇಳಿದಳು. ಅದೇಕಣೆ ಸುಮಿತ್ರ ನನ್ನಿಂದ ತಗೊಂಡಿರೋ ಒಂದು ಸಾವಿರ ರೂಪಾಯನ್ನು ಹಿಂದಿರುಗಿಸೋದು ಅಂದ. ಸೋಮಿ ತಲೆ ಚಚ್ಚಿಕೊಂಡಳು.

ಈ ಸತ್ಯವಾದ ಸಮಾಚಾರವನ್ನು ಎಲ್ಲಿಂದ ಪ್ರಾರಂಭ ಮಾಡಲಿ, ಹೇಗೆ ಪ್ರಾರಂಭ ಮಾಡಲಿ ಅಂತ ಅವಳಿಗೆ ತಿಳೀಲಿಲ್ಲ. ಬನ್ನಿ ದೇವಸ್ಥಾನಕ್ಕೆ ಹೋಗೋಣ ಅಂತ ಸೋಮುನೂ ಕರ್ಕೊಂಡು ಹೋಗಿ ವಿಶೇಷವಾಗಿ ಅರ್ಚನೆ ಮಾಡಿಸಿ ಕುಂಕುಮವನ್ನು ತನ್ನ ತಾಳಿಗೆ ಸವರಿಕೊಂಡು ದೇವರೇ ಇದನ್ನು ಗಟ್ಟಿಯಾಗಿ ಇಟ್ಟಿರಪ್ಪ ಅಂದಳು. ಸೋಮು ನಕ್ಕು ಎಷ್ಟೇ ಗಟ್ಟಿಯಾದದ್ದು ಅಂದುಕೊಂಡರೂ ಒಂದೆರಡು ವರ್ಷ ಆದ ಮೇಲೆ ಅದು ಸವೆದು ಹೋಗುತ್ತೆ ಅಂದ. ರೀ ನೀವು ಕಟ್ಟಿದ ತಾಳಿ ನನ್ನ ಕೊರಳಲ್ಲಿ ಯಾವಾಗಲೂ ಇರಬೇಕು ಅಂದಳು. ಲೇ ಅದು ನಾನು ಕಟ್ಟಿದ ತಾಳಿ ಅಲ್ಲವೇ ಅಲ್ಲಕಣೆ ಅಂದ. ಸೋಮಿ ಅಲ್ಲೇ ಅವನ ಬೆನ್ನ ಮೇಲೆ ಗುದ್ದಿ ಬಿಡ್ತು ಅನ್ನಿ, ರೀ ಹೆಂಗಸರ ಕುತ್ತಿಗೇಲಿ ಇರೋ ತಾಳಿ ಅವರ ಗಂಡ ಅಲ್ಲದೇ ಬೇರೆಯಾರಾದರೂ ಕಟ್ಟೋಕೆ ಆಗುತ್ತೇನ್ರೀ, ಇದೇನೂಂತ ಮಾತಾಡ್ತಿದೀರ ಅಂದಳು. ಸೋಮಿ ಅಲ್ಲೇಕಟ್ಟೆಯ ಮೇಲೆ ಕೂತು ನೋಡು ಸೋಮಿ ಇದು ಸತ್ಯ ಇದು ಸತ್ಯ ಇದು ಸತ್ಯ. ಈ ಮಾತಿನ ಒಳಾರ್ಥ ಕೇಳು. ಮದುವೇಲಿ ಗಂಡು ಹೆಣ್ಣಿನ ಕುತ್ತಿಗೆಗೆ ತಾಳಿ ಕಟ್ತಾನೆ. ಸ್ವಲ್ಪ ದಿನ ಆದ ಮೇಲೆ ಅದನ್ನು ರಿಪೇರಿ ಮಾಡಿಸಬೇಕು ಅಂದಾಗ ಹೆಂಡ್ತಿ ಒಂದು ಅರಶಿನದ ದಾರನೋ, ಇಲ್ಲಾ ಇನ್ನೊಂದು ಸರಾನೋ ಹಾಕಿಕೊಂಡು ಮಾಂಗಲ್ಯದ ಸರವನ್ನು ರಿಪೇರಿ ಮಾಡಿಸ್ಕೊತಾಳೆ. ಹಾಗೆ ರಿಪೇರಿ ಮಾಡಿಸ್ಕೊಂಡ ತಾಳಿನ ಮತ್ತೆ ಗಂಡ ಕಟ್ತಾನಾ ಇಲ್ಲ. ಅವಳೇ ಕಟ್ಕೊತಾಳೆ. ಇದು ಎಲ್ಲರ ಮನೆಯ ಸಮಾಚಾರ. ಇದು ಸಂಸಾರದಲ್ಲಿ ಎಷ್ಟು ಸಾರಿ ನಡೆಯುತ್ತೋ ಯಾರು ಕಂಡಿದಾರೆ. ಅಂದ ಮೇಲೆ ಇಪ್ಪತ್ತು ಮೂವತ್ತು ವರ್ಷ ಸಂಸಾರ ಮಾಡಿರೋ ಹೆಣ್ಣಿನ ಕೊರಳಿನಲ್ಲಿ ಅವಳ ಗಂಡಕಟ್ಟಿರೋ ಮಾಂಗಲ್ಯದ ಸರಾನೇ ಇರುತ್ತೆ ಅಂತ ನಂಬ್ತೀಯ ಅಂದ. ಸೋಮಿಗೆ ತಲೆ ಕೆಟ್ಟುಹೋಯ್ತು.

ಮನೆಗೆ ಬಂದಳು. ಬೆಳಗ್ಗೆ ಮಾಡಿದ್ದ ಅಡುಗೇನೇ ಸಾಕಷ್ಟು ಇತ್ತು. ಅದನ್ನೇ ಊಟ ಮಾಡಿಇಬ್ಬರೂ ಮಲಗಿದರು. ಸೂರು ನೋಡುತ್ತಾ ಮಲಗಿದ್ದ ಸೋಮುನ ನೋಡಿ ಇದೇನು ಇವರು ಬೆಟ್ಟದಂಥಾ ಸಮಸ್ಯೆನ ತಲೆಲಿ ಇಟ್ಕೊಂಡು ಇಷ್ಟೊಂದು ಆರಾಮವಾಗಿದಾರಲ್ಲ. ಇವರತ್ರ ಹೇಗೆ ವಿಚಾರ ಮಾಡೋದು ಅಂತ ಅವಳೂ ಯೋಚಿಸಿದಳು. ಸೋಮು ಒಂದು ದೀರ್ಘ ಉಸಿರುಬಿಟ್ಟ. ಅಷ್ಟಕ್ಕೇ ಸೋಮಿ ಗಾಬರಿಯಿಂದರೀ ಏನಾಯ್ತ್ರೀ ಅಂದಳು. ಏನೂ ಇಲ್ಲಕಣೆ ಒಂದೊಂದು ಸಾರಿ ನಿನ್ನನ್ನು ನೆನೆಸಿಕೊಂಡರೆ ಅಯ್ಯೋ ಅನಿಸುತ್ತೆ ಅಂದ. ಸೋಮಿಗೆ ಈಗ ಕರುಳು ಕಿತ್ತು ಬಂತು. ಸೋಮು ಮನಸ್ಸಿನಲ್ಲಿ ಏನಿದೆ ಅಂತ ಅವಳಿಗೆ ಗೊತ್ತಾಗಿ ಹೋಯಿತು. ನಾನು ಹೋದ ಮೇಲೆ ಇವಳೊಬ್ಬಳೇ ಹೇಗಿರ್ತಾಳೆ ಅಂತ ಯೋಚಿಸ್ತಿದಾರೆ ಅನಿಸಿತು. ಗಂಟಲು ಕಟ್ಟಿತು.

ಮರುದಿನ ಸೋಮು ಆಫೀಸಿಗೆ ಹೊರಡೋ ಟೈಮಿಗೆ ಅತ್ತೆ ಮಾವ ಬಂದಿಳಿದಳು. ಇದನ್ನೇ ರಾಹು ಕೇತುಗಳು ಅನ್ನೋದು ಅಂತ ಗೊಣಗಿಕೊಂಡು ಸೋಮು ಬನ್ನಿ ಮಾವ, ಬನ್ನಿ ಅತ್ತೆ, ನಾನು ಆಫೀಸಿಗೆ ಹೋಗಿ ಬರ್ತೀನಿ ರೆಸ್ಟ್ ತಗೊಳಿ ಸಂಜೆ ಬಂದ ಮೇಲೆ ಮಾತಾಡೋಣ ಅಂದ. ಮಾವ ಅಳಿಯಂದಿರೇ ಇವತ್ತು ನೀವು ಎಲ್ಲಿಗೂ ಹೋಗೋ ಹಾಗಿಲ್ಲ. ಬನ್ನಿ ಒಳಗೆ ಅಂದರು. ಸೋಮು



ಇದೇನಪ್ಪಾ ಹೊಸತನ ಅಂದುಕೊಂಡು ಮತ್ತೆ ಒಳಗೆ ಹೋದ. ಅತ್ತೆ ಮಾವನ ಜೊತೆ ಸೋಮಿಯೂ ಬೆಟ್ಟವನ್ನು ತಲೆ ಮೇಲೆ ಹೊತ್ತು ಕೂತಳು. ಅಷ್ಟೊತ್ತಿಗೆ ಸೋಮು ಮೊಬೈಲ್ ರಿಂಗಾಯಿತು. ಸ್ಪೀಕರ್ ಆನ್‌ಆಗಿತ್ತು. ಏನ್ರೀ ಸೋಮು ಇನ್ನೂ ಆಫೀಸಿಗೆ ಬರೋ ಮನಸ್ಸು ಇಲ್ವಾ. ನಿಮಗೆ ಇರೋದು ಇನ್ನು ಐದೇ ದಿನ ಅನ್ನೋದು ನೆನಪಿದೆಯಾ ಅಂತ ಕೇಳಿದರು. ಸೋಮು ತಡವರಿಸುತ್ತಾ ಗೊತ್ತು ಸರ್, ಇವತ್ತು ನಮ್ಮತ್ತೆ ಮಾವ ಬಂದಿದಾರೆ ಅವರತ್ರ ಒಂದೈದು ನಿಮಿಷ ಮಾತಾಡಿ ಬಂದ್ಬಿಡ್ತೀನಿ ಸರ್ ಅಂದ. ಅದೇನು ಮಾಡ್ತೀರೋ ನೀವು ಹೋಗೋ ಮುಂಚೆ ಎಲ್ಲಾ ಕೆಲಸಾನೂ ಮುಗಿದಿರಬೇಕು ಅಂದರು. ಆಯ್ತು ಸರ್ ಅಂದ ಸೋಮು. ಈ ಸಂಭಾಷಣೆ ಕೇಳಿ ಸೋಮು ಇರೋದು ಇನ್ನು ಐದೇ ದಿನ ಅನ್ನೋದು ಅರಿತು ಸೋಮಿ ಅಳಲಾರಂಭಿಸಿದಳು.

ಮಾವತುಸು ಸಲಿಗೆಯಿಂದ ಸೋಮು ಹೆಗಲ ಮೇಲೆ ಕೈ ಹಾಕಿ ನೋಡಿ ಅಳಿಯಂದಿರೇ ಗಂಡಸರು ಏನೇ ಗುಟ್ಟು ಕಾಪಾಡಿಕೊಂಡಿರ್‍ತೀವಿ ಅಂದುಕೊಂಡರೂ ಕೆಲವು ವಿಚಾರಗಳನ್ನು ತಮ್ಮ ಪತ್ನಿಯರ ಹತ್ತಿರ ಹೇಳಿಕೊಳ್ಳಬೇಕು. ಒಬ್ಬರಿಗಿಂತ ಇಬ್ಬರು ಲೇಸು ಅನ್ನೋ ಹಾಗೆ ಸಮಯ ಸಂದರ್ಭ ಅಂದರೆ ಒಬ್ಬರಿಗೊಬ್ಬರು ಸಹಾಯಕ್ಕೆ ಬರ್‍ತಾರೆ. ಹೇಳಿ ನೀವು ಸೋಮಿಗೆ ಎಲ್ಲಾ ವಿಚಾರನೂ ಹೇಳಿದೀರ ಅಂತ ಕೇಳಿದರು. ಇದೇನು ಮಾವ ಇವತ್ತು ಹೊಸದಾಗಿ ಏನೋ ಮಾತಾಡ್ತಾ ಇದೀರ. ನಾನು ನಿಮ್ಮ ಮಗಳಿಂದ ಏನು ಮುಚ್ಚಿಟ್ಟಿದ್ದೀನಿ ಹೇಳಿ ಅಂತ ಕೇಳಿದ. ಇದು ಇಲ್ಲಿ ಕೂತು ಮಾತಾಡೋ ವಿಚಾರ ಅಲ್ಲ ಅಂದುಕೊಂಡು ಮಾವ ಸೋಮುನ ಬನ್ನಿ ಅಳಿಯಂದಿರೆ ಒಂಚೂರು ಹೊರಗಡೆ ಹೋಗಿ ಬರೋಣ ಅಂದರು. ಮಾವ ಈಗ ತಾನೇ ನಮ್ಮ ಬಾಸ್ ಮಾತಾಡಿದ್ದು ಕೇಳಿದ್ರಲ್ಲಾ. ನಾನು ಅರ್ಜಂಟಾಗಿ ಆಫೀಸಿಗೆ ಹೋಗಬೇಕು ಅಂದ. ಅದಕ್ಕೆ ಮುಂಚೆ ನನ್ನ ಜೊತೆ ಬನ್ನಿ ಅಂದು ಸೋಮುನ ಕರ್ಕೊಂಡು ಹೊರಟೇ ಹೋದರು.

ಅವರು ಹೋದದ್ದು ಶೃಂಗಾರ್ ನರ್ಸಿಂಗ್ ಹೋಂಗೆ.ಯಾಕೆ ಮಾವ ಇಲ್ಲಿಗೆ ಕರ್ಕೊಂಡು ಬಂದಿದೀರ ಅಂತ ಸೋಮು ಕೇಳಿದ. ಇದು ನನ್ನ ಸ್ನೇಹಿತ ರವೀಂದ್ರನ ನರ್ಸಿಂಗ್ ಹೋಂ. ಇಲ್ಲಿ ಒಂದೈದು ನಿಮಿಷ ಕೆಲಸ ಇದೆ ಬನ್ನಿ ಅಂದರು. ಸೋಮುನ ಕೂರಿಸಿ ಒಳಗೆ ಹೋಗಿ ರವೀಂದ್ರನ ಜೊತೆ ಮಾತಾಡಿಕೊಂಡು ಹೊರಗೆ ಬಂದ ನಂತರ ರವೀಂದ್ರ ಬಂದು ಬನ್ನಿ ಸೋಮು ಅವರೇ ನಿಮ್ಮತ್ರ ಒಂದೈದು ನಿಮಿಷ ಕೆಲಸ ಇದೆ ಅಂತ ಸೋಮುನ ಒಳಕ್ಕೆ ಎಳ್ಕೊಂಡು ಬಾಗಿಲು ಹಾಕಿಕೊಂಡರು.

ಇತ್ತ ಮನೇಲಿ ಅಳ್ತಾ ಇದ್ದ ಮಗಳನ್ನು ಸೋಮಿ ಅಮ್ಮ ಸಮಾಧಾನ ಮಾಡುತ್ತಾ ನೋಡು ನಮಗೆ ಇನ್ನು ಸರಿಯಾದ ವಿಚಾರ ಏನು ಅಂತ ತಿಳಿದಿಲ್ಲ. ಸೋಮು ಇರೋದು ಇನ್ನು ಐದೇ ದಿನ ಆದರೆ ಅವರಿಗೆ ಆಗಿರೋದೇನು. ಅದಕ್ಕೇನು ಚಿಕಿತ್ಸೆನೇ ಇಲ್ಲವೇ, ಐದೇ ದಿನ ಇರೋದು ಅಂತ ಹೇಳಿದೋರು ಯಾರು. ಅದನ್ನು ಇನ್ನೊಬ್ಬರ ಹತ್ತಿರ ಕೇಳಿ ತಿಳ್ಕೊಬೇಕಲ್ವಾ ಅಂತ ಹೇಳುತ್ತಿದ್ದ ಹಾಗೆ ಸೋಮಿಗೆ ಏನೋ ಹೊಳೆದಂತಾಗಿ ಅಮ್ಮಾ ಕುಕ್ಕರ್‌ಕೂಗ್ಸಿರು ಬರ್‍ತೀನಿ ಅಂದು ಸೋಮು ಆಫೀಸಿಗೆ ಓಡಿದಳು. ಸೋಮಿ ಬಂದರೀತಿ ನೋಡಿ ಸ್ಟಾಪ್ ಒಬ್ಬ ಸಾಹೇಬರಿಗೆ ಸೋಮಿ ಅವರು ಅಳ್ತಾ ಬರ್‍ತಿದಾರೆ ಅಂತ ತಿಳಿಸಿದ. ಸೋಮಿ ಅವತಾರ ನೋಡಿ ಏನಮ್ಮಾ ಸೋಮುಗೆ ಏನಾಯ್ತು ಹೋಗಿಬಿಟ್ನಾ ಅಂತ ಕೇಳಿದರು.




ಸೋಮಿ ಬಿಡ್ತು ಅನ್ನಿ ಸರ್, ನಿಮಗೇ ಎಲ್ಲ ವಿಚಾರಗೊತ್ತಿದೆ. ನನ್ನ ಮಾಂಗಲ್ಯ ಉಳಿಸಿಕೊಳ್ಳೊ ದಾರಿ ತೋರಿಸಿ ಅಂದಳು.

ಮಾಂಗಲ್ಯ ಉಳಿಸ್ಕೊಬೇಕು ಅಂದ್ರೆ ಓಡಾಡುವಾಗ ಹುಷಾರಾಗಿರಬೇಕು. ಸರ ಸವೆದು ಹೋಗಿದ್ದರೆ ಅದನ್ನು ಅಳಿಸಿ ಬೇರೆ ಮಾಡಿಸ್ಕೊಬೇಕು ಅದೊಂದೇ ದಾರಿ. ಈಗ ನಿನ್ನ ಮಾಂಗಲ್ಯಕ್ಕೆ ಏನಾಗಿದೆ ಅಂತ ಕೇಳಿದರು. ಸರ್, ಸೋಮು, ಸೋಮು, ಸೋಮು ಅಂತ ತೊದಲಿದಳು. ಏನಮ್ಮಾ ಸೋಮು ನಿನಗೆ ಹೊಸ ಸರ ಮಾಡಿಸಿಕೊಡಲ್ಲಾ ಅಂದಿದಾನಾ. ನಾನು ಅವನಿಗೆ ಹೇಳ್ತೀನಿ. ಬೇಕಾದರೆ ಆಫೀಸಿಂದ ಅಡ್ವಾನ್ಸ್ ಬೇಕಾದರೂ ಕೊಡಿಸ್ತೀನಿ ಅಂದರು. ಸೋಮಿ ತಲೆ ಚಚ್ಚಿಕೊಂಡಳು. ಸೋಮಿ ಸೆರಗಿನಿಂದ ಕಣ್ಣು ಮೂಗು ಬಾಯಿ ಒರೆಸಿಕೊಂಡು ಸರ್, ಅವರು ಇನ್ನೊಂದು ವಾರ ಇದ್ದು ಎಲ್ಲವನ್ನೂ ಎಲ್ಲರನ್ನೂ ಬಿಟ್ಟು ಹೊರಟು ಹೋದರೆ ನಾನೇನು ಮಾಡಬೇಕು ಸರ್. ಎಲ್ಲಿಗೆ ಹೋಗಲಿ ಏನು ಮಾಡಲಿ ಅಂದು ಅತ್ತೇ ಬಿಟ್ಟಳು. ಸಾಹೇಬರು ಕೆಲ ಹೊತ್ತು ಕಣ್ಣು ಮುಚ್ಚಿ ಕೂತಿದ್ದರು.ಅವರಿಗೆ ಏನು ಆಗಿದೆ ಅಂತ ತಿಳಿದು ಹೋಯಿತು. ನಂತರ ಕಣ್ಣುಬಿಟ್ಟು ಏನಮ್ಮಾ ನಿನಗೆ ಸೋಮು ಇನ್ನೊಂದು ವಾರ ಇರೋದು ಅಂತ ಯಾರಮ್ಮಾ ನಿನಗೆ ಹೇಳಿದ್ದು ಅಂತ ಕೇಳಿದರು. ನಾನು ಅವತ್ತು ಅವರಿಗೆ ಫೋನ್ ಮಾಡಿದಾಗ ಅವರು ನಿಮ್ಮ ಕೋಣೆಯಲ್ಲೇ ಇದ್ದರು. ನೀವು ಅವರಿಗೆ ಏನ್ರೀ ಸೋಮು ನೀವು ಇರೋದು ಇನ್ನೊಂದೇ ವಾರ ಅಂತ ಸೋಮಿಗೆ ಹೇಳಿದೀರ ಅಂತ ಕೇಳ್ತಿದ್ದಿದ್ದು ನನಗೆ ಕೇಳಿಸಿತು. ನೆನ್ನೆ ಇನ್ನು ಐದೇ ದಿನ ಅನ್ನೋದು ನೆನಪಿದೆಯಾ ಅಂತ ಕೇಳಿದಿರಿ. ಹಾಗಂದ್ರೆ ಏನರ್ಥ ಸರ್. ಸೋಮು ಇದನ್ನು ನನ್ನಿಂದ ಯಾಕೆ ಮುಚ್ಚಿಟ್ಟರು ಸರ್.ಅಂದು ಮತ್ತೆ ಅತ್ತಳು.

ಆಫೀಸಿನವರೊಬ್ಬರು ಸೋಮಿಗೆ ಕಾಫಿ ತಂದುಕೊಟ್ಟರು. ಸಾಹೇಬರು ಮೊದಲು ಕಾಫಿ ಕುಡೀರಿ ನಂತರ ಮುಂದಿನ ಮಾತು ಅಂದರು. ನನಗೆ ಕಾಫಿ ಬೇಡ ಅಂತ ತಲೆ ಅಲ್ಲಾಡಿಸಿದಳು. ನೋಡಿ ಸೋಮಿ ಅವರೇ ನಮ್ಮ ಜೀವನದಲ್ಲಿ ಕಮ್ಯುನಿಕೇಷನ್ ಗ್ಯಾಪ್ ಅಂತೀವಲ್ಲ, ಮತ್ತೆ ರೀಡಿಂಗ್ ಬಿಟ್ವೀನ್‌ದ ಲೈನ್ಸ್, ಬಿಟ್ವೀನ್‌ದ ವರ್ಡ್ಸ್ ಅಂತೀವಲ್ಲ ಹಾಗಾಗುತ್ತೆ. ನಾನು ಸೋಮುಗೆ ನೀವು ಇನ್ನೊಂದೇ ವಾರ ಇರೋದು ಅಂದಿದ್ದು ಇನ್ನೊಂದೇ ವಾರ ಈ ಆಫೀಸಿನಲ್ಲಿ ಇರೋದು ಅಂತ. ಅಂದ್ರೆ ಅವರನ್ನು ಪ್ರಮೋಷನ್ ಕೊಟ್ಟು ಹೆಡ್ ಆಫೀಸಿನಲ್ಲಿ ಡಿವಿಜನಲ್ ಹೆಡ್ ಆಗಿ ಕಳಿಸ್ತಿದೀವಿ. ಇನ್ನೊಂದು ವಾರದಲ್ಲಿ ಇಲ್ಲಿ ಪೆಂಡಿಂಗ್ ಇರೋ ಕೆಲಸಗಳನ್ನೆಲ್ಲಾ ಮುಗಿಸಿದರೆ ಮಾತ್ರ ಕಳಿಸೋದು. ಅದಕ್ಕೇ ಸೋಮುಗೆ ನಾನು ಬಲವಂತ, ಆತುರ ಎಲ್ಲ ಪಡಿಸ್ತಿದ್ದೆ. ನೀವು ಅವರು ಈ ಭೂಮಿ ಮೇಲೆ ಇರೋದು ಇನ್ನೊಂದು ವಾರ ಅಂದ್ಕೊಂಡ್ರಾ. ಒಳ್ಳೆ ಸೋಮಿ ಅಂದರು. ಸೋಮಿಗೆ ಅಳು ನಗು ಒಟ್ಟೊಟ್ಟಿಗೇ ಬಂತು. ಮತ್ತೆ ಅವರು ಇದನ್ನು ನನಗ್ಯಾಕೆ ಹೇಳಲಿಲ್ಲ ಸರ್. ಅಂತ ಕೇಳಿದಳು. ನಿಮಗೆ ಕಡೇ ದಿನ ಆಫೀಸಿಗೆ ಕರ್ಕೊಂಡು ಬಂದು ಎಲ್ಲರ ಎದುರಿಗೂ ಅಚ್ಚರಿ ಮೂಡಿಸೋಣ ಅಂತ ಅಂದ್ಕೊಂಡಿದ್ರು. ಏನಮ್ಮಾ ನೀವು ಸರಿಯಾದ ವಿಚಾರ ತಿಳ್ಕೊಳ್ದೇ ಇಷ್ಟೊಂದು ಗಾಬರಿ ಮಾಡ್ಕೊಂಡಿದ್ರಲ್ಲ. ನಿಮ್ಮ ತಂದೆ ತಾಯಿನೂ ಕರೆಸಿಕೊಂಡ್ರಲ್ಲ, ಇರ್ಲಿ ಪರವಾಗಿಲ್ಲ, ಹೋಗಿ ಮನೆಗೆ ಹೋಗಿ ಸಮಾಧಾನ ಮಾಡ್ಕೊಳಿ. ಹಾಗೇ ಸೋಮುನ ಆಫೀಸಿಗೆ ಕಳಿಸಿ ಅಂದರು. ಸೋಮಿಗೆ ಸ್ವರ್ಗ ಮೂರೇ ಗೇಣು ಅನಿಸಿತು. ಓಡೋಡಿ ಮನೆಗೆ ಬಂದಳು. ಬರ್ತಾ ಒಂದು ಕೆಜಿ ಕಾಜೂ ಬರ್ಫಿ



ತಗೊಂಡು ಬಂದು ಅಪ್ಪ ಅಮ್ಮನ ಬಾಯಿಗೆ ತುರುಕಿದಳು. ಅವರಿಬ್ಬರೂ ಇದೇನೇ ಅಂದು ಬರ್ಫಿ ಅಗಿದು ನುಂಗಿದರು. ಸೋಮಿ ಬಾಯಿಂದ ಸರಿಯಾದ ವಿಚಾರ ತಿಳಿದು ಅವರಿಗೂ ನಿರಾಳ. ಅಷ್ಟೊತ್ತಿಗೆ ಸೋಮು, ಮಾವ ಇಬ್ಬರೂ ಬಂದರು. ಮಾವ, ಸೋಮಿ ನಿನ್ನ ಗಂಡನಿಗೆ ಏನೂ ತೊಂದರೆ ಇಲ್ಲವಂತಮ್ಮಾ, ಗುಂಡು ಕಲ್ಲಿನ ಹಾಗಿದಾರೆ ಏನೂ ಯೋಚನೆ ಮಾಡಬೇಡಿ ಅಂದರು ಡಾಕ್ಟರ್ ರವೀಂದ್ರ. ಆದರೆ ನನಗೆ ಮಾತ್ರ ನಾಲ್ಕೂವರೆ ಸಾವಿರ ಬೋಳಿಸಿಕೊಂಡ್ತು ಅಂದರು. ಸೋಮಿ ಅಪ್ಪನ ಬಾಯಿಗೂ ಕಾಜೂ ಬರ್ಫಿ ತುರುಕಿ ಸೋಮು ಸಾಹೇಬರು ಹೇಳಿದ ವಿಚಾರವನ್ನು ತಿಳಿಸಿದರು. ಸೋಮು ಪೆಚ್ಚು ಪೆಚ್ಚಾಗಿ ನಿಂತು ಸೋಮಿ ನನಗೆಲ್ಲೇ ಕಾಜೂ ಬರ್ಫಿ ಅಂತ ಕೇಳಿದಾಗ ಸೋಮಿ ನಾನೇ ಇದ್ದೀನಲ್ಲ ಅಂದಾಗ ಎಲ್ಲರೂ ನಕ್ಕರು.



# ಆನೆ ಬಂತೊಂದಾನೆ !

ಚಿತ್ರಾ ರಾಮಚಂದ್ರನ್


**ಗ**ಣೇಶನ ಹಬ್ಬ ಸಾಂಗವಾಗಿ ನೆರವೇರಿತು. ನೈವೇದ್ಯಕ್ಕಾಗಿ ಹನ್ನೊಂದು ಮೋದಕಗಳನ್ನು ಮಾತ್ರ ಮಾಡಿ, ಉಳಿಸಿಟ್ಟಿದ್ದ ಕಣಕ ಮತ್ತು ಹೂರಣವನ್ನು ತೆಗೆದಿಟ್ಟುಕೊಂಡು ಕುಳಿತೆ. ಗಣೇಶ ಮಾತ್ರವಲ್ಲದೆ ಮನೆಯ ಮಕ್ಕಳು ಮತ್ತು ಸ್ನೇಹಿತರೆಲ್ಲ ಸಹ ಮೋದಕ ಪ್ರಿಯರೇ ಆಗಿದ್ದರು . ಪೂಜೆಯ ನಂತರ ಎಲ್ಲರಿಗೂ ಹಂಚಲೆಂದು ಹೆಚ್ಚಿನ ಸಂಖ್ಯೆಯಲ್ಲಿ ಕೊಳುಕಟ್ಟೆಗಳನ್ನು ತಯಾರಿಸುವುದು ವಾಡಿಕೆ. ನಿಂಬೆ ಗಾತ್ರದ ಕಣಕದ ಉಂಡೆಯನ್ನು ಬೆರಳುಗಳಿಂದ ಒತ್ತಿ ಬಟ್ಟಲಿನಂತೆ ಮಾಡಿಕೊಂಡು, ಅದರಲ್ಲಿ ಹೂರಣವನ್ನು ತುಂಬಿ, ಬಟ್ಟಲಿನ ತುದಿಗಳನ್ನೆಲ್ಲ ಒಟ್ಟಿಗೆ ಸೇರಿಸಿ ಜುಟ್ಟಿನಂತೆ ತಿರುಗಿಸಿದರೆ ಹಬೆಯಲ್ಲಿ ಬೇಯಿಸಲು ಕೊಳುಕಟ್ಟೆಗಳು ತಯಾರ್!

ಕೈಗಳು ಯಾಂತ್ರಿಕವಾಗಿ ಕೊಳುಕಟ್ಟೆಗಳನ್ನು ರೂಪಿಸುತ್ತಿರಲು ಮರ್ಕಟ ಮನಸ್ಸು ಮಾತ್ರ ಒಂದು ನೆನಪಿನಿಂದ ಮತ್ತೊಂದಕ್ಕೆ ಅಲೆದಾಡುತ್ತಿತ್ತು. ಕೊಳುಕಟ್ಟೆಯಿಂದ ಗಣೇಶ, ಗಣೇಶನಿಂದ ಆನೆ, ಆನೆಯಿಂದ ಮೈಸೂರು, ಮೈಸೂರಿನಿಂದ ಕಾಡುಗಳು, ಕಾಡಿನಿಂದ ಕಾಡಾನೆಗಳು, ಕಾಡಾನೆಯಿಂದ ಮತ್ತೇ ಗಣೇಶ, ಗಣೇಶನಿಂದ ಕೊಳುಕಟ್ಟೆ! ನೆನಪುಗಳ ಫ್ಲ್ಯಾಷ್ ಬ್ಯಾಕ್ ಸೆಪಿಯಾ ಬಣ್ಣದ ಚಿತ್ರಗಳಂತೆ ಮನಃಪಟಲದಲ್ಲಿ ಹಾದು ಹೋದವು !

ಮೈಸೂರು ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರ ಮನ ಮೆಚ್ಚಿದ ಆನೆ ಬಿಳಿಗಿರಿ. ದಸರಾ ಮೆರವಣಿಗೆಯಲ್ಲಿ ಮಹಾರಾಜರ ಬಂಗಾರದ ಅಂಬಾರಿ ಹೊತ್ತು ಅನೇಕ ವರ್ಷಗಳು ಸೇವೆ ಸಲ್ಲಿಸಿದ ಹತ್ತಡಿ ಎತ್ತರದ ಸೌಮ್ಯ ರಕ್ಕಸ ! ಆನೆ ಕರವಟ್ಟಿಯಿಂದ ಕುಕ್ಕರಹಳ್ಳಿ ಕೆರೆಯನ್ನು ಕುರಿತು ಸ್ನಾನಕ್ಕೆ ಹೊರಟು ನಮ್ಮ ಮನೆಯ ಮುಂದೆಯೇ ಹಾದು ಹೋಗುತ್ತಿದ್ದ ಬಿಳಿಗಿರಿ. ಬಿಳಿಗಿರಿಯ ಕೊರಳ ಗಂಟೆಯ 'ಟಿನ್ ಠಣಾರ್ ಟಿನ್' ಅವನ ಆಗಮನವನ್ನು ಮೊದಲೇ ಸೂಚಿಸಿಬಿಡುತ್ತಿತ್ತು. ಮಕ್ಕಳಾಗಿದ್ದ ನಾವು ಕೂಡಲೇ ಉಗ್ರಾಣಕೆ ನುಗ್ಗಿ ಅಕ್ಕಿ, ಬೆಲ್ಲ, ಕಾಯಿ, ಬಾಳೆ ಹಣ್ಣು ಎಲ್ಲವನ್ನೂ ಒಂದು ಮೊರಕ್ಕೆ ತುಂಬಿಕೊಂಡು ಕಾಯುತ್ತಿದ್ದೆವು.

ಬಿಳಿಗಿರಿ ಮನೆಯನ್ನು ಸಮೀಪಿಸಿ ತನ್ನ ಸೊಂಡಲಿನಿಂದ ಗೇಟನ್ನು ತೆರೆದು ನಿಧಾನವಾಗಿ ಒಳಗೆ ಹೆಜ್ಜೆಯಿಡುತ್ತಿದ್ದ. ಅಕ್ಕಿ ಬೆಲ್ಲ ತರಲು ಪೈಪೋಟಿ ಮಾಡುತ್ತಿದ್ದ ನಾವು, ಎದುರಿಗೆ ಆ ಬೃಹದಾಕಾರವನ್ನು ಕಂಡು ಅಂಜಿಕೆಯಿಂದ ಹಿಂಜರಿಯುತ್ತಿದೆವು. ಅಕ್ಕಿ ಬೆಲ್ಲ ತಿಂದ ಬಿಳಿಗಿರಿ ಕಾಯನ್ನು ಬಾಯಿಗೆ ಹಾಕಿ ಲಟಪಟ ಜಗಿದಾಗ ನಾವು ಬೆದರಿ ನಿಲ್ಲುತ್ತಿದೆವು. ತಿಂದು ಮುಗಿಸಿ ಮನೆಯ ಮುಂದಿದ್ದ ಫೌಂಟನ್ ನೀರು ಕುಡಿದು ಗಜಗಂಭೀರವಾಗಿ ಹೊರಟು ಹೋಗುತ್ತಿದ್ದ ಜಾಣ ಬಿಳಿಗಿರಿ. ನಾವೆಲ್ಲಾ ಗೇಟಿನವರೆಗೆ ಅವನನ್ನು ಹಿಂಬಾಲಿಸಿದಾಗ ನಮ್ಮ ಸಾಕು ಶ್ವಾನ ಬ್ರೌನಿ ಸಹ (ಬ್ರೌನಿಯನ್ನು ನಾಯಿ ಎನ್ನಲು ಯಾಕೋ ಮನಸ್ಸು ಒಪ್ಪುತ್ತಿಲ್ಲ) ಓಡಿ ಬಂದು ಬಿಳಿಗಿರಿ ಸಾಗಿದ ಮಣ್ಣಿನಲ್ಲಿ ಹೊರಳಾಡುತ್ತಿದ್ದ. ಆನೆ ತುಳಿದ ಮಣ್ಣು ವೈದ್ಯಕೀಯ ಗುಣ ಹೊಂದಿರುವುದಾಗಿ ಒಂದು ಹೇಳಿಕೆಯಿತ್ತು. ಬ್ರೌನಿಗೆ ಆ ವಿಷಯ ಸ್ವಾಭಾವಿಕವಾಗಿಯೇ ತಿಳಿದಿತ್ತೇನೋ !

ಆನೆ ಆನೆ ! ಅಂಬಾರಿ ಆನೆ ! ಬಿಳಿಗಿರಿ ಆನೆ !



ಅಮ್ಮ ಪಾಪುವನ್ನು ತೊಡೆಯಮೇಲೆ ಕೂರಿಸಿಕೊಂಡು ಒಂದು ಕೈಯಿಂದ ಅವನ ಕಂಕುಳನ್ನು ಜೋಪಾನವಾಗಿ ಹಿಡಿದುಕೊಂಡು, ಮತ್ತೊಂದು ಕೈಯಿಂದ ಪಾಪುವಿನ ಬೆನ್ನನ್ನು ಮೃದುವಾಗಿ ಒತ್ತಿ ಹಿಂದೂ ಮುಂದೂ ತೂಗುತ್ತ ರಾಗವಾಗಿ ಹೇಳುತ್ತಿದ್ದ ಸಾಲುಗಳು ಇವು. ಹಾಡಿನಿಂದ ಉತ್ಸುಕನಾದ ಪಾಪು ತಾನಾಗಿಯೇ ನೆಲದ ಮೇಲೆ ಪುಟ್ಟ ಪಾದಗಳನ್ನು ಊರಿ ಅಮ್ಮನ ತೊಡೆಯಿಂದ ಎದ್ದೆದ್ದು ಕುಣಿದು ಕಿಲ ಕಿಲ ನಗುತ್ತಿದ್ದ !

ಬಿಳಿಗಿರಿಯನ್ನು ನೋಡಿ ಅದೆಷ್ಟು ಕಣ್ತುಂಬಿಸಿಕೊಂಡರೂ, ತಮ್ಮದ್ದೇ ಆದ ಹಚ್ಚ ಹಸಿರಾದ ಪರಿಸರದಲ್ಲಿ, ಆರೋಗ್ಯವಾದ ಪುಷ್ಟಿಯಾದ ದೇಹ ಮತ್ತು ಮಿರಿ ಮಿರಿ ಹೊಳೆಯುವ ಚರ್ಮ ಹೊಂದಿರುವ ಕಾಡಾನೆಗಳನ್ನು ನೋಡುವುದೇ ಕಣ್ಣಿಗೆ ಹಬ್ಬ ! ವನ್ಯ ಜೀವಿಗಳು ಹೇರಳವಾಗಿ ಕಾಣಿಸಿಕೊಳ್ಳುವ ಬಂಡೀಪುರ, ನಾಗರ ಹೊಳೆ, ಗೋಪಾಲ ಸ್ವಾಮಿ ಬೆಟ್ಟ ಮತ್ತು ಬಿಳಿಗಿರಿರಂಗನ ಬೆಟ್ಟ ಮೈಸೂರಿನಿಂದ ಒಂದೇ ದಿನ ಹೋಗಿ ಬರುವಷ್ಟು ಸಮೀಪದಲ್ಲಿರುವ ತಾಣಗಳು. ಹಾಗಾಗಿ ಆಗಿಂದ್ದಾಗ್ಯೆ ಕುಟುಂಬ ಸಮೇತ ಆ ತಾಣಗಳಿಗೆ ಹೋಗಿ ಬರುತ್ತಿದ್ದೆವು. ತಂದೆಯುವರು ಕಾರಿಗೆ ಪೆಟ್ರೋಲ್, ಏರ್ ಚೆಕ್ ಮಾಡಿ ಬರುವುದರೊಳಗೆ ಅಮ್ಮ ನಮ್ಮನ್ನೂ ನಮಗೆ ಬೇಕಾದ ತಿಂಡಿ ತೀರ್ಥಗಳನ್ನೂ ತಯಾರು ಮಾಡಿ ಬಿಡುತ್ತಿದ್ದರು.



ಬಂಡೀಪುರದಲ್ಲೊಮ್ಮೆ ಯಾರೋ ವಿ.ಐ.ಪಿ.ಗಳು ಸಫಾರಿಗೆ ಹೊರಟಿದ್ದ ಕಾರಣ ಜನ ಸಾಮಾನ್ಯರಿಗೆ ಅರಣ್ಯ ಪ್ರವೇಶ ನಿರಾಕರಿಸಲ್ಪಟ್ಟಿತ್ತು. ಕಡೇಪಕ್ಷ ಒಂದು ಲಂಗುರ್ ಕೋತಿಯನ್ನಾದರೂ ನಮಗೆ ತೋರಿಸಿಬಿಡಬೇಕೆಂಬ ಹಠದಿಂದ, ಕಾಡನ್ನು ಸೀಳಿಕೊಂಡು ಹೋಗುತ್ತಿದ್ದ ಮೈಸೂರು-ಊಟಿ ಹೆದ್ದಾರಿಯಲ್ಲಿ ಬಂಡೀಪುರದಿಂದ ಮುದುಮಲೈಗೆ, ಮುದುಮಲೈಯಿಂದ ಬಂಡೀಪುರಕ್ಕೆ ಕಾರನ್ನು ನಿಧಾನವಾಗಿ ಚಲಿಸ ತೊಡಗಿದರು ತಂದೆಯವರು. ನಾವೆಲ್ಲಾ ರಸ್ತೆಯ ಎರಡು ಬದಿಗಳನ್ನೂ ವ್ಯಾಪಿಸಿದ್ದ ಅರಣ್ಯವನ್ನು ಕಣ್ಣುಗಳಿಂದ ಜಾಲಾಡುತ್ತ ತೆಪ್ಪಗೆ ಕುಳಿತಿದ್ದೆವು.

ಏನಾಶ್ಚರ್ಯ ! ಕಾಡು ಕೋಣಗಳು, ಚಂಗು ಚಂಗೆಂದು ಕಣ್ಣ ಮುಂದೆಯೇ ಹಾರಿ ಹೋದ ಜಿಂಕೆಯ ಹಿಂಡು, ಸರ ಸರನೆ ಪೊದೆಗಳ ಮರೆಯಲ್ಲಿ ಓಡುತ್ತಿದ್ದ ಕಾಡು ಹಂದಿಗಳು, ಕಂಡೂ ಕಾಣದಂತೆ ಮರಗಳ ಮರೆಯಲ್ಲಿ ತಾಯಿ ಆನೆಯೊಂದಿಗೆ ಕಾಣಿಸಿಕೊಂಡ ಮರಿ ಆನೆ ! ಎಲ್ಲವೂ ನಮ್ಮ ಕಣ್ಣ ಮುಂದೆ ! ವಿ.ಐ.ಪಿ.ಗಳ ಸಫಾರಿ ಗದ್ದಲವನ್ನು ಸಹಿಸಲಾರದೆ ರಸ್ತೆಯ ಅಂಚಿಗೆ ಓಡಿ ಬಂದಿದ್ದ ಅರಣ್ಯ ದೇವರುಗಳ ದರುಶನ ಭಾಗ್ಯ ನಮಗೆ ಪ್ರಾಪ್ತಿಯಾಯಿತು !

ನಮ್ಮೊಂದಿಗೆ ಅರಣ್ಯ ಪ್ರವಾಸ ಮಾಡಬೇಕೆಂಬ ಮಹದಾಸೆ ಹೊತ್ತು ಮೈಸೂರಿಗೆ ಆಗಮಿಸಿದ್ದರು ನಮ್ಮ ಸೋದರತ್ತೆಯವರು. ಅರಣ್ಯದಲ್ಲಿ ನಾವು ಪಾಲಿಸ ಬೇಕಾದ ನಿಯಮಗಳ ಬಗ್ಗೆ ಅತ್ತೆಗೆ ವಿವರವಾಗಿ ಹೇಳಿದ ತಂದೆಯವರು, ಒಮ್ಮೊಮ್ಮೆ ಎಷ್ಟೇ ತಿರುಗಾಡಿದರೂ ಒಂದು ನೊಣವನ್ನು ಸಹ ಕಾಣಲಾರದೆ ನಿರಾಶೆಯಿಂದ ಹಿಂದಿರುಗ ಬೇಕಾಗುತ್ತದೆ ಎಂಬ ಅಪ್ರಿಯ ಸತ್ಯವನ್ನೂ ಅತ್ತೆಗೆ ಮನದಟ್ಟು ಮಾಡಿದರು.

ಅತ್ತೆಗೆ ಗಣೇಶನ ಮೇಲೆ ಎಲ್ಲಿಲ್ಲದ ಪ್ರೀತಿ ! ಭಕ್ತಿ ! 'ಆ ಊ' ಎಂದರೆ ಸಾಕು! ಗಣೇಶನಿಗೆ ನೂರ ಎಂಟು ಕೊಳುಕಟ್ಟೆಗಳನ್ನು ಸಮರ್ಪಿಸುವುದಾಗಿ ಹರಕೆ ಹೊತ್ತುಬಿಡುತ್ತಿದ್ದರು. ತಂದೆಯವರ ಮಾತು ಕೇಳಿಸಿಕೊಂಡವರು, ಈ ಪ್ರವಾಸದಲ್ಲಿ ಆನೆಗಳನ್ನು ಕಾಣುವ ಭಾಗ್ಯ ಲಭಿಸಿದರೆ ನೂರ ಎಂಟು ಕೊಳುಕಟ್ಟೆಗಳನ್ನು ಗಣೇಶನಿಗೆ ಅರ್ಪಿಸುವುದಾಗಿ ಹರಕೆಯನ್ನು ಹೊತ್ತೇಬಿಟ್ಟರು !

ಮುಂಜಾವಿನಲ್ಲೇ ಹೊರಟು ದಿಂಬಮ್ ಘಾಟಿ ಪ್ರದೇಶದ 27 ಹೇರ್ ಪಿನ್ ತಿರುವುಗಳನ್ನು ಹಾದು ಬನ್ನಾರಿ ಗುಡಿಯಲ್ಲಿ ಬನ್ನಾರಿ ಅಮ್ಮನವರಿಗೆ ಕೈ ಮುಗಿದು, ಅಲ್ಲಿಂದ ಹೊರಟು ಸತ್ಯಮಂಗಲಮ್ ರಾಮಾ ವಿಲಾಸ್ ಹೋಟೆಲಿನಲ್ಲಿ ಬಿಸಿ ಬಿಸಿ ಬೆಣ್ಣೆ ಮಸಾಲೆ ದೋಸೆ ತಿನ್ನುತ್ತಿದ್ದ ಹಾಗೆಯೇ ತಂದೆಯವರ ಸ್ನೇಹಿತರು ಪ್ರತ್ಯಕ್ಷವಾದರು. ನಮ್ಮ ಕಾರನ್ನು ಅಲ್ಲೇ ಬಿಟ್ಟು ಸ್ನೇಹಿತರ ಗಾಡಿಯಲ್ಲಿ ಹೊರಟೆವು. 'ಪ್ರಗತಿ' ಎಂಬ ಕಬಂಧನ ಕೈ ಸೋಕಿರದ ದಟ್ಟ ಅರಣ್ಯಪ್ರದೇಶವನ್ನು ಕುರಿತು ಸಾಗಿತು ನಮ್ಮ ಸವಾರಿ.

ಮೋಯಾರ್ ನದಿಯ ಕಣಿವೆ ಪ್ರದೇಶದಲ್ಲಿ ಬುಡಕಟ್ಟಿನ ಜನಾಂಗ ವಾಸವಾಗಿದ್ದ ಮನೋರಮ್ಯವಾದ ಒಂದು ಪುಟ್ಟ ಹಳ್ಳಿ. ಮರಳಿನ ಹಾಸು ಕಾಣುವಷ್ಟು ತಿಳಿಯಾಗಿ ಹರಿಯುತ್ತಿದ್ದ ಮೋಯಾರ್ ನದಿ. ನದಿಯ ಎದುರು ದಂಡೆಯಲ್ಲಿ ಕುರಿಮರಿಗಳಂತೆ ಹುಲ್ಲು ಮೇಯುತ್ತಿದ್ದ ಜಿಂಕೆಗಳ ಸುಂದರ ದೃಶ್ಯ. ನಾವೆಲ್ಲ ಜಿಂಕೆಗಳನ್ನು ನೋಡುತ್ತ, ನದಿಯಲ್ಲಿ ತೊಳಲಾಡುತ್ತ, ಅಮ್ಮ ತಂದಿದ್ದ ತಿಂಡಿಗಳನ್ನು ಕುರುಕುತ್ತ ಉಲ್ಲಾಸದಿಂದ ಕಾಲ ಕಳೆಯುತ್ತಿರಲು, ಅತ್ತೆಯವರು ಮಾತ್ರ ಆನೆಯದ್ದೇ ಜಪ ಮಾಡುತ್ತಿದ್ದರು !

ಸಂಜೆ ಹೊತ್ತಿನಲ್ಲಿ ಆನೆಗಳು ಕಾಣಿಸಿಕೊಂಡು ಹಾವಳಿ ಮಾಡುತ್ತವಂತೆ. ತಮ್ಮನ್ನು ರಕ್ಷಿಸಿಕೊಳ್ಳಲು ಮನೆಗಳ ಸುತ್ತಲೂ ಆನೆಗಳು ದಾಟಲಾರದಷ್ಟು ಆಳವಾದ ಕಂದಕಗಳನ್ನು ತೋಡಿಕೊಂಡಿದ್ದರು ಹಳ್ಳಿಯ ನಿವಾಸಿಗಳು. ಇರುಳು ಕವಿಯುವ ಮುನ್ನ ಅರಣ್ಯವನ್ನು ದಾಟಿಬಿಡುವುದು ಒಳ್ಳೆಯದು ಎಂದು ತಂದೆಯವರ ಸ್ನೇಹಿತರು ತ್ವರಿತಪಡಿಸಿದರು. ನಾವೆಲ್ಲ ಮನಸ್ಸಿಲ್ಲದ ಮನಸ್ಸಿನೊಂದಿಗೆ ಹೊರಡ ಬೇಕಾಯಿತು.

ಕುಲುಕಿ ಕುಣಿದು ಕುಪ್ಪಳಿಸಿ ಅರಣ್ಯದ ಕಚ್ಚಾ ರಸ್ತೆಯಲ್ಲಿ ಸಾಗುತ್ತಿದ್ದ ನಮ್ಮ ಗಾಡಿ ಇದ್ದಕ್ಕಿದ್ದಂತೆ ನಿಂತುಬಿಟ್ಟಿತು. ಎಷ್ಟು ಬಾರಿ ಪ್ರಯತ್ನಿಸಿದರೂ ಹೊರಡದೆ 'ಗರ್ ಗರ್' ಎನ್ನುತ್ತ ಹಠ ಮಾಡಿತು. ಅದೇ ಸಮಯ ದಟ್ಟವಾದ ಪೊದೆಯ ಹಿಂದೆ ಬಚ್ಚಿಟ್ಟುಕೊಂಡಿದ್ದ ಒಂದು ಕಾಡಾನೆ ಘೀಳಿಡುತ್ತ ಹೊರ ಬಂದಿತು. ನಮಗೆಲ್ಲ ಜೀವವೇ ಬಾಯಿಗೆ ಬಂದಂತೆ ಅನ್ನಿಸಿತು.

'ಆನೆಯನ್ನು ಕಂಡು ನಾವು ಭಯಪಡುವ ಹಾಗೆ ನಮ್ಮನ್ನು ಕಂಡು ಆನೆಗೂ ಭಯವಾಗುತ್ತದೆ. ಬೆದರಿಕೆ ಹಾಕಿ ನಮ್ಮನ್ನು ಓಡಿಸುವ ಉದ್ದೇಶದಿಂದ ಘೀಳಿಡುತ್ತಿದೆ ಅಷ್ಟೆ !' ಎಂದು ನಮಗೆ ಧೈರ್ಯ ನೀಡಿದರು ತಂದೆಯವರು ಮತ್ತು ಅವರ ಸ್ನೇಹಿತರು.




ವ್ಯಾನ್ ಚಾಲಕ ಗಾಡಿಯನ್ನು ಹೊರಡಿಸಲು ಶತಪ್ರಯತ್ನ ಮಾಡುತ್ತಿದ್ದ. ಆನೆ ನಮ್ಮನ್ನು ದಿಟ್ಟಿಸುತ್ತ ಮತ್ತೊಮ್ಮೆ ಘೀಳಿಟ್ಟು ಎರಡು ಹೆಜ್ಜೆ ಮುಂದಿಟ್ಟಿತು. ಅತ್ತೆಯವರ ಮೊಗ ಬಿಳಿಚಿಕೊಂಡಿತು. ಸರ್ರನೆ ಸೀಟಿನಿಂದ ಜಾರಿ ಕೆಳಗೆ ಕುಳಿತುಬಿಟ್ಟರು. ನಡುಗುತ್ತಿದ್ದ ತುಟಿಗಳಲ್ಲಿ ಗಣೇಶನ ಸ್ತುತಿ !' ಅಪ್ಪಾ ಗಣೇಶ, ಈ ಬಿಕ್ಕಟ್ಟಿನಿಂದ ನಮ್ಮನ್ನು ಕಾಪಾಡಪ್ಪಾ. ನಿನಗೆ ನೂರ ಎಂಟು ಕೊಳುಕಟ್ಟೆಗಳನ್ನು ಸಮರ್ಪಿಸುವೆ.' ಎಂದು ಗಟ್ಟಿಯಾಗಿ ಹೇಳಿಕೊಂಡರು.

ಅತ್ತೆಯ ಸ್ತುತಿ ಗಣೇಶನಿಗೆ ಕೇಳಿಸಿತೋ ಏನೋ ! ಇದ್ದಕ್ಕಿದ್ದಂತೆ ಸ್ಟಾರ್ಟ್ ಆಯಿತು ನಮ್ಮ ಗಾಡಿ. ಚಾಲಕ ಟಾಪ್ ಗೇರಲ್ಲಿ ಗಾಡಿಯನ್ನು ಓಡಿಸ ತೊಡಗಿದ. ಆನೆ ನಿಂತಲ್ಲೇ ನಿಂತು ನಮ್ಮನ್ನು ನೋಡುತ್ತಿರಲು ನಾವು ಅಲ್ಲಿಂದ ಪರಾರಿ !

'ಅತ್ತೆ ! ಗಣೇಶನಿಗೆ ಎಷ್ಟು ಕೊಳುಕಟ್ಟೆಗಳನ್ನು ಸಮರ್ಪಿಸಿದಿರಿ ? ನೂರ ಎಂಟೋ ಇಲ್ಲ ಇನ್ನೂರ ಹದಿನಾರೋ ?' ಬಹಳ ಕಾಲದ ವರೆಗೂ ಅತ್ತೆಯನ್ನು ಪ್ರಶ್ನಿಸಿ ಮೋಜು ಮಾಡುತ್ತಿದ್ದದ್ದನ್ನು ನೆನಪಿಸಿಕೊಂಡಾಗ ತನ್ನಷ್ಟಕ್ಕೆ ತಾನೇ ನನ್ನ ಮೊಗದಲ್ಲಿ ಕಿರುನಗೆ ಅರಳಿತು.

ಸೆಪಿಯಾ ಬಣ್ಣದ ಚಿತ್ರ ಶುಭವಾಗಿ ಮುಗಿಯಿತು ! ನಾನು ತಯಾರಾಗಿದ್ದ ಕೊಳುಕಟ್ಟೆಗಳನ್ನು ಹಬೆಯಲ್ಲಿಡಲು ಹೊರಟೆ!



# ದಶಮಿಯಿಂದ ಪ್ರತಿಪತ್ತಿಡೆಗೆ

**✍ರಾಂಕಿ ಬೆಳ್ಳೂರು**

ದಾಶರಥಿಯಿಂದ ದಶಕಂಠನಿಗೆ ದಶಮಿಯಂದು ದೊರಕಿತು ಧರೆಯಿಂದ ದೇವಲೋಕಕೆ ದಾರಿ ಮುಕ್ತನಾದನು ಮಹಿಷನು ಮಹಿಷಾಸುರ ಮರ್ಧಿನಿಯಿಂದ ಮಹಾನವಮಿಗೆ ಚಂಡ–ಮುಂಡರನ್ನು ಚಂಡಾಡಿದಳು ಚಾಮುಂಡಿ ಚಂಡಿಕಾಷ್ಟಮಿಯಂದು. ಮಹಾ ಗೌರಿಯು ಮಾತೆ ಕಾಳರಾತ್ರಿಯಾಗಿ ಮಾಹಾ ಶಕ್ತಿಯಿಂದ ಮರ್ಧಿಸಿದಳು ಮಹಾ ಶುಂಭನಿಶುಂಭರನ್ನು ಮಹಾ ಸಪ್ತಮಿಯಂದು.

ಶುಭ ಸ್ವರೂಪಿಯು ಷಷ್ಠಿದೇವಿಯು ಸೃಷ್ಟಿ ಮಾತೆಯು ಸಲಹಿದಳು ಸ್ಕಂದನನ್ನು ಪಂಚಧಾರೆಗಳುಳ್ಳ ಪಂಚಮಾತೆಯು ಪದ್ಮಾಸಿನಿಯಂತೆ ಪಂಚಮಿಯಂದು ಪಂಚ ಲಲಿತಾ ತ್ರಿಪುರ ಸುಂದರಿಯಂತಿಹಳು. ಚತುರ್ಥ ದುರ್ಗಾ ಮಂದಸ್ಮಿತ ಮುಖಿ ಚಾರಚರೇಶ್ವರಿ ಚಂದನ ಲೇಪಿತೆ ಕೂಷ್ಮಾಂಡ ದೇವಿ ಚತುರ್ದಶಭುವನ ಸೃಷ್ಟಿಗೆ ಚುಕ್ಕಿಯಿಟ್ಟಳು.

ತನ್ಮಾತ್ರದಿಂದ ಸನ್ಮಾತ್ರದೆಡೆಗೆ ತ್ರಿಗುಣಾತೀತಳಾದ ತ್ರಿಮೂರ್ತಿಗಳಿಂದಾಯುಧ ಪಡೆದ ತ್ರಿಮೂರ್ತಿ ನೀತಪೋನಿರತೆ ಚಂದ್ರಘಂಟಾದೇವಿ ತಾಯಿಯಂತಿರುವಳು.

ದ್ವಿತೀಯದಂದು ದೇವಜಾತಾ ದುರ್ಗಿದೇವಿಯು ಧರಿಸಿಶ್ವೇತವರ್ಣವ ದೈವಿಕದೇವತೆ ಬ್ರಹ್ಮಚಾರಿಣಿ ದಿನನಿತ್ಯದ ದುಃಖದಾರಿದ್ರ್ಯವನ್ನು ದೂರವಾಗಿಸುವಳು.

ಪ್ರತಿ ಪತ್ತಿನಿಂದಾರಂಭವಾಗಿ ಪ್ರಕೃತಿ ಮಾತೆಯೆನಿಸಿದ ಪ್ರತಿ ಪಾಪಪ್ರಣಾಶಿನಿ ಪರಮೇಶ್ವರಿಯ ಪೂರ್ಣಪಕ್ಷ ನವರಾತ್ರಿ ವ್ರತ ಪ್ರಪನ್ನವಾಗುವುದು ಪರಮಪುರುಷ ಪರಮಾತ್ಮನಾದ ಪಟ್ಟಾಭಿರಾಮ ಪರಾಜಯಗೊಳಿಸಿದ ಶಕಂಠನ ಪ್ರಖ್ಯಾತವಾದ ವಿಜಯದಶಮಿಯೊಂದಿಗೆ.

## ರೈಲ್ಬಿಡೋ ಜೋಕ್ಸು

**ಇಂಜಿನ್ ಡ್ರೈವರ್: ರಾಂಕಿ ಬೆಳ್ಳೂರು**

ರೈಲ್ವೇಸ್–ನಲ್ಲಿ ಕೆಲಸ ಮಾಡೋರ ಮೆಚ್ಚಿನ ಹಬ್ಬ?

ಬೋಗಿ ಹಬ್ಬ.

ರೈಲಲ್ಲಿ, ತುಂಬಾ ಪ್ಯಾಸೆಂಜರ್ಸ್ ಬರ್ತ್ ಬೇಕು ಅಂತ ಸಾಯ್ತಾರೆ.

ಟ್ರಾಕ್ ಸರಿಯಾಗಿದ್ರೇನೆ ರೈಲು ಬಿಡಕ್ಕೆ ಆಗೋದು.

ಕೆಲವರಿಗೆ ಮಲಗಿದ್ರೆ ನಿದ್ರೆಬರಲ್ಲ. ಕೂತ್ಕೊಂಡೇ ನಿದ್ರೆಮಾಡ್ತಾರೆ. ಅಂತಹವರಿಗೆ ಆರ್.ಎ.ಸಿ. ಒಂದು ಬೂನ್.

ರೈಲಲ್ಲಿ ಟೀ ಮಾರುವವನಿಗೆ ಹೆಣ್ಣು ಮಗು ಹುಟ್ಟಿತು. ಹೆಸರು? ಛಾಯಾ.

ಕೆಲವರು ಥಟ್ ಅಂತ ಟ್ರಾಕ್ ಹಾಕ್ಕೊಂಡು ರೈಲ್ಬಿಡ್ತಾರೆ. ಇದಕ್ಕೆ ಅವರೇನು ಸ್ಪೆಷಲ್ಲಾಗ್ ಟ್ರೈನ್ ಆಗಿರಲ್ಲ.

ಇದರಲ್ಲಿ ಅಗ್ರಗಣ್ಯರು ನಮ್ಮ 'ಗೌರಿ–ಗಣೇಶ' ಚಿತ್ರದ ಲಂಬೋದರ್ !

ಮಲಯಾಳಿಗಳು ಕ್ಲಾಕ್ ರೂಮ್‌ನ್ನು

ಕ್ಲೋಕ್ ರೂಮ್ ಅಂತಾನೆ ಓದೋದು!



# ಅದ್ಧೂರಿ ಅಂಬಾರಿ....ಅಂಬಾರಿ....

ಸುಮನಾ

"**ಬೆ**ಳಗಾಗಿ ನಾನೆದ್ದು ಯಾರ್ಯಾರ ನೆನೆಯಲಿ ಅಂದುಕೊಂಡು, ಎರಡು ಕೈಗಳುಜ್ಜುತ್ತಾ ನಮಿಸಿ ಕರಾಗ್ರೇ ವಸತೇ ಲಕ್ಷ್ಮೀ ಕರಮಧ್ಯೇ ಸರಸ್ವತಿ..ಅಂತ ಹೇಳಿ, ಮಂಚದಿಂದ ಕೆಳಗಿಳಿದು ಭೂಮಿತಾಯಿಗೆ ನಮಸ್ಕರಿಸಿ, ಅತ್ತೆಯವರನ್ನು ಎಳಿಸೋಣ ಅಂತ ಎಂದಿನಂತೆ ರೂಮಿಗೆ ಹೋಗಿ ಅತ್ತೇ, ಅತ್ತೇ ಅಂತ ವಸು ಕರೆದು ನೋಡಿದಾಗ ಮಂಚ ಖಾಲಿ, ಅರೇ ಎಲ್ಲಿ ಹೋದ್ರು ಇವ್ರು ,ದಿನಾ ನಾನೇ ಅವರನ್ನು ಮಂಚದಿಂದ ಇಳಿಸಿ, ಭುಜಗಳನ್ನು ಹಿಡಿದು ಬಾತ್ ರೂಮಿಗೆ ಕರೆದೊಯ್ದು ಬಿಟ್ಟರೆ, ಅವರು ಪ್ರಾತಃಕಾಲದ ನಿತ್ಯ ಕರ್ಮಗಳನ್ನು ಮುಗಿಸಿ ದೇವರ ಕೋಣೆಯ ಮುಂದೆ ನಿಂತು, ನಮಸ್ಕಾರ ಮಾಡಿ, ಅಡಿಗೆ ಮನೆಗೆ ಬಂದು, ಅಲ್ಲಿದ್ದ ಅವರಿಗೆಂದೇ ಮಾಡಿಸಿದ್ದ ಟೀಕ್ ವುಡ್ ಕುರ್ಚಿಯಲ್ಲಿ ಕುಳಿತು, ಸೊಸೆ ಮಾಡಿಕೊಟ್ಟ ಬಿಸಿ ಬಿಸಿ ಸ್ಟ್ರಾಂಗ್ ಫಿಲ್ಟರ್ ಕಾಫಿಯನ್ನು ಅವರದೇ ಮಡಿ ಬೆಳ್ಳಿಲೋಟದಲ್ಲಿ ಕುಡಿಯುತ್ತಾ ..ದಿನಚರಿಯ ಬಗ್ಗೆ ವಿಚಾರಿಸುತ್ತಾ, ಇವತ್ತೇನು ತಿಂಡಿಗೆ ಅಡಿಗೆ ಏನು ? ಏನಾದ್ರೂ ತರಕಾರಿ ಹೆಚ್ಚಿ ಕೊಡ್ಲಾ ? ತೆಂಗಿನಕಾಯಿನೋ, ಕೊಬ್ರಿನೋ ತುರೀಬೇಕಾ, ಸೊಪ್ಪು ಬಿಡಿಸಿಕೊಡ್ಲಾ??ಆ ಪಕ್ಕದ್ಮನೆ ಜಲಜಮ್ಮನ ಸೊಸೆ ಬಸಿರಿ ಅಂತೆ, ಚೊಚ್ಚಲು ಬಸಿರಿ ಬೇರೆ,ಪಾಪ ತಾಯಿಯಿಲ್ಲದ ಮಗು ಕಣೇ, ಗಂಡನ ಮನೇವ್ರೇ ಎಲ್ಲಾ ನೋಡ್ಕೋತಿದಾರೆ, ಅವಳನ್ನು ಊಟಕ್ಕೆ ಕರೆಯೋಣ, ಅವಳಿಗೆ ಇಷ್ಟವಾದದ್ದು ಏನಾದ್ರೂ ಮಾಡ್ಕೊಡೋಣ.. ನಂಗೆ ಮೈಸೂರು ಪಾಕು ಮಾಡೋದು ಚೆನ್ನಾಗಿ ಬರುತ್ತೆ,ಜಾಸ್ತಿ ಹೊತ್ತು ಸ್ಟೋವ್ ಮುಂದೆ ಇರೋದೂ ಬೇಡ ಐದು ನಿಮಿಷ್ದಲ್ಲಿ ಮನೇಲಿ ಬೆಣ್ಣೆ ಕಾಸಿದ ತುಪ್ಪದಲ್ಲಿ ಮಾಡ್ಬಿಡ್ತೀನಿ. ಅದೆಂಥಾ ಅಮೃತದ ರುಚಿ ನಿಂಗೊತ್ತಲ್ವಾ ? ಅಂದಾಗ ವಸು ಹೌದ್ಹೌದು ಅತ್ತೆ,,ನಿಮ್ಮ ಕೈನ ಮೈಸೂರು ಪಾಕು ಅಂದ್ರೆ ಸುಮ್ನೇನಾ..ಮೈಸೂರು ಮಹಾರಾಜರ ಕುಟುಂಬದ ಎಲ್ಲರೂ ಕೂಡಾ ಇಷ್ಟ ಪಟ್ಟು ತಿನ್ನೋ ಹಾಗೆ ಇರುತ್ತೆ ,ನಂಗೂ ತುಂಬಾ ಇಷ್ಟಾನೇ ಅತ್ತೆ, ನನ್ನ ಅತ್ತೆ ಅಂದ್ರೆ ನನಗೆ ತುಂಬ ಇಷ್ಟ ,ಗೌರವಕ್ಕೆ ಪಾತ್ರ ಅನ್ನೋದು ಲೋಕದ ದೃಷ್ಟಿಗೆ ಸುಳ್ಳೆನಿಸಿದರೂ, ಅದು ಸತ್ಯವೇ ಯಾಕೆಂದರೆ ಸಂಬಂಧದಲ್ಲೇ ನಡೆದ ಮದುವೆ. ಯಾರಿಗೂ ಯಾರೂ ಹೊಸಬರಲ್ಲ.

ಹೀಗಾಗಿ ಒಂದು ರೀತಿ ಅಮ್ಮ, ಮಗಳ ಬಾಂಧವ್ಯ.. ಅಂತ ಮನದಲ್ಲಂದು ಕೊಳ್ಳುತ್ತಾ ಸರಿ, ಖಾರ ಏನು ಮಾಡೋಣ ? ಅತ್ತೆ, ಅವಳಿಗೆ ಕೋಡುಬಳೆ, ಖಾರಾಸೇವೆ ತುಂಬಾ ಇಷ್ಟ ಅಂತೆ, ಅದನ್ನೇ ಮಾಡೋಣ್ವಾ, ಅಂದಾಗ ಅವಳನ್ನೇ ಕೇಳೋಣ ಅಂತ ಮಾತಿನ ಲಹರಿಯಲ್ಲಿ ಮುಳುಗಬೇಕಿದ್ದ ಅತ್ತೆ ಇವತ್ತು ಏನೂ ಸದ್ದಿಲ್ಲ, ಊ ಇಲ್ಲ, ಉಪ್ಪಿನಕಾಯಿ ಇಲ್ಲ ಏನಾಯ್ತೋ,ದೇವರ ಪೂಜೆಗೆಂದು ಹೂತೋಟದ ಹೂವು, ತರಲು ಹೋಗಿದ್ದಾರೇನೋ ಅಂತ ಅತ್ತಿತ್ತ ನೋಡಿದಾಗ ದೊಡ್ಡ ಶಾಕ್ ಆಯ್ತು,ಅತ್ತೆ ಟಿ.ವಿ.ಮುಂದೆ ಪ್ರತಿಷ್ಠಾಪಿಸಿದ್ರು. ಅವರ ಮದುವೆಯ ಜರತಾರಿ ಸೀರೆ ಉಟ್ಟು ,ಕೈಯಲ್ಲಿ ರಿಮೋಟು ಹಿಡಿದಿದ್ರು..ಅರೇ ಆಗ್ಲೇ ಸ್ನಾನಾನೂ ಮಾಡಿಬಿಟ್ಟಿದ್ದಾರೆ ಏನಿದು ವಿಶ್ವ ವಿಸ್ಮಯ ? ಹಾಗೇ ಟಿ.ವಿ.ಯಿಂದ ಬಂದ ಸದ್ದಿನತ್ತ ನೋಡಿದಾಗ..



ನೋಡೇ ಇಲ್ಲಿ, ಮದ್ವೆ ನ್ಯೂಸ್ ಕೊಡ್ತಿದಾರೆ, ನಾನು ಯೂ ಟ್ಯೂಬ್‌ನಲ್ಲಿ.. ಅಧ್ಧೂರಿ ಅಂಬಾನಿ ಮನೆ ಮದ್ವೆ..ವೀಡಿಯೋ..ನೋಡ್ತಿದೀನಿ. ನಾಲ್ಕು ತಿಂಗಳಿಂದ ಇವರ ಮದ್ವೆ ಸಂಭ್ರಮವೇ ಸಂಭ್ರಮ.

ಅವರ ಮಗ ಅನಂತನ ಮದುವೆ ಅಂತೆ, ಹುಡುಗಿ ರಾಧಿಕಾ ಅಂತೆ, ಅಬ್ಬಾ ಅಬ್ಬಬ್ಬಾ.. ಕಣ್ಣೆರಡು ಸಾಲದು ಕಣೆ ತಾಯಿ, ಈ ವೈಭೋಗ ನೋಡೋಕೆ.. ಈಗ ಆರು ತಿಂಗಳ ಹಿಂದೆ ಮೆಟ್ಟಿಲು ಜಾರಿ ಬಿದ್ದು ನನ್ ಕಾಲಿಗೆ ಮಲ್ಟಿಪಲ್ ಫ್ರಾಕ್ಚರ್ ಆಗಿ, ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾಗ.ಆ ನೋವು ತಾಳೋಕಾಗ್ದೆ ಇನ್ನೇನು ನನ್ನ ಕಾಲ ಮುಗೀತು, ಭಗವಂತಾ ನನ್ನನ್ನು ಕರ್ಕೊಂಡ್ಬಿಡು ಅಂತ ಭಗವಂತನ್ನ ಇನ್ನಿಲ್ಲದಂಗೆ ಬೇಡ್ಕೊಂಡಿದ್ದೆ, ಆದ್ರೆ ಅವನ ಕರುಣೆ ನೋಡು, ಈ ಮದುವೆ ನೋಡ್ಲೀ ಅಂತಾನೇ "ನನ್ನ ಬದುಕಿಸಿದಾನೆ ಕಣೇ.." ಅಂದಾಗ ಸೊಸೆ ಮುಸಿ ಮುಸಿ ನಕ್ಕಳು.

ಆಹಾ..ಓಹೋ..ಏನು ವೈಭೋಗ, ಏನು ಮಹಾವೈಭವಾನೇ ಇದೂ..ಆ ತಿರುಪತಿ ತಿಮ್ಮಪ್ಪನ ಮದುವೇನೂ ಇಷ್ಟು ಗ್ರಾಂಡ್ ಆಗಿ ಆಗಿತ್ತೋ ಇಲ್ವೋ..ಜಗತ್ತಿನಲ್ಲಿ ಅತ್ಯಂತ ಶ್ರೀಮಂತ ಮದ್ವೆ ಅಂತೆ, ನ ಭೂತೋ ನ ಭವಿಶ್ಯತಿ ಅನ್ನೋ ಹಾಗೆ, ಇಂದ್ರ ಸಭೇನೇ ಮೀರಿಸುವಂತೆ ಈ ಘನ ವಿಜೃಂಭಣೆ ಏನು..ಅದೇನು ರಾಜ ವೈಭೋಗ..

ಅಂಬಾನಿ ಸಭೆಗೆ ಇಂದ್ರ ಸಭಾಸದರೆಲ್ಲ, ಅಷ್ಟೇ ಏಕೆ  ಬ್ರಹ್ಮ, ವಿಷ್ಣು, ಮಹೇಶ್ವರರೆಲ್ಲ ಬಂದಿರ್ತಾರೆ ಕಣೇ, ನೋಡು ಆಗ ಮಹರ್ಷಿಗಳು ಬಂದಂತೆ ಇಲ್ಲೂ ಶ್ರೀ ದ್ವಾರಕಾಪೀಠದ ಶಂಕರಾಚಾರ್ಯ ಸ್ವಾಮಿ ಸದಾನಂದ ಸರಸ್ವತಿ ಸ್ವಾಮಿಗಳು, ಶಂಕರಾಚಾರ್ಯ ಜ್ಯೋತಿರ್ಮಠದ ಸ್ವಾಮಿ ಅವಿಮುಕ್ತೇಶ್ವರಾನಂದ ಸ್ವಾಮಿಗಳು..ಆಶೀರ್ವಾದ ಮಾಡಲು ಬಂದಿದ್ದಾರೆ, ಅದಿರ್ಲಿ ನಮ್ಮೆಲ್ಲರ ಅಭಿಮಾನದ, ಹೆಮ್ಮೆಯ "ಪ್ರಧಾನಿ ಮೋದೀಜೀ" ಬಂದಿದಾರೆ ಕಣೇ.. ದೇಶ, ವಿದೇಶಗಳಿಂದ ಅನೇಕಾನೇಕ ಪ್ರಮುಖರೂ ಬಂದಿದಾರಂತೆ. ನಮ್ಮ ಹೆಮ್ಮೆಯ ಕ್ರಿಕೆಟ್ ಆಟಗಾರರೂ ಬಂದಿದಾರೆ ನೋಡು..ಅತ್ತೆಯ ಸಂಭ್ರಮ, ಸಂತಸಕ್ಕೆ ಎಣೆಯೇ ಇರಲಿಲ್ಲ..

ಅವರ ಮನೆಯ ಮದುವೇನೇ ನಡೀತಿದೆ ಅನ್ನೋ ಫೀಲಿಂಗು..ಸರಿ, ಅತ್ತೆ.. ತಿಂಡಿ, ಕಾಫಿ ಕೊಡ್ಲಾ.. ಅಂತ ಅಂದ ಸೊಸೆಗೆ, ತಾಳೇ ಈಗ್ಲೇ ಬೇಡ, ಇವತ್ತೇನೋ ಇನ್ನೂ ಹಸಿವೆ ಇಲ್ಲ ಕಣೇ..ಬೆಳಿಗ್ಗೆ ನಾನೇ ಹುರಿಟ್ಟು ಕಲೆಸಿ ತಿಂದೆ.

ಹಿಂದಿಯಲ್ಲಿ ರಾಮಾಯಣ, ಮಹಾಭಾರತ ..ನೋಡ್ತಿದ್ದಂತೆ ಇದೂ ಒಂಥರಾ ಸೂಪರ್ ಎಕ್ಸೈಟ್ಮೆಂಟ್ ಕಣೇ, ಪ್ರೀ ವೆಡ್ಡಿಂಗ್ ಸೆಲೆಬ್ರೇಷನ್ನೂ ಅದೆಷ್ಟು ವೀಕ್ಷಕರು. ದಸರಾ ಅಂಬಾರಿ ಮೆರವಣಿಖೆ ರೀತಿ ಅದೇನು ಅಂದ,ಅದೇನು ಚಂದ..ಸಾಕ್ಷಾತ್ ದೇವ, ದೇವತೆಯರು ಶಿರದಿಂದ..ಪಾದದವರೆಗೆ ಅಲಂಕರಿಸಿಕೊಂಡು ಬಂದಂತೆ ಸಹಸ್ರ ಕಣ್ಣಿನ ನಕ್ಷತ್ರಗಳ ಮಯೂರಗಳ ಮಿಂಚಿನ ಪ್ರದರ್ಶನ ವಾದಂತೆ ವಾಹ್ ಈ ಪ್ರಪಂಚದ ಎಂಟನೆ ಅಧ್ಭುತ ವನ್ನು ನೋಡಲು ಭಗವಂತ ಮೈಯ್ಯೆಲ್ಲಾ ಕಣ್ಣು ಕೊಡಬೇಕಿತ್ತು ಕಣೇ,..ಅಂತ ಅತ್ತೆಯ ಉವಾಚವಾದಾಗ.. ಅಯ್ಯೋ ಅಜ್ಜಿ, ಇಡೀ ಪ್ರಪಂಚದ ಮನುಕುಲ ಮಾತ್ರವೇ ಅಂಬಾನಿ ..ಅಂಬಾನಿ, ಅಂತ ಕನವರಿಸ್ತಿದಾರೆ.. ಅಂದ್ಕೊಂಡ್ಯಾ ಇಲ್ಲಿ ಬಾ ತೋರಿಸ್ತೀನಿ..ಪ್ರಾಣಿಗಳಿಗೂ ಅಂಬಾನಿ ಫಿವರ್ ಬಂದಿದೆ, ಅವುಗಳೂ ಟಿ.ವಿ.ನೋಡಿ ಆನಂದಿಸಲು ಬಂದಿವೆ ಅಂದ ಮೊಮ್ಮಗ, ಏ...ಸುಮ್ನಿರೋ ಏನೇನೋ ಮಾತಾಡ್ಬೇಡ, ಪ್ರಾಣಿಗಳಿಗೇನೋ ಗೊತ್ತು..ಅಂದಾಗ ಮೊಮ್ಮಗ ಕಿಟ್ಟ



ತೋರಿಸಿದ ಗೋವು ಕೂಡಾ ಅಂಬಾನಿ ಕುಟುಂಬದ ಮದ್ವೇನಲ್ಲಿ ತುಂಬ ಇಂಟರೆಸ್ಟ್ ಆಗಿದ್ದಂತೆ, ಗೇಟಿನ ಬಳಿ ಬಂದು ನಿಂತಿದ್ದು "ಅಂಬಾ.. ಅಂಬಾ" ಅಂತ ಕಲಗಚ್ಚು ಕುಡಿಯಲು ಬಂದು ನಿಂತು ಕರೆದಿದ್ದು ಇಂದು ವಿಶೇಷವಾಗಿ "ಅಂಬಾನಿ"ಯನ್ನೇ ಕರೆದಂತಿತ್ತು. ಮನೆ, ಮಂದಿಯೆಲ್ಲಾ ಹೊಟ್ಟೆ ಹಿಡಿದು ನಕ್ಕೂ ನಕ್ಕೂ ಸಾಕಾಯ್ತು. ಮತ್ತೆ ಅತ್ತೆ ಬೇಗ ಬಂದು ಅವರು ಕೂತಿದ್ದ ಕುರ್ಚಿ ಹಿಡಿದು ಕೂತರು, ಬೇರೆ ಯಾರಾದ್ರೂ ಕೂತು ಬಿಟ್ರೇ ಅಂತ ಅವರ ಯೋಚನೆ, ಅದು ಮ್ಯೂಸಿಕಲ್ ಚೇರ್ ಆಟದಂತಿತ್ತು. ಅದೇನೋ ಆಶ್ಚರ್ಯ, ಪಕ್ಷಿಗಳ ಕಲರವ ಕೂಡಾ ಅಂಬಾನೀ, ಅಂಬಾನೀ ಅಂತ ಅಂದ್ಹಾಗೆ ಅತ್ತೆಗೂ ಕೇಳಿಸಿದ್ದು ಭ್ರಮೆ ಅನಿಸಿದ್ದು ನಿಜವಾಗ್ಲೂ ಸುಳ್ಳಲ್ಲ. ಕೋಗಿಲೆಯೂ ಕೂಹೂ..ಅಂತ ಚೈತ್ರ ಮಾಸಮುಗಿದ ಅಕಾಲದಲ್ಲೂ ಸುಮಧುರವಾಗಿ ಹಾಡಿದ್ದು ಪಂಚಮ ವೇದದ ಪ್ರೇಮದ ನಾದ ಹಾಡಿದಂತಿತ್ತು.

ನೋಡೇ ,ಅವರ ವೈಭೋಗ, ವೈಭವ..ಆ ಇಂದ್ರನ ವೈಭೋಗಾನೂ ಮೀರಿ ನಡೀತಿದೆ ಮದ್ವೆ..ಸ್ವರ್ಗಾನೇ ತಂದು ಭೂಮಿಮೇಲೆ ಇಟ್ಟಂಗಿದೆ. ನಂಗೇನೋ ಒಂದು ಡೌಟು ಕಣೇ ವಸೂ, ಅಂದ್ರು ಅತ್ತೆ, ಏನದು ಅತ್ತೆ ಅಂತ ವಸು ಕೇಳಿದಾಗ..ಅಲ್ವೇ ನಾವು ಎಲ್ಲದಕ್ಕೂ, ಸಕಲ ಸಂಪತ್ತಿಗೆ ಆ ಭಗವಂತನನ್ನು ಪ್ರಾರ್ಥಿಸ್ತೀವಿ. ಆದ್ರೆ ಇವರ ಕೇಸ್ ನಲ್ಲಿ ಅಂಬಾನೀ ಮಹಾರಾಜರೇ ಆ ದೇವ್ರಿಗೆ ಹೇಳ್ತಾರೇನೋ.. ಹ್ಞೂ, ಕೇಳಪ್ಪಾ ಭಗವಂತ,ನಿಂಗೇನು ವರಬೇಕು ಅಂತ.. ? ಪರಿಸ್ಥಿತಿ ಹಾಗೇ ಇದೆ ಕಣೇ, ಅಲ್ಲ ಕಣೇ ಆ ರಂಗಯ್ಯನ ಮಗ ಜಗ್ಗುಗೆ ಇಂಜಿನಿಯರಿಂಗ್ ಮಾಡಿದ್ರು ಯಾವ್ದೂ ಕೆಲಸ ಸರಿಯಾಗಿ ಸಿಗ್ತಿಲ್ವಂತೆ, ಹತ್ತೋ ,ಹದಿನೈದು ಸಾವಿರ ರೂಪಾಯಿಯ ಸಂಬಳ ಅಂತೆ.. ಆ ಪಕ್ಕದ ಮನೆ ಮಾಣಿಕ್ಯಮ್ಮ ಹೇಳ್ತಿದ್ರು, ಅಂಬಾನಿ ಮನೆ ಕೆಲಸಕ್ಕೆ ಸೇರಿದ್ರೆ ತಿಂಗಳಿಗೆ ಮಿನಿಮಂ ಎರಡುಲಕ್ಷ ಸಂಬಳ ಅಂತೆ ಅದ್ಯಾಕೆ ಆ ಕೆಲಸಕ್ಕೆ ಇವ್ನು ಸೇರಬಾರದು,ಅಷ್ಟೇ ಅಲ್ದೆ ಎಜುಕೇಶನ್, ಮೆಡಿಕಲ್ ಫೆಸಿಲಿಟಿ ಇದ್ಯಂತೆ ಅಂದ್ರು..ಹ್ಞೂ ಅತ್ತೆ, ತುಂಬಾ ಒಳ್ಳೆಯ ಐಡಿಯಾ, ಆದ್ರೆ ಹೋಟಲ್ ಮ್ಯಾನೇಜ್ ಮೆಂಟ್ ಕೋರ್ಸ್ ಮಾಡಿರಬೇಕಂತೆ.. ಅದ್ನಾದ್ರೂ ಮಾಡ್ಕೋ ಅಂತ ಆ ಜಗ್ಗುಗೆ ಹೇಳಬೇಕು..ಇವತ್ತು ಅವರಮ್ಮ ಬಂದಾಗ ನಾನೇ ಹೇಳ್ತೀನಿ ಬಿಡು ಅಂದ್ರು..

ಅಲ್ಲಾ ಕಣೇ ಅವರೇನು ಬಂಗಾರದ ದವಸ, ಧಾನ್ಯಗಳಿಂದಾನೇ ಅಡಿಗೆ ಮಾಡ್ತಾರೋ ಏನೋ? ಏ..ಅದ್ಹೇಗೆ ಅತ್ತೆ?? ಮೈದಾಸನ ಕಥೆ ಕೇಳಿಲ್ವಾ ? ದವಸ, ಧಾನ್ಯ ಬಂಗಾರವಾದ್ರೆ ತಿನ್ನೋದು ಹೇಗೆ ?ಅವರೂ ನಮ್ಮ ಹಾಗೆ ಅನ್ನ, ರೊಟ್ಟಿ, ಚಪಾತಿ, ಇತ್ಯಾದೀನೇ ತಿನ್ನೋದು, ನೋಡಿ ಅವರ ಮಗನ ಮದುವೆಗೆ ಬಾಂಬೆಯ ಮೈಸೂರು ಕೆಫೆ ಓನರ್ ಕುಟುಂಬದ ವರನ್ನು ಕರೆದಿದ್ದಾರಂತೆ. ಮುಖೇಶ್ ಅಂಬಾನಿಗೆ ಆ ಹೋಟೆಲ್ ಇಡ್ಲಿ ತುಂಬಾ ಇಷ್ಟ ಅಂತೆ,ಪ್ರತಿ ವಾರದ ಕಡೆಯಲ್ಲಿ ಇವರ ಹೋಟೆಲ್ ನಿಂದಾನೇ ಊಟ, ತಿಂಡಿ ಸರಬರಾಜಂತೆ. ಸಾಲದ್ದಕ್ಕೆ ವಿದೇಶದಿಂದ ಹಾಡು, ನೃತ್ಯಕ್ಕೆ ಅಂತ ಕೋಟ್ಯಾಂತರ ರೂ.ಗಳನ್ನು ಕೊಟ್ಟು ಕಲಾವಿದರನ್ನು ನಟ, ನಟಿಯರನ್ನು ಕರೆದು ಕಾರ್ಯಕ್ರಮ ಇಟ್ಟಿದ್ದಾರಂತೆ. ಅವರಿಗೆ ವಿಮಾನ, ಹೆಲಿಕಾಪ್ಟರು ಅಂದ್ರೆ ಆಟಿಕೆಗಳೇನೋ ಅನ್ಸುತ್ತೆ.. ಅತ್ತೆ ಅಂದ್ರು ನೋಡು ನನ್ನನ್ನು ಕಾಶಿಗೊಂದ್ಸರ್ತಿ ಕರ್ಕೊಂಡ್ಹೋಗು, ಆ ನೀತಾ ಮೇಡಂ ನೋಡಿದ್ರೆ ದೇವ್ರಲ್ಲಿ ತುಂಬ ಭಯ, ಭಕ್ತಿ ಅನ್ಸುತ್ತೆ. ಮದುವೆಗೆ ಮೊದಲು ಕಾಶಿ ವಿಶ್ವನಾಥನ ದರ್ಶನ ಮಾಡಿ ಬಂದ್ರಂತೆ.



ನಿಶ್ಚಿತಾರ್ಥ, ಘನವಾಗಿ ನಡೆಸಿ, ಪ್ರೀವೆಡ್ಡಿಂಗ್ ಅಂತ ಕ್ರೂಸ್ ಗ್ರಾಂಡ್

ಪಾರ್ಟಿ ಬೇರೆ ಮಾಡಿದಾರಂತೆ. ಅಂದಾಗ..ಆದ್ರೆ ಮದ್ವೇಲಿ ಪಾಪ ವಿಪರೀತ ಮಳೆ ಅಂತೆ ಅತ್ತೆ..ಅಂದ್ಲು ವಸು, ಅಯ್ಯೋ ಮನಸ್ಸು ಮಾಡಿದ್ರೆ ಅಂಬಾನಿ ಆಕಾಶಕ್ಕೇ "ದೊಡ್ಡ ಟಾರ್ಪಾಲು "ಹಾಕುತ್ತಿದ್ದರು, ಪಾಪ ಟೈಂ ಆಗ್ಲಿಲ್ಲ ಅನ್ಸುತ್ತೆ. ಅಲ್ದೆ ಮಳೆ ಬರೋದು ಶುಭ ಶಕುನ ಕಣೇ, ದೇವ ದೇವತೆಗಳು ಪುಷ್ಪ ವೃಷ್ಟಿ ಮಾಡಿದಂತೆ.. ಅಂತ ಮತ್ತೆ ಅವರಿಗೆ ಸಪೋರ್ಟು.. ನಮ್ಮ ಸಿನಿಮಾ ತಾರೆಯರೆಲ್ಲ ಅಲ್ಲೇ ಮಿಂಚುತ್ತಿದ್ದಾರೆ ನೋಡಿ. ನಮ್ಮ,ಕನ್ನಡ ನಟ ಯಶ್ ಕೂಡಾ ಅಲ್ಲಿದಾರೆ ಅತ್ತೆ.. ವಿವಿಧ ಭಾಷೆಯ ನಟ,ನಟಿಯರೆಲ್ಲಾ ಹಾಜರಿ ಹಾಕಿದಾರೆ. ಹ್ಞೂ.. ಹೌದು ಕಣೇ.. ನಾನೂ ಅದೆಲ್ಲಾ ನೋಡಿದೆ.. ಅವರ ಮನೇನೋ ಜಗಮಗಿಸುವ, ಅರಮನೇನೋ.. ಪ್ರತಿ ಸ್ಥಳವೂ ಬಂಗಾರಮಯವೇ ಆಗಿರ್ಬೇಕು, ಅದೇನೋ ಅಂತಾರಲ್ಲ ಶ್ರೀಮಂತಿಕೆ ಅಂದ್ರೆ ಲಕ್ಷ್ಮಿ ಕಾಲುಮುಕೊರ್ಂಡು ಬಿದ್ದಿದಾಳೆ ಅಂತ, ಆದ್ರೆ ಇವ್ರ ಮನೇಲಿ ವೈಭವ ಸಿರಿಲಕ್ಷ್ಮಿ ಮಕಾಡೆ ಮಲೀಕೊಂಡ್ಬಿಟ್ಟಿದಾಳೆ ಅನ್ಸುತ್ತೆ..

ಸರಿ, ಸರಿ ಬಾ ಬಾ.. ಇವತ್ತು ನೀನೂ ನನ್ನ ಜೊತೆ ಅವರ ಮದ್ವೆ ವೀಡಿಯೋ ನೋಡು, ಅಡಿಗೆ ಏನೂ ಬೇಡ.. ಅದೇನೋ ಸ್ವಿಗ್ಗೀ, ಅಂತ ಆರ್ಡರ್ ಮಾಡ್ತೀಯಲ್ಲ ಅಲ್ಲೇ ಏನಾದ್ರೂ ತರಿಸಿ ಬಿಡು..ಹ್ಞಾ..ಹಾಗೇ ಸಿಹಿನೂ ತರಿಸ್ಬಿಡೆ ಅವರ ಮದುವೆ ಸ್ವೀಟ್ಸ್ ಅವರ ಪರವಾಗಿ ನಾನೇ ಕೊಡಿಸ್ತೀನಿ. ಈ ತಿಂಗಳು ನನ್ನ ಪೆನ್ಶನ್ ದುಡ್ಡಿನಲ್ಲಿ, ನನ್ನ ಯಜಮಾನರು ತೀರಿದ ಮೇಲೂ ನಂಗೆ ಅವರ ಪೆನ್ಶನ್ ಬರ್ತಿದೆ ನೋಡು, ಹಾಗೇ ಆ ಪಕ್ಕದ್ಮನೆ ಬಸುರಿ ಸವಿತಾನೂ ಕರೆದು ಕೊಡೋಣ ನೋಟ್ ಮಾಡ್ಕೋ... ಹೋಳಿಗೆ, ಮಿಠಾಯಿ, ಕಾಶೂ ಬರ್ಫಿ, ಕ್ಯಾರೆಟ್, ಹಲ್ವ. ಲಡ್ಡು. ಚಿರೋಟಿ,. ಚಕ್ಕುಲಿ, ಕೋಡುಬಳೆ ಅಂತಿದ್ದಂತೆ ಮೊಮ್ಮಗ ಅಂದ ಅಜ್ಜಿ, ಅವರು ಅಂಬಾನಿ ಅಲ್ವಾ ಎರಡೂವರೆ ಸಾವಿರ ವೆರೈಟಿಗಿಂತ ಹೆಚ್ಚಿನ ತಿಂಡಿಗಳನ್ನು ಇಟ್ಟಿದಾರಂತೆ, ಅಷ್ಟು ಅವರು ಮಾಡ್ತಾರೆ.. ನಾವು.. ಅಷ್ಟೆಲ್ಲಾ ಮಾಡೋಕಾಗುತ್ತಾ ? ಜೊತೆಗೆ ನಿನಗೆ ಶುಗರ್ ಇರೋದು ಮರೀಬೇಡ, ಅಂದ ಏ..ಇಲ್ಲ ಕಣೋ ಶುಗರ್‌ಗೆ ಹೇಳಿಬಿಡ್ತೀನಿ ಇವತ್ತು ರಜಾ, ನೀನು ಬರ್ಬೇಡ ಅಂತ.. ನಗುತ್ತಾ ಅಂದ್ರು.. ಸರಿ ಬಿಡಿ ಅತ್ತೆ, ನಿಮ್ಮಾಸೆಯಂತೆ ತರಿಸುತ್ತೇನೆ. ಅದೇನೋ ಅಂತಾರಲ್ಲ" ಹಾಗೆ ಎದುರು ಮನೇಲಿ ಮಗು ಹುಟ್ಟಿದ್ರೆ ಪಕ್ಕದ್ಮನೇಲಿ ತೊಟ್ಟಿಲು ತೂಗಿದ್ರಂತೆ" ಅನ್ನೋ ಗಾದೆ ಹಾಗಾಯ್ತು ನಿಮ್ಮ ವರಸೆ.. ಅನಂತ ಆಕಾಶದಲ್ಲಿ...ಹರಡಿದ ಸಿರಿ ಪ್ರಭೆ ನೋಡೋಣ ಅಂತ ಮಗ, ಅತ್ತೆಯ ಜೊತೆ ಕುಳಿತ ಸೊಸೆಯ ಕಿವಿಯಲ್ಲಿ ಏನೋ ಗುಟ್ಟು ಹೇಳಿದ್ರು... ಅತ್ತೆ.. ಅದನ್ನು ಕೇಳಿದ ಸೊಸೆ ಬಿದ್ದೂ ಬಿದ್ದೂ ನಕ್ಕಳು.. ಅದೇನಮ್ಮ.. ನಂಗೂ ಹೇಳು ಒಬ್ಳೇ ನಗಬೇಡ ಅಂದ ಮಗನಿಗೆ..ಅಮ್ಮ ಹೇಳಿದ್ದು..

ನೋಡೋ..ನಿನ್ನ ಅಜ್ಜಿಯ ಕಡೆಯಾಸೆ ಏನು ಗೊತ್ತಾ..ಈ ಜನ್ಮ ಸಾಕಾಯಿತಂತೆ.. ಆದಷ್ಟು ಬೇಗ ಆ ಭಗವಂತನ ಪರಮಪಾದಗಳನ್ನು ಸೇರಿ.. ಮತ್ತೆ.. ಜನ್ಮ ಪಡೆದು ಅನಂತ ಅಂಬಾನಿ ಹೊಟ್ಟೇಲಿ ಹುಟ್ಟಬೇಕಂತೆ.. ಮುಖೇಶ್ ಅಂಬಾನಿ ಮೊಮ್ಮಗುವಾಗಿ ಆ ವೈಭೋಗ ಅನುಭವಿಸಬೇಕಂತೆ ಕಣೋ..ಇದಕ್ಕೇನು ಹೇಳೋಣ..ಅಂತ ಅಂದಾಗ ಮತ್ತೆ ಅಮ್ಮ, ಮಗ ಒಟ್ಟಿಗೇ ನಕ್ಕರು.



ಅತ್ತೆ ಮಾತ್ರ...ತನ್ನ ಪ್ರಾರ್ಥನೆ ಈಡೇರುವುದರಲ್ಲಿ ಕಿಂಚಿತ್ತೂ ಅನುಮಾನವೇ ಇಲ್ಲವೆಂಬಂತೆ ಹಂಡ್ರೆಡ್ ಪರ್ಸೆಂಟ್ ಕಾನ್ಫಿಡೆನ್ಸ್ ನಿಂದ..ಸೂಪರ್ ಬ್ರೈಟ್ ಆಗಿ ನಗು ನಗುತ್ತಾ 24 ಕ್ಯಾರೆಟ್ "**ಅಪರಂಜಿ**"ಯಂತೆ ಫಳ ಫಳ ಹೊಳೆಯುತ್ತಿದ್ದರು.

# ವೈ ದಿಸ್ ಕೊಲವರಿ ಕೊಲವರಿ ಡಿ

ಸುಮಾವೀಣಾ, ಹಾಸನ

ನಯನಾ ಅಮ್ಮ ಸುಬ್ಬಮ್ಮ ಮಗಳ ಮನೆಗೆ ಅಂತ ಬೆಂಗಳೂರಿಗೆ ಹೋಗಿದ್ರಂತೆ ಮಗಳು ಅಳಿಯ ಡೆಲಿವರಿ ಬೇಗ ಆಗುತ್ತೆ... ಈಗ... ಈಗ... ಅಂತ ಖುಷಿಪಡ್ತಿದ್ದರೆ ಸುಬ್ಬಮ್ಮಿಗೋ ತಲೆ ಬಿಸಿ ಆಗಿ "ಡೆಲಿವರಿ ಅಂದ್ರೆ ಹೆರಿಗೆ ಅಲ್ವಾ! ಯಾಕೆ ಡೆಲಿವರಿ ಬಾಯ್ ಬಂದ! ಡೆಲಿವರಿ ಆಯ್ತಾ !ಅನ್ತಾ ಕೇಳ್ತಾ ಅವ್ರೆ" ಎಂದು ಘನ ಯೋಚನೆ ಮಾಡುತ್ತಾ "ಅಲ್ಲಾ ಕಣೆ ನಯ್ನ ದಿನ ಆಗ್ಯೆತೆ ಅಂತ ಒಂದು ಸೊಲ್ಲ್ ಹೇಳಬಾರ್ದ ಬೆಣ್ಣೆ.... ಅದು.... ಇದೂ... ಎಲ್ಲ ತಗೊಂಡು ಬರ್ತಾ ಇದ್ನಲ್ಲ.... ಖಾಲಿ ಕೈಯಲ್ಲಿ ಬಂದೆ ನೋಡು... ಬಿಡೆ ನೀನೂ..." ಎಂದು ಮಗಳಲ್ಲಿ ಕೊಸರಿದಳು.

"ಇದ್ಯಾಕಮ್ಮ... ಹೀಗ್ ಮಾತಾಡ್ತೀಯ ಡೆಲಿವರಿ ಅಂತ ವಿಚಾರ ಮುಚ್ಚಿಡೋಕಾಗುತ್ತಾ ನೀನೂ...." ಎಂದ ಸುಬ್ಬಮ್ಮನ ಮಾತನ್ನು ಕೇಳಿಸಿಕೊಂಡ ಸುಬ್ಬಮ್ಮ ಮತ್ತೆ ಅಳಿಯನ ಬಾಯಲ್ಲಿ ಡೆಲಿವರಿ ಪದ ಕೇಳಿ "ಇದ್ಯಾಕೆ ವಿಷ್ಯ ಮುಚ್ಚಿಡ್ತಾ ಇದ್ದಿ ನನ್ ತವನೆ ಅಲ್ನೋಡು ಅಳಿಯಂದ್ರು ಡೆಲಿವರಿ ಅಂತಿಲ್ವ" ಎಂದಳು.


ಅಮ್ಮ ಡಿಲೆವರಿ ಅಂದ್ರೆ ಬ್ಯುಸಿನೆಸ್ ಅನ್ನುತ್ತಿದ್ದಂತೆ "ಆಯ್ಯೋ! ಹೌದು ! ಮಕ್ಳ ಹೆತ್ತು ಮಾರೋದು ಬಿಸಿನೆಸ್ಸಾ ..." ಎಂದು ಸುಬ್ಬಮ್ಮ ಹಣೆ ಚಚ್ಚಿಕೊಂಡಾಗ ನಯನ ಅಲ್ಲಾ ಅಮ್ಮಾ ವಸ್ತುಗಳ್ನ ಮನೆ ಬಾಗ್ಲು ವರೆಗೂ ತಂದ್ ಕೊಡೋದು ಬ್ಯುಸಿನೆಸ್ ಅದನ್ನ ಡೆಲಿವರಿ ಆಯ್ತು ಆಗುತ್ತೆ ಅಂತಿದಾರೆ ಅಷ್ಟು ಗೊತ್ತಾಗಲ್ವೇ ? ಹೆರಿಗೆ ವಿಚಾರನೆಲ್ಲಾ ಮುಚ್ಚಿಡೋಕ್ ಆಗುತ್ತಾ... ಹೇಳು! ಎನ್ನುತ್ತಿದ್ದಂತೆ ಈ ಸುಬ್ಬಮ್ಮಂಗೆ ಡೆಲಿವರಿ ಪದ ಕೇಳಿ ಕೇಳಿ ಸಾಕಾಗಿ ಹಂಗೆ ತಲೆ ಮೇಲೆ ಕೈಹೊತ್ಕೊಂಡು ಕೂತ್ಕೊಂಡು ರಾಮಾ ರಾಮಾ ಅಂತಿದ್ರೆ ಮಗಳು "ನಿನ್ ಅಳಿಯಂದ್ರಿಗೆ ರೊಟ್ಟಿ ಚಟ್ನಿ ಇಷ್ಟ ಅದನ್ನೆ ಝೋಮ್ಯಾಟೋಗೆ ಆರ್ಡ್ರ್‌ಕೊಂಡಿದ್ರು" ಅದನ್ನೆ ಡೆಲಿವರಿ ಡೆಲಿವರಿ ಅಂತಿರೋದು" ಎಂದು ಅಮ್ಮನಿಗೆ ಅರ್ಥ ಮಾಡಿಸುತ್ತಿದ್ದಳು. ಅಷ್ಟರಲ್ಲಿ ಫೋನ್ ಬಂದಾಗ ಅಳಿಯಂದ್ರು ಲೌಡ್ ಸ್ಪೀಕರ್ ಆನ್ ಮಾಡಿ ಫೋನ್ ಅಟೆಂಡ್ ಮಾಡ್ತಾ ಇದ್ರೆ ಹಲೋ ಅಂದವ್ನು ಇಲ್ಲೇ ಇದ್ದೀವಿ ಅಡ್ರೆಸ್ ಗೊತ್ತಾಗ್ತಿಲ್ಲ ಹಾಗೆ ಲೊಕೇಶನ್ ಕಳ್ಸಿ ಸರ್" ಅಂದ ಸುಬ್ಬಮ್ಮ ಗಾಬರಿ ಆಗಿ ಮಗಳನ್ನು "ಅಲ್ಲ ಕಣೆ ಲೋಕೇಶ ಅನ್ನೋರ್ ಯಾರೆ ಇದ್ದಾರೆ ನಮ್ಮನೇಲಿ ಅವನು ಯಾವನು ಲೋಕೇಶನ್ ಕಳಿಸಿ ಲೊಕೇಶನ್ ಕಳ್ಸಿ ಅಂತ ಕೇಳ್ತಾನಲ್ಲ ಏನ್ ಮಾಡೋದು?" ಫೋನ್ ಮಾಡಿದವನನ್ನ ತರಾಟೆಗೆ ತೆಗೆದುಕೊಳ್ಳುತ್ತಿದ್ದರೆ ನಯನಾ "ಅಲ್ಲಮ್ಮ ಅದು ಲೋಕೇಶನ್  ನಾವು ಎಲ್ಲಿದ್ದೀವೋ ಅದನ್ನ ಕಳಿಸೋದು" ಅಂತಂದ್ರೆ ಸುಬ್ಬಮ್ಮಂಗೆ ತಲೆಗೇ ಹೋಗ್ಲಿಲ್ಲ ಅಳಿಯಂದ್ರೆ ಮತ್ತೆ ಮಾತಾಡ್ತಾ "ನೋಡಪ್ಪ ಲೊಕೇಶನ್ ಕಳಿಸಿದ್ದೀನಿ" ಅಂದ್ರು ಇನ್ನೆರಡು ನಿಮಿಷದಲ್ಲಿ ಕಾಲ್ ಮಾಡಿದವನು "ಸರ್ ಆರ್ಡರ್ ತಗೊಳಿ ಮಿಸ್ ಮಾಡ್ದೆ ಫೀಡ್ ಬ್ಯಾಕ್ ಕೊಡಿ" ಎಂದು ಗಾಡಿ ಸ್ಟಾರ್ಟ್ ಮಾಡಿ ಕೈಬೀಸಿದ. ಸುಬ್ಬಮ್ಮ ಹಾಗೆ ಕಿಟಕಿಲಿ ನೋಡಿ "ಕೆಂಪಂಗಿ ಹಾಕ್ವನೆ ಸರ್ದಾರ ಪರವಾಯಿಲ್ಲ" ಎಂದು ಗುನುಗುತ್ತಾ ಒಳಗೆ ಬಂದ್ರೆ ರೊಟ್ಟಿಚಟ್ನಿಗೆ ಮುಗಿಬಿದ್ದ ಅಳಿಯಂದ್ರನ್ನ ನೋಡಿ "ಅಯ್ಯಾ ಬರ್ಗೆಟ್ಟಂಗೆ ತಿಂತಾವ್ರೆ ರಾಮಾ ಕೃಷ್ಣಾ ನಮ್ಮಳ್ಳಿಲಿ ಬೆಳಗಾಗೆದ್ರೆ



ಇದೆ ಅಲ್ವ .. ತಿನ್ನದು ಬರ್ಗೆಟ್ಟು ತಿಂತಿರದ್ ನೋಡು" ಎಂದು ಜೋರಾಗಿ ನಕ್ಕಳು ಸರಿಯಾಗಿ ಕೇಳಿಸಿಕೊಳ್ಳದ ಮಗಳು "ಅದು ಬರ್ಗರ್ ಅಲ್ಲಮ್ಮ....." ಎನ್ನುತ್ತಿರಬೇಕಾದರೆ ಕರೆ ಗಂಟೆ ಬಾರಿಸಿತು ಬಾಗಿಲು ತೆರೆದರೆ ಎದುರು ಮನೆ ಶೋಭ ನಯನ ಫ್ರೆಂಡ್ ಇದ್ದಳು.

ನಯನ ಹಣೆ ಹಣೆ ಚಚ್ಚಿಕೊಳ್ಳುತ್ತಾ "ಇವಳು ಇನ್ನೇನು ತಲೆನೋವು ತಂದಿದಾಳೋ ಎನ್ನುತ್ತಲೇ ಓಹ್ ಬನ್ನಿ... ಶೋಭ ಎಲ್ಲಾ ಅರಾಮ. ನಮ್ಮನೇಲಿ ಒಂದು ಸಮಸ್ಯೆ ಏನು ಗೊತ್ತಾ? ಎಂದು ಆಲಾಪಿಸುತ್ತಿದ್ದಂತೆ ಶೋಭ "ಇಲ್ಲ! ಗೊತ್ತಿಲ್ಲ ಹೇಳಿ! ಹೇಳಿ! ಎಂದಳು ನಯನ ಅಷ್ಟೂ ಹಲ್ಲು ಕಿರಿಯುತ್ತಾ ಅದನ್ನೆ ಹೇಳಕ್ ಬರ್ತಾ ಇದ್ದೆ  ನಮ್ಮಮ್ಮ ಇವತ್ತು ಊರಿಂದ ಬಂದ್ರು..." ಎನ್ನುವುದೇ ತಡ "ಹೂ ಇಲ್ಲೆ ಇದ್ದಾರಲ್ಲ" ಎಂದು ಶೋಭ ಕೈ ತೋರಿ ನಗುತ್ತಿದ್ದಳು "ಇರ್ರಿ ಹೇಳ್ತೀನಿ.... ನಮ್ಮನೆಯವ್ರೋ ಝೊಮ್ಯಾಟೊ ಆರ್ಡರ್ ಹಾಕಿದ್ದರು ಅವನೊ ಡೆಲಿವರಿ ಮಾಡಕ್ ಗೊತ್ತಾಕ್ತಿಲ್ಲ ಅಂತಿದ್ದ ಈ ನಮ್ಮಮ್ಮಂಗೆ ಡೆಲಿವರಿ ಡೆಲಿವರಿ ಪದ ಬಾಳ ತೊಂದ್ರೆ ಕೊಡ್ತಾ ಇದೆ ಡೆಲಿವರಿ ಅದ್ರೆ ಹೆರಿಗೆ ಅದ್ಕೊಂಡು ಬೇಡ ನನ್ ಅವಸ್ಥೆ"ಎಂದು ಕೆನ್ನೆ ತಟ್ಟಿಕೊಳ್ಳುತ್ತಿದ್ದ ನಯನಾಗೆ ಶೋಭ "ಅಯ್ಯೋ ಹಾಗಂದ್ರೆ ಆಗುತ್ತಾ ಬಿಡ್ಸಿ ಹೇಳ್ಬೇಕು ಅದೇ ನಮ್ಮ ಪೋಸ್ಟ್ ಮ್ಯಾನ್ ಪೋಸ್ಟ್ ಕೊಟ್ಟಾಗ್ಲೂ ಡೆಲವರಿ ಅಂತೀವಿ ಆಫೀಸ್ ಬಾಯ್, ರೂಮ್ ಬಾಯ್ ಅನ್ನಲ್ವ ಹಾಗೆ ಡೆಲಿವರಿ ಬಾಯ್ ಅನ್ನಬೇಕು.... ಕ್ಯಾಶ್ ಆನ್ ಡೆಲಿವರಿ, ಡೋರ್ ಡೆಲಿವರಿ, ಎಲೆಕ್ಟ್ರಾನಿಕ್ ಗೂಡ್ಸ್ ಡೆಲಿವರಿ, ಮೆಸೇಜ್ ಡಿಲವರಿ, ಡೈಲಾಗ್ ಡೆಲವರಿ. ಪಾರ್ಸೆಲ್ ಡೆಲಿವರಿ ಹಿಂಗೆ ಡ್ಯಾಶ್ ಡ್ಯಾಶ್ ಎಷ್ಟು ತರಾವರಿ ಡೆಲಿವರಿ ಇದ್ದಾವೆ ಬಿಡಿಸಿ ಹೇಳ್ಬೇಕು ಮತ್ತೆ  ಇನ್ನೊಮದು ವಿಷ್ಯಾ ಗೊತ್ತಾ ಮೊನ್ನೆ ಆಚೆ ಹೋಗಕೆ ಇದ್ದೆ ಅಲ್ಲೊಬ್ಬ ಡೆಲಿವರಿ ಬಾಯ್ ಫೋನ್ ಲೌಡಲ್ಲಿ ಇಟ್ಕೊಂಡು "ಹಲೋ ಇವತ್ತು ಡಿಲೆವರಿ ಇತ್ತು ಎಂದ ಆಚೆಕಡೆಯಿಂದ ಹಲೋ ತಮ್ಮ ಹೆಸರು ಅಂದ್ರೆ ರತ್ನ ಅಂದ್ರು ಹೌದು ಮೇಡಮ್ ಡೆಲಿವರಿ ಮಾಡ್ತೀನಿ ನೀವ್ ಇರ್ತೀರ ಎಂದರೆ ಆ ಕಡೆಯಿಂದ ಇಲ್ಲ ನನ್ ಮಗಳ್ ಇರ್ತಾಳೆ ಫೋನ್ ಮಾಡಿ ಹೇಳ್ತೀನಿ  ಹಣ ಕಳ್ತಿನಿ ಅಲ್ಲೆ ಡೆಲಿವರಿ ಮಾಡಿ" ಅನ್ನೋದ ನನಗೆ "ಡೆಲಿವರಿ ಕೊಡಿ" ಅಂದ್ರೆ ಏನಾಗ್ತಿತ್ತು ಹಾಳಾದವರಿಗೆ ಅನ್ನಿಸಿ ಮುಂದೆ ಹೋದೆ . ಮಾತಲ್ಲಿ ಎಷ್ಟು ವ್ಯತ್ಯಾಸ ಆಗುತ್ತೆ ಎನ್ನುತ್ತಾ ಕಾಫಿ ಮಾಡುತ್ತಿದ್ದ ನಯನಾ ಬಳಿ ಹೋಗಿ ಹೆಗಲ ಮೇಲೆ ಕೈ ಹಾಕುತ್ತಾ ಮತ್ತೆ ಅಲ್ಲರೀ ನಯನ ಕೊರೊನಾ ಬಂದ್ಮೇಲೆ ಅಮೆಜಾನ್ ಇಲ್ಲೆಲ್ಲಾ ಡೆಲಿವರಿ ಬಾಯ್ಸ್ನ ತೆಗುದ್ರಲ್ಲ ಎಷ್ಟು ಕಷ್ಟ ಆಯ್ತು ಅವ್ರಿಗೆ ಮೊದ್ಲೆಲ್ಲಾ ಪೊಟ್ರೋಲಿಗ್ ದುಡ್ಡು ಎಲ್ಲಾ ಕೊಡೋರಂತೆ ಈಗ ಎಷ್ಟು ಪಾರ್ಸಲ್ ಕೊಡ್ತಾರೆ ಅದಕ್ಕೆ ತಕ್ಕ ಹಾಗೆ ದುಡ್ಡಂತೆ ಪಾಪ ನಮ್ಮನೆಗೆ ಬರ್ತಾನಲ್ಲ ಅಮೆಜಾನ್ ಬಾಯ್ ಅವ್ನುಹೇಳ್ತಾ ಇದ್ದ" ಎಂದು ಬೇಜಾರಾಗುತ್ತಿದ್ದರೆ.

ನಯನ "ಹೂ ರೀ ಎಷ್ಟು ಕಷ್ಟ ಅವ್ರಿಗೆ ನಾನೂ ಒಂದು ಜೊತೆ ದೀಪ ಆರ್ಡರ್ ಹಾಕಿದ್ದೆ ರೀ.... ಫೊಟೊದಲ್ಲಿ ದೊಡ್ಡಾಗಿ ಕಾಣಿಸ್ತಾ ಇತ್ತು ಪ್ಯಾಕೂ ದೊಡ್ಡೆ ಇತ್ತು  .ಬಿಡಿಸಿ ನೋಡಿದ್ ತಕ್ಷಣ ಹಳ್ಳಕ್ಕೆ ಬಿದ್ದೆ ಅನ್ನಿಸ್ತು ನಮ್ಮನೆಯವರು ವಾಪಾಸ್ ಕಳ್ಸು ಅಂದ್ರು ಅವರ ಬಲವಂತಕ್ಕೆ ಡಿಲಿವರಿ ಬಾಯ್ ಕರೆದು ವಾಪಸ್ ತಗೊಂಡು ಹೋಗು ಅಂದೆ ನಮ್ಮನೆಯವರು ಅವ್ನೇ ಎನೋ ಮಾಡಿದಾನೆ ಅನ್ನೋಹಾಗೆ ರೇಗಿಬಿಟ್ರಾ .. ಪಾಪ ಡೆಲಿವರಿ ಕಂದಾ ಅಲ್ಲಲ್ಲಾ ಬಾಯ್ ವೈ ದಿಸ್ ಡಿಲವರಿ ...ವರಿ ಡಿಲವರಿ ಅಂದ್ಕೊಂಡ್ ಹೋದ ನನ್ಗೋ ನಗು ತಡೆಯಕ್ಕಾಗ್ಲಿಲ್ಲ.... ಹೋಗಲಿ



ಬಿಡ್ರಿ... ನಕ್ಕಿಬಿಟ್ಟೆ.... ಅಂದ್ ಹಾಗೆ ನಾಟಕದಲ್ಲಿ ಡೈಲಾಗ್ ಡೆಲಿವರಿ ಸರಿಯಾಗ್ ಆಗ್ಬೇಕು ನೋಡಿ "ಬಾ ಬೇಗ ಮನಮೋಹನ ಇದ್ದಿದ್ದು ಬಾಬೇಗ ಮನೆಗೋಗನ ಬಾ ಬೇಗ ಮನೆಗೋಗನ ಅಂದು ಬಿಟ್ರೆ ನಾಟಕದ ಮೇಷ್ಟ್ರು ಕತೆ ಅಷ್ಟೆ" ಎನ್ನುತ್ತಾ ಅಡುಗೆ ಮನೆಗೆ ಹೋದಳು.


ಸುಬ್ಬಮ್ಮ ಎಲ್ಲಾ ಕೇಳಿಸ್ಕೊಂಡು "ಅಲ್ಲಾ ಬರೆ ಡೈಲಾಗಲ್ಲಿ ಹೇಗ್ ಡೆಲಿವರಿ ಮಾಡ್ಸಕ್ ಆಗುತ್ತಾ ಮೈಕೈ ಸಡ್ಲ ಮಾಡಿ ಮಗು ಆಚೆ ಬರಕೆ ಬಿಡ್ಬೇಕು" ಎನ್ನುತ್ತಿದ್ದರೆ ಶೋಭ ಡೆಲಿವರಿ ಅಂದರೆ ಬರೇ ಹೆರಿಗೆ ಅಲ್ಲಮ್ಮ. ಯಾವುದಾದರು ವಸ್ತು, ಪೋಸ್ಟ್, ಗೂಡ್ಸ್ ಇವುಗಳನ್ನು ಅಡ್ರೆಸ್ದಾರರಿಗೆ ತಲುಪಿಸೋದು ಎಂದು ಹೇಳುತ್ತಿದ್ದಂಗೆ ಶೋಭ "ಕನ್ನಡದಲ್ಲಿ ಡೆಲಿವರಿಗೆ ಪ್ರಸವ ಅಂತಾರೆ ಗಜಪ್ರಸವ, ಸುಖಪ್ರಸವ ಅಂತಾರಲ್ಲ ನಯನಾ ನನ್ ಮಗನ ಡೆಲಿವರಿಲಿ ನನ್ಗೆ ದಿನಾ ಆದ್ರೂ ನೋವೇ ಬಂದಿರ್ಲಿಲ್ಲ ನಮ್ ಡಾಕ್ಟ್ರು ಗಾಯತ್ರಿ ಮೇಡಮ್ ಸುಖಪ್ರಸವ ಸುಖಪ್ರಸವ ಅಂತಿದ್ರು ನನಗೆ ಕೇಸರಿಬಾತ್ ಗಸಗಸೆ ಪಾಯ್ಸ ಕುಡಿಬೇಕು ಅನ್ಸಿತ್ತು ಮನೆಯವ್ರು ಅವ್ರ ಫ್ರೆಂಡ್ ಮನೆಲಿ ಕೇಸ್ರಿಬಾತ್ ಮಾಡ್ಕೊಂಡು ಬರ್ತೀನಿ ಅಂತ ಹೋದ್ರೆ ಈಕಡೆ ಡಾಕ್ಟ್ರು ನಾನೂ ಮನೆಗ್ ಹೋಗ್ಬೇಕು ಬನ್ನಿ ನೋಡಣ ಅಂತ ಕರ್ದು ಚೆಕ್ ಮಾಡಿ ಮಗು ಉಸಿರ್ ಕಟ್ತಾ ಇದೆ ಸಿಝೇರಿಯನ್ ಮಾಡ್ಬೇಕು ಅಂತ ಮಾಡೇ ಬಿಟ್ರು ಕೇಸ್ರೀ ಬಾತೂ ಇಲ್ಲ ಏನೂ ಇಲ್ಲ ಸುಖಪ್ರಸವ ಅಲ್ಲ ಸೀಝುರ್ ಪ್ರಸವ ಆಯ್ತು ಸದ್ಯ ಮಗ ಆರೋಗ್ಯವಾಗಿತ್ತು ನಾಲ್ಕು ಕೆ.ಜಿ ಇದ್ದ ಆಸ್ಪತ್ರೆಲೀ ಅವನನ್ನ ಬಾಲ ಭೀಮ ! ಬಾಲ ಭೀಮ! ಅಂದ್ರು.....

ಚ್ ಚ್ ಬಿಡಿ ಶೋಭ.. ಮಗು ನೀವು ಆರೋಗ್ಯವಾಗಿದ್ದೀರಲ್ಲ.... ಎಂದು ನಯನಾ ಲೊಚಗುಟ್ಟುತ್ತಾ ಈಗ ಪೇಯ್ನ್ ಲೆಸ್ ಡೆಲಿವರಿ ಬಂದಿದೆಯಂತೆ ವಾಟರ್ ಡೆಲಿವರಿ... ಸ್ವಲ್ಪ ಬಿಸಿ ಇರುತ್ತಂತೆ ನೀರು ಆ ಟಬ್ಬಲ್ಲಿ ಕೂರಿಸಿ ಡೆಲಿವರಿಮಾಡಿಸ್ತಾರಂತೆ ಅದು ಬೆಂಗ್ಳೂರಲ್ಲೂ ಇದೆಯಂತೆ ಆದ್ರೆ ಪ್ರೀ ಬುಕಿಂಗ್ ಏನ್ ಕಾಲ ಬಂತುನೋಡಿ ವಡ್ಡಾರಾಧನೆ ಕಾಲಕ್ಕೆ ಇದಕ್ಕೆ ದಾಖಲೆ ಇದೆಯಂತೆ ಅಂದಿನ ಜಲಪ್ರಸವ ಇಂದಿನ ವಾಟರ್ ಬರ್ತ್ ಅಷ್ಟೆ.

ಕಾರ್ತಿಕ ಋಷಿ ಕತೆಲಿ ಕೃತ್ತಿಕೆ ತುಂಬಿದ ಪ್ರೆಗ್ನೆಂಟ್ ಇದ್ದಾಗ ಸರವಣ ಅನ್ನೋ ಬಾವಿಲಿ ನಂಗೆ ಆಟಾಡ್ಬೇಕು ಅದೆ ನನ್ನ ನಸುರಿ ಬಯಕೆ ಅಂತ ಅಗ್ನಿರಾಜನಿಗೆ ಹೇಳಿ ಅವನ್ ಒಪ್ಪಿದ್ ಮೇಲೆ ನೀರಲ್ಲಾಡಿ ಮಗನನ್ನು ಹಡೆದಳಂತೆ. ಇದೆ ವಾಟರ್ ಬರ್ತ್ ಅಂದರೆ ನೀರಲ್ಲಿ ಹೆರಿಗೆಯಾಗುವುದು. ಇದರಲ್ಲಿ ಮೆಡಿಕಲ್ ಫಾರ್ಮಾಲಿಟಿಸ್ ಮತ್ತೆ ನೋವು ಕಡಿಮೆ ಅಂತೆ. ನ್ಯಾಚುರಲ್ ಹೆರಿಗೆ ಇದು ಟಬ್ನನಲ್ಲಿ ನೀರನ್ನು ಎದೆಮಟ್ಟಕ್ಕೆ ತುಂಬಿಸಿರ್ತಾರಂತೆ ಹೊಸ ನೀರು ಬರಲು, ಹಳೆಯ ನೀರು ಹೋಗಕೆ ಪೈಪ್ ಹಾಕಿರ್ತಾರಂತೆ ಹೆರಿಗೆಯಾದ ಸ್ವಲ್ಪ ಹೊತ್ತು ಮಗು ಗರ್ಭ ಚೀಲದಲ್ಲಿಯೇ ಉಸಿರಾಡುತ್ತೆ ಅದಕ್ಕೂ ಮೊದಲು ನೀರಲ್ಲಿಯೇ ಇರುತ್ತದೆ ಅಲ್ವೆ ! ಹಾಗಾಗಿ ಮಗುವಿಗೆ ಅಪಾಯವಿಲ್ಲ ಹೊಕ್ಕಳ ಬಳ್ಳಿ ಕತ್ತರಿಸಿದ ನಂತರ ಸ್ವತಂತ್ರವಾಗಿ ಉಸಿರಾಡುತ್ತಂತೆ. ಇಲ್ಲಿ ಬೆಚ್ಚಗಿನ ನೀರು ದೇಹವನ್ನು ರಿಲ್ಯಾಲಕ್ಸ್ ಮಾಡೊದ್ ಅಲ್ದೆ, ಹೆರಿಗೆ ನೋವನ್ನೂ ಕಡಿಮೆ ಮಾಡುತ್ತಂತೆ ಒಟ್ಟಾರೆ ನೋವು ರಹಿತ ಡೆಲಿವರಿ.. ಹಿಂದೆ ಎಲ್ಲಾ ಮನೆಯಲ್ಲೆ ಅಲ್ವ ಪ್ರೆಗ್ನೆಂಟ್ ಲೇಡಿಸ್ ಇದ್ರೆ ಅದಕ್ಕೆ ಅಂತಾನೆ ಸಪರೇಟ್ ರೂಮಲ್ಲಿ ಹಾಸಿಗೆ ಮಗು ಮಲಗಿಸೋಕೆ ಮೊರ ಒಂದು ಮಡಿಕೆ ಎಲ್ಲಾ ಇಟ್ಟಿರೋರಂತೆ.... ಅವತ್ತಿನ್ ತಯಾರಿಗೂ ಇವತ್ತಿಗೂ ಎಷ್ಟು ಅಪ್ಡೇಟ್ಸ್ ನೋಡಿ



ಅಷ್ಟರಲ್ಲಿ ಸುಬ್ಬಮ್ಮ ಬಂದು ಚೇಳಿನ್ ಹೆರಿಗೆ ವಿಷ್ಯ ಗೊತ್ತಾ ಅದು ಮಕ್ಕಳನ್ನ ಹೆತ್ತಾದ್ಮೇಲೆ ಮರಿಗೊಳು ಹೊಟ್ಟೆ ಹಸ್ದು ಕವ ಕವ ಅಂತಿರ್ತಾವಂತೆ ಆಗ ಪೂರ್ತಿ ಮೈ ಬಿಡಿಸಿ ಕೊಡುತ್ತಂತೆ ಎಷ್ಟು ಪ್ರೀತಿ ಮರಿಗೊಳು ಅಂದ್ರೆ ಅದ್ಕೆ ಬಾಳೆಗೊಂದೆ ಗೊನೆ ಚೇಳಿಗೊಂದೆ ಬಸುರು ಅನ್ನೋದು ಬಾಳೆ ಮರನೂ ಹಂಗೆ ಅಲ್ವ ಗೊನೆ ಕಡಿತ್ತಿದ್ದಂಗೆ ಮರನೆ ಕಡ್ದು ಹಾಕಲ್ವ! ಎಂದರೆ ನಯನ ಡೆಲಿವರಿ ಕಷ್ಟ ಯಾರ್ಗೂ ಬೇಡ ಇನ್ನೊಮ್ಮೆ ಹುಟ್ಟಿ ಬಂದ್ ಹಾಗೆ ಎಂದರೆ ಶೋಭ ಹುಟ್ಟೋದು ಒಂದೇ ಅಲ್ಲ ರೀ ಎದುರು ಮನೆ ವಿಭಾ ಇದ್ದಾರಲ್ಲ ಅವ್ರು ಪುಸ್ತಕ ಬರಿತಾರೆ ಪುಸ್ತಕ ಬಿಡುಗಡೆ ಮಾಡೋದು ಪ್ರಸವ ಇದ್ದಂಗೆ ಅಂತಿದ್ರು ಇನ್ನು ಮನೆ ಕಟ್ಟಿ ಕೆಲಸಗಾರರ ಜೊತೆ ಹೆಣಗಿ ಗೃಹ ಪ್ರವೇಶ ಮಾಡೋದೂ ಡೆಲಿವರಿ ..ಅಲ್ವ ಮಕ್ಳು ಪರೀಕ್ಷೆ ಬರೆದು ರಿಸಲ್ಟ್ ಬಂದ್ರೆ ಅದೂ ಡೆಲಿವರಿ ಆದಹಾಗೆ ಅಲ್ವ! ಡೆಲಿವರಿ ಅಗೋವರ್ಗೂ ವೈ ದಿಸ್ ಡೆಲಿವರಿ ಡೆಲಿವರಿ ಡಿ . ಅನ್ಬೇಕು ನೋಡಿ. ಮಗು ಹುಟ್ಟೋದು ಅಲ್ದೆ ತರಾವರಿ ಡಿಲೆವರಿಗಳು ಆಗಾಗ ಆಗ್ತ ಇರುತ್ವೆ ಯಾವುದೇ ಆಗ್ಲ ಡಿಲೆವರಿ ಆಗೋವರ್ಗೂ ವೈ ದಿಸ್ ಡೆಲಿವರಿ ಅನ್ಸುತ್ತೆ ಆದ್ಮೇಲೆ ನೋವರಿ ಖುಷಿವರಿ ಖುಷಿವರಿ.....ಡಿ....



## ಡಯಟ್‌ವಂತರಿಗಿದು ಕಾಲವಲ್ಲ.....

**ತುರುವೇಕೆರೆ ಪ್ರಸಾದ್**

**ಅ**ರವತ್ತು ತುಂಬಿತೆಂದರೆ ಎಲ್ಲೆಲ್ಲಿಂದಲೋ ರೋಗ ರುಜಿನಗಳು ಬಂದು ಮುತ್ತಿಕೊಳ್ಳುತ್ತವೆ. ಮನೆಯ ಮೆಣಸಿಕಕಾಯಿ ಉರಿ, ಅವರಿವರು ಉದ್ಧಾರವಾಗಿದ್ದು ನೋಡಿ ಹೊಟ್ಟೆಯುರಿ ಶುರುವಾಗಿ ಗ್ಯಾಸ್ಟ್ರಿಕ್ಕು, ಅಲ್ಸರ್, ಪೈಲ್ಸ್ ಮೊದಲಾದ ಕಾಯಿಲೆಗಳು ಅಂಟಿಕೊಳ್ಳುತ್ತವೆ. ಅವರಿವರ ಬಗ್ಗೆ ಯೋಚಿಸಿ, ಟಿವಿ ನ್ಯೂಸ್ ಚಾನಲ್ ವೀಕ್ಷಿಸಿ ಬಿಪಿ, ಶುಗರ್ ಅಮರಿಕೊಳ್ಳುತ್ತದೆ. ಈ ರೋಗಗಳೆಲ್ಲಾ ಯಾವ ಯೋಗಕ್ಕೂ. ಮನೆ ಮದ್ದಿಗೂ ಕ್ಯಾರೇ ಅನ್ನದೆ ನಮ್ಮನ್ನು ಎಡಬಿಡದೆ ಮುದ್ದು ಮಾಡಲು ಪ್ರಾರಂಭಿಸಿದಾಗ ಡಾಕ್ಟರ್ ಬಳಿ ಎಡತಾಕಬೇಕಾಗುತ್ತದೆ. ಅಲ್ಲಿ ಡಾಕ್ಟರ್ ಒಂದಿಷ್ಟು ಮಾತ್ರೆಗಳನ್ನು ಬರೆದುಕೊಟ್ಟು 'ಡಯೆಟ್‌ಆರ್‌ಟ್ಯಾಬ್ಲೆಟ್, ಚಾಯ್ಸ್ ಈಸ್ ಯುವರ್ಸ್ (ಡಯಟ್ ಹೆಚ್ಚು ಮಾಡಿ, ಟ್ಯಾಬ್ಲೆಟ್ ಕಮ್ಮಿ ಮಾಡಿ) ಎಂಬ ಮಾತ್ರೋಪದೇಶವನ್ನು ನಮ್ಮ ಕಿವಿಯಲ್ಲಿ ಹಾಕಿ ಕಳಿಸಿದಂದಿನಿಂದ ಡಯೆಟ್ ಕಾರ್ಯಕ್ರಮ ಬೇಕೋ ಬೇಡವೋ ಅಂತೂ ಪ್ರಯೋಗಾರ್ಥವಾಗಿ ಜಾರಿಗೆ ಬರುತ್ತದೆ.

ನನಗೂ ಹಾಗೇ ಆಯಿತು. ಸಿಕ್ಕ ಸಿಕ್ಕ ಹೋಟೆಲ್‌ಗಳಲ್ಲಿ ತಿಂದು ಹೊಟ್ಟೆ ಹಾಳಾಗಿ ಆಚೆ ಕಡೆಯದು, ಎಣ್ಣೆಯಲ್ಲಿ ಕರಿದದ್ದು, ಹೊರಗಡೆಯಿಂದ ತಂದ ಸ್ವೀಟ್ಗಳು ಇವನ್ನು ತಿನ್ನುವುದು ಕಡಿಮೆ ಮಾಡಿ ಎಂದು ಕೌಟುಂಬಿ ಕಡಾಕ್ಟರ್ ಸಲಹೆಯಿತ್ತರು. ಮೊದಮೊದಲು 'ಇದೆಲ್ಲಾ ಯಾವ ಉಪದ್ರ ? ಹಾಯಾಗಿ ತಿಂದುಕೊಂಡಿದ್ದು ಒಂದಿಷ್ಟು ಮಾತ್ರೆ ನುಂಗಿದರಾಯಿತು' ಎನಿಸಿದರೂ ನಂತರ 'ಮನಸ್ಸಿಗೆ ಮೀರಿದ್ದು ಏನಿದೆ ? ಚಪಲಕ್ಕೊಂದು ಲಗಾಮು ಏಕೆ ಹಾಕಬಾರದು ? ಒಂದು ಕೈ ನೋಡಿಯೇ ಬಿಡೋಣ'ಎಂದು ಪ್ರಯೋಗಕ್ಕೆ ಕೈ ಹಾಕಿದೆ. ವೀಕೆಂಡ್ ಭಾನುವಾರ ನನ್ನ ಡಯೆಟ್ ವ್ರತ ಶುರು ಮಾಡುವುದೆಂಬ ಭಯಂಕರ ಸಂಕಲ್ಪದೊಂದಿಗೆ ಮಲಗಿದೆ.

ಬೆಳಿಗ್ಗೆ ಎದ್ದಾಗ ಘಮ ಘಮ ಎಂದು ಪರಿಮಳ ಮೂಗಿಗೆ ಅಪ್ಪಳಿಸಿತು. ಅಡುಗೆ ಮನೆ ಕಡೆ ಕಣ್ಣಾಡಿಸಿದರೆ ಉಬ್ಬಿದ ಪೂರಿಗಳು ಎಣ್ಣೆಯಲ್ಲಿ ತೇಲಾಡುತ್ತಿವೆ. ಪಕ್ಕದಲ್ಲಿ ಕುದಿಯುತ್ತಿದ್ದ ತರಕಾರಿ ಸಾಗು ಇಡೀ ಮನೆಗೆ ತನ್ನ ಘಮಲು ಚೆಲ್ಲುತ್ತಾಕೊತಕೊತ ಕತಕ್ಕಳಿ ಮಾಡುತ್ತಿದೆ. ನನಗಂತೂ ಬಾಯಲ್ಲಿ ನೀರು ಸೋರಿ ನನ್ನ ಚಪಲವನ್ನು ತಡೆದುಕೊಳ್ಳಲೇ ಆಗಲಿಲ್ಲ. ಹೇಗೋ ನನ್ನ ಜಾಗೃತ ಮನಸ್ಸನ್ನು ಆಕ್ಟಿವೇಟ್ ಮಾಡಿಕೊಂಡು ಚಪಲವನ್ನು ತಡೆಹಿಡಿದು ಹೆಂಡತಿಯನ್ನು ಆಕ್ಷೇಪಿಸಿದೆ:' ಇವತ್ತಿನಿಂದ ನಾನು ಡಯಟ್ಟಲ್ಲಿರ್ತೀನಿ ಅಂತ ಹೇಳಿರ್ಲಿಲ್ವಾ? ಆದರೂ ಬೇಕಂತಲೇ ನನ್ನ ಜಿಹ್ವಾಚಾಪಲ್ಯದ ಪರೀಕ್ಷೆ ಮಾಡಲು ಪೂರಿ ಮಾಡಿದ್ದೀಯ! ಇದು ತೀರಾ ಅಕ್ಷಮ್ಯ ಅಪರಾಧ' ಎಂದು. ಅದಕ್ಕವಳು' ನಿಮ್ಮದೊಳ್ಳೆ ಕತೆಯಾಯ್ತಲ್ಲ, ಇಡೀ ವಾರ ಇಡ್ಲಿ, ಉಪ್ಪಿಟ್ಟು, ಚಿತ್ರಾನ್ನ ಎಂದು ಧಿಡೀರ್ ಬೂಸಾ ತಿಂಡಿಗಳನ್ನು ತಿಂದು ಸಾಕಾಗಿರುತ್ತದೆ. ನಾಲಗೆ ಬೆಂಡೆದ್ದು ಹೋಗಿರುತ್ತದೆ. ಸಾಲದ್ದಕ್ಕೆ ಮಗಳು, ಅಳಿಯ ಅಪರೂಪಕ್ಕೆ ಬಂದಿದ್ದಾರೆ. ಭಾನುವಾರವಾದರೂ ಅವರಿಗೆ ರುಚಿರುಚಿಯಾಗಿ ಒಂದಿಷ್ಟು ಒಳ್ಳೆಯ ತಿಂಡಿ ಮಾಡಿ ಹಾಕಬಾರದಾ ? ನೀವು ಬೇಕಾದರೆ ಆಚೆ ಹೋಗಿ ಏನಾದ್ರೂ ತಿಂದ್ಕೊಳಿ' ಎಂದು ಬಿಟ್ಟಳು.



ಡಯಟ್ ಛಲ ಬಿಡದೆ ತ್ರಿವಿಕ್ರಮನಂತೆ ಹತ್ತಿರದ ದರ್ಶಿನಿ ಬಳಿಗೆ ಹೋದೆ. ಅಲ್ಲಿ ಹೋಗಿ ಕೇಳಿದರೆ ಇಡ್ಲಿ ಕಾಲಿ. 'ಏನಪ್ಪಾ ಇಷ್ಟು ಬೇಗ ಇಡ್ಲಿ ಕಾಲಿ ಆಗಿದೆ ?' ಅಂದರೆ 'ಭಾನುವಾರ ಹೀಗೇ ಸರ್! ಡಯಟ್ ಮಾಡೋರೆಲ್ಲಾ ಬೇಗ ಬಂದು

ಕಟ್ಟಿಸಿಕೊಂಡು ಹೋಗಿ ಬಿಡ್ತಾರೆ' ಎಂದ ಮಾಲಿಕ. 'ಹೋಗಲಿ ಒಂದೆರಡು ಸೆಟ್‌ದೋಸೆ ಪಾರ್ಸಲ್‌ಕೊಡು' ಅಂದೆ. ಅದಕ್ಕವ' ಇಲ್ಲ ಸರ್, ಭಾನುವಾರತುಂಬಾ ರಶ್ಶಿರುತ್ತೆ. ಬರೀ ಪ್ಲೇನ್, ಮಸಾಲಾ, ಈರುಳ್ಳಿ, ಓಪನ್, ರವಾದೋಸೆ ಈ ತರ ಸ್ಪೆಶಲ್ ಐಟಮ್ಸೇ ಸರ್! ಬೇರೆ ಎಲ್ಲಾದ್ರೂ ಟ್ರೈ ಮಾಡಿ' ಎಂದು ನಾನೊಬ್ಬ ವೇಸ್ಟ್‌ಬಾಡಿ ಎನ್ನುವಂತೆ ಮುಖ ತಿರುಗಿಸಿಕೊಂಡ. ವಡೆ, ಬೋಂಡ, ಪಕೋಡ, ನಿಪ್ಪಟ್ಟು ಹೀಗೆ ಬಗೆಬಗೆಯ ಖಾದ್ಯಗಳನ್ನು ಚಪ್ಪರಿಸಿಕೊಂಡು ತಿನ್ನುವವರನ್ನು ನೋಡಿ ಎಲ್ಲಿ ನನ್ನ ಸಂಕಲ್ಪ ಸರ್ರನೆಜಾರಿ ಬಿಡುತ್ತದೋ ಎಂದು ಗಾಬರಿಯಾಗಿ ಸರ ಸರ ಅಲ್ಲಿಂದ ಕಾಲ್ಕಿತ್ತೆ.

ಮನೆಗೆ ಬಂದಾಗ ನನ್ನ ಅವಸ್ಥೆ ನೋಡಿ ಎಲ್ಲಾ ಆಡಿಕೊಂಡು ನಕ್ಕರು. ಕೊನೆಗೆ ರೇಖಾ ಉಳಿದಿದ್ದ ಪೂರಿ ಹಿಟ್ಟನ್ನೇ ನಾದು ಒಂದು ಕಾವಲಿಯ ಮೇಲೆ ಎಸೆದಳು. ಎಣ್ಣೆಯಿಲ್ಲದೆ ಅದು ಹಳೇ ಎಮ್ಮೆ ಚರ್ಮದಂತೆ ಅರ್ಧಂಬರ್ಧ ಸುಟ್ಟು ಸುರುಟಿಕೊಂಡಿತು. ಅದನ್ನೇ ಹಿಂದಿನ ರಾತ್ರಿ ಫ್ರಿಜ್ಜಿನಲ್ಲಿ ಕೆಲಸದವರಿಗೆಂದು ಇಟ್ಟಿದ್ದ ಬೇಳೆ ಸಾರಿನಲ್ಲಿ ಅದ್ದಿ ಅಲ್ಲಲ್ಲ ನೆನೆಸಿ ತಿಂತು ಕೃತಾರ್ಥನಾದೆ.

ಮಲ್ಲೇಶ್ವರಂನಲ್ಲಿ ಪರ್ಚೇಸ್ ನಂತರ ಅಲ್ಲೇ ಯಾವುದಾದರೊಂದು ಹೋಟೆಲ್‌ನಲ್ಲಿ ಊಟ ಮಾಡುವುದು ಎಂದು ತೀರ್ಮಾನವಾಯಿತು. ಅದರಂತೆ ಹೆಂಡತಿ, ಮಕ್ಕಳು ನನ್ನನ್ನು ಚೆನ್ನಾಗಿ ಸಂಪಿಗೆ ರಸ್ತೆ, ಬೇವಿನ ಮರದ ರಸ್ತೆಯಲ್ಲಿ ಸುತ್ತಿಸಿ ಮೊದಲೇ ಡಯಟ್‌ನಿಂದ ಬಸವಳಿದಿದ್ದ ನನ್ನನ್ನು ಹಣ್ಣುಗಾಯಿ ನೀರುಗಾಯಿ ಮಾಡಿದರು. ನಡೆದರೆ ಇನ್ನೂ ಒಳ್ಳೆಯದು, ಕೊಬ್ಬುಕರಗುತ್ತದೆ ಎಂಬ ಕುಹಕದ ಉಪದೇಶ ಬೇರೆ! ಮಧ್ಯೆ ಏನಾದರೂ ಕುಡಿಯಲೇಬೇಕು ಎಂದು ಧರಣಿ ಶುರು ಮಾಡಿದೆ. ಒಂದು ಕಾಫಿ/ಜ್ಯೂಸ್ ಕೆಫೆಗೆ ಕರೆದೊಯ್ದರು.. ನನ್ನ ಮುಖದಂತೆಯೇ ಕಪ್ಪಿಟ್ಟ ಸಕ್ಕರೆ ಇಲ್ಲದ ಡಿಕಾಕ್ಷನ್ ನನ್ನ ಮುಂದೆ ಇಟ್ಟು ಎಲ್ಲಾ ನನ್ನ ಎದುರಿಗೆ ಕುಳಿತುಕೊಂಡು ಗಡಬಡ್ ಐಸಕ್ರೀಂ ತಿಂದು, ತರಾವರಿ ಜ್ಯೂಸ್, ಮಿಲ್ಕ್ ಶೇಕ್ ಕುಡಿದರು. ಒಂದು ಪ್ರಾಣಿ ಡಯೆಟ್ನಲ್ಲಿದೆ. ಅದರ ಸಹನೆ ಕೆಣಕಿಚಾಪಲ್ಯದ ಪರೀಕ್ಷೆ ಮಾಡಬಾರದು ಎಂಬ ಕಾಮನ್ಸೆನ್ಸ್ ಸಹ ಯಾರಿಗೂ ಇರಲಿಲ್ಲ.

ನಂತರ ಊಟಕ್ಕೆ ಹೋಟಲ್‌ಗಳನ್ನು ಎಡತಾಕಿದ್ದಾಯಿತು. ಯಾವ ಹೋಟೆಲ್ಗೆ ಹೋದರೂ ಆರ್ಡಿನರಿ ಮೀಲ್‌ಗಳೇ ಇಲ್ಲ. ಭಾನುವಾರವಾದ್ದರಿಂದ ಎಲ್ಲಾ ಕಡೆ ಸ್ಪೆಶಲ್ ಮೀಲ್ಗಳೇ! 'ಅನ್ನ, ಸಾಂಬಾರೊ, ಮೊಸರನ್ನವೋ ಕೊಡಿ' ಎಂದರೆ ಯಾರೂ ಕೊಡಲೊಲ್ಲರು. ಕೊನೆಗೆ 'ಬೈಟು ಮಾಡಿಕೊಳ್ತೀವಿ, ಒಂದು ಕಾಲಿ ತಟ್ಟೆಕೊಡ್ತೀರಾ?' ಅಂದ್ರೆ ಅದಕ್ಕೂ 'ಆಗಲ್ಲ, ಬಾಳೆ ಎಲೆ ಹರ್ದೋಗುತ್ತೆ' ಎಂದು ಕೈ ಅಲ್ಲಾಡಿಸಿಬಿಟ್ರು. ಹಲವು ಹೋಟೆಲ್ಗಳಲ್ಲಿ ಈ ಸ್ಪೆಶಲ್ ಮೀಲ್ಗೇ ಬಾರಿ ಡಿಮ್ಯಾಂಡ್! ಪ್ರತಿ ಟೇಬಲ್‌ನ ಹಿಂದಿಬ್ಬರು ಟವಲ್ ಹಾಕಿಕೊಂಡು ವೈಟಿಂಗ್ ಲಿಸ್ಟ್‌ನಲ್ಲಿದ್ದರು. ಅದನ್ನು ನೋಡಿಯೇ ನನಗೆ ಡಯಟ್ ಇರಲಿ, ಇವತ್ತು ಉಪವಾಸವೇ ಗತಿ ಎನಿಸಿತು. ಕೊನೆಗೆ 'ಮಕ್ಕಳು ಅಪ್ಪ, ಈತರ ಅಲೀತಿದ್ರೆ ಹೋಟೆಲ್ಗಳಲ್ಲಿ ಊಟ ಕಾಲಿ ಆಗಿ ಹೋಗುತ್ತದೆ. ನೀನು ಯಾವುದಾದರೂ ದರ್ಶಿನಿಲಿ ಇಡ್ಲಿ, ಗಿಡ್ಲಿ ಸಿಕ್ರೆ ತಿಂದ್ಕೊ' ಎಂದು ಕ್ಯೂನಲ್ಲಿ ಅಂಟಿಕೊಂಡರು. ವಿಧಿ ಇಲ್ಲದೆ ನಾನು ಮತ್ತೆ ಇಡ್ಲಿ ಹೋಟಲ್ ಹುಡುಕಿಕೊಂಡು ಹೊರಟೆ.



ನನ್ನ ಅದೃಷ್ಟವೋ ಎಂಬಂತೆ ಒಂದು ಸಂದಿಯಲ್ಲಿ ಬಡ ದರ್ಶಿನಿ ಕಂಡೇಬಿಟ್ಟಿತು. ಖುಷಿಯಿಂದ ಧಾಪುಗಾಲು ಹಾಕುತ್ತಾ ಬಂದು 'ಒಂದು ಪ್ಲೇಟ್‌ಇಡ್ಲಿ' ಎಂದೆ. ಏನಾಶ್ಚರ್ಯ, ಇಡ್ಲಿಕೊಟ್ಟೇ ಬಿಟ್ಟ. ಅದಕ್ಕೆ ಚಮಚ ಹಾಕಿದರೆ ತೂರಲೊಲ್ಲದು,

ಸ್ಪೂನೇ ಮುರಿದು ಹೋಗುತ್ತದೇನೋಎಂದು ಭಯವಾಯಿತು. ಮತ್ತಷ್ಟು ಸಾಂಬಾರಲ್ಲಿ ನೆನಸಿ, ಚಟ್ನಿ ಪ್ರೋಕ್ಷಣೆ ಮಾಡಿದರೂ ಅದು ಜಪ್ಪಯ್ಯ ಎನ್ನದೆ ಸ್ಟ್ರೈಕ್ ಮಾಡಿತು. 'ಏನ್ಸಾರ್, ಮಲ್ಲಿಗೆ ಇಡ್ಲಿ ಹೀಗಿದೆ ? ಹಲ್ಲಿಗೆ ಹರಿಯೋದಿರಲಿ, ಸ್ಪೂನಿಗೂ ಹರೀತಿಲ್ಲ, ಸುತ್ತಿಗೆತರಬೇಕು' ಎಂದರೆ 'ರೀ, ಭಾನುವಾರ, ಯಾವಾನ್ರೀ ನಿಮಗೆ ಬಿಸಿ ಇಡ್ಲಿ ಮಾಡಿಟ್ಕೊಂಡ್ ಇರ್ತಾರೆ ? ಬೆಳಿಗ್ಗೇದು ಮಿಕ್ಕಿರೋದೇ ಇರೋದು.. ಬೇಕಾದ್ರೆ ತಿನ್ನಿ, ಇಲ್ಲ ಬಿಡಿ' ಎಂದು ಮುಖಕ್ಕೆ ಹೊಡೆದಂತೆ ಹೇಳಿದ. ಮೊಸರನ್ನ, ಚಿತ್ರಾನ್ನ ತಿನ್ನುತ್ತಿದ್ದವರ ಮುಖ ನೋಡಿಯೇ ಅನ್ನ ಬೆಂದಿರಲಾರದು, ಇಲ್ಲ ತಂಗಳನ್ನಕ್ಕೇ ಒಗ್ಗರಣೆಗೆ ಬರಿಕೊಟ್ಟಿದ್ದಾನೆ ಎಂಬುದು ಖಾತರಿ ಆಗಿ ಹೋಯಿತು. ಇಡ್ಲಿ ಹಾಗೇ ಬಿಟ್ಟು ಸೊರ್ ಎಂದು ಸಾಂಬಾರ್ ಹೀರಿ ಹೊಟ್ಟೆ ನೀವಿಕೊಂಡು ಈಚೆ ಬಂದೆ.

ಮನೆಗೆ ಬಂದು ಒಂದು ಹಿಡಿ ಅವಲಕ್ಕಿಯನ್ನಾದರೂ ನೆನೆಸಿ ತಿನ್ನೋಣ ಎಂದುಕೊಂಡರೆ ನಮ್ಮ ಪರಿವಾರದವರು ಕೆಲವು ವಿಶೇಷ ವಸ್ತುಗಳ ಪರ್ಚೇಸ್ಗೆ ಕೋರಮಂಗಲಕ್ಕೆ ಹೋಗಲು ತೀರ್ಮಾನಿಸಿ ನನ್ನನ್ನೂ ಎಳೆದೊಯ್ದರು. ಅಲ್ಲಿ ಡ್ರೆಸ್, ಶೂಸ್, ಎಲೆಕ್ಟ್ರಾನಿಕ್ ಐಟಮ್ಗಳು, ಹಾಳು ಮೂಳು ಎಲ್ಲಾ ಪರ್ಚೇಸ್ ಆದ ಮೇಲೆ ಅವನ್ನೆಲ್ಲಾ ನನ್ನ ಹೆಗಲಿಗೆ ಹಾಕಿ ಪಿಜ್ಜಾ, ಬರ್ಗರ್, ಮಸಾಲ್ ಪೂರಿ, ಗೋಬಿ, ಗೋಲ್‌ಗಪ್ಪ ಎಂದು ನನ್ನ ಮುಂದೆಯೇ ಸಿಕ್ಕಸಿಕ್ಕದ್ದನ್ನೆಲ್ಲಾ ಮೆದ್ದು ನನ್ನ ಸಲ್ಯೆವಕ್ಕೆ ಸವಾಲ್ ಹಾಕಿ ಮೆರೆದರು. ಹೊಟ್ಟೆ ಬಿರಿಯ ತಿಂದು 'ಇವತ್ತು ಅಪ್ಪನ ಜೊತೆ ನಾವೂ ಡಯಟ್ ಮಾಡೋಣ, ರಾತ್ರಿ ಊಟ ಮಾಡೋದು ಬೇಡ' ಎಂದು ಕೋರಸ್‌ನಲ್ಲಿ ಘೋಷಿಸಿ ರಾತ್ರಿ ಊಟವನ್ನೇ ಕ್ಯಾನ್ಸಲ್ ಮಾಡಿದರು. ಇಡೀ ಏರಿಯಾ ಹುಡುಕಿದರೂ ಒಂದು ಪ್ಲೇಟ್ ಮೊಸರನ್ನ ಸಿಗದೆ ನಾನು ಕಂಗಾಲಾಗಿ ಹೋದೆ.

ಇಂದು ಒಂದು ಭಾನುವಾರದ ಕತೆಯಲ್ಲ.. ಬಹುತೇಕ ಡಯಟ್ ಮಾಡುವವರಿಗೆ ಎಲ್ಲಾ ವಾರಗಳೂ ಈ ಪಡಿಪಾಟಲು ತಪ್ಪಿದ್ದಲ್ಲ. ನಮಗೋಸ್ಕರ ಕೋಸಂಬರಿ, ಪಾನಕ, ವೆಜ್ ಸಲಾಡು, ಹುರಿಟ್ಟು, ಇಡ್ಲಿ, ಮೊಸರನ್ನ ಮಾಡುವ ಡಯಟ್ ಟಿಫಿನ್ ಸೆಂಟರ್ಗಳು ಎಲ್ಲಿಂದ ಬರಬೇಕು ? ಬೆಂಗಳೂರು ಮಾತ್ರವಲ್ಲ, ಎಲ್ಲಿ ಹೋದರೂ ಡಯಟ್ ಮಾಡುವವರಿಗೆ ಈ ಹುಡುಕಾಟ, ಶೋಧನೆ ಮುಗಿಯುವುದಿಲ್ಲ. ನಾವು ಕಟ್ಟಿಕೊಂಡು ಹೋದ ಹುರಿಟ್ಟು, ಬೀಟ್‌ರೂಟು, ಕ್ಯಾರೆಟ್ಟು, ಹುರುಳಿಕಾಯಿ, ಸೊಪ್ಪು ಸೆದೆ ಎಷ್ಟು ಸಮಯ ಬಂದೀತು? ಹೋದಕಡೆ ಏನಾದರೂ ತಿನ್ನಲೇಬೇಕಲ್ಲ. ಕಾರ್ಯಾರ್ಥವಾಗಿ ಚೆನ್ನೈಗೆ ಹೋದಾಗಲೊಮ್ಮೆ ಇಡ್ಲಿ, ಮೊಸರನ್ನಕ್ಕೆ ರಾತ್ರಿಯೆಲ್ಲಾ ಹುಡುಕಾಡಿ ಸಿಗದೆ ಬೇಸತ್ತು ರೂಮಿಗೆ ಬಂದು ಬಿಟ್ಟಿದ್ದೆ. ಕೊನೆಗೆ ನನ್ನೊಂದಿಗೆ ಬಂದಿದ್ದ ಮೋಹನ್ ಎರಡು ಪೊಟ್ಟಣ ಮೊಸರನ್ನವನ್ನು ಎಲ್ಲಿಂದಲೋ ಹುಡುಕಿತಂದ. ತೃಪ್ತಿಯಾಗಿ ಊಟ ಮಾಡಿ ಮಲಗಿದೆ. ಬೆಳಿಗ್ಗೆ ಕೇಳಿದೆ. 'ಮೋಹನ್, ಮೊಸರನ್ನ ಚೆನ್ನಾಗಿತ್ತು, ಎಲ್ಲಿಂದ ತಂದೆ?' ಅವನು ಹಿಂದೇಟು ಹಾಕುತ್ತಲೇ ಹೇಳಿದ: ಸರ್, ಅದು ಕೆಎಫ್‌ಸಿ ಇದ್ಯಲ್ಲ ಸರ್, ಅದರ ಎದುರ್ಗಡೆ ಒಂದು ಹೋಟ್ಲಿದೆ.. ವೆಜ್ಜು, ನಾನ್ ವೆಜ್ಜು ಎರಡೂ ಇರುತ್ತೆ.. ಅಲ್ಲಿಂದ ತಂದೆ ಸರ್, ನಿಮಗೆ ಹೇಳುದ್ರೆ ನೀವು ತಿನ್ನದೆ ಉಪವಾಸ ಮಲಗ್ತೀರ ಅಂತ ಹೇಳಲಿಲ್ಲ' ಅಂದ. ಅದೇ ಕೊನೆ, ಹೋದಕಡೆ ಡಯಟ್ ಮಾಡುವುದು ಬಿಟ್ಟುಸಿಕ್ಕಿದ್ದು ತಿಂದು ಮಾತ್ರೆ ಗುಳುಂ ಎನಿಸಿ ಜೈಅಲಕ್ ನಿರಂಜನ್‌ಎಂದು ಮಲಗುವುದು ಅಭ್ಯಾಸ ಮಾಡಿಕೊಂಡಿದ್ದೇನೆ. ಪುರಂದರದಾಸರು ಹೇಳಿದ್ದು ನಿಜ, ಸತ್ಯವಂತರಿಗಿದು ಕಾಲವಲ್ಲ, ಹಾಗೇ ಡಯಟ್ವಂತರಿಗೂ ಇದು ಕಾಲವಲ್ಲ..



# ಹುರಿಗಾಳು

"ಅಕ್ಕನಿಗೆ ಹಾರ್ಮೋನಿಯಂ ತಂದು ಕೊಟ್ಟ ದಿನದಿಂದ ನಿನಗೆ ಸೈಕಲ್ಕೊಂಡು ಕೊಡಬೇಕು ಅಂತ ಒಂದೇ ಸಮನೆ ರಂಪಮಾಡುತ್ತಿದ್ದೀಯಲ್ಲಾ, ನಿನಗೆ ಯಾಕೋ ಬೈಸಿಕಲ್ಲು ? " ಅಂತ ತಂದೆ ಕೇಳಿದರೆ, ಶೀನು, "ಅಕ್ಕ ಹಾರೋನಿಯಂ ಹಿಡಿದು ಕೂತ ತಕ್ಷಣ ಎಲ್ಲಿಗಾದರೂ ದೂರ ಹೋಗುವುದಕ್ಕೆ!" ಅಂತ ಹೇಳಿ ಬಿಡೋದೆ ?

ಅಲ್ಲಿ, ಈ ಊರಿನಲ್ಲಿರುವ ಎಲ್ಲಾ ಆಸ್ಪತ್ರೆಗಳನ್ನೂ ಒಂದು ಸುತ್ತು ಸುತ್ತಾಯಿತು ಅಂತ ಹೇಳಿದಿರಲ್ಲಾ... ಹೆಂಗಸರಾಸ್ಪತ್ರೆ?" ಅಂತ ಡಾಕ್ಟರು ಕೇಳಿದರೆ, ಅಲ್ಲೇ ಸಾರ್ನಾನು ಹುಟ್ಟಿದ್ದು" ಅಂತ ಆತ ಉತ್ತರ ಕೊಟ್ಟನಂತೆ !

ಸೌದೆ ಅಂಗಡಿಗೆ ಬೆಂಕಿಬಿತ್ತು. ಅದೇ ಬೀದಿ ಸುಬ್ಬಾಜೋಯಿಸರೂ ಅವರ ಮಗನೂ ನೀರು ಸೇದಲು ನಿಧಾನವಾಗಿ, ಹಗ್ಗ ಹುಡುಕಿದರು." ಬೇಗ ಬನ್ನಿ! ಬೇಗ ಬನ್ನಿ !" ಅಂತ ಯಾರೋ ಕೂಗಿಕೊಂಡರು. ಆಗ ಜೋಯಿಸರು, "ಚಿಂತೆಯಿಲ್ಲ, ಚಿಂತೆಯಿಲ್ಲ, ಮೊನ್ನೆ ತಾನೇ ನಾನು ಆ ಅಂಗಡಿಯಿಂದ ಸೌದೆ ತಂದೆ, ನನಗೆ ಗೊತ್ತು ಅದರ ಗುಣ" ಅಂದರು !

'ಐ.ಪಿ. ಮಿಕ್ಚ್ಸರ್' ಅಂತ ಬರೆದಿದೆಯಲ್ಲಾ! ಅದು ಯಾವುದು ಸಾರ್ ?" ಎಂದು ಕಾಂಪೌಂಡರನ್ನ ಯಾರೋ ಕೇಳಿದರು, ಸರ್ಕಾರಿ ಆಸ್ಪತ್ರೆಲಿ. ಅದಕ್ಕೆ, ಅವರು, ಇಲ್ಲೆಜಿಬಲ್ ಪ್ರಿಸ್ಕ್ರಿಪ್ಷನ್ ಮಿಕ್ಸರ್ ಅಂತೇವೆ ಅದನ್ನ; ಡಾಕ್ಟರುಗಳು ಬರೆದು ಕೊಡುವ ಚೀಟಿ ಅರ್ಥವಾಗದೆ ಇದ್ದರೆ, ಅದನ್ನ ಹುಯ್ದುಕೊಡುತ್ತೇವೆ. ಅದೇ ಇಲ್ಲಿ ಖರ್ಚುಜಾಸ್ತಿ, ಎಲ್ಲಾಔಷಧಿಗಳಿಗಿಂತಲೂ ಅದು ಫಲ ಕೊಡುತ್ತದೆ" ಎಂದರು.

ಮೊನ್ನೆ, ಯಾವುದೋ ಹಾಸ್ಯಮಯ ಸಿನಿಮಾದಲ್ಲಿ ನನ್ನ ಮುಂದುಗಡೆ ಕುಳಿತಿದ್ದ ಬೆನ್ನಿನ ಮಾಲೀಕನಿಗೆ, "ಸ್ವಾಮಿ ಕೊಂಚ ಅತ್ತಲಾಗೆ ಜರುಗಿ ! ನನಗೇನೂ ಕಾಣುತ್ತಿಲ್ಲ" ಅಂದೆ. ಅವರು, "ಸುಮ್ಮನಿರಿ, ಸ್ವಾಮಿ ! ನನ್ನ ಬೆನ್ನನ್ನೇ ನೋಡುತ್ತಿರಿ, ನಾನು ನಕ್ಕಾಗ, ನೀವೂ ನಗಿರಿ ಎಂದರು.

"ನೋಡಿ ಡಾಕ್ಟರೇ, ಈ ಖಾಯಿಲೆಗಾಗಿ ನಾನು ಆಗಲೇ ಸಾವಿರ ರೂಪಾಯಿತನಕ ಖರ್ಚು ಮಾಡಿದೇನೆ" ಎಂದು ರಾಗ ಎಳೆದು ಹೊಸ ಡಾಕ್ಟರಿಗೂ ಹಳೇಡಾಕ್ಟರಿಗೂ ಪೈಪೋಟಿ ತಂದು ಹಾಕಿ ತನ್ನ ಆರೋಗ್ಯವನ್ನು ಸಂಪಾದಿಸಿಕೊಳ್ಳೋಣ ಅಂತ ರೋಗಿ ಹೇಳಿದರೆ, ಡಾಕ್ಟರು "ಅಯ್ಯೋ ಅಯ್ಯೋ! ಆಗಲೇ ನೀವು ನನ್ನ ಹತ್ತಿರಬರಬಾರದಾಗಿತ್ತೇ ?" ಎಂದು ಮರುಗಿದರಂತೆ.

ಹಾಸ್ಟೆಲ್ವಾರ್ಡನ್ನರು ಅಡಿಗೆಯವನನ್ನು ಕರೆಸಿ "ಏನ್ರಿ ಇದು, ಹುಡುಗರೆಲ್ಲರೂ ನಿನ್ನ ಅಡಿಗೆ ಶುದ್ಧ ಹೊಲಸು ಅಂತ ಕೂಗಾಡುತ್ತಾ ಇದಾರೆ, ನಿಮ್ಮನ್ನ ಮನೆಗೆ ಕಳುಹಿಸಿಬಿಡುತ್ತೇನೆ, ಹುಷಾರ್" ಅಂತ ಹೆದರಿಸಿದರು. ಆಗ ಅಡಿಗೆಯವನು, " ಅಯ್ಯೋ ಅಯ್ಯೋ, ಅವರ ಮಾತು ನಂಬಬೇಡಿ ಸಾರ್ನೀವು, ತಾವು ಪಾಠ ಹೇಳೋದು ಶುದ್ಧ ಹೊಲಸು ಅಂತ ದಿನವೂ ಊಟದ ಹೊತ್ತಿನಲ್ಲಿ ಯದ್ವಾತದ್ವಾ ಬೈಯುತ್ತಾರೆ ಅದನ್ನ ನಂಬಿ ತಮ್ಮನ್ನ ಮನೆಗೆ ಕಳುಹಿಸುವುದು ನ್ಯಾಯವೇ ?" ಅಂತ ಕೇಳಿದ !

"ಬುದ್ಧಿ !.... ನಿಮ್ಮನ್ನ ದೊಡ್ಡ ಸಾಹೇಬರು ಕರೆಯುತ್ತಾರೆ."

"ನನ್ನನ್ನೇ ಬರಹೇಳಿದರೇನೋ ? ಇಂಥಾವರು ಅಂತ ಹೆಸರು ಹೇಳಲಿಲ್ಲವೇನೋ?"

'ಹೆಸರು ಹೇಳಿಲ್ಲ, 'ಮೂರು ಹೊತ್ತೂ ಗೊರಕೆ ಹೊಡೆಯುತ್ತಾರಲ್ಲಾ, ಆ ಸೋಮಾರೀನ ಕರೆದುಕೊಂಡು ಬಾ', ಅಂದರು ಬುದ್ಧಿ."



# ಎಮ್ಮೆ ನಿನಗಾರು ಸಾಟಿ

**ಕೆ. ಎಸ್. ಸೋಮೇಶ್ವರ**

**ಎ**ಮ್ಮೆಗಳು ಅಂದರೆ ಮಹಿಷ–ಮಹಿಷಿ ಈ ಒಂದು ಪ್ರಾಣಿಯ ಬಗೆಗೆ ಹೆಚ್ಚು ಹೇಳುವಂತಿಲ್ಲ. ಈ ಮಹಿಷನಿಗೆ ದೇವ ಲೋಕದಲ್ಲಿ ಬಹಳ ಭಯ ಭಕ್ತಿ ಇದೆ.

ಏಕೆ? ನೀವೇ ಊಹಿಸಬಹುದು.

ನಮ್ಮ ಮಾನವ ಲೋಕದಲ್ಲಿ ಮಹಿಷಾಸುರನ ಬಗ್ಗೆ ಅನೇಕಾನೇಕ ಕಥೆಗಳನ್ನು ಕೇಳಿದ್ದೇವೆ. ಅದನ್ನು ರಿಯಲ್ ಆಗಿ ನೋಡಬೇಕಾದರೆ ರೀಲ್ ನಲ್ಲಿ ಮಾತ್ರ ಸಾಧ್ಯ. ಮಹಿಷಾಸುರ ಮರ್ಧಿನಿ ಅಂದರೆ ಚಾಮುಂಡಿ ದೇವಿ ನಮ್ಮ ಮೈಸೂರಿನಲ್ಲಿ ಬೆಟ್ಟದ ಮೇಲೆ ಅಂದರೆ ಚಾಮುಂಡಿ ಬೆಟ್ಟದ ಶಿಖರದಲ್ಲಿ ಪ್ರತಿಷ್ಠಾಪಿತಳಾಗಿ ಎಲ್ಲ ಭಕ್ತರಿಗೆ ಅಭಯ ಹಸ್ತ ನೀಡುತ್ತ ಬಂದಿದ್ದಾಳೆ. ಅವಳು ಹೇಗೆ ಆ ಮಹಿಷಾಸುರನನ್ನು ಮರ್ಧಿಸಿದಳು ಎನ್ನುವುದು ಪ್ರಾಕ್ಟಿಕಲ್ ಆಗಿ ಮಹಿಷಾಸುರ ಮರ್ಧಿನಿ ಚಿತ್ರದಲ್ಲಿ ಕಾಣ ಬಹುದು. ಅಲ್ಲಿ ಬೃಹದಾಕಾರದ ಮಹಿಷಾಸುರನ ಪ್ರತಿಮೆಯೂ ಇದ್ದು ಚಾಮುಂಡಿ ದರುಶನಕ್ಕೆ ಮೊದಲೇ ಅವ ನಮಗೆ ದರುಶನ ಕೊಡುತ್ತಾನೆ

ಇನ್ನು ಯಮ ಧರ್ಮರಾಯ ಹಿ ವಿಲ್ ಬಿ ಆಲ್ವೇಸ್ ವಿಥ್ ಹಿಸ್ ಎಸ್.ಯು.ವಿ ವಾಹನ ಅಂದರೆ ಮಹಿಷ (ಇದಕ್ಕೆ ಎಮ್ಮೆ, ಕೋಣ ಹೀಗೆಲ್ಲ ಹೇಳುತ್ತಾರೆ). ಆ ಯಮನೋ ತನ್ನ ವಾಹನದಲ್ಲಿ ಆಸೀನನಾಗಿ ಭೂಲೋಕಕ್ಕೆ ಇಳಿದ ಅಂದರೆ ಅವನ ಶಿಷ್ಯ ಚಿತ್ರಗುಪ್ತ ರೆಡಿ ಮಾಡಿಟ್ಟು ಕೊಂಡಿರುವ ರಿಜಿಸ್ಟರಿನಲ್ಲಿ ಒಂದು ಹೆಸರು ಮೈನಸ್ ಆಗುತ್ತದೆ. ಆದರೂ, ಅವನಿಗೂ ಚಳ್ಳೆ ಹಣ್ಣು ತಿನಿಸಿದವರ ಕಥೆ ನಮ್ಮ ಭೂಲೋಕದಲ್ಲಿ ಹಲವಾರಿವೆ. ಅದರಲ್ಲಿ ಪ್ರಮುಖವಾದುದು ಸಾವಿತ್ರಿಯ ಕಥೆ. ಆಕೆ ತನ್ನ ಗಂಡ ಸತ್ಯವಾನನಿಗೆ ಮರು ಜೀವ ಕೊಡಿಸಲು ಯಮನಿಗೇ ಚಾಲೆಂಜ್ ಮಾಡಿ ವಿಜಯಿಯಾಗುತ್ತಾಳೆ. ಇದು ಈಗಿನ ಮಾಡರನ್ ಯುಗದಲ್ಲಿ ಬೇರೆ ಬೇರೆಯ ಫಾರ್ಮಾಡಟ್ ನಲ್ಲಿ ನೋಡುತ್ತಿದ್ದೇವೆ. ಇದಕ್ಕೆ ನಮ್ಮ ಆಸ್ಪತ್ರೆಗಳೆಂಬ ಧನ್ವಂತರಿಗಳ ಸಗ್ಗ. ಅಲ್ಲಿ ಹೊಕ್ಕರೆ ಆಯಿತು ಒಳ ಹೋದವರ ಆಯುಸ್ಸು ಆ ಧನ್ವಂತರಿಗಳ ಕರ ಕುಶಲತೆಗೆ ನಿದರ್ಶನವಾಗುತ್ತದೆ. ಇನ್ನು ಅನೇಕ ಸಿನಿಮಾಗಳಲ್ಲಿ ಹೀರೋಗಳು ಯಮನಿಗೇ ಚಾಲೆಂಜ್ ಮಾಡಿ ಅವನ ತಲೆ ಚಿಟ್ಟು ಹಿಡಿಸಿರುವ ದೃಶ್ಯಾವಳಿಗಳು ಎಲ್ಲ ಭಾಷೆಗಳಲ್ಲೂ ಕಂಡು ಕೇಳಬಹುದು.

ಇವೆಲ್ಲ ಬಿಡಿ. ನಾವು ದಿನ ನಿತ್ಯ ಕಾಣುವ ಎಮ್ಮೆಯ ಬಗ್ಗೆ ಒಂದೆರಡು ಮಾತು ಹೇಳೋಣ. ಇಲ್ಲಿ ಈ ಮಹಿಷನಿಗೆ 'ಎಮ್ಮೇ ನಿನಗೆ ಸಾಟಿಯಿಲ್ಲ.' ಅಂತ ಹಾಡಿ ಹೊಗಳುತ್ತೇವೆ. ಅದೆಷ್ಟೇ ಹೊಗಳಿದರೂ ಆ ಮಹಿಷನ್ನು ಸೋಮಾರಿಗೆ ಹೋಲಿಸಿ ಬಿಡುತ್ತಾರೆ. ಅವನದು ಸ್ವಲ್ಪ ಹೆವಿ ಬಾಡಿ. ಹಾಗಾಗಿ ಅವನು ಸ್ಲೋ ಮೋಷನ್‌ನಲ್ಲಿ ಅಡ್ಡಾಡುವುದು ಅನಿವಾರ್ಯ. ಯಾರಾದರೂ ಸೋಮಾರಿತನ ತೋರಿಸಿದರೆ ಸಾಕು ಒಳ್ಳೆ ಎಮ್ಮೆ ತರಹ ಅಂತಾರೆ. ಇನ್ನು 'ಎಮ್ಮೆ ಮೇಲೆ ಮಳೆ ಹುಯಿದ ಹಾಗೆ' ಎಂಬ ಆಡು ಮಾತು ಇತ್ತು ಈಗಲೂ ಇದೆ. ಅದನ್ನ ಅಳಿಸಿ ಹಾಕಲಾಗಲ್ಲ. ಇನ್ನು ಹೊಸ ಮನೆಯ ಗೃಹ ಪ್ರವೇಶದಲ್ಲಿ ಹಸುವನ್ನು ಕೆಲವೊಮ್ಮೆ ಅದಕ್ಕೆ ಬರಲು ಇಷ್ಟ ಇಲ್ಲದಿದ್ದರೂ ಬಲವಂತ ಮಾಘ ಸ್ನಾನ ಎನ್ನುವಂತೆ



ಅದನ್ನು ಹೊಸ ಮನೆಯ ಒಳ ಹೊಕ್ಕಿಸುತ್ತಾರೆಯೇ ಹೊರತು ಎಮ್ಮೆಯನ್ನಲ್ಲ. ಈ ಎಮ್ಮೆಗಳನ್ನು ಅಣಕಿಸುವಂತೆ **'ಕೋಣನ ಮುಂದೆ ಕಿನ್ನರಿ ಬಾರಿಸಿದಂತೆ'** ಅದನ್ನು ಮೊದ್ದು ಎನ್ನುವಂತೆ ಚಿತ್ರಣ ಮಾಡುತ್ತಾರೆ. ಇನ್ನು ಕೆಲವೆಡೆ ಕೋಣಗಳನ್ನು ಹೊಲ, ಗದ್ದೆ ಉತ್ತಲು ಬಳಸುತ್ತಾರೆ. ದಿನವೆಲ್ಲಾ ದುಡಿದು ಬಂದ ಅದಕ್ಕೆ ಅವರೇನು ಮೊಸರನ್ನ ಹಾಕ್ತಾರೆಯೇ ಅನ್ನುತ್ತೆ ಆಡು ಮಾತು ಅದಕ್ಕೆ ಹುಲ್ಲು, ಸೊಪ್ಪೇ ಭೂರಿ ಭೋಜನ ಇನ್ನು ಎಮ್ಮೆ ಹಾಲು. ಅದರ ಲವ್ಲೀ ಕಸಿನ್ ಹಸುವಿನ ಹಾಲಿಗಿಂತ ಇದು ನೀಡುವ ಹಾಲು ಹೆಚ್ಚು ತೂಕದ್ದು ಅಂದರೆ, ಅದರಲ್ಲಿ ಏನೇನೋ ವಿಟಮಿನ್ ಗಳು, ಶಕ್ತಿ ವರ್ಧಕಗಳು ಇದೆ ಅಂದರೂ ಇಲ್ಲಿ ಹಸು ಕಾಮಧೇನು ಆಗುತ್ತದೆಯೇ ಹೊರತು ಮಹಿಷಿಯಲ್ಲ. ! ಎಂತಹ ವಿಪರ್ಯಾಲಸ ಅಲ್ಲವೇ !!

ಈಗ ಈ ಮಹಿಷಿಯ ಗಟ್ಟಿಗಿತ್ತಿತನದ ಬಗ್ಗೆ ಕಂಡು ಕೇಳಿದ ಎರಡು ಸಂಗತಿಗಳು ಹೇಳಲೇ ಬೇಕು. ಮೊದಲನೆಯದು ನಮ್ಮ ಜಯನಗರದ ಹೆಬ್ಬಾಗಿಲು ಸೌತ್ ಎಂಡ್ ವೃತ್ತದ ಬಳಿ ನಡೆದ ಘಟನೆಯ ಲೈವ್ ವಿವರಣೆ. ಇದು ನಡೆದಿದ್ದು ದಶಕಗಳ ಹಿಂದೆ ಅಂದರೆ ಎಪ್ಪತ್ತರ ಮೊದಲಲ್ಲಿ. ಅದು ಅಲ್ಲಿನ ವಿಜಯಾ ಕಾಲೇಜಿನ ಬಳಿ. ಸೌತ್ ಎಂಡ್ ವೃತ್ತದ ಕಡೆಯಿಂದ ಒಬ್ಬ ತರುಣ ಒಂದು ಧಡೂತಿ (ಆಗಿನ ರಾಯಲ್ ಎನ್ ಫೀಲ್ಡ್) ಮೋಟಾರ್ ಸೈಕಲ್‌ನಲ್ಲಿ ಫುಲ್ ಸ್ಪೀಡಿನಲ್ಲಿ ಬಂದ. ಅಲ್ಲೊಂದು ಮಹಿಷ ಪ್ರತ್ಯಕ್ಷ. ಈ ಸವಾರ ಏನಾಯಿತೆಂದು ಯೋಚಿಸುವ ವೇಳೆಗೆ ಅವನ ಮೋಟಾರ್ ಮಹಿಷ ಈ ರಿಯಲ್ ಮಹಿಷನಿಗೆ ಮುತ್ತಿಕ್ಕಿ ಸವಾರನ ಸಮೇತ ರಸ್ತೆಯಲ್ಲಿ ರೌಂಡ್ ರೌಂಡ್ ಉರುಳು ಸೇವೆ. ಈ ಎಮ್ಮೆಯ ಗತಿ ? ಏನಿಲ್ಲ ಒಂದು ಗುಟುರು ಹಾಕಿ ತನ್ನ ಪಾಡಿಗೆ ತಾನು ವಾಕಿಂಗ್ ಮುಂದುವರಿಸಿದ. ಆ ಧಡೂತಿ ಮೋಟಾರ್ ಸೈಕಲ್ ಬಹುಶಃ ಅಂದಿನ ಎನ್ ಫೀಲ್ಡ್ ಇರಬೇಕೆನಿಸುತ್ತದೆ. ಆಗೆಲ್ಲ ಅದರದೇ ತಾನೇ ಹವಾ. ಆಗ ಬಿಡಿ ಈಗಿನ ಮೊಬೈಲ್ ಕ್ಲಿಕಿಂಗ್ ಇರಲೇ ಇಲ್ಲ ಅಲ್ಲ ಗೊತ್ತೇ ಇರಲಿಲ್ಲ. ಹಾಗಾಗಿದ್ದರೆ ಅದೆಷ್ಟು ಸೆಂಡಿಂಗುಗಳೋ ಅದೆಷ್ಟು ಲೈಕಿಂಗ್‌ಗಳೋ ಎಣಿಕೆ ಮಾಡುವರಾರು ?

ಇನ್ನೊಂದು ನಮ್ಮ, ಒಬ್ಬ ಪ್ರಧಾನ ಮಂತ್ರಿಯಾಗಿದ್ದ ರಾಜೀವ ಗಾಂಧಿಯವರ ಅನುಭವ. ಅವರು ಮೊದಲೇ ಹಾರುವ ಹಕ್ಕಿಯಾಗಿದ್ದವರು. ಅವರಿಗೆ ಬೆಟ್ಟಗಳ ಚಾರಣಕ್ಕೆ ಬಂದರೆ ಅವರೇ ವಾಹನ ಚಲಾಯಿಸುವ ಖಾಯಿಷ್ ಇತ್ತಂತೆ. ಹಾಗಾಗಿ ಅವರು ಒಮ್ಮೆ ನಮ್ಮ ನಂದಿ ಬೆಟ್ಟಕ್ಕೆ ತಾವೇ ಕಾರು ಏರಿಸುವ ಇರಾದೆ ಹೇಳಿದರಂತೆ. ಸರಿ ಅದಕ್ಕಾಗಿ ಎಲ್ಲ ತಯಾರಿ ಆಗಿತ್ತು. ವಿತ್ ಸೆಕ್ಯುರಿಟಿ. ಅರ್ಧ ದಾರಿ ಕ್ರಮಿಸಿದ ನಂತರ ಅಲ್ಲೊಂದು ಎಮ್ಮೆಗಳ ದಿಬ್ಬಣ. ಅದನ್ನ ಸರಿಸಲು ಇವರ ಅಂಗ ರಕ್ಷಕ ಪಡೆಯವರು ಹೈರಾಣವಾಗಿ ಹೋದರಂತೆ. ಉಹುಃ ಅವುಗಳು ಒಂದಿಂಚೂ ಕದಲಲಿಲ್ಲವಂತೆ. ಆಗ, ರಾಜೀವ ಗಾಂಧಿಯವರು ತಮ್ಮ ವಾಹನವನ್ನು ನಿಧಾನವಾಗಿ ಚಾಲನೆ ಮಾಡುತ್ತ ಅವುಗಳ ಗುಂಪಿನ ಪಕ್ಕದಲ್ಲಿ ಹಾಗೂ ಹೀಗೂ ಚಲಿಸಿ ಮುಂದುವರಿದರಂತೆ. (ಈ ಸಂಗತಿಯನ್ನು ನೆನಪು ಮಾಡಿಕೊಂಡವರು ನನ್ನ ಒಬ್ಬ ಹಿರಿಯ ಪತ್ರಕರ್ತ ಸ್ನೇಹಿತ ಶ್ರೀ ಕೆ.ಜಗನ್ನಾಥ್ ರವರು)

ಅದೇನೆ ಇರಲಿ "**ಯಾರೇ ಕೂಗಾಡಲಿ, ಊರೇ ಹೋರಾಡಲಿ ಎಮ್ಮೆ ನಿನಗೆ ಸಾಟಿಯಿಲ್ಲ ಬಿಸಿಲು ಮಳೆಯು ಏನಾದರೂ ಅಳುಕದೇ ಮುಂದೆ ಸಾಗುವೆ ಅರೆ ಹೊಯ್, ಅರೆ ಹೊಯ್**" ಹಃ ಹಾಃ



## ಹಾಸ್ಯಕ್ಕೊಂದು ಹೊಸ ಭಾಷ್ಯ ಬರೆದ ಎಂ.ಆರ್. ಸುಬ್ಬರಾಮ್

ಅಣಕು ರಾಮನಾಥ್



1998ನೆಯ ಇಸವಿ. ಡಿಸೆಂಬರ್ 25. ಬೆಂಗಳೂರಿನ ಜಯನಗರದ ನ್ಯಾಷನಲ್ ಕಾಲೇಜಿನ ಎಚ್.ಎನ್. ಸಭಾಂಗಣದಲ್ಲಿ ಹಾಸ್ಯೋತ್ಸವವು ಸಂಭ್ರಮದಿಂದ ಜರುಗಿತ್ತು. ಮಧ್ಯಾಹ್ನದ ಕಾರ್ಯಕ್ರಮವನ್ನು ನಡೆಸಿಕೊಡಲೆಂದು ಸೂಟ್‌ಧಾರಿಯಾದ ಗೌರವಾನ್ವಿತ ವ್ಯಕ್ತಿಯೊಬ್ಬರು ವೇದಿಕೆಗೆ ಆಗಮಿಸಿದರು. ಅವರ ನುಡಿಗಳಲ್ಲಿ ಸಮ್ಮೋಹಕ ಶಕ್ತಿಯಿತ್ತು. ಆಡುವ ಮಾತಿನಲ್ಲಿ ಸ್ಫುಟತೆ ಇತ್ತು. ನಡೆಯಲ್ಲಿ ನಾಯಕನ ಗತ್ತಿತ್ತು. ಭಾವದಲ್ಲಿ ಸುಸಂಸ್ಕೃತಿಯ ಢಾಳಾದ ಛಾಯೆಯಿತ್ತು. ಆತನು ತಮ್ಮ ತಂಡದವರು ಪ್ರಸ್ತುತಪಡಿಸುವ ಒಂದೊಂದು ಕಾರ್ಯಕ್ರಮವನ್ನೂ ವಿವರಿಸುವ, ಒಂದಕ್ಕೊಂದು ತಳುಕು ಹಾಕಿ ನಡೆಸಿಕೊಡುವ ರೀತಿಯೇ ಅನನ್ಯವಾಗಿತ್ತು. ಕಿರ್ಲೋಸ್ಕರ್ ಸತ್ಯ, ವೆಂಕಟಾದ್ರಿ, ಸದಾನಂದ ಮೊದಲಾದ ನಟ, ಗಾಯಕರಲ್ಲದೆ ಮಿಮಿಕ್ರಿ ದಯಾನಂದರಂತಹ ಅನನ್ಯ ಪಟುವನ್ನೂ ಅವರು ಅಂದು ನಡೆಸಿಕೊಂಡ ರೀತಿಯೇ ಇತರರಿಗೆ ಮಾದರಿಯಾಗಿತ್ತು. ಆ ವ್ಯಕ್ತಿಯೇ ನಮ್ಮೆಲ್ಲರ ನೆಚ್ಚಿನ, ಗಾನವಿನೋದಿನಿ ತಂಡದ ನಾಯಕರಾದ ಎಂ.ಆರ್. ಸುಬ್ಬರಾಮ್ ಎಂದು ನಂತರ ನನಗೆ ತಿಳಿದುಬಂದಿತು.

ಸುಬ್ಬರಾಮ್ (ಸುಬ್ಬರಾಮಯ್ಯ/ಸುಬ್ಬರಾಮು) 1981ರಲ್ಲಿ ಸಮಾನಮ– ನಸ್ಕರೊಡಗೂಡಿ ಹಾಡು, ಪ್ರಹಸನಗಳ ಮೂಲಕ ಹಾಸ್ಯವನ್ನು ಪ್ರಸರಿಸಲೆಂಬ ಏಕೈಕ ಉದ್ದೇಶದಿಂದ ಕಟ್ಟಿದ ತಂಡವೇ 'ಗಾನವಿನೋದಿನಿ.' ತಂಡದ ಸಿಗ್ನೇಚರ್ ಪ್ರೋಗ್ರಾಂ ಆದ 'ನಗೆಮಲ್ಲಿಗೆ'ಯ ಮೂಲಕ ಅನೇಕ ಹಾಸ್ಯದ ತುಣುಕುಗಳನ್ನು ಮಂಡಿಸುತ್ತಿದ್ದರು. ತಂಡಕ್ಕೆಂದೇ 'ಗಾನವಿನೋದಿನಿ ಇಂದು; ನಗೆಮಲ್ಲಿಗೆಯನು ತಂದು; ಶುಭಸಂಜೆಯಲಿ ಹಾಡಿ; ಕುಣಿಕುಣಿದು, ನಲಿನಲಿದು..." ಎಂಬ ಥೀಮ್ ಸಾಂಗ್ ಒಂದನ್ನು ರೂಪಿಸಿಕೊಂಡಿದ್ದರು. ಸ್ವತಃ ಒಳ್ಳೆಯ ನಟರಾಗಿದ್ದ ಸುಬ್ಬರಾಮ್ ತಂಡದ ಕೀಬೋರ್ಡ್ ವಾದಕರೂ, ಶಿಕ್ಷಣ ಇಲಾಖೆಯ ಉದ್ಯೋಗಿಯೂ ಆದ ವಿ.ಎನ್. ಅಶ್ವಥ್ ರಚಿಸಿದ 'ಸೀ ಕಿಸ್ನ ಸಂದಾನ'ದಲ್ಲಿ ನಾಟಕ ಹೇಳಿಕೊಡುವ ಮೇಷ್ಟ್ರ ಪಾತ್ರವನ್ನು ಸೊಗಸಾಗಿ ನಿರ್ವಹಿಸುತ್ತಿದ್ದರು. ಮುಸಲ್ಮಾನನೊಬ್ಬನು 'ಭಾಗ್ಯದ ಲಕ್ಷ್ಮಿ ಬಾರಮ್ಮ' ಹಾಡಿದರೆ ಹೊಮ್ಮಬಹುದಾದ ಹಾಸ್ಯವನ್ನು ದೃಶ್ಯರೂಪದಲ್ಲಿ ಕಟ್ಟಿಕೊಡಲು ಸುಬ್ಬರಾಮ್ ಅಲ್ಲದೆ ಇನ್ನಾರಿಗೂ ಸಾಧ್ಯವಾಗುತ್ತಿರಲಿಲ್ಲವೇನೋ.

ನನ್ನ ಜೀವನದ ಮೊದಲ ಅಣಕವಾಡನ್ನು ನಾನು ಕೇಳಿದ್ದೇ ಗಾನವಿನೋದಿನಿಯಿಂದ. 'ಹೊಸ ಬ್ಲೇಡು ಕೆರೆಯುತಿದೆ' ಎಂದು ಕ್ಷೌರಿಕನ ವೇಷ ಧರಿಸಿದ ಸತ್ಯ ಆರಂಭಿಸಿದರೆ, ಅದಕ್ಕೆ ಹೊಂದುವಂತಹ 'ಬೋಳಿಸು ಎಂದೇ ನಿನ್ನಲಿ ಬಂದೆ' ಎಂದು ವೆಂಕಟಾದ್ರಿ ಹಾಡುತ್ತಿದ್ದುದು ಹಾಸ್ಯದ ಹೊಸ ಲೋಕವನ್ನೇ ಸೃಷ್ಟಿಸಿದಂತಿತ್ತು. ಆದರೆ ತಂಡದ ಬಳಿ ಇದ್ದದ್ದು ಕೇವಲ ಐದು ಅಣಕವಾಡುಗಳು. "ಏಕೆ ಹೀಗೆ?" ಎಂದರೆ "ಬರೆದುಕೊಡಿ. ನಮ್ಮಲ್ಲಿ ಹಾಡುಗಳಿಲ್ಲ" ಎಂದರು ಸುಬ್ಬರಾಮ್. ನಾನು ಉಡಾಫೆಯಿಂದ "ಅಣಕವಾಡು ಬರೆಯೋದೇನು ಮಹಾ ಕಷ್ಟ! ಬರೆದುಕೊಡುತ್ತೇನೆ" ಎಂದೆ. ಹಾಗೆ ಹೇಳಿದ ಮರುಕ್ಷಣವೇ ಮರೆತೆ. ಆದರೆ



ಸುಬ್ಬರಾಮ್ ಮರೆಯಲಿಲ್ಲ. ಸರಿಸುಮಾರು ಒಂದು ವರ್ಷ ನನ್ನ ಬೆನ್ನು ಬಿದ್ದರು. ಅವರ ಒತ್ತಡ ತಡೆಯಲಾರದೆ ಅಣಕವಾಡೊಂದನ್ನು ಬರೆದುಕೊಟ್ಟೆ. 'ಮತ್ತೊಂದು' ಎಂದರು. ಬರೆದೆ. ಹೀಗೆ ನನ್ನ ಮೇಲೆ ಅವರು ಅಂದು ಒತ್ತಡ ತರದಿದ್ದರೆ ಇಂದು ನಾನು ಅಣಕವಾಡಿನ ಸರದಾರ ಎಂಬ ಮಟ್ಟಕ್ಕೆ ಬೆಳೆಯಲು ಸಾಧ್ಯವಾಗುತ್ತಿರಲಿಲ್ಲ.

'ಜೋಡಿದಾರ್', 'ಉಬ್ಬಸದ ಸುಬ್ಬರಾವ್' ಮೊದಲಾದ ಪ್ರಹಸನಗಳನ್ನು ಮಾಡುತ್ತಿದ್ದ ತಂಡಕ್ಕೆ ಹೊಸ ಸ್ಕಿಟ್‌ಗಳು ಬೇಕೆಂಬ ಅಭಿಲಾಷೆಯನ್ನು ಸುಬ್ಬರಾಮ್ ವ್ಯಕ್ತಪಡಿಸಿದರು. ತತ್ಫಲವಾಗಿ ಉದಯಿಸಿದ್ದೇ 'ಥೀ ಟೀವಿ ಸಂದರ್ಶನ' ಎಂಬ ಫುಲ್ ಲೆಂತ್ ಕಾಮೆಡಿ. ಸುಬ್ಬರಾಮ್ ನನ್ನಂತಹ ಹಲವಾರು ಹಾಸ್ಯಲೇಖಕರಿಂದ ಸ್ಕಿಟ್ಟುಗಳನ್ನು ಬರೆಯಿಸಿ ಬಹಳ ಸಮರ್ಪಕವಾಗಿ ವೇದಿಕೆಯಲ್ಲಿ ಮಂಡಿಸುತ್ತಿದ್ದ ಪರಿ ಇಂದಿಗೂ ಅನುಕರಣೀಯ, ಸ್ತುತ್ಯ. ಹಾಸ್ಯಕ್ಕೇ ಒಂದು ಗ್ರ್ಯಾಮರ್ ಇರುತ್ತದೆ. ಅದಿದ್ದಾಗ ಮಾತ್ರ ಅದು ಗ್ಲ್ಯಾಮರನ್ನೂ ಪಡೆಯುತ್ತಿದ್ದ. ಅಂತಹ ಗ್ರ್ಯಾಮರ್ ಸುಬ್ಬರಾಮ್‌ಗೆ ಕರತಲಾಮಲಕವಾಗಿತ್ತು. ಅಂತೆಯೇ ಬೇರೆ ಕಲಾವಿದರು ಮಂಡಿಸಿದಾಗ ಸಪ್ಪೆಯೆನಿಸುತ್ತಿದ್ದ ಎಷ್ಟೋ ಪ್ರಹಸನಗಳು, ಹಾಡುಗಳು, ಈ ತಂಡದಿಂದ ಮಂಡಿಸಲ್ಪಟ್ಟಾಗ ಸೂಪರ್ ಹಿಟ್ ಆಗುತ್ತಿದ್ದವು.

ತಂಡದ ಪ್ರತಿಯೊಬ್ಬರಿಂದಲೂ ಗೌರವವಕ್ಕೆ ಪಾತ್ರರಾಗಿ, ಸುಮಾರು ನಾಲ್ಕು ದಶಕಗಳಷ್ಟು ಸುದೀರ್ಘಕಾಲ ಗಾನವಿನೋದಿನಿಯನ್ನು ನಡೆಸಿ, ತನ್ಮೂಲಕ ಹಲವಾರು ಕಲಾವಿದರನ್ನು ಪ್ರೋತ್ಸಾಹಿಸುತ್ತಾ, ಹಾಸ್ಯಕ್ಷೇತ್ರಕ್ಕೆ ಹೊಸ ಆಯಾಮವನ್ನಿತ್ತು, ಹಲವಾರು ಹಾಸ್ಯಸಂಜೆಗಳ ಜೀವಾಳವನ್ನು ಒದಗಿಸುತ್ತಿದ್ದ ಚಿನ್ನದ ಕಂಠದ ಸುಬ್ಬರಾಮ್ ತಮ್ಮ ಕಡೆಯ ಪಾತ್ರವನ್ನು ವಹಿಸಿ ನೇಪಥ್ಯಕ್ಕೆ ನಿರ್ಗಮಿಸಿದರು. ಕರ್ನಾಟಕದ ಹಾಸ್ಯಚರಿತ್ರೆಯಲ್ಲಿ ಸುಬ್ಬರಾಮ್ ಮತ್ತು ಗಾನವಿನೋದಿನಿ ಅಚ್ಚಳಿಯದ ಹೆಸರಾಗಿವೆ. ಕಾಲಕ್ರಮೇಣ ವಿನೋದಪಡೆಗಳು ಹುಟ್ಟಿಕೊಳ್ಳಬಹುದು. ಆದರೆ ಒಂದು ಕುಟುಂಬದಂತೆ ಹೊಂದಿಕೊಂಡಿದ್ದು, ಸ್ವಯಂ ಸಂತೋಷದಿಂದಿದ್ದು ಜನತೆಗೆ ಸಂತೋಷವನ್ನು ಹಂಚಿದ ಗಾನವಿನೋದಿನಿಯಾಗಲಿ, ಅದನ್ನು ಲೆಫ್ಟಿನೆಂಟೊಬ್ಬನು ಸೇನೆಯನ್ನು ನಡೆಸಿದ ಶಿಸ್ತಿನಲ್ಲಿ ನಡೆಸಿದ ಸುಬ್ಬರಾಮ್ ಆಗಲಿ ಮತ್ತೆ ಇನ್ನಾವುದೇ ಕ್ರಮದಲ್ಲಿ ರೂಪುಗೊಳ್ಳುವುದು ಅಸಂಭವ.

ಸಂತೋಷದಿಂದ ಸಂತೋಷವನ್ನು ಹಂಚಿದ ಸುಬ್ಬರಾಮ್, ಇದೋ ನಿಮಗೆ ನನ್ನ ಅಂತಿಮ ನಮನ.

**ಕಸ್ತೂರಿ ಗಾದೆಗಳು**

ಉದರ ನಿಮಿತ್ತಂ ಬಹುಕೃತ ಮೋಸಂ

ಕೆಲಸವಿಲ್ಲದ ಕವಿ ಹೊಲಸು ಕಾವ್ಯಕಟ್ಟಿದ

ಮದ್ದುತುಂಬೋ ಮೊದಲು ಫಿರಂಗಿ ಹಾರಿಸಿದರು

ಕಿರು ನಾಲಿಗೇಲಿ ಕಲ್ಮಷ, ಹಿರಿನಾಲಗೇಲಿ ಕಲ್ಸಕ್ರೆ

ಹೆಣ್ಣ ಪಂಜರಜೀವಿ ಗಂಡು ಅಂಬರ ಜೀವಿ

ನಭೂತೋ ನಪ್ರೇತೋ



# ತಯಾರಿ ನಿದ್ರೆಗೋ ಮದುವೆಗೋ!

**ಕವಿತಾ ಹೆಗಡೆ ಅಭಯಂ, ಹುಬ್ಬಳ್ಳಿ**

ಎಲ್ಲರೂ ಯಾವಾಗ ಮೆತ್ತಗಿನ ಹಾಸಿಗೆ ಸೇರಿ ಯಾವಾಗ ನಿದ್ರೆ ಮಾಡ್ತೀವೋ ಎಂದು ರಾತ್ರಿಯಾಗುವುದನ್ನೇ ಕಾಯುತ್ತಿದ್ದರೆ ನಮ್ಮ ಕಮಲತ್ತೆ ಮಂಗಕ್ಕಿಂತ ಮಂಗನ ಬಾಲ ಉದ್ದ ಅನ್ನುವ ಹಾಗೆ ಒಂದು ಉದ್ದದ "ಟು ಡು" ಲಿಸ್ಟ್ ನೆನಪು ಮಾಡಿಕೊಳ್ಳುತ್ತಾಳೆ.

ಉಪವಾಸ ಮಲಗಿಬಿಟ್ಟರೆ ಸತ್ತೇ ಹೋಗುವ ಭಯಂಕರ ಭಯದಿಂದ ಎಲ್ಲರೂ ಒಂದೇ ಬಾಯಿ ಇದ್ದರೂ ತಾವೇ ದಶಕಂಠ ಎಂಬ ಭ್ರಮೆಯಲ್ಲಿ ಹೊಟ್ಟೆಯನ್ನು 'ಪೇಟಿ' ಮಾಡಿ ಹಾಸಿಗೆ ಮಾರು ದೂರ ಇರುವಾಗಲೇ ಮಾರುತಿ ಪ್ರತಾಪಕ್ಕೇ ಸವಾಲು ಎಸೆದವರ ಹಾಗೆ ಜಿಗಿದು ಅಡ್ಡಾಗುವಲ್ಲಿ ಟ್ಯಾಲೆಂಟ್ ತೋರಿಸುತ್ತಿದ್ದರೆ ಅವಳೊಬ್ಬಳು ಮಲಗುವ ಮುಂಚಿನ ವ್ಯವಸ್ಥೆ ಮಾಡಿಕೊಳ್ಳುವದರಲ್ಲೇ ಬೆಳಗಾಗುವ ಭಯದಿಂದ ಸಂಜೆ ಕಳೆಯುತ್ತಾಳೆ.

ರಾತ್ರಿ ಊಟದ ಶಾಸ್ತ್ರ ಮುಗಿಯುತ್ತಿದ್ದಂತೆ ಕಿಚನ್ ಕ್ಲೀನ್ ಮಾಡಿ ಪಾತ್ರೆಗಳನ್ನೆಲ್ಲ ಹಿತ್ತಲಿಗೆ ಒಯ್ದು ದೊಡ್ಡ ಬುಟ್ಟಿ ತುಂಬಿ ತಿರುಗಿಯೂ ನೋಡದೆ ಓಡಿ ಒಳಗೆ ಸೇರಿಕೊಳ್ಳುತ್ತಾಳೆ. ಮರುದಿನ ಬರುವ ಸಹಾಯಕಿಗೆ ಈಜಿಪ್ಟಿಗೆ ಹೋಗುವ ಖರ್ಚಿಲ್ಲದೇ

ಹಿತ್ತಲಲ್ಲೇ ಪಾತ್ರೆ ಪಿರಮಿಡ್ ಸೃಷ್ಟಿಮಾಡಿ ದಿವ್ಯ ದರ್ಶನ ಮಾಡಿಸುವ ವಿಶೇಷ ಟ್ಯಾಲೆಂಟ್ ಕಮಲತ್ತೆಗಿದೆ ಗೊತ್ತಾ?

ಇನ್ನು ಅವಳ ಮಲಗುವ ತಯಾರಿ ನೋಡಿದರೆ ವಿದೇಶ ಪ್ರವಾಸಕ್ಕೆ ಹೋಗುವವರೂ ಪಾಪ, ಕಂಗಾಲಾಗಿ ಸದ್ದಿಲ್ಲದೇ ಹೋಗಿಬಿಡುತ್ತಾರೋ ಏನೋ!

ಮೊದಲನೇದಾಗಿ ದೇವರ ತಲೆಗೆ ಹೂ ತಪ್ಪಿದರೂ ತಪ್ಪಬಹುದು, ಬೆಡ್ಶೀಟ್ ಮತ್ತು ಬ್ಲಾಂಕೆಟ್ ಸರಿಯಾಗಿದೆಯೇ ಎಂದು ಖಾತ್ರಿಪಡಿಸಿಕೊಳ್ಳದೆ ಇರಲ್ಲ ಅವಳು. ದಿನವೆಲ್ಲ ದುಡಿದು ಒಣಗಿದ ಹೀರೇಕಾಯಾದ ಅವಳ ಗಂಡ ನಿದ್ರಾದೇವಿಯ ಆರ್ಭಟಕ್ಕೆ ಮತ್ತು ಕಮಲತ್ತೆಯ ತಯಾರಿಗೆ ಹೆದರಿ ಒಂದು ಗುಬ್ಬಿಮರಿಯ ಹಾಗೆ ತೆಪ್ಪಗೆ ಮಲಗಿಬಿಡುತ್ತಾನೆ. ಇನ್ನು ಮಕ್ಕಳು ಇವಳು ನಾನಾ ನಮೂನೆಯ ತಯಾರಿ ಮಾಡುವುದನ್ನು ನೋಡಿ ನೋಡಿ ಹೌಹಾರಿ ತಮ್ಮ ರೂಮಿಗೆ ಓಡಿ ಹೋದರೂ ಇಣುಕಿ ಅಮ್ಮನ ಲೀಲೆಗೆ ಬೆರಗಾಗುತ್ತಾರೆ. ಅಂತೂ ಕಮಲತ್ತೆಯ ಅಧಿಕೃತ ಪ್ರವೇಶ ಸ್ನಾನಗೃಹಕ್ಕಾಗುವಾಗ ಸರಿಯಾಗಿ ಹತ್ತು ಗಂಟೆಯೇ. ಗಡಿಯಾರ ಕೂಡ ಇದೊಂದು ಅಂಕೆಗೆ ಅಂಜಿ ಅಂಜಿ ಹಿಂಜಿದ ಹತ್ತಿಯಾಗುತ್ತದೆ.

ಅಂತೂ ಕಮಲತ್ತೆ ಚೆನ್ನಾಗಿ ರಾತ್ರಿಯ ಸ್ನಾನ ಮಾಡಲು ತೊಡಗಿದರೆ ಒಂದು ಗಂಟೆ! ಅವಳ ಗಂಡನಂತೂ "ಏನು ಸ್ನಾನ ಮಾಡ್ತೀಯಾ ಇಲ್ಲ ಜಲಕ್ರೀಡೆಯಾಡೋದಾ ನೀನು?" ಎಂದು ನಗುತ್ತಿದ್ದ. ಕಮಲತ್ತೆ ಒಂದಕ್ಕೂ ಜಗ್ಗದೆ ಡ್ರೆಸ್ಸಿಂಗ್ ಟೇಬಲ್ ಮುಂದೆ ಕುಳಿತು ನಿಧಾನವಾಗಿ ತನ್ನ ಮೊಳ ಉದ್ದದ ಸಿಲ್ಕೀ ಕೇಶರಾಶಿಯನ್ನು ಬಾಚಿ ಬಾಚಿ ಇನ್ನಷ್ಟು ಸಿಲ್ಕೀ ಮಾಡುವಾಗ ಮಗ ಒಮ್ಮೆಲೇ ಇಣುಕಿ. "ಅಮಾ ಶಾಂಪೂ ಜಾಹೀರಾತು ಶೂಟ್ ಮಾಡಲು ಹೋಗುವುದಾ ಈಗ ?" ಅಂತ ಕೆಣಕಿ ಕಮಲತ್ತೆ ಕೆಂಗಣ್ಣು ಬಿಡುವುದರ ಒಳಗೇ ಮಾಯವಾಗುತ್ತಾನೆ.



ಅಂತೂ ಬಾಚಿದ್ದು ಮುಗಿದ ಮೇಲೆ ನೈಟ್ ಕ್ರೀಮ್ ಅಪ್ಲಿಕೇಶನ್ ಟೈಮ್! ಮೈಯೆಲ್ಲಾ ಬೆಣ್ಣೆಯಂತೆ ಮೃದುವಾಗುವ ಆಸೆಯಲ್ಲಿ ನಿಧಾನವಾಗಿ ಮುಖ ಕೈ ಕಾಲು ಮೈಗೆ ನೈಟ್ ಕ್ರೀಮ್ ಮಸಾಜ್ ಮಾಡಿಯಾದ ಮೇಲೆ ಆಲ್ಮಂಡ್ ಆಯಿಲ್ ತೆಗೆದುಕೊಂಡು ಹುಬ್ಬಿಗೆ, ಕಣ್ಣ ರೆಪ್ಪೆಗೆ ಹಚ್ಚಿ ಬೆಳಿಗ್ಗೆ ಹುಲುಸಾಗಿ ಕೂದಲು ಬೆಳದಂತೆ ಕನಸು ಕಾಣುತ್ತಲೇ ಇರುವಾಗ ಮಗಳು, "ಅಮಾ, ನಾಳೆ ನಿನ್ನ ಐಬ್ರೋಸ್ ಹೆಂಗ್ ಬೆಳೆಯುತ್ತೆ ಅಂದ್ರೆ ಕೂದಲು ಇಲ್ದೇ ಇರೋರಿಗೆ ವಿಗ್ ಮಾಡಬೋದು" ಎಂದು ಕಿಸಕ್ಕನೆ ನಕ್ಕು ಓಡಿ ಹೋಗುತ್ತಾಳೆ.

ಕಮಲತ್ತೆ ಈಗ ಹಾಸಿಗೆಯ ಮೇಲೆ ಕುಳಿತು ತುಟಿಗೆ ವ್ಯಾಸಲೀನ್ ಹಚ್ಚಿ, ಮೂಗಿನ ಹೊರಳೆಗಳಿಗೆ ಕೊಬ್ಬರಿ ಎಣ್ಣೆ ಹಚ್ಚಿ, ಪಾದಗಳಿಗೆ ಆಂಟಿ ಕ್ರ್ಯಾಕ್ ಕ್ರೀಮ್ ಹಚ್ಚಿಕೊಳ್ಳುವಾಗ ಮಗ, "ಅಮಾ, ಕಿವಿಗೆ ಹತ್ತಿ ಹಾಕ್ಕಳದು ಮರ್ತೆ ನೋಡು" ಎಂದು ನಗುತ್ತಾನೆ. ಕಮಲತ್ತೆ ಫ್ಯಾನ್ ಗಾಳಿ ನೇರ ಕಿವಿಗೆ ಹೋಗಬಹುದು ಎಂದು ಕಿವಿಗೆ ಹತ್ತಿ ಹಾಕಿಕೊಂಡು, ಕೈಗಳಿಗೆ ಮತ್ತೆ ಮೊಯಿಶ್ಚರೈಸರ್ ಹಚ್ಚಿಕೊಂಡು ಇನ್ನೇನು ಮಲಗಬೇಕು ಎನ್ನುವಷ್ಟರಲ್ಲಿ ಮಗಳು, "ಅಮಾ, ನೀರು ಕುಡಿಯೇ" ಎಂದರೆ, ಮಗ "ಅಮಾ ಗುಳಿಗೆ" ಎಂದು ನೆನಪಿಸಿ ಮಜಾ ತೆಗೆದುಕೊಂಡು ಓಡುತ್ತಾರೆ.

ಕಮಲತ್ತೆ ಮತ್ತೆ ಎದ್ದು ಚಪ್ಪಲಿ ಹಾಕಿಕೊಂಡರೆ ಕ್ರೀಮ್ ಹಚ್ಚಿದ ಕಾಲು ಜುರ್ರೋ ಅನ್ನದೆ ಇನ್ನೇನು? ಅಂತೂ ಕಿಚನ್ನಿಗೆ ಹೋಗಿ ರಾತ್ರಿ ಬೇಕಾದರೆ ಎಂದು ಫ್ಲಾಸ್ಕಿನಲ್ಲಿ ಬಿಸಿನೀರು, ಗಂಡನಿಗೆ ಬೇಕಾದರೆ ಅಂತ ತಣ್ಣೀರ ಬಾಟಲಿ ತಂದು ಮಂಚದ ಪಕ್ಕ ಇಟ್ಟುಕೊಂಡು ಇನ್ನೇನು ಮಲಗಬೇಕು ಅನ್ನುವಾಗ ಏನೋ ಗಂಟಲು ಕೆರೆದ ಹಾಗನ್ನಿಸಿ ಸ್ವಲ್ಪ ಸಕ್ಕರೆ, ಸೋಂಪು ಬಾಯಿಗೆ ಹಾಕಿಕೊಂಡು ಮತ್ತೆ ಮಲಗಲು ಹೋಗುತ್ತಾಳೆ. ಯಾಕೋ ಶೀತ ಅನ್ನಿಸಿ ವಿಕ್ಸ್ ಇನ್ ಹೇಲರ್ ತೆಗೆದುಕೊಂಡು ಮೂಸಿ 'ಅಬ್ಬಾ ಈಗ ಸರಿಯಾಯ್ತು' ಎಂದುಕೊಂಡು ಮಲಗಿ ಲೈಟ್ ಆರಿಸಿದ್ದೇ ತಡ, ಅಯ್ಯೋ ಫ್ಯಾನ್ ಜೋರು ಎಂದು ಸ್ಲೋ ಮಾಡಿದರೆ ಹಾಳು ಒಂಟಿ ಸೊಳ್ಳೆಯ ಸಂಗೀತ ಕಚೇರಿ ಕೇಳಿದ ಹಾಗಾಗಿ ಎದ್ದು ಮತ್ತೆ ಜೋರು ಮಾಡಿ ಮಲಗುತ್ತಾಳೆ.

ಇಷ್ಟೆಲ್ಲ ಮಾಡುವಾಗ ನಾಳೆಯ ಅಡುಗೆಗೆ ಕಾಳು ನೆನೆಸಲೇಬೇಕಿತ್ತು ಎಂದು ನೆನಪಾಗಿ ಮತ್ತೆ ಓಡಿ ಕಾಳು ನೆನೆಸಿ ವಾಪಸ್ಸು ಬರುವಾಗ ಹನ್ನೆರಡು ಗಂಟೆಯೇ ಆಗುತ್ತದೆ. ಇದನ್ನೆಲ್ಲ ನೋಡುತ್ತಾ ಮಜಾ ತೆಗೆದುಕೊಳ್ಳುವ ಮಕ್ಕಳು ಕಡ್ಡಿ ಕೆಲಸ ಮಾಡದೆ ಇದ್ದರೂ ಕಿಚಾಯಿಸುವುದನ್ನು ಬಿಡುವುದಿಲ್ಲ. ಮದುವೆಯಾದ ಹೊಸದರಲ್ಲಿ ಕಮಲತ್ತೆಯ ಮಲಗುವ ತಯಾರಿ ನೋಡಿ ದಿಗ್ಭ್ರಮೆಗೊಂಡು ಅವಳನ್ನು ಬದಲಾಯಿಸುವುದು ಮಾತ್ರ ಸಾಧ್ಯವಿಲ್ಲ ಎಂದು ಅರಿತು,

"ಏನೇ, ಮಲಗೋಕೆ ಮುನ್ನ ಎಷ್ಟು ತಯಾರೀನೆ ನಿಂದು? ಮದುವೆಗೆ ತಯಾರಾಗ್ತಾ ಇದ್ದೀಯೋ ನಿದ್ರೆಗೋ?ಯಾರೇ ನೋಡಿದ್ರೂ ಎದೆ ಒಡೆದುಕೊಂಡು ಸಾಯೋದು ಖಂಡಿತ. ನಿನ್ನನ್ನ ಪಾಕಿಸ್ತಾನ ಬಾರ್ಡರಿಗೆ ತಗೊಂಡು ಹೋಗಿ ಬಿಡ್ಬೇಕು. ನಿನ್ನ ಜಲಕ್ರೀಡೆ, ಮಲಗೋ ತಯಾರಿ ನೋಡಿ ಅಷ್ಟೂ ವೈರಿಗಳು ಕಂಗಾಲಾಗಿ ಓಡಿ ಹೋಗ್ತಾರೆ" ಎಂದು ಛೇಡಿಸುತ್ತಿದ್ದ.

ಅದರೂ ಕಮಲತ್ತೆ ಏನೂ ಬದಲಾಗಿಲ್ಲ. ಪಾಕಿಸ್ತಾನವೇ ಹುಷಾರು! ಯಾವಾಗ ಕಮಲತ್ತೆ ಬರುತ್ತಾಳೋ ಅವತ್ತೇ ನಿಮ್ಮ ಕಥೆ ಮುಗೀತು ನೋಡಿ.



# ಹೀಗೂ ಇದ್ದರು ನಮ್ಮ ಹೆಮ್ಮೆಯ ಕನ್ನಡ ಸಾಹಿತಿಗಳು

**ಅಂತರ್ಜಾಲದಿಂದ**

### ಗಳಗನಾಥರು

ಕನ್ನಡದ ಪುಸ್ತಕಗಳನ್ನು ತಲೆಯಲ್ಲಿ ಹೊತ್ತುಕೊಂಡು ಮಾರಾಟ ಮಾಡುತ್ತಿದ್ದ ಪುಣ್ಯಾತ್ಮರು ಇವರು. ನಿಮ್ಮ ಮನೆಯಲ್ಲಿ ಲಕ್ಷ್ಮಿ ಇದ್ದರೆ ಸಾಲದು, ನಾನು ಸರಸ್ವತಿಯನ್ನು ಹೊತ್ತು ತಂದಿರುವೆ. ಲಕ್ಷ್ಮಿಯೊಂದಿಗೆ ಸರಸ್ವತಿಯನ್ನು ಮನೆ ತುಂಬಿಸಿಕೊಳ್ಳಿ ಎಂದು ಹೇಳುತ್ತಾ, ರಾತ್ರಿ ದೇವಸ್ಥಾನದ ಅಂಗಳದಲ್ಲಿ ಮಲಗಿ, ಮಾರನೆಯ ದಿನ ಊರ ಕೆರೆ ಕಟ್ಟೆಗಳಲ್ಲಿ ಸ್ನಾನ ಮಾಡಿ, ಬೆಲ್ಲ ಕೊಬರಿ ತಿಂದುಕೊಂಡು ಊರೂರಿಗೆ ತಲೆಯ ಮೇಲೆ ಪುಸ್ತಕ ಹೊತ್ತು ಕನ್ನಡ ಸಾರಸ್ವತ ಲೋಕವನ್ನು ಮನೆ ಮನಗಳಿಗೆ ಹಂಚಿದವರು ನಮ್ಮ ಗಳಗನಾಥರು. ಅವರು ಸತ್ತಮೇಲೆ ಅಂತ್ಯಸಂಸ್ಕಾರ ಮಾಡಲೂ ಇವರ ಮನೆಯವರ ಬಳಿ ಹಣವಿರಲಿಲ್ಲ. ಪುಸ್ತಕಗಳಿಂದಲೇ ಇವರ ಅಂತ್ಯಸಂಸ್ಕಾರ ಮಾಡಬೇಕಷ್ಟೇ ಎಂದು ಅವರ ಮನೆಯವರು ಅ ಸಂದರ್ಭದಲ್ಲಿ ನೊಂದುಕೊಂಡು ನುಡಿದಿದ್ದರು.

### ವಿ.ಸೀತಾರಾಮಯ್ಯ

ಇವರು ದಿನಾ ಬೆಳಿಗ್ಗೆ ಹೊಟೇಲಿನಿಂದ ಹತ್ತು ಇಡ್ಲಿ ತರಿಸುತ್ತಿದ್ದರಂತೆ.ಅದರಲ್ಲಿ ಒಂದು ಇಡ್ಲಿಯನ್ನಷ್ಟೇ ತಾವು ತಿಂದು ಉಳಿದ ಒಂಬತ್ತು ಇಡ್ಲಿಯನ್ನು ಪ್ರಾಣಿ ಪಕ್ಷಿಗಳಿಗೆ ತಿನ್ನಿಸುತ್ತಿದ್ದರು. ಇದನ್ನು ಅವರು ತಮ್ಮ ಬದುಕಿನುದ್ದಕ್ಕೂ ದಿನಚರಿಯಂತೆ ಪಾಲಿಸುತ್ತಿದ್ದರು. ತಾವೂ ಬದುಕುತ್ತಾ ಎಲ್ಲವನ್ನೂ ಬದುಕಿಸಬೇಕೆಂಬ ಅವರ ನಿರ್ಮಲ ಹೃದಯ ನಮಗೆ ದಾರಿದೀಪ.

### ದ.ರಾ.ಬೇಂದ್ರೆ

ಇವರೊಮ್ಮೆ ದಾರಿಯಲ್ಲಿ ನಡೆದುಕೊಂಡು ಬರಬೇಕಾದರೆ ಚಪ್ಪಲಿ ಕಿತ್ತುಹೋಗುತ್ತದೆ. ಚಪ್ಪಲಿಯನ್ನು ಕೈಯಲ್ಲಿ ಹಿಡಿದು ಸ್ವಲ್ಪ ದೂರ ನಡೆದುಕೊಂಡು ಬಂದಮೇಲೆ, ದಾರಿಪಕ್ಕ ಕೂತಿದ್ದ ಚಮ್ಮಾರ ಸಿಗುತ್ತಾನೆ. ಬಿರುಬಿಸಿಲು ಆಗಿದ್ದರಿಂದ ಬೇಂದ್ರೆ ಅಜ್ಜ ಛತ್ರಿ ಬಿಡಿಸಿಕೊಂಡಿದ್ದರು. ಚಮ್ಮಾರ ತಮ್ಮ ಚಪ್ಪಲಿಯನ್ನು ರಿಪೇರಿ ಮಾಡುವಾಗ ಅವರು ತಮ್ಮ ಛತ್ರಿಯನ್ನು ಬಿಸಿಲಲ್ಲಿದ್ದ ಚಮ್ಮಾರನಿಗೆ ಹಿಡಿದಿದ್ದರು. ಇದರಿಂದ ಮುಜುಗರಗೊಂಡ ಚಮ್ಮಾರ, ನಾನು ದಿನಾ ಬಿಸಿಲಲ್ಲೇ ಕೂತು ಕೆಲಸ ಮಾಡುವವನು ನನಗಿದೆಲ್ಲ ಬೇಡ ಅಂದಿದ್ದಕ್ಕೆ ಬೇಂದ್ರೆ ಅಜ್ಜ ನೀನಿಗ ನಿನ್ನ ಕೆಲಸ ಮಾಡುತ್ತಿದ್ದೀಯ, ನಾನೀಗ ನನ್ನ ಕೆಲಸ ಮಾಡುತ್ತಿದ್ದೇನೆ ಅಂದರಂತೆ. ಸರ್ವ ಸಮತಾ ಭಾವದ ವ್ಯಕ್ತಿತ್ವ ಅವರದಾಗಿತ್ತು.

### ಡಿವಿಜಿ



ಡಿವಿಜಿಯವರು ತಮ್ಮ ಹೆಂಡತಿಯನ್ನು ಆಪ್ತರೊಬ್ಬರ ಮದುವೆಗೆ ಹೋಗಲು ಹೇಳಿ ತಾವು ಬೇರೊಂದು ಕಾರ್ಯಕ್ರಮಕ್ಕೆ ಹೋಗಿದ್ದರು. ಕಾರ್ಯಕ್ರಮ ಮುಗಿಸಿ ಮನೆಗೆ ಬಂದಾಗ ಹೆಂಡತಿ ಮನೆಯಲ್ಲಿರೋದನ್ನು ನೋಡಿ ಸಿಟ್ಟಾದ ಡಿವಿಜಿ, ಮದುವೆಗೆ ಯಾಕೆ ಹೋಗಲಿಲ್ಲವೆಂದು ಹೆಂಡತಿಯನ್ನು ಪ್ರಶ್ನಿಸಿದರು. ಅವರ ಪತ್ನಿ, ಮಗನನ್ನು ಕಳಿಸಿದ್ದೇನೆ ಅಂದರು. ಡಿವಿಜಿ ಬಹಳ ಆತ್ಮೀಯರ ಮದುವೆ ಎಂದು

ಹೇಳಿದ್ದೆನ್ನಲ್ಲ ನೀನೇ ಹೋಗಬೇಕಿತ್ತು ಎಂದು ಮತ್ತೊಮ್ಮೆ ಏರಿದ ಧ್ವನಿಯಲ್ಲಿ ಹೇಳಿದರು. ಆಗ ಅವರ ಪತ್ನಿ, ನನ್ನತ್ರ ಇರೋದು ಒಂದೇ ಸೀರೆ. ಅದು ಕೂಡ ಅಲ್ಲಿ ಇಲ್ಲಿ ಹರಿದಿದೆ. ಅದನ್ನು ಉಟ್ಕೊಂಡು ಮದ್ವೆಗೆ ಹೋದ್ರೆ ಏನು ಚೆನ್ನ. ಅದಕ್ಕೇ ಮಗನನ್ನು ಕಳಿಸಿದೆ ಅಂದರಂತೆ. ಈ ಮಾತನ್ನು ಕೇಳಿದ ಡಿವಿಜಿಯವರಿಗೆ ಮರು ಮಾತನಾಡಲು ಅವಕಾಶವೇ ಇರಲಿಲ್ಲ.

ತಿರುಕ ನೀನು ಈ ಬ್ರಹ್ಮಪುರಿಯೊಳಗೆ,

ಸಿರಿಯಿದ್ದೊಡೇನು, ಪರಿಜನರಿದ್ದೋಡೇನು ? ಎನ್ನುವ ಮನಸ್ಸು ಅವರದಾಗಿತ್ತು.

**ಮಾಸ್ತಿ**

ಜಿಲ್ಲಾಧಿಕಾರಿಯಾಗಿದ್ದ ಮಾಸ್ತಿಯವರು ಒಮ್ಮೆ ಊರ ಭೇಟಿಗೆ ತೆರಳಿರುತ್ತಾರೆ. ದಾರಿ ಮಧ್ಯೆ ಬಾಯಾರಿಕೆ ಆದ್ದರಿಂದ ಸಾರ್ವಜನಿಕ ಬಾವಿಯಿಂದ ನೀರು ಸೇದುತ್ತಿದ್ದ ವ್ಯಕ್ತಿಯ ಬಳಿ ಒಂದು ಬೊಗಸೆ ಕುಡಿಯಲು ನೀರು ಕೇಳುತ್ತಾರೆ. ಅವನು ನೀರನ್ನು ಸೇದಿ ಮಾಸ್ತಿಯವರಿಗೆ ಕೊಡುವ ಬದಲು ಪಕ್ಕದಲ್ಲಿರುವ ಟ್ಯಾಂಕಿಗೆ ಸುರಿಯುತ್ತಾನೆ. ಮಾಸ್ತಿಯವರಿಗೆ ಅವನು ನೀರು ಕೊಡದ್ದು ನೋಡಿ ಮುಜುಗರವಾಗುತ್ತದೆ. ಮತ್ತೆ ಅವನು ಕೊಡವನ್ನು ಬಾವಿಗಿಳಿಸಿ ನೀರು ಸೇದುತ್ತಾನೆ. ಈ ಬಾರಿ ಮಾಸ್ತಿಯವರನ್ನು ಕರೆದು ಬೊಗಸೆ ಹಿಡಿಯುವಂತೆ ಹೇಳಿ ನೀರು ಸುರಿಯುತ್ತಾನೆ. ಮಾಸ್ತಿಯವರು ಆಶ್ಚರ್ಯದಿಂದ ಕೇಳುತ್ತಾರೆ ಆಗಲೆ ಯಾಕೆ ನೀನು ನನಗೆ ನೀರು ಕೊಡಲಿಲ್ಲ ಎಂದು. ಅದಕ್ಕವನು ಸ್ವಾಮಿ ಈ ಬಾವಿ ತೋಡಿಸುವ ಮೊದಲು ಡಿಸಿಯವರು, ಯಾರೇ ನೀರು ಸೇದಿದರು ಮೊದಲ ಕೊಡವನ್ನು ಪಕ್ಕದಲ್ಲಿರುವ ಟ್ಯಾಂಕಿಗೆ ಸುರಿಯಬೇಕು, ಅ ನೀರು ಪ್ರಾಣಿಪಕ್ಷಿಗಳಿಗೆ ಕುಡಿಯೋಕೆ ಉಪಯೋಗವಾಗಬೇಕು ಎಂದಿದ್ದರು.ಹೀಗಾಗಿ ಈ ಊರಿನವರು ಅವರ ಅ ಮಾತನ್ನು ಪಾಲಿಸುತ್ತಿದ್ದೇವೆ ಎಂದ. ಅಂದಹಾಗೆ ಹಾಗೆ ಆದೇಶ ಮಾಡಿದ್ದ ಡಿಸಿ ಮಾಸ್ತಿಯವರೇ ಆಗಿದ್ದರು. ಊರಿನವರ ಪ್ರಾಮಾಣಿಕತೆಯನ್ನು ನೋಡಿ ಮಾಸ್ತಿಯವರ ಕಣ್ಣುಗಳು ಒದ್ದೆಯಾಗಿದ್ದವು.


ಸ್ವಾರ್ಥವಿಲ್ಲದಾ ಬದುಕು ಸರ್ವಕಾಲಕ್ಕೂ ಶ್ರೇಷ್ಠ ಎಂಬುದನ್ನು ತೋರಿಸಿಕೊಟ್ಟವರಿವರು.

**ದೇವುಡು**

ಮಯೂರ ವರ್ಮನ ಬಗ್ಗೆ ಬೆಳಕು ಚೆಲ್ಲಿ ಐತಿಹಾಸಿಕ ಕಾದಂಬರ ಬರೆದವರು. ಅವರ ಕಾಲು ಗ್ಯಾಂಗರೀನ್‌ಗೆ ಒಳಗಾದಾಗ ಅವರನ್ನು ಯಾವುದೋ ಒಂದು ಸಮಾರಂಭಕ್ಕೆ ನಾಲ್ಕು ಜನ ಎತ್ತಿಕೊಂಡು ಹೋಗುವಾಗ ನೋಡ್ರಯ್ಯ ನಾನೆಷ್ಟು ಅದೃಷ್ಟವಂತ, ಎಲ್ಲರೂ ಸತ್ತಾಗ ಅವರನ್ನು ನಾಲ್ಕು ಜನ ಹೊತ್ತೊಯ್ದರೆ ನಾನು ಬದುಕಿದ್ದಾಗಲೇ ನಾಲ್ಕು ಜನರ ಮೇಲೆ ಹೋಗುವ ಅದೃಷ್ಟಶಾಲಿ ಎಂದು ವಾಸ್ತವತೆಯನ್ನು ಅರುಹಿದ್ದವರು. ದೇವರು ನನ್ನ ಕಾಲು ಕಿತ್ತುಕೊಂಡ ಆದರೆ ಕನ್ನಡ ಕಟ್ಟುವ ನನ್ನ ಕೈಂಕರ್ಯವನ್ನ ಅವನು ಕಿತ್ತುಕೊಳ್ಳಲಾರ ಎಂದು ಅಭಿಮಾನದಿಂದ ಹೇಳುತ್ತಿದ್ದವರು.

**ಟಿ ಎಸ್ ವೆಂಕಣ್ಣಯ್ಯ**

ಮನೆಯಲ್ಲಿಯೇ ಕವಿಗೋಷ್ಠಿ ನಡೆಸಿ ಕನ್ನಡ ಕಟ್ಟಿದವರು. ಒಮ್ಮೆ ಹೀಗೆ



ಕವಿಗೋಷ್ಠಿ ಮನೆಯ ಮಹಡಿಯಲ್ಲಿ ನಡೆಯುತ್ತಿತ್ತು. ಅವರ ಪುತ್ರ ಮರಣಿಸಿದ ಸುದ್ದಿಯನ್ನು ಅವರ ಶ್ರೀಮತಿ ಅವರ ಕಿವಿಯಲ್ಲಿ ಉಸುರಿಸಿದರು. ಕವಿಗೋಷ್ಠಿಗೆ ಧಕ್ಕೆ ಬರಬಾರದೆಂದು ಮನಸ್ಸನ್ನು ಕಲ್ಲು ಮಾಡಿಕಂಡು ಕವಿಗೋಷ್ಠಿ ನಡೆಸಿ, ಅದು ಮುಗಿದ ನಂತರ ಅವರ ಕಣ್ಣಾಲೆಗಳಲ್ಲಿ ಕಣ್ಣೀರು ಧುಮ್ಮಿಕ್ಕುತ್ತಿತ್ತು. ಆಗ ಇತರರು ಇದಕ್ಕೆ ಕಾರಣ ಕೇಳಿದಾಗ ನಡೆದ ವಿಷಯವನ್ನು ಸಭೆಗೆ ಆಗ ತಿಳಿಸಿದರು. ಆಗ ಅವರೆಲ್ಲರೂ ಹೀಗೇಕೆ ಮಾಡಿದಿರಿ ? ಎಂದು ಪ್ರಶ್ನಿಸಿದಾಗ ಕನ್ನಡ ಕಟ್ಟುವ ಕೆಲಸ ನಿಲ್ಲಬಾರದೆಂದೂ ಈ ರೀತಿ ಮಾಡಿದೆ ಎಂದು ಎಲ್ಲಕ್ಕೂ ಕನ್ನಡವೇ ಮಿಗಿಲು ಎಂದು ತೋರಿಸಿದ ಮಹಾತ್ಮರೀತ.

ಕನ್ನಡ ಉಳಿದಿದ್ದೇ ಇಂಥವರ ಕೊಡುಗೆಯಿಂದ ಇಂಥಃ ಮಹನೀಯರಿಂದಲೇ ಕನ್ನಡ ಉಳಿದು ಬೆಳೆದಿದ್ದು. ಈ ಮೇರು ಸಾಹಿತಿಗಳು ನಮ್ಮ ನಾಡಿಗೆ ಆಸ್ತಿ.

ಉಷಾ ಕೆಟ್ಟವಳಾದರೇನಂತೆ ನೀವು ಈ ಸಿಹಿ ತಿನ್ನಿ

**ಬಾದುಷಾ**

ಇಂಗ್ಲಿಷಿನ ಬಾದುಷಾ

ಪದದ ಅಕ್ಷರಗಳನ್ನು ವಿಭಾಗ ಮಾಡಿ ಓದಿದರೆ ಬ್ಯಾಡ್ ಉಷ ಅಂತ ಆಗುತ್ತೆ.

ಅಯ್ಯೋ ಮೈಸೂರಿಗೂ ಪಾಕಿಸ್ಥಾನಕ್ಕೂ ಸ್ನೇಹವಾಗಿ ಹೋಯ್ತಂತೆ ಹೌದೇ ಅಂತ ಅಚ್ಚರಿಪಟ್ಟರೆ ಅದಕ್ಕೆ ಉತ್ತರ

**ಮೈಸೂರು ಪಾಕ್**

ಏನು ಕೇಳಿದರೂ ಆಗುಲ್ಲ ಆಗುಲ್ಲ ಅಂತೀರಲ್ಲ ನಿಮಗೇನು ಈ ಸಿಹಿ ಬೇಕೇ, ಬೇಡವೇ

**ರಸಗುಲ್ಲಾ**


ಹಳೇ ಮೈಸೂರು ಪ್ರಾಂತ್ಯದ ಹೊಯ್ಸಳ ಕರ್ನಾಟಕ ಪಂಗಡದವರು ಆಗಿಲ್ಲ, ಹೋಗಿಲ್ಲ, ಬರಲ್ಲ ಅನ್ನೋದಕ್ಕೆ ಆಗುಲ್ಲ, ಹೋಗುಲ್ಲ, ಬರೂದಿಲ್ಲ ಅಂತಾರೆ (ಭೈರಪ್ಪನವರ ಮಾತು ಕೇಳಿ )


ಹನುಮೂನು ತಪ್ಪಿ ಹೋದಾಕ್ಷಣ ಈ ಸಿಹಿ ಬೇಡವೇ

**ಜಾಮೂನು**



ವ್ಯಂಗ್ಯ ತರಂಗ


ಕಮಲಾ ಹ್ಯಾರಿಸ್ ಧರಿಸಿದ್ದ ಕಿವಿಯೋಲೆ ಬಗ್ಗೆಯೇ ಚರ್ಚೆ, ಜಾಲತಾಣದಲ್ಲಿ ವೈರಲ್ ಸುದ್ದಿ
ಸುದ್ದಿ
ಟ್ರಂಪು ಬ್ಯಾಡ, ಕಮಲಾನೇ ಗೆಲ್ಬೇಕು ಅಲ್ವೇನೆ...ಹೊಸಾ ತರದ ಕಿವಿಯೋಲೆ, ಡ್ರೆಸ್ಸು, ನೆಕ್ಲೇಸು ಎಲ್ಲಾ ನೋಡ್ತಿರ್ಬೋದು ಯಾವಾಗ್ಲೂ...!!
NEWS


5 ಕೆಜಿ ಆಲೂಗೆಡ್ಡೆ ಲಂಚ ಕೇಳಿದ ಪೊಲೀಸ್ ಅಮಾನತು
ಸುದ್ದಿ
ಬಹುಶಃ ಆ ಪೊಲೀಸಪ್ಪಂದೇ ಅಡುಗೆ ಇರ್ಬೋದು ಅವ್ರ ಮನೆಯಲ್ಲಿ...

## ವ್ಯಂಗ್ಯ ತರಂಗ

### ಇಸ್ರೋ ಗಗನಯಾನಕ್ಕೆ ಹೊರಟ ಧಾರವಾಡದ ನೊಣಗಳು

ಸುದ್ದಿ




### ಮದ್ಯಪ್ರದೇಶದಲ್ಲಿದೆ ದರೋಡೆ, ಸುಲಿಗೆ ಕಲಿಸುವ 'ಕಳ್ಳರಿಗೊಂದು ಶಾಲೆ'

ಸುದ್ದಿ

